ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ



ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್

ವಾಚಿಕೆ

ಬಿದರಹಳ್ಳಿ ನರಸಿಂಹ ಮೂರ್ತಿ

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್

ವಾಚಿಕೆ

ಸಂಪಾದನೆ / ಅನುವಾದ

ಬಿದರಹಳ್ಳಿ ನರಸಿಂಹಮೂರ್ತಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - 560 018

GABRIEL GARCIA MARQUEZ Selected writings of Noble laureate Gatonel Garcia Marquez; Edited and translated by Bidarahalli Narashimha Murthy. Published by, Kannada Pustaka Praadhikara (Kannada Book Authority) Pampa Mahakavi Road, Chamarajpet, Banglore - 560 018.

First Edition : 1997, Pages: XLIV + 200 Price : 36/- Rs.

ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಬೆಲೆ : ಮೂವತ್ತಾರು ರೂಪಾಯಿಗಳು

ಮೊದಲ ಮುದ್ರಣ : ೧೯೯೭

ಮುಖಪುಟ : ರಾ.ಸೂರಿ

ಅಕ್ಷರ ಜೋಡಣೆ, ಮುದ್ರಣ

ವರ್ಗಮುದ್ರ

10, ಸಿದ್ಧಾರ್ಥ ರೋಡ್,

ದೀಪಾಂಜಲಿ ನಗರ, ಬೆಂಗಳೂರು - 560 050

✆ 624616

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್

ವಾಚಿಕೆ

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್

(೧೯೨೮-)

ಲ್ಯಾಟಿನ್ ಅಮೆರಿಕದ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ೧೯೮೨ರಲ್ಲಿ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಒಂಟಿತನದ ಒಂದು ನೂರು ವರುಷಗಳು ಕಾದಂಬರಿಗಾಗಿ ನೊಬೆಲ್ ಪ್ರಶಸ್ತಿಯನ್ನು ಪಡೆದು ಜಗತ್ಪ್ರಸಿದ್ಧಿಯನ್ನು ಪಡೆದ. ಕೊಲಂಬಿಯಾದವನಾದ ಮಾರ್ಕ್ವೆಸ್‌ನ ಕೃತಿಗಳಲ್ಲಿ ಲ್ಯಾಟಿನ್ ಅಮೆರಿಕ ಬದುಕಿನ ವಾಸ್ತವ ಮಾಂತ್ರಿಕತೆಗಳ ವಿನೂತನತೆಯೊಂದಿಗೆ ಹೊಸ ಸಂವೇದನೆಯೊಂದನ್ನು ಮೂಡಿಸಿದೆ.

ಪತ್ರಿಕಾ ವರದಿಗಾರನ ವೃತ್ತಿಯೊಂದಿಗೆ ಜಗತ್ತಿನ ಹಲವು ದೇಶಗಳ ಪ್ರವಾಸದಲ್ಲಿ ಪಡೆದ ಅನುಭವವನ್ನು ತನ್ನ ಸೃಜನಶೀಲತೆಗೆ ಒಡ್ಡಿಕೊಂಡಿರುವ ಮಾರ್ಕ್ವೆಸ್ ತನ್ನ ಕತೆ ಕಾದಂಬರಿಗಳಿಗೆ ಗಂಭಿರ ಓದುಗರನ್ನು ಪಡೆದಿರುವಂತೆಯೇ ಜನಪ್ರಿಯ ಓದುಗರ ವಲಯವನ್ನು ಗಳಿಸಿಕೊಂಡಿದ್ದಾನೆ. ಸ್ಪಾನಿಷ್ ಭಾಷೆಯಲ್ಲಿ ಬರೆಯುತ್ತಿರುವ ಸದ್ಯದ ಪ್ರಸಿದ್ಧ ಲೇಖಕರಲ್ಲಿ ಒಬ್ಬನಾದ ಮಾರ್ಕ್ವೆಸ್‌ನ ಸಾಹಿತ್ಯದ ಪರಿಚಯವನ್ನು ಕನ್ನಡ ಓದುಗರಿಗೆ ಮಾಡಿಕೊಡಲು ಈ ವಾಚಿಕೆಯನ್ನು ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ ಅವರು ಸಂಪಾದನೆಯೊಂದಿಗೆ ಸಿದ್ಧಪಡಿಸಿದ್ದಾರೆ.

ಮುನ್ನುಡಿ

ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದೆ, ಅವುಗಳಲ್ಲಿ ಮುಖ್ಯವಾದುವೆಂದರೆ, ಕನ್ನಡದಲ್ಲಿ ಆಯಾ ವರ್ಷ ಪ್ರಕಟವಾಗುವ ಕೃತಿಗಳನ್ನು ಲೇಖಕರಿಂದ, ಪ್ರಕಾಶಕರಿಂದ ಕೊಂಡು ಗ್ರಂಥಾಲಯಗಳ ಮೂಲಕ ಓದುಗರಿಗೆ ತಲುಪಿಸುವುದು ಹಾಗೂ ಅತ್ಯುತ್ತಮವಾದ ಕೃತಿಗಳನ್ನು ಪರಿಣಿತ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವುದು, ಈ ಯೋಜನೆಗಳಿಗೆ ಪೂರಕವಾಗಿ ಕಳೆದ ಐದು ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಸೃಜನಶೀಲ ಹಾಗೂ ಸೃಜನೇತರವಾದ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುತ್ತಾ ಬಂದಿದೆ. ಕನ್ನಡದ ಮೌಲಿಕವಾದ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದ ಪುನರ್ ಮುದ್ರಣವಾಗದಿದ್ದ ಗ್ರಂಥಗಳನ್ನು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಪ್ರಕಟಿಸುತ್ತಾ ಬಂದಿದೆ. ಹಾಗೆಯೇ ಸಮಕಾಲೀನ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಮಾನವಿಕ, ಶಾಸ್ತ್ರ ವಿಚಾರ, ಕಲೆ, ಶಿಶು ಸಾಹಿತ್ಯ ಹಾಗೂ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಕೃತಿಗಳನ್ನು ಹೊರತರುವ ಉದ್ದೇಶದಿಂದ ಮೂಲಭೂತ ಶೈಕ್ಷಣಿಕ ಮಾಲೆ, ವಿಜ್ಞಾನದೀಪ ಮಾಲೆ, ಮಕ್ಕಳ ಪುಸ್ತಕ ಮಾಲೆಗಳನ್ನು ಪ್ರಾರಂಭಿಸಿದೆ. ಅಲ್ಲದೆ ಕನ್ನಡದ ಕೆಲವು ಲೇಖಕರ ಶತಮಾನೋತ್ಸವ ಸಂದರ್ಭದಲ್ಲಿ ಅವರ ಪ್ರಾತಿನಿಧಿಕ ಸಂಕಲನವನ್ನು ಸಂಪಾದಿಸಿ ಪ್ರಕಟಿಸುವ ಕೆಲಸವನ್ನು ಮಾಡುತ್ತಿದೆ.

ಜಗತ್ತಿನ ಬೇರೆ ಬೇರೆ ವಿಜ್ಞಾನಿಗಳ, ತತ್ವಜ್ಞಾನಿಗಳ ಬದುಕು ಮತ್ತು ಬರಹಗಳನ್ನು ಕುರಿತು ತಜ್ಞರಿಂದ ಬರೆಯಿಸಿ ಕನ್ನಡದ ಓದುಗರಿಗೆ ತಲುಪಿಸಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಪ್ರಾಧಿಕಾರ ಹೊಂದಿದೆ. ಹೀಗೆ ಪರಿಚಯಿಸುವುದರ ಮೂಲಕ ಬೇರೆ ಬೇರೆ ದೇಶಗಳ ಭಾಷೆ, ಸಂಸ್ಕೃತಿ ಹಾಗೂ ನಾಗರಿಕತೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನೊಬೆಲ್ ಬಹುಮಾನ ವಿಜೇತ ಲೇಖಕರ ಮಾಲಿಕೆಯೊಂದನ್ನು ಆರಂಭಿಸುತ್ತಿದ್ದೇವೆ. ಇದನ್ನು 'ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ' ಎಂದು ಕರೆದಿದೆ.

ನೊಬೆಲ್ ಬಹುಮಾನ ಜಗತ್ತಿನಲ್ಲಿಯೇ ಅತ್ಯಂತ ಪ್ರತಿಷ್ಠಿತವಾದ ಬಹುಮಾನ. ಆಲ್‌ಫ್ರೆಡ್ ನೊಬೆಲ್ ತಮ್ಮ ಉಯಿಲಿನಲ್ಲಿ ತಮ್ಮ ಉಳಿದಿರುವ ಆಸ್ತಿಯನ್ನೇ ಮೂಲ ಬಂಡವಾಳವಾಗಿಟ್ಟುಕೊಂಡು ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಐದು ಬಹುಮಾನಗಳನ್ನು ಕೊಡುವಂತೆ ತಿಳಿಸಿದ್ದಾರೆ. ಈ ಬಹುಮಾನಗಳು 'ಭೌತಶಾಸ್ತ್ರ', 'ರಸಾಯನಶಾಸ್ತ್ರ', 'ಶರೀರಶಾಸ್ತ್ರ' ಅಥವಾ 'ವೈದ್ಯಕೀಯ ಶಿಕ್ಷಣ', 'ಸಾಹಿತ್ಯ' ಹಾಗೂ 'ಮನುಕುಲದ ಶಾಂತಿಗಾಗಿ' ಎಂದು ಸೂಚಿಸಿದ್ದಾರೆ. ಹಾಗೆ ಆಯಾ ವರ್ಷ ಬಹುಮಾನ ಪಡೆಯುವವರು ಹಿಂದಿನ ವರ್ಷಾವಧಿಯಲ್ಲಿ ಮಾನವ ಕುಲಕ್ಕೆ ತುಂಬ

ಪ್ರಯೋಜನಕಾರಿಯಾದ, ಅತ್ಯಂತ ಶ್ರೇಷ್ಠ ಕಾರ್ಯ ಮಾಡಿರಬೇಕು. ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಅಕಾಡೆಮಿಗಳು ಆಯ್ಕೆ ಮಾಡಿ ಬಹುಮಾನವನ್ನು ನಿರ್ಧರಿಸುತ್ತವೆ. ಈ ಬಹುಮಾನ ನೀಡುವಲ್ಲಿ ಅಭ್ಯರ್ಥಿಗಳ ರಾಷ್ಟ್ರೀಯತೆಯನ್ನು ಪರಿಗಣಿಸಬಾರದೆಂಬುದನ್ನು ನೊಬೆಲ್ ಸೂಚಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಇಂತಹ ಪುರಸ್ಕಾರ ಪಡೆದ ಸಾಹಿತಿಗಳನ್ನು ಕುರಿತ ಕೃತಿಗಳನ್ನು ಕನ್ನಡಿಗರಿಗೆ ತಲುಪಿಸುವುದು ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ.

ಪ್ರಸ್ತುತ ನೊಬೆಲ್ ವಾಚಿಕೆಗಳು ಎಂಬ ಈ ಮಾಲಿಕೆಯ ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಿದ್ಧಪಡಿಸಿ ಕೊಟ್ಟಿದೆ. ಈ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಪ್ರೊ|| ಬರಗೂರು ರಾಮಚಂದ್ರಪ್ಪ ಅವರು ಬೇರೆ ಬೇರೆ ಲೇಖಕರಿಂದ ಹಸ್ತಪ್ರತಿಗಳನ್ನು ಸಿದ್ಧಪಡಿಸಲು ನೆರವಾಗಿದ್ದಾರೆ, ಅಂತೆಯೇ ಅಕಾಡೆಮಿಯು ಸಿದ್ಧಪಡಿಸಿದ ಈ ಕೃತಿಗಳನ್ನೆಲ್ಲಾ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಇಂದಿನ ಅಧ್ಯಕ್ಷರಾದ ಶ್ರೀ ಶಾಂತರಸ ಅವರು ಒಪ್ಪಿಗೆ ನೀಡಿದ್ದಾರೆ. ಇವರಿಬ್ಬರಿಗೆ ಪ್ರಾಧಿಕಾರವು ಆಭಾರಿಯಾಗಿದೆ. ಈ ಮಾಲಿಕೆಯಲ್ಲಿನ ಕೃತಿಗಳು ಇಷ್ಟು ಅಚ್ಚುಕಟ್ಟಾಗಿ ಹೊರಬರಲು ಶ್ರೀ ಲಿಂಗರಾಜು ಅವರು ಶ್ರಮಿಸಿದ್ದಾರೆ.

ಪ್ರಸ್ತುತ ಕೃತಿಯ ಸಂಪಾದಕರು ಅನುವಾದಕರು ಆದ ಶ್ರೀ ಬಿದರಹಳ್ಳಿ ನರಸಿಂಹಮೂರ್ತಿಯವರಿಗೆ, ಹಾಗೂ ಈ ಪುಸ್ತಕಕ್ಕೆ ಹೊದಿಕೆಯನ್ನು ಬರೆದುಕೊಟ್ಟ ರಾ. ಸೂರಿಯವರಿಗೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ವರ್ಗಮುದ್ರ ದವರಿಗೂ ಕೃತಜ್ಞತೆಗಳು. ಸಹೃದಯ ಕನ್ನಡಿಗರು ಈ ಮಾಲಿಕೆಯನ್ನು ಆದರದಿಂದ ಸ್ವಾಗತಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆಂದು ಆಶಿಸುತ್ತೇನೆ.

ನೆಲಮನೆ ದೇವೇಗೌಡ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ

ಪರಿವಿಡಿ

ಕನಸುಗಳು ಬಾಡಿಗೆಗೆ — ಅನು : *ಬಿದರಹಳ್ಳಿ, ನರಸಿಂಹಮೂರ್ತಿ*

ಬರಹಗಾರನ ಪಾಕಶಾಲೆ : ಕಲ್ಪನಾ ಸಾಹನಿ *ಸಂದರ್ಶನ* — ಅನು : *ನಂದಾ*

ಗ್ರಂಥ ಋಣ

ಪ್ರಸ್ತಾವನೆ

'**ಒಂ**ಟಿತನದ ಒಂದು ನೂರು ವರುಷಗಳು' ಎಂಬ ಸ್ಪ್ಯಾನಿಶ್ ಭಾಷೆಯ ಕಾದಂಬರಿಗಾಗಿ ೧೯೮೨ರ ನೊಬೆಲ್ ಪಾರಿತೋಷಕ ಪಡೆದು ವಿಶ್ವ ವಿಖ್ಯಾತನಾಗಿರುವ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ಗೆ ಇದೀಗ ೬೭ ವರ್ಷ. ೧೯೨೮ ರಲ್ಲಿ ದಕ್ಷಿಣ ಅಮೆರಿಕಾ ಖಂಡದ ಕೊಲಂಬಿಯಾ ದೇಶದ ಅರಕಾಟಕ ಎಂಬ ಊರಿನಲ್ಲಿ ಹುಟ್ಟಿದ ಮಾರ್ಕ್ವೆಸ್, ರಾಜಧಾನಿ ಬೊಗೋಟಾದ ನ್ಯಾಷನಲ್ ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಮಾಡಿದ. *EL Expectador* ಎಂಬ, ಕೊಲಂಬಿಯದಿಂದ ಪ್ರಕಟವಾಗುತ್ತಿದ್ದ ಸ್ಪ್ಯಾನಿಶ್ ಪತ್ರಿಕೆಯ ವರದಿಗಾರನಾಗಿ ಜೀವನ ಪ್ರಾರಂಭಿಸಿ ಮುಂದೆ ರೋಂ, ಪ್ಯಾರಿಸ್, ಬಾರ್ಸಿಲೋನಾ, ಕಾರಕಾಸ್ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ವಾಸಿಸುತ್ತ ಆ ಪತ್ರಿಕೆಯ ವಿದೇಶಿ ಬ್ಯಾತೀದಾರನಾಗಿ ದುಡಿದ. ಈಗ ತನ್ನ ಹೆಂಡತಿ ಮರ್ಸಿಡಿಸ್ ಬಾರ್ಚಾ ಮತ್ತು ಇಬ್ಬರು ಗಂಡುಮಕ್ಕಳೊಡನೆ ಮೆಕ್ಸಿಕೊ ನಗರದಲ್ಲಿ ನೆಲೆಸಿದ್ದಾನೆ.

ಮೂಲತಃ ಸ್ಪ್ಯಾನಿಶ್ ಭಾಷೆಯಲ್ಲೆ ರಚಿತವಾಗುವ ಮಾರ್ಕ್ವೆಸ್‌ನ ಕೃತಿಗಳು ನಂತರ ವಿಶ್ವದ ಸಂಪರ್ಕ ಭಾಷೆಯಾದ ಇಂಗ್ಲಿಷಿಗೆ ತರ್ಜುಮೆಗೊಂಡು ಬೇರೆ ಬೇರೆ ದೇಶಗಳ ಓದುಗರನ್ನ ತಲುಪುತ್ತವೆ. ಇದುವರೆಗಿನ ಅವನ ಕೃತಿಗಳ ಪಟ್ಟಿ ಹೀಗಿದೆ; **'ನೋ ಓನ್ ರೈಟ್ಸ್ ಟು ದಿ ಕರ್ನಲ್ ಅಂಡ್ ಅದರ್ ಸ್ಟೋರೀಸ್', 'ಇನಸೆಂಟ್**

ಎರೆಂಡಿರಾ ಅಂಡ್ ಅದರ್ ಸ್ಟೋರೀಸ್', 'ಲೀಫ್ ಸ್ಟಾರ್ಮ್ ಅಂಡ್ ಅದರ್ ಸ್ಟೋರೀಸ್' ಮತ್ತು 'ಸ್ಟ್ರೇಂಜ್ ಫಿಲ್‌ಗ್ರಿಮ್ಸ್' ಎಂಬ ನಾಲ್ಕು ಕಥಾ ಸಂಕಲನಗಳು; 'ಇನ್ ಇವಿಲ್ ಅವರ್', 'ಕ್ರಾನಿಕಲ್ ಆಫ್ ಎ ಡೆತ್ ಫೋರ್‌ಟೋಲ್ಡ್', 'ದ ಜನರಲ್ ಇನ್ ಹಿಸ್ ಲ್ಯಾಬಿರಿಂತ್', 'ಲವ್ ಇನ್ ದ ಟೈಮ್ ಆಫ್ ಕಾಲರಾ', 'ಆಟಮ್ ಆಫ್‌ದ ಪೇಟ್ರಿಯಾರ್ಕ್' ಮತ್ತು 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಎಂಬ ಆರು ಕಾದಂಬರಿಗಳು; 'ಕ್ಲಾಂಡೆಸ್ಟೈನ್ ಇನ್ ಚಿಲಿ' ಮತ್ತು 'ದ ಸ್ಟೋರಿ ಆಫ್ ಎ ಶಿಪ್‌ರೆಕ್ಟ್ ಸೆಯ್ಲರ್' ಎಂಬ ಜೀವನ ಚರಿತ್ರೆಗಳು ಅಥವಾ ಸ್ನೇಹಿತರ ಅನುಭವ ಕಥನಗಳು; ತೀರ ಇತ್ತೀಚೆಗೆ 'ಲವ್ ಅಂಡ್ ಅದರ್ ಡ್ರೀಮ್ಸ್' ಎಂಬ, ಕೊಲಂಬಿಯದಲ್ಲಿ ನಡೆಯುವಂಥ ಚಾರಿತ್ರಿಕ ಕಥಾ ವಸ್ತುವುಳ್ಳ, ಕಾದಂಬರಿಯನ್ನು ಬರೆದು ಮುಗಿಸಿದ್ದಾನೆಂದು ವರದಿಯಾಗಿದೆ (ದಿ ಸಂಡೆ ಟೈಮ್ಸ್ ಆಫ್ ಇಂಡಿಯ ೨೬-೬-೯೪, ಪುಟ ೧೯); ಅಲ್ಲದೆ ಬಹಳ ವರ್ಷಗಳಿಂದ ಕ್ಯೂಬಾ ದೇಶದ ಸ್ಥಿತಿಗತಿಗಳನ್ನು ಕುರಿತು ಒಂದು ಸೃಜನೇತರ ಕೃತಿಯನ್ನ ರಚಿಸುತ್ತಿರುವುದಾಗಿ 'ಪ್ಲೇಬಾಯ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದಾನೆ. ಕ್ಯೂಬಾದ ರಾಜಕೀಯ ಸಾಮಾಜಿಕ ಬಿಕ್ಕಟ್ಟು ಒಂದು ಹದಕ್ಕೆ ಬಂದಮೇಲೆ ಆ ಕೃತಿಯನ್ನು ಪ್ರಕಟಿಸುವುದಾಗಿ ಹೇಳಿಕೊಂಡಿದ್ದಾನೆ.

ಮಾರ್ಕ್ವೆಸ್‌ನ ಹೆಸರು ತರಹೆವಾರಿ ಉಚ್ಚಾರಣೆಗಳಿಗೆ ಒಳಗಾಗಿದೆ: ಗಾಬ್ರಿಯೇಲ್ ಗಾರ್ಸಿಯಾ ಮಾರ್ಕೋಸ್; ಗ್ಯಾಬ್ರಿಯೇಲ್ ಗಾರ್ಸಿಯಾ ಮಾರ್ಕ್ವೆಜ್; ಗೇಬ್ರಿಯಲ್ ಗಾರ್ಸಿಯಾ ಮಾರ್‌ಕೇಸ್; ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಇತ್ಯಾದಿ. 'ಸೆವೆನ್ ಲ್ಯಾಂಗ್ವೇಜ್ ಡಿಕ್ಷನರಿ'ಯ ೭೨೬ನೇ ಪುಟದಲ್ಲಿ ಸ್ಪ್ಯಾನಿಶ್‌ನ *marques* ಎಂಬುದು ಇಂಗ್ಲಿಷ್‌ನ *marquis*ಗೆ ಸಮ ಎಂದು ನಮೂದಾಗಿದೆ. 'ಎವ್ರಿಮನ್ಸ್ ಇಂಗ್ಲಿಷ್ ಪ್ರನೌನ್ಸಿಂಗ್ ಡಿಕ್ಷನರಿ' ಮತ್ತು 'ಲಾಂಗ್‌ಮನ್ ಡಿಕ್ಷನರಿ ಆಫ್ ಕಾಂಟೆಂಪೊರರಿ ಇಂಗ್ಲಿಷ್' ಇವುಗಳನ್ನು ರೆಫರ್ ಮಾಡಿದಾಗ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ಎಂಬ ಉಚ್ಚಾರಣೆ ಸರಿಯಾದದ್ದು ಎನಿಸಿತು. ಇದೆಲ್ಲ ಹೇಗೆಯೆ ಇರಲಿ, ಅವನ ಆತ್ಮೀಯ ಮಿತ್ರರೆಲ್ಲ ಅವನನ್ನು ಪ್ರೀತಿಯಿಂದ ಗ್ಯಾಬೊ ಎಂದಷ್ಟೆ ಕರೆಯುತ್ತಾರೆ.

II

ಬ್ರಿಟಿಷ್ ವಸಾಹತುಶಾಹಿಗೆ ಬಲಿಯಾಗಿದ್ದ ನಾವು ಹೆಚ್ಚು ಕಡಿಮೆ ಎಲ್ಲ ಬಗೆಯ ವೆಸ್ಟರ್ನ್ ಕ್ಲಾಸಿಕ್ಕುಗಳನ್ನೂ ಇಂಗ್ಲಿಷ್ ಮಾಧ್ಯಮದಲ್ಲೆ ಓದುತ್ತೇವೆ. ಇದರಿಂದಾಗಿ ಅವೆಲ್ಲವು ಇಂಗ್ಲಿಷ್ ಕೃತಿಗಳೆ ಎಂಬ ಮೇಲ್ಪದರದ ಭ್ರಮೆಗೆ ಒಳಗಾಗಿರುತ್ತೇವೆ. ಅಲ್ಲದೆ ಯೂರೋಪು ಮತ್ತು ಅಮೆರಿಕಾ ಖಂಡಗಳ ಅನೇಕಾನೇಕ ಭಾಷಿಕ-ದೇಶಿಕ ಸಂಸ್ಕೃತಿಗಳ ಪ್ರತ್ಯೇಕ ವೈಶಿಷ್ಟಗಳನ್ನು ಕಡೆಗಣಿಸಿ ಅವನ್ನೆಲ್ಲ ಸಾರಾಸಗಟಾಗಿ ಒಂದೇ ಬಗೆಯಲ್ಲಿ ಸ್ವೀಕರಿಸುವ ಅಭ್ಯಾಸಕ್ಕೆ ಒಗ್ಗಿ ಹೋಗಿರುತ್ತೇವೆ. ಇದು ತಪ್ಪು. ದಕ್ಷಿಣ ಅಮೇರಿಕ ಖಂಡದ ನೊಸಲಿನಂತಿರುವ ಕೊಲಂಬಿಯಾ ದೇಶದವನಾದ ಮಾರ್ಕ್ವೆಸ್ ಸ್ಪಾನಿಶ್ ಭಾಷೆಯಲ್ಲಿ ಬರೆಯುತ್ತಾನೆ ಯಾಕೆ ಎಂಬುದನ್ನು ತಿಳಿದು ಕೊಳ್ಳಲು ಚರಿತ್ರೆಯ ಕೆಲವು ಪುಟಗಳನ್ನ ತಿರುವಿಹಾಕಬೇಕಾಗುತ್ತದೆ.

ಕೊಲಂಬಸ್ ಕಂಡುಹಿಡಿದ ಮೇಲೆ ಜಗತ್ತಿನ ಕಣ್ಣಿಗೆ ಬಿದ್ದ ಅಮೆರಿಕ ಖಂಡಗಳಲ್ಲಿ, ಆ ನಂತರವಷ್ಟೆ ಅಸ್ತಿತ್ವಕ್ಕೆ ಬಂದಿರುವ ಬಹುತೇಕ ಎಲ್ಲ ರಾಷ್ಟ್ರಗಳಿಗೂ ಮೂಲ ಮಾತೃಭಾಷೆ ಎಂಬುದೆ ಇಲ್ಲ ಎಂಬುದು ಬಹಳ ಮಾರ್ಮಿಕವಾದ ಚಾರಿತ್ರಕ ಸತ್ಯ. ಈ ರಾಷ್ಟ್ರಗಳು ಅಸ್ತಿತ್ವಕ್ಕೆ ಬರುವ ಹೊತ್ತಿಗೆ, ಭಾಷೆಗಳು ಹುಟ್ಟು ಪಡೆಯ ಬಹುದಾದ ಚಾರಿತ್ರಿಕ ಘಟ್ಟವನ್ನು ದಾಟಿ ಬಹುದೂರ ಸಾಗಿಬಂದು ಬಿಟ್ಟಿತ್ತು ಮನುಕುಲದ ಕಥೆ. ಹೀಗಾಗಿ 'ಬ್ರೇವ್ ನ್ಯೂ ವರ್ಲ್ಡ್' ಎಂದು ಕರೆಸಿಕೊಂಡ ಅಮೆರಿಕ ಖಂಡಗಳ ರಾಷ್ಟ್ರಗಳನ್ನು ಯೂರೋಪಿನ ಹಳೆಯ ರಾಷ್ಟ್ರಗಳಾದ ಇಂಗ್ಲೆಂಡ್, ಸ್ಪೇನ್, ಪೊರ್ತುಗಲ್, ಫ್ರಾನ್ಸ್ ಮುಂತಾದವು ತಮ್ಮ ವಸಾಹತುಗಳನ್ನಾಗಿ ಮಾಡಿಕೊಂಡು ತಮ್ಮ ಮಾತೃಭಾಷೆಯನ್ನೆ ಅಲ್ಲಲ್ಲಿನ ಆಡುಭಾಷೆಯನ್ನಾಗಿ ರೂಢಿಗೆ ತಂದವು.

> "ನಾಗರಿಕತೆಯ ವಾಹಕರಾಗಲು ಸ್ಪೇನಿನವರ ಜತೆ ಆಂಗ್ಲರು, ಡಚ್ಚರು, ಫ್ರೆಂಚರು ಸ್ಪರ್ಧಿಸಿದರು. 'ನಾಗರಿಕತೆ' ಎಂದರೆ ಇವೆ ಅಲ್ಲವೆ? - ಉರುಳುವ ಚಕ್ರ, ಗುಹ್ಯಾದಿ ರೋಗಗಳು, ಮಾರಕಾಸ್ತ್ರಗಳು, ಧರ್ಮದ ಹೆಸರಿನಲ್ಲಿ ಜನವಧೆ... ಬಂದು ಅಧಿಕಾರ ದಂಡ ಚಲಾಯಿಸಿದವರಲ್ಲಿ ಮುಖ್ಯರು ಲ್ಯಾಟಿನ್ ಮೂಲದ ಸ್ಪಾನಿಷ್

> **ಮತ್ತು ಪೋರ್ತುಗೀಸ್ ಆಕ್ರಮಣಕಾರರು. ಆದ್ದರಿಂದಲೇ ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೆಳಗಿನ ಭೂಭಾಗವೆಲ್ಲ ಲ್ಯಾಟಿನ್ ಅಮೆರಿಕ ಎಂದು ಸಾರ್ವತ್ರಿಕ ಹೆಸರು ಪಡೆಯಿತು." ೧**

ಇಂಥ ಚಾರಿತ್ರಿಕ ಮತ್ತು ಭೌಗೋಳಿಕ ಸನ್ನಿವೇಶದ ವಿಚಿತ್ರಫಲವಾದ ಮಾರ್ಕ್ವೆಸ್‌ನ ವ್ಯಕ್ತಿತ್ವ ಮೂರು ಮುಖ್ಯ ಶಕ್ತಿಗಳ ಸಮ್ಮಿಶ್ರಣವಾಗಿದೆ: ಸ್ಪಾನಿಶ್ ಗೂಳಿ ಕಾಳಗ ಮತ್ತು ಸ್ಪ್ಯಾನಿಶ್ ಆರ್ಮೆಡಾದ ದುರುದುಂಬಿ ಸಾಹಸಪ್ರಜ್ಞೆಯ ಪ್ರತೀಕವಾದ ಸ್ಪ್ಯಾನಿಶ್ ಭಾಷಿಕ ಸಂಸ್ಕೃತಿಯ ದೇಹ; ಮುಕ್ತ ಮಾರುಕಟ್ಟೆಯಲ್ಲಿ ಮಾನ - ಮಾನವ- ಮಾನದಂಡ ಎಲ್ಲವನ್ನು ಹರಾಜು ಹಾಕಲು ಹವಣಿಸುವ ಆಧುನಿಕ ಅಮೆರಿಕದ ಮನಸ್ಸು; ಮತ್ತು ಈ ಸ್ಪ್ಯಾನಿಶ್ ಮತ್ತು ಅಮೆರಿಕನ್ ನಾಗರಿಕತೆಗಳು ದುರಾಕ್ರಮಣಕ್ಕೆ ಬಲಿಯಾದ ಇಂಕಾ - ಮಾಯಾ - ಅಜ್‌ಟೆಕ್ ಬುಡಕಟ್ಟು ಸಂಸ್ಕೃತಿಗಳ ಆತ್ಮ. ಈ ಮೂರು ಕುದಿಯುವ ಶಕ್ತಿಗಳು ಸರಿಯಾದ ಹದದಲ್ಲಿ ಸಂಮಿಳನಗೊಳ್ಳದೆ ಇರುವುದರಿಂದ ಉಂಟಾಗಿರುವ ಪ್ರಚಂಡ ವೈರುಧ್ಯಗಳು ಮತ್ತು ಅದ್ಭುತ ದ್ವಂದ್ವಗಳು ಮಾರ್ಕ್ವೆಸ್‌ನ ಬರಹಗಾರ ವ್ಯಕ್ತಿತ್ವದ ಪ್ರಮುಖ ಲಕ್ಷಣಗಳಾಗಿವೆ.

III

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ನ ತಂದೆ ಗ್ರೇಬ್ರಿಯಲ್ ಗಾರ್ಸಿಯಾ, ತಾಯಿ ಲೂಸಿಯಾ ಮಾರ್ಕ್ವೆಸ್. ಬಡತನದಿಂದಾಗಿ ಗೇಬ್ರಿಯಲ್ ಗಾರ್ಸಿಯಾ ವೈದ್ಯಕೀಯ ಶಿಕ್ಷಣವನ್ನು ಅರ್ಧದಲ್ಲೆ ನಿಲ್ಲಿಸಿ ತಂತಿ ಇಲಾಖೆಯ ಕೆಲಸಗಾರನಾಗಿ ಅರಕಾಟಕಕ್ಕೆ ಬಂದ. ಆ ಊರಿನ ಸುರಸುಂದರಿ ಲೂಸಿಯಾ ಮಾರ್ಕ್ವೆಸ್‌ಗೆ ಮಾರುಹೋಗಿ ಅವಳನ್ನು ಪ್ರೀತಿಸಿದ. ಅವಳೂ ಅವನನ್ನು ಪ್ರೀತಿಸಿದಳು. ಆದರೆ ಅವಳ ತಂದೆ ತಾಯಿಗೆ ಈ ಪ್ರೀತಿ ಇಷ್ಟವಾಗಲಿಲ್ಲ.

> **"ಈ ಸಾಮಾನ್ಯ ಆಪರೇಟರ್‌ಗೆ ಕರ್ನಲ್ ಕುಟುಂಬದವರು ಹೇಗೆ ಹೆಣ್ಣು ಕೊಟ್ಟಾರು? ಜೊತೆಗೆ ಲಿಬರಲ್ ಪಕ್ಷದ ಕರ್ನಲ್ ಕುಟುಂಬ**

---

೧. ನಿರಂಜನ '**ಕಿವುಡು-ವನದೇವತೆ**' (ವಿಶ್ವಕಥಾಕೋಶ - ಸಂಪುಟ ೨೪)- ಪ್ರಸ್ತಾವನೆ.

ಕನ್ಸರ್ವೇಟಿವ್ ಪಾರ್ಟಿಗೆ ಸೇರಿದ ಗಾರ್ಸಿಯಾನನ್ನು ಒಪ್ಪುವುದು ಹೇಗೆ? ತಿರಸ್ಕರಿಸಿದರು. ಆದರೆ ಪ್ರೀತಿಗೆ ಯಾವುದು ಅಡ್ಡಿ? ಲೂಸಿಯಾ - ಗಾರ್ಸಿಯಾ ಪರಸ್ಪರ ಪ್ರೀತಿಸಿದರು.

ಸಂಬಂಧ ತಪ್ಪಿಸಲು ಕರ್ನಲ್ ಕುಟುಂಬದವರು ಲೂಸಿಯಾರನ್ನು ಬೇರೆ ಬೇರೆ ಊರುಗಳಿಗೆ ಕಳಿಸಿದರು. ಆದರೆ ಅಲ್ಲೆಲ್ಲ ಟೆಲಿಗ್ರಾಫ್ ಆಫೀಸಿತ್ತು, ಗಾರ್ಸಿಯಾನ ಗೆಳೆಯರಿದ್ದರು. ಪ್ರೀತಿಯ ತಂತು ತಪ್ಪಲಿಲ್ಲ. ಅನಿವಾರ್ಯವಾಗಿ ಕರ್ನಲ್ ಕುಟುಂಬ ಗಾರ್ಸಿಯಾನನ್ನು ಒಪ್ಪಿಕೊಂಡಿತು. ಈ ಗೇಬ್ರಿಯಲ್ ಗಾರ್ಸಿಯಾ ಮತ್ತು ಲೂಸಿಯಾ ಮಾರ್ಕ್ವೆಜ್‌ರ ಮೊದಲ ಮಗನೇ ಗ್ರೇಬ್ರಿಯಲ್ ಗಾರ್ಸಿಯಾ ಮಾರ್ಕ್ವೇಜ್" [೨]

ತನ್ನ ತಂದೆ ತಾಯಿಯ ಪ್ರೇಮಕಥಾನಕವನ್ನು ಒಂದು ಅಧಿವಾಸ್ತವ ನೆಲೆಯಲ್ಲಿ ವಿಸ್ತರಿಸುತ್ತ 'ಲವ್ ಇನ್‌ದ ಟೈಮ್ ಆಫ್ ಕಾಲರಾ' ಎಂಬ ಆಧುನಿಕ ಟ್ರ್ಯಾಜ್ಯಿ - ಕಾಮಿಡಿ ಕಾದಂಬರಿಯನ್ನು ಬರೆದು ೧೯೮೫ರಲ್ಲಿ ಪ್ರಕಟಿಸಿದ್ದಾನೆ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್.

ಲ್ಯಾಟಿನ್ ಅಮೆರಿಕದ ಕೆರಿಬಿಯನ್ ಕರಾವಳಿ ಹಳ್ಳಿಯಾದ ಅರಕಾಟಕದಲ್ಲಿ ಹುಟ್ಟಿದ ಮಾರ್ಕ್ವೆಸ್ ತನಗೆ ಎಂಟು ವರ್ಷವಾಗುವವರೆಗೂ ಅಜ್ಜ ಅಜ್ಜಿಯ ಮನೆಯಲ್ಲೇ ಇದ್ದುದು ವಿಶೇಷ ಸಂಗತಿ. "ವಿಭಿನ್ನ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿದ್ದ ನಾವು ಏನು ಬೇಕಾದರೂ ನಂಬಬಲ್ಲಂಥ ಕಸುವಿರುವ ಜನ ಆಗಿದ್ದೀವಿ;" [೩] ಎನ್ನುತ್ತಾನೆ ಆ ಕೆರಿಬಿಮನ್ ಜನರನ್ನ ಕುರಿತು ಹೇಳುವಾಗ.

ಪ್ರತಿಯೊಬ್ಬ ಲೇಖಕನಿಗು ಬಾಲ್ಯದ ಆರಂಭ ಕಾಲದ ನೆನಪುಗಳು ಶಾಶ್ವತ ಠೇವಣಿಯಿದ್ದಂತೆ. ಅವನ ಅತ್ಯಂತ ಒಳ್ಳೆಯ ಕೃತಿಗಳು ಆ ನೆನಪುಗಳನ್ನೆ ಅವಲಂಬಿಸಿರುತ್ತದೆ. ಮಾರ್ಕ್ವೆಸ್ ತನ್ನ ಬದುಕಿನ ಮೊದಲ ಎಂಟು ವರ್ಷಗಳನ್ನ ತನ್ನ

---

೨. ನರಹಳ್ಳಿ ಬಾಲಸುಬ್ರಹ್ಮಣ್ಯ - ಮಾರ್ಕ್ವೆಜ್ ಕಥೆಗಳು - ಪ್ರಸ್ತಾವನೆ - ಪುಟ ೨

೩. 'Play Boy' ಪತ್ರಿಕೆಗೆ Clandia Dreitur ನಡೆಸಿದ ಸಂದರ್ಶನದಲ್ಲಿ.

ಅಜ್ಜ - ಅಜ್ಜಿಯ ಮನೆಯಲ್ಲೆ ಕಳೆದ. ತಾಯಿಯ ತಾಯಿ ಮತ್ತು ತಂದೆಯರಾದ ಅಜ್ಜಿ- ಅಜ್ಜನ ಪ್ರಭಾವದಲ್ಲಿ ಬೆಳೆದ ಮಾರ್ಕ್ವೆಸ್‌ಗೆ ಮಾರ್ಕ್ವೆಸ್ ಎಂಬ ವಂಶನಾಮ ಅಂಟಿಕೊಂಡಿರುವುದು ತಾಯಿ ಕಡೆಯಿಂದಲೆ ಎಂಬುದು ಪಿತೃಪ್ರಧಾನ ವ್ಯವಸ್ಥೆಯ ನಮ್ಮ ಜಗತ್ತಿನಲ್ಲಿ ಒಂದು ವಿಶೇಷ ಸಂಗತಿ. ತನ್ನ ಅಜ್ಜಿ ಅಜ್ಜರ ಬಗ್ಗೆ ಮಾರ್ಕ್ವೆಸ್ ಏನು ಹೇಳುತ್ತಾನೆ ಕೇಳೋಣ :

> "ನಮ್ಮಜ್ಜನ ಮನೆ ಹೆಂಗಸರಿಂದ ತುಂಬಿದ್ದ ಮನೆ. ನಮ್ಮಜ್ಜಿ, ನಮ್ಮಜ್ಜನ ತಂಗಿ ಮತ್ತಿತರರು ಇದ್ದರು. ನಾನು ನಮ್ಮಜ್ಜ ಇಬ್ಬರೆ ಗಂಡಸರು. ಹೆಂಗಸರು ವಿಪರೀತ ಕುರುಡುನಂಬಿಕೆ ಉಳ್ಳವರಾಗಿದ್ದರು. ಅವರ ಕಲ್ಪನಾ ಶಕ್ತಿಯಲ್ಲಿ ಒಂದು ಬಗೆಯ ಹುಚ್ಚುತನ ಇರುತ್ತಿತ್ತು. ನಮ್ಮಜ್ಜಿಯ ಹೆಸರು ಡೋನಾ ಟ್ರಾಂಕ್ವಿಲಾ. ಯಾವುದೇ ನಕರಾ ಮಾಡದೆ ಅವಳು ಅತ್ಯಂತ ಅದ್ಭುತವಾದ ಸಂಗತಿಗಳನ್ನ ಸರಳವಾಗಿ ಹೇಳಿಬಿಡುತ್ತಿದ್ದಳು. ಅತ್ಯಂತ ಸಹಜದ ಸಂಗತಿಗಳನ್ನೂ ಸರಳವಾಗಿ ಅವಳು ಅದ್ಭುತವಾದ ಲೇಪನ ಮಾಡಿ ವ್ಯಾಖ್ಯಾನಿಸುತ್ತಿದ್ದಳು. ಕಿಟಕಿಯೊಳಗಿಂದ ಒಂದು ಚಿಟ್ಟೆ ಬಂದರೆ ಸಾಕು, 'ಇವತ್ತು ಯಾರದ್ದೊ ಕಾಗದ ಬರತ್ತೆ' ಅನ್ನುತ್ತಿದ್ದಳು. ಒಲೆ ಮೇಲಿನ ಹಾಲು ಉಕ್ಕಿ ಚೆಲ್ಲಿದರೆ 'ಭಾಳ ಹುಶಾರಾಗಿರಬೇಕು. ಯಾರಿಗೊ ಕಾಯಿಲೆ ಆಗಿರೊ ಹಾಗೆ ಕಾಣತ್ತೆ' ಅನ್ನುತ್ತಿದ್ದಳು. ನಾನಿನ್ನೂ ಪುಟ್ಟ ಮಗುವಿದ್ದಾಗ ನನ್ನನ್ನ ರಾತ್ರಿ ಹೊತ್ತು ಎಬ್ಬಿಸಿ ಕೂರಿಸಿ ಭಯಾನಕ ಸಂಗತಿಗಳನ್ನು ಹೇಳುತ್ತಿದ್ದಳು. ಸಾವು ಯಾವಾಗ ಬರತ್ತೆ ಅನ್ನೋದನ್ನ ತಿಳಕೊಂಡು ಬಿಟ್ಟಿರುವವರು, ಸತ್ತು ಮತ್ತೆ ವಾಪಸ್ ಎದ್ದು ಬಂದವರು, ಮತ್ತೆ ಬಾರದಂತೆ ಸತ್ತು ಹೋದವರು ಇಂಥವರ ಕಥೆಯೆಲ್ಲ ಹೇಳುತ್ತಿದ್ದಳು. ಅರಕಾಟಕದ ನಮ್ಮ ಆ ಮನೆ ಒಂಥರ ದೆವ್ವಗಳ ಮನೆ ಇದ್ದಹಾಗಿತ್ತು. ಆ ಬಾಲ್ಯದ ಎಲ್ಲಾ ಅನುಭವಗಳೂ ನನ್ನ ಸಾಹಿತ್ಯಕ್ಕೆ ನುಗ್ಗಿ ಬಂದಿವೆ..... ..... ನಮ್ಮಜ್ಜಿ ಹುಚ್ಚಿ ಥರ ಇದ್ದರೂ ಬಹಳ ಶಾಂತವಾಗಿ ಇರುತ್ತಿದ್ದಳು. ಅವಳ ಮನಸ್ಸು ಅವಿಶ್ರಾಂತವಾಗಿದ್ದರೂ ಅವಳ ದೇಹ

ಎಲ್ಲ ಕೆಲಸವನ್ನು ಬಹಳ ನಿಧಾನವಾಗಿ ಸಮಾಧಾನವಾಗಿ ಮಾಡುತ್ತಿತ್ತು.

ನಮ್ಮಜ್ಜ ನಿಕೊಲಾಸ್ ಮಾರ್ಕ್ವೆಸ್ ಅವಳಿಗೆ ತದ್ವಿರುದ್ಧ. ನಾನು ಮಾತಾಡ್ತ ಇದ್ದದ್ದು ಅವನ ಜೊತೆ ಮಾತ್ರ. ಹೆಂಗಸರ ವಿಚಿತ್ರ ಪ್ರಪಂಚ ನನ್ನನ್ನ ಸೆಳೆದೊಯ್ದುಬಿಡುತ್ತಿತ್ತು. ಆವಾಗೆಲ್ಲ ನಮ್ಮಜ್ಜ ನನ್ನನ್ನು ವಾಸ್ತವಕ್ಕೆ ವಾಪಸ್ ಎಳೆದು ತರುತ್ತಿದ್ದ. ಇಂದ್ರಿಯ ಗಮ್ಯವಾದ ಅನುಭವಗಳನ್ನ ಹೇಳಿ ನನ್ನ ಸಮತೋಲನ ಕಾಪಾಡುತ್ತಿದ್ದ. ಪತ್ರಿಕೆಯ ವರ್ತಮಾನಗಳು, ಕೊಲಂಬಿಯದ ಅಂತರ್ಯುದ್ಧಗಳಲ್ಲಿ ತಾನು ಲಿಬರಲ್ ಪಕ್ಷದ ಕರ್ನಲ್ ಆಗಿ ಹೋರಾಡಿದ ದಿನಗಳ ಯುದ್ಧದ ಕತೆಗಳನ್ನ ಹೇಳುತ್ತಿದ್ದ. ನಮ್ಮಜ್ಜಿ ನಮ್ಮತ್ತೆ ಏನಾದರೂ ನಿಗೂಢವಾದದ್ದು ಹೇಳ್ತಾ ಇದ್ದಾಗ ನಮ್ಮಜ್ಜ "ಅದನ್ನೆಲ್ಲ ಕೇಳಬೇಡ. ಅವೆಲ್ಲ ಹೆಂಗಸರ ಮಾತು ಎಂದು ಕರೆಯುತ್ತಿದ್ದ. ನಮ್ಮಜ್ಜಗೆ ಮಹಾವಾಸ್ತವಪ್ರಜ್ಞೆ ಇತ್ತು. ಅದು ನನಗೂ ಹರಿದು ಬಂದಿದೆ ಅಂತ ನನ್ನ ಭಾವನೆ."[೪]

ಅತ್ಯಂತ ಸ್ವಚ್ಛಂದ ಪ್ರವೃತ್ತಿಯ ಮತ್ತು ತುಂಬ ಮುಕ್ತ ಮನಸ್ಸಿನವನಾದ ಮಾರ್ಕ್ವೆಸ್ ತನ್ನ ಮತ್ತು ತನ್ನ ತಾಯಿಯ ಬಗ್ಗೆ ಹೇಳಿಕೊಳ್ಳುವ ಮಾತು ಬಹಳ ಮಾರ್ಮಿಕವಾಗಿವೆ;

"ನನಗೆ ಬಹಳಕಾಲ ಅಪರಿಚಿತಳಾಗಿದ್ದವಳೆಂದರೆ ನನ್ನ ತಾಯಿಯೆ ಎಂಬುದು ಸತ್ಯ. ನನಗಿನ್ನೂ ಚೆನ್ನಾಗಿ ನೆನಪಿದೆ. ಒಂದು ಮುಂಜಾನೆ ಅಮ್ಮ ಬರ್‍ತಾ ಇದ್ದಾಳೆ. ಒಳ್ಳೆ ಬಟ್ಟೆ ಹಾಕ್ಕೊ ಅಂದರು. ಅದಕ್ಕೂ ಮುಂಚೆ ಅವಳನ್ನ ನೋಡಿದ್ದ ನೆನಪೆ ಇರಲಿಲ್ಲ ನನಗೆ. ಆ ಕೋಣೆ ಒಳಗೆ ಹೋದದ್ದು ನೆನಪಾಗ್ತಿದೆ. ಅಲ್ಲಿ ತುಂಬಾ ಮಂದಿ ಹೆಂಗಸರಿದ್ದರು. ನನಗೆ ಬಹಳ ಹಿಡತಿ ಭಿಡತಿ ಆಯಿತು. ಯಾಕೆಂದರೆ

೪. 'Play Boy' ಪತ್ರಿಕೆಗೆ Clandia Dreitur ನಡೆಸಿದ ಸಂದರ್ಶನದಲ್ಲಿ.

> ಅವರಲ್ಲಿ ನಮ್ಮಮ್ಮ ಯಾರು ಅಂತಾನೆ ಗೊತ್ತಾಗಲಿಲ್ಲ. ಅವಳು ಒಂಥರಾ ಸನ್ನೆ ಮಾಡಿ ತಾನೆ ನನ್ನ ತಾಯಿ ಅಂತ ತೋರಿಸಿ ಕೊಂಡಳು. ಇಪ್ಪತ್ತರ ದಶಕದ ಫ್ಯಾಷನ್ನಿನ ಬಟ್ಟೆ ಉಟ್ಟುಕೊಂಡು ಹುಲ್ಲಿನ ಹ್ಯಾಟು ಹಾಕ್ಕೊಂಡು ಲೂಸಿಬ್ರೂಕ್ಸ್ ಥರ ಕಾಣ್ತಾ ಇದ್ದಳು. ಅವಳು ನನ್ನನ್ನ ಅಪ್ಪಿಕೊಂಡಾಗ ನನಗೆ ತುಂಬಾ ಗಾಬರಿಯಾಯಿತು. ಅವಳ ಬಗ್ಗೆ ನನಗೆ ಸ್ವಲ್ಪನೂ ಪ್ರೀತಿ ಇಲ್ಲಾ ಅನ್ನಿಸಿತು. ಎಲ್ಲರೂ ತಮ್ಮ ತಾಯಿಯನ್ನ ತುಂಬ ಪ್ರೀತಿಸ್ತಾರೆ ಅಂತ ಕೇಳಿದ್ದೆ. ನಾನು ನಮ್ಮಮ್ಮನ ಪ್ರೀತಿಸದೆ ಇರೋದು ತುಂಬಾ ಕೆಟ್ಟದು ಅಂತ ಅನ್ನಿಸಿತು"[೫]

ಚಿಕ್ಕಂದಿನಲ್ಲಿ ತಾಯಿಯ ಪ್ರೀತಿಗೆ ಎರವಾಗುವ ವ್ಯಕ್ತಿ ಸರ್ವಾಧಿಕಾರಿ ಮನೋಭಾವದವನೂ, ಸ್ವಚ್ಛಂದ ಲೈಂಗಿಕ ಪ್ರವೃತ್ತಿಯವನೂ, ಸಾವಿನ ಬಗ್ಗೆ ಅಗಾಧವಾದ ಭೀತಿ ಉಳ್ಳವನೂ ಆಗಿರುತ್ತಾನೆ ಎಂಬುದು ಮನಃಶಾಸ್ತ್ರೀಯವಾಗಿ ಸಿದ್ಧವಾಗಿರುವ ಸತ್ಯ. ಈ ಮೂರು ಸಂಗತಿಗಳೆ ಮಾರ್ಕ್ವೆಸ್‌ನ ಇಡಿ ಸಾಹಿತ್ಯದ ಮುಖ್ಯ ಕಾಳಜಿಗಳಾಗಿರುವುದು ವಿಪರ್ಯಾಸವೇನಲ್ಲ.

IV

ಬದುಕು ಮತ್ತು ಬರಹಗಳನ್ನು ಪ್ರತ್ಯೇಕಿಸಿ ಕೃತಿನಿಷ್ಠವಾಗಲು ಹೊರಡುವ ವಿಮರ್ಶೆ, ಒಡೆದು ಆಳುವ ನೀತಿಯನ್ನೆ ಇನ್ನೊಂದು ನಿಟ್ಟಿನಿಂದ ಅನುಸರಿಸುತ್ತದೆ. ಬದುಕು ಮತ್ತು ಬರಹ ಎರಡೂ ಒಂದು ಬಗೆಯ ಅವಿನಾಭಾವದಲ್ಲೆ ವಿಕಾಸ ಹೊಂದಿರುವುದನ್ನು ಎಲ್ಲ ಮಹಾಲೇಖಕರಲ್ಲೂ ಪದೆಪದೇ ಕಾಣುತ್ತಲೆ ಬಂದಿದ್ದೇವಾದರೂ ಅದನ್ನು ವಿಂಗಡಿಸಿ ನೋಡುವುದು ಆಧುನಿಕರ ದೌರ್ಬಲ್ಯವಾಗಿ ಬಿಟ್ಟಿದೆ. ಹಾಗೆ ವಿಂಗಡಿಸಿ ನೋಡುವ ಮೂಲಕ ಮಹತ್ವವಿಲ್ಲದ ಲೇಖಕನಿಗೂ ಮಹತ್ತನ್ನು ಕಂಡುಕೊಡುವ ತಾರ್ಕಿಕ ಪ್ರಯತ್ನವಾಗಿ ಮಾತ್ರ ಆ ಬಗೆಯ ವಿಮರ್ಶೆ ಅಸ್ತಿತ್ವಕ್ಕೆ ಬಂದಂತಿದೆ. ಯಾವುದೇ ಬಗೆಯ ವಿಶೇಷ ಅಥವಾ ವೈಶಿಷ್ಟ್ಯ ಉಳ್ಳ ವ್ಯಕ್ತಿ ಮೊದಲು ತನ್ನ ವೈಯಕ್ತಿಕ ಬದುಕನ್ನು ದೊಡ್ಡದಾಗಿ ಬಾಳುತ್ತಾನೆ/ಳೆ. ಬಹಳಷ್ಟು

೫. 'Play Boy' ಪತ್ರಿಕೆಗೆ Clandia Dreitur ನಡೆಸಿದ ಸಂದರ್ಶನದಲ್ಲಿ.

ಸಿದ್ದಿಗಳನ್ನು ಪಟ್ಟುಹಿಡಿದು ಸಾಧಿಸುತ್ತಾನೆ / ಸಾಧಿಸುತ್ತಾಳೆ. ಅವನ/ಳ ಕಲೆ, ಸಾಹಿತ್ಯ, ವಿಜ್ಞಾನ, ರಾಜಕಾರಣ, ಯೋಗ, ತಾತ್ವಿಕತೆ ಇತ್ಯಾದಿಗಳು ಅವನ/ಳ ಭಾರಿ ಬದುಕಿನ ಉಪಪದಾರ್ಥಗಳಾಗಿ ಮಾತ್ರ ಉಳಿದುಕೊಳ್ಳುತ್ತವೆ. ಬುದ್ಧ, ಕ್ರಿಸ್ತ ಸಾಕ್ರಟಿಸ್, ಬಸವ, ಅಲ್ಲಮ, ಐನ್‌ಸ್ಟೈನ್, ಗಾಂಧಿ, ಜೆ.ಪಿ., ಲೆನಿನ್, ಮಾವೊ ಇವರೆಲ್ಲರ ಬದುಕು-ಬೋಧನೆಗಳನ್ನು ಒಟ್ಟೊಟ್ಟಿಗೆ, ಇಡಿಯಾಗಿ ನೋಡಿದಾಗಲೆ, ಬದುಕಿಗೆ ಅವಶ್ಯಕವಾದ ಅರ್ಥಗಳು ಹೊರಡುವುದು. ಅವರ ಬೋಧನೆಗಳಿಗೆ, ಅವರ ಬದುಕಿನ ಅಧ್ಯಾಯಗಳೆ ದೃಷ್ಟಾಂತಗಳಾಗಿರುವುದು ಸುಸ್ಪಷ್ಟ. ಹೀಗಿರುವಾಗ ವ್ಯಕ್ತಿಯ ಬದುಕು ಹೇಗಾದರೂ ಇರಲಿ, ಇವನ ಬರಹದ ಉದಾತ್ತತೆಯನ್ನು ಸಡಗರದಿಂದ ಸ್ವಾಗತಿಸೋಣ ಎಂಬುದು ಎಷ್ಟು ಸಮಂಜಸ? ಇಷ್ಟೇ, ಬದುಕಿರುವ ವ್ಯಕ್ತಿಯ ಸಂಬಂಧಗಳನ್ನು ಈ ನೆವದಲ್ಲಿ ಕಿತ್ತಾಡಿ ಎಳೆದಾಡಿ ಅವನ/ಳ ಮುಖಕ್ಕೆ ಮಸಿಬಳೆಯುವ ಹುಸಿ ವಿಮರ್ಶೆಯ ಕಮರಿಗೆ ಬೀಳದಂತೆ ಎಚ್ಚರ ವಹಿಸಬೇಕು.

ಮಾರ್ಕ್ವೆಸ್ ಮುಕ್ತ ಮಾತುಗಾರ. ಅವನು ತನ್ನ ಮಾತುಗಳಲ್ಲಿ ಸಂದಿಗ್ಧವನ್ನು ಎಂದಿಗೂ ಉಂಟುಮಾಡುವುದೇ ಇಲ್ಲ. ಅವನು ನೀಡಿರುವ ಅಸಂಖ್ಯ ಪತ್ರಿಕಾ - ಸಂದರ್ಶನಗಳಲ್ಲಿ ತನ್ನ ವಯಕ್ತಿಕ ಬದುಕನ್ನು, ಕನ್ನಡ ಲೇಖಕರಿಗಂತು ಸಾಧ್ಯವಿಲ್ಲ ಎಂಬಷ್ಟರ ಮಟ್ಟಿಗೆ, ತೆರೆದು ಇಟ್ಟು ಬಿಟ್ಟಿದ್ದಾನೆ. ತಮ್ಮಜ್ಜನ ಲಂಪಟತನವನ್ನು ಸವಿವರವಾಗಿ ಬಣ್ಣಿಸಿದ್ದಾನೆ. ತನ್ನ ಹೆಂಡತಿಯಾದ ಮರ್ಸಿಡಿಸ್ ಬಾರ್ಚಾಳನ್ನು ಎದುರಿಗೆ ಕೂರಿಸಿ ಕೊಂಡೇ, ಕ್ಲಾಡಿಯಾ ಕ್ರೀಫಸ್‌ಳ ಪ್ರಶ್ನೆಗೆ ನಗ್ನಸತ್ಯದ ಉತ್ತರವನ್ನು ನೀಡಿದ್ದಾನೆ. ಪ್ಯಾರಿಸ್‌ನಲ್ಲಿದ್ದಾಗ (ಮಾರ್ಕ್ವೆಸ್ - ಮರ್ಸಿಡಿಸ್‌ರ ಪ್ರೇಮ ಪ್ರಾರಂಭವಾದ ಮೇಲೆ) ಸಂಪೂರ್ಣ ಮುಕ್ತವಾಗಿ ಬದುಕಿದ್ದನ್ನು ಒಪ್ಪಿಕೊಂಡಿದ್ದಾನೆ. ಮರ್ಸಿಡಿಸ್ "ನೀನು ಅಂಥದ್ದೆಲ್ಲ ಮಾಡೋದಿಲ್ಲ ಅಂತ ಪತ್ರಗಳಲ್ಲಿ ಬರೆದಿದ್ದಿಯಲ್ಲ" ಎಂದು ತಕರಾರೆತ್ತಿದಾಗ ಅವನು ಅವಳಿಗೆ ಬರೆದ ಪ್ರೇಮ ಪತ್ರಗಳನ್ನು ಅವಳಿಂದ ಕೊಂಡುಕೊಂಡು ಸುಟ್ಟುಹಾಕಿದ್ದನ್ನು ತುಂಬ ಮುಕ್ತವಾಗಿ, ಸಂತೋಷದಿಂದ, ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದಾನೆ"[೬] ಅವನ ನೈತಿಕ ಧೈರ್ಯದ ಪೆಂಡ್ಯುಲಮ್ ನಿಜವಾಗಲು ಒಂದು ಸ್ಪಷ್ಟ ತುದಿ ತಲುಪಿ ಸತ್ಯದ ಗಂಟೆ ಬಾರಿಸುವಷ್ಟು ಶಕ್ತವಾಗಿದೆ. ಇದನ್ನಾದರೂ ಯಾರೂ ಕೃತಿಚೌರ್ಯ ಮಾಡದಿರಲಿ.

---

೬. ಅದೇ.

V

ಮಾರ್ಕ್ವೆಸ್ ಸ್ಪಷ್ಟವಾದ ರಾಜಕೀಯ ಪ್ರಜ್ಞೆ ಇರುವ ಲೇಖಕ. ಸಮಕಾಲೀನ ಅಂತಾರಾಷ್ಟ್ರೀಯ ರಾಜಕಾರಣದ ಬಗ್ಗೆ ತನ್ನವೆ ಆದ ಖಚಿತ ನಿಲುವುಗಳುಳ್ಳ ವ್ಯಕ್ತಿ. ಮತ್ತು ತನ್ನ ರಾಜಕೀಯ ಅಭಿಪ್ರಾಯಗಳನ್ನು ಯಾವ ಎಗ್ಗೂ ಇಲ್ಲದೆ ಹೇಳಿಕೊಳ್ಳಬಲ್ಲ ಧೈರ್ಯಶಾಲಿ ಮನುಷ್ಯ. ಈ ಮಾತುಗಳನ್ನ ಕೇಳಿ:

> "ಈ ಯುನೈಟೆಡ್ ಸ್ಟೇಟ್ಸಿನ ಜನ, ತಾವಷ್ಟೆ ಅಮೆರಿಕನ್ಸ್ ಅನ್ನುವ ಥರ ಆಡ್ತಾರೆ, 'ಅಮೆರಿಕ' ಅನ್ನುವ ಪದವನ್ನ ಆಕ್ರಮಿಸಿಕೊಂಡು ಬಿಟ್ಟಿದ್ದಾರೆ. ಇದರಿಂದ ನನಗೆ ಬಹಳ ಬೇಸರವಾಗಿದೆ. ನಿಜವಾಗಿ ನೋಡಿದರೆ ಅಮೆರಿಕ ದಕ್ಷಿಣ ಧ್ರುವದಿಂದ ಪ್ರಾರಂಭವಾಗಿ ಉತ್ತರ ಧ್ರುವದವರೆಗು ಮುಟ್ಟುತ್ತೆ. ತಮ್ಮನ್ನು ತಾವೆ ಅಮೆರಿಕನ್ಸ್ ಎಂದು ಕರಕೊಳ್ಳುವ ಮೂಲಕ ಯುನೈಟೆಡ್ ಸ್ಟೇಟ್ಸಿನ ನಿವಾಸಿಗಳು ನಮಗೆ ಏನು ಹೇಳ್ತಾ ಇದ್ದಾರೆ ಗೊತ್ತ? 'ತಾವು ಮಾತ್ರ' ಅಮೆರಿಕನ್ಸ್ ಎಂದು. ಹಾಗೆ ನೋಡಿದರೆ ಹೆಸರೆ ಇಲ್ಲದ ದೇಶದ ಜನ ಅವರು.... ಅವರು ಒಂದು ಹೆಸರು ಹುಡುಕ್ಕೋ ಬೇಕು, ಯಾಕೆಂದರೆ ಅವರಿಗೆ ಹೆಸರೆ ಇಲ್ಲ. ಯುನೈಟೆಡ್ ಸ್ಟೇಟ್ಸ್ ಆಫ್ ಮೆಕ್ಸಿಕೋ ಇದೆ, ಯುನೈಟೆಡ್ ಸ್ಟೇಟ್ಸ್ ಆಫ್ ಬ್ರೆಜಿಲ್ ಇದೆ, ಆದರೆ ಬರಿ ಯುನೈಟ್ ಸ್ಟೇಟ್ಸ್? ಯಾವದೇಶದ ಯುನೈಟೆಡ್ ಸ್ಟೇಟ್ಸ್?..... ನನಗೆ ಉತ್ತರ ಅಮೆರಿಕದ ಸಾಹಿತ್ಯ ಕಂಡರೆ ಇಷ್ಟ... ಆದರೆ ಒಬ್ಬ ಲ್ಯಾಟಿನ್ ಅಮೆರಿಕನ್ ಆಗಿ. ಲ್ಯಾಟಿನ್ ಅಮೆರಿಕದ ಪಂಗಡದ ಪ್ರತಿನಿಧಿಯಾಗಿ ನೋಡಿದಾಗ, ಉತ್ತರ ಅಮೆರಿಕನ್ನರು ಅಮೆರಿಕ ಅನ್ನುವ ಪದವನ್ನೆ ನಮ್ಮೆಲ್ಲರಿಂದ ಕಿತ್ತುಕೊಂಡು ತಮಗಷ್ಟೆ ಅಂಟಿಸಿ ಕೊಂಡಿರುವುದು ಬಹಳ ಸಿಟ್ಟು ತರಿಸುತ್ತೆ. ಈ ಅಮೆರಿಕ ಒಂದು ಹಡಗು ಇದ್ದಂತೆ. ಇದರಲ್ಲಿ ಪ್ರಥಮ ದರ್ಜೆ, ಪ್ರವಾಸಿ ದರ್ಜೆ, ಸರಕು ತುರುಕುವ ಕತ್ತಲ ನೆಲಮಾಳಿಗೆ, ನಾವಿಕರಿರುವ ಜಾಗ ಹೀಗೆ ವಿಭಾಗಗಳಿದ್ದಾವೆ. ನಾವು ಲ್ಯಾಟಿನ್ ಅಮೆರಿಕನ್ನರು. ಈ ಹಡಗಿನ ಸರಕು ತುರುಕುವ ಕತ್ತಲ

> ನೆಲಮಾಳಿಗೆಯೊಳಗೆ ಬಿದ್ದಿರಲು ಸುತರಾಂ ತಯಾರಿಲ್ಲ. ಉತ್ತರ ಅಮೆರಿಕಾದವರು ಪ್ರಥಮ ದರ್ಜೆಯಲ್ಲಿರೋದಕ್ಕೂ ನಾವು ಬಿಡಲ್ಲ. ಆದರೆ ಈ ಪ್ರಥಮ ದರ್ಜೆಯ ಜಾಗವನ್ನು ಮುಳುಗಿಸೋದೇನು ನಮ್ಮ ಉದ್ದೇಶ ಅಲ್ಲ. ಯಾಕೆ ಅಂದರೆ ಹಾಗೆ ಮುಳುಗಿಸೊಕೆ ಹೊರಟರೆ ಇಡಿ ಹಡಗೆ ಮುಳುಗಿಹೋಗತ್ತೆ ಅನ್ನೊದು ನಮಗೆ ಗೊತ್ತು. ಈ ಇಡಿ ಹಡಗನ್ನ ಒಟ್ಟಾಗಿ ನಡೆಸಿಕೊಂಡು ಹೋಗಿ ದಡ ಸೇರಿಸಬೇಕಾಗಿರುವುದು ನಮ್ಮ - ಅಂದರೆ ಲ್ಯಾಟಿನ್ ಅಮೆರಿಕದ ಮತ್ತು ಉತ್ತರ ಅಮೆರಿಕದ - ಚಾರಿತ್ರಿಕ ಹೊಣೆಯಾಗಿದೆ. ಇನ್ನೊಂದು ವಿಷಯ 'ಕ್ಯೂಬಾ ಕೂಡ ಈ ಅಮೆರಿಕನ್ ಹಡಗಿನ ಒಂದು ಭಾಗವೆ ಆಗಿದ್ದೆ. ಎಷ್ಟೋಸಲ ನನಗೆ ಅನ್ನಿಸುತ್ತೆ' ಈ ಕ್ಯೂಬಾದ ಜನರೆಲ್ಲ ಒಂದು ಜಗ್ಗು ದೋಣಿ ಹತ್ತಿ, ಫ್ಲಾರಿಡಾದಿಂದ ಬರಿ ತೊಂಬತ್ತು ಮೈಲಿ ದೂರದಲ್ಲಿರದೆ, ಇನ್ನೂ ಬಹಳ ದೂರ ಹೋಗಿಬಿಡೋದೆ ಕ್ಯೂಬಾದ ಕ್ರಾಂತಿಗೆ ಒಳ್ಳೇದು ಅಂತ." [೭]

ಹೀಗೆ ಭಾವುಕವಾಗಿ ಮಾತಾಡುತ್ತ, ಸಿಡಿದು ಬೀಳುವ ಮಾರ್ಕ್ವೆಸ್‌ನ ವಿಚಾರಗಳ ಹಿಂದೆ ಒಬ್ಬ ನಂಬಲರ್ಹನಾದ ಮನುಷ್ಯನನ್ನು ಕಾಣುತ್ತೇವೆ. ಒಬ್ಬ ನಿಷ್ಣಾತ ಲ್ಯಾಟಿನ್ ಅಮೆರಿಕನ್ ವಿಚಾರವಾದಿಯನ್ನು ಕಾಣುತ್ತೇವೆ. ತಾನು ಲ್ಯಾಟಿನ್ ಅಮೆರಿಕನ್ ಆಗಿರುವುದರಿಂದಲೆ ಒಬ್ಬ "ಎಮರ್ಜನ್ಸಿ ಪಾಲಿಟೀಶಿಯನ್" ಆಗಿರುವುದಾಗಿ ಹೇಳಿಕೊಳ್ಳುವ ಮಾರ್ಕ್ವೆಸ್, ಲ್ಯಾಟಿನ್ ಅಮೆರಿಕದಲ್ಲಿ ಏನೇನೆಲ್ಲ ಆಗುತ್ತಿದೆ ಎಂದರೆ ಅಲ್ಲಿನ ರಾಜಕಾರಣದಲ್ಲಿ ಆಸಕ್ತಿವಹಿಸದೆ ಇದ್ದರೆ ಅದೆ ಒಂದು ಅಪರಾಧವಾಗುತ್ತದೆ ಎನ್ನುತ್ತಾನೆ. ಲ್ಯಾಟಿನ್ ಅಮೆರಿಕದಲ್ಲಿರುವಂಥ ಅಗಾಧವಾದ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಲ್ಲದ ದೇಶದವನಾಗಿದ್ದರೆ, ರಾಜಕೀಯವನ್ನು ಕಡೆಗಣಿಸಿ ಆರಾಮಾಗಿ ಯಾವುದಾದರೂ ಗ್ರೀಕ್ ದ್ವೀಪದಲ್ಲಿ ಸುಖವಾಗಿರಬಹುದಾಗಿತ್ತು ಎನ್ನುತ್ತಾನೆ.[೮]

---

೭. ಅದೇ.

೮. ಅದೇ.

ಜಗತ್ತಿನ ಮತ್ತೆಲ್ಲ ದೇಶಗಳಲ್ಲಿ ಅವನತಿ ಹೊಂದಿರುವ ಸಮತಾವಾದ ಕ್ಯೂಬಾದಲ್ಲಿ ಇಂದಿಗೂ ಜೀವಂತವಾಗಿದೆ ತಾನೆ? ಅಲ್ಲಿನ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೊ ಮಾರ್ಕ್ವೆಸ್‌ನ ಆಪ್ತ ಮಿತ್ರ, ಫಿಡೆಲ್ ಕ್ಯಾಸ್ಟ್ರೊ ಹೇಳಿರುವ ಈ ಮಾತುಗಳನ್ನ ಕೇಳಿ: "ಆಡಳಿತ ನಡೆಸುವುದು, ಜನರ ಜೀವನ ಮಟ್ಟ ಸುಧಾರಿಸುವುದು ಕಥೆ, ಕವಿತೆ ಬರೆದಷ್ಟು ಸುಲಭವಲ್ಲ. ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ರಂತೆ ಲೇಖಕರಾಗುವುದು ನನಗೂ ಇಷ್ಟ. ಯಾಕೆಂದರೆ ಲೇಖಕನಾದವನು ಎಲ್ಲಿ ಬೇಕಾದರೂ ಹೋಗಬಹುದು. ಆದರೆ ಕ್ರಾಂತಿ ಸಾಧಿಸುವುದು ಅಷ್ಟು ಸುಲಭವಲ್ಲ."[೯]

ಅಮೆರಿಕ ವಿಧಿಸುವ ಯಾವ ದಿಗ್ಬಂಧನಕ್ಕೂ ಸೊಪ್ಪುಹಾಕದೆ ಹೋರಾಡುತ್ತಿರುವ ಕ್ಯೂಬಾ, ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳ ಪೈಕಿ ಅತ್ಯಂತ ಸುಸಜ್ಜಿತ ಮಿಲಿಟರಿ ಶಕ್ತಿ ಹೊಂದಿರುವ ರಾಷ್ಟ್ರ. ಜೊತೆಗೆ ತನ್ನ ಪ್ರತಿಯೊಬ್ಬ ಪ್ರಜೆಗೂ ಉತ್ತಮ ಶಿಕ್ಷಣ ಸಿಗುವಂತೆ, ವೈದ್ಯಕೀಯ ಸೌಲಭ್ಯದ ಅಭಾವ ಕಿಂಚಿತ್ತೂ ಇಲ್ಲದಂತೆ ನೋಡಿಕೊಳ್ಳುತ್ತಿರುವ ರಾಷ್ಟ್ರ. ಈ ರಾಷ್ಟ್ರ ಕಿಚ್ಚನ್ನು ಅಪಾರವಾಗಿ ಮೆಚ್ಚಿಕೊಂಡಿರುವ ಮಾರ್ಕ್ವೆಸ್ ಕ್ಯೂಬನ್ ಕ್ರಾಂತಿ ಕುರಿತು ಹೀಗೆ ಹೇಳಿದ್ದಾನೆ.: "ಈ ಕ್ರಾಂತಿಯಲ್ಲಿ ಯಾರೂ ಯಾರನ್ನೂ ಕೊಲ್ಲಲಿಲ್ಲ. ಅಥವಾ ಕಾನೂನನ್ನು ಕೈಗೆತ್ತಿಕೊಂಡು ರಸ್ತೆಗಳಲ್ಲಿ ರಕ್ತದ ಕೋಡಿ ಹರಿಸಲಿಲ್ಲ. ಈ ದೃಷ್ಟಿಯಿಂದ, ಕ್ಯೂಬಾದ ಕ್ರಾಂತಿ ಎಲ್ಲಾ ಕ್ರಾಂತಿಗಳಿಗಿಂತ ಬಹಳ ವಿಶಿಷ್ಟವಾದದ್ದು."[೧೦]

'ಪ್ಲೇಬಾಯ್' ಪತ್ರಿಕೆ ಮಾರ್ಕ್ವೆಸ್ ನನ್ನು "ಪೊಲಿಟಿಕಲ್ ಆಕ್ಟಿವಿಸ್ಟ್" ಹಾಗೂ "ಅಡ್ವೋಕೇಟ್ ಆಫ್ ಸೋಷಿಯಲ್ ರೆವಲೂಷನ್" ಎಂದು ವರ್ಣಿಸಿದೆ. ರೊನಾಲ್ಡ್ ಕ್ರೈಸ್ಟ್ ಸಂಪಾದಿಸಿದ "ರಿವ್ಯೂ- ೭೦" ಸಂಚಿಕೆಯಲ್ಲಿ ಆರ್ಮ್ಯಾಂಡೊ ಡ್ಯೂರನ್‌ಗೆ ನೀಡಿದ ಸಂದರ್ಶನದಲ್ಲಿ ಮಾರ್ಕ್ವೆಸ್ ಸ್ವತಃ ಈ ಮಾತು ಹೇಳಿದ್ದಾನೆ. "ಇವತ್ತಲ್ಲ ನಾಳೆ ಇಡಿ ಜಗತ್ತು ಸಮಾಜವಾದಿ ಆಗುತ್ತದೆ ಎಂಬುದು ನನ್ನ ನಂಬಿಕೆ, ಅದು ಎಷ್ಟು ಬೇಗ ಆದರೆ ಅಷ್ಟು ಒಳ್ಳೆಯದು ಅಂತ ನನ್ನ ಅಭಿಪ್ರಾಯ" ಎಂದಿದ್ದಾನೆ. ಇದು ೧೯೭೦ರ ಮಾತು. ೧೯೮೨ರಲ್ಲಿ ನೊಬೆಲ್ ಪ್ರೈಜ್ ಬಂದ ಮೇಲೆ 'ಪ್ಲೇಬಾಯ್' ಪತ್ರಿಕೆಯಲ್ಲಿ

---

೧೦. ಬರಹಗಾರನ ಪಾಕಶಾಲೆ, ಕಲ್ಪನಾ ಸಾಹನಿ ಅವರ ಮಾರ್ಕ್ವೆಜ್ ಸಂದರ್ಶನ, ಪುಸ್ತಕ ಪ್ರಪಂಚ ಏಪ್ರಿಲ್, ೧೯೮೮

೯. ಪ್ರಜಾವಾಣಿ. ೧೯.೮.೯೪ ಪುಟ - ೯

ಕ್ಲಾಡಿಯಾ ಡ್ರೀಫಸ್‌ಗೆ ನೀಡಿದ ಸಂದರ್ಶನದಲ್ಲಿ "ನೀನೊಬ್ಬ ಕಮ್ಯೂನಿಸ್ಟನೆ?" ಎಂಬ ಪ್ರಶ್ನೆಯನ್ನು ಬೇಕೆಂದೇ ಕೇಳಿಸಿಕೊಂಡು ಹೀಗೆ ಉತ್ತರಿಸಿದ್ದಾನೆ: "ನಾನು ಖಂಡಿತಾ ಕಮ್ಯುನಿಸ್ಟ್ ಅಗಿಲ್ಲ. ಯಾವತ್ತೂ ಆಗಿರಲಿಲ್ಲ. ನಾನು ಯಾವುದೇ ರಾಜಕೀಯ ಪಕ್ಷಕ್ಕೂ ಸೇರಿಲ್ಲ". ಬಂಡವಾಳಶಾಹಿ-ಸಮತಾವಾದಿ ಎಂಬ ಎರಡೆ ಆದರ್ಶಗಳ ಮಾನದಂಡದಿಂದ ಮಾರ್ಕ್ವೆಸ್‌ನನ್ನು ಅಳೆದರೆ ಅವನಲ್ಲಿ ವೈಚಾರಿಕ ದ್ವಂದ್ವ ಇರುವಂತೆ ಕಾಣುತ್ತದೆ. ಫ್ರಾನ್ಸ್ ಫ್ಯಾನೊ ತನ್ನ 'ರೆಚೆಡ್ ಆಫ್ ದ ಅರ್ತ್' ಪುಸ್ತಕದಲ್ಲಿ ವರ್ಣಿಸುವ ವಸಾಹತುಶಾಹಿ ಅನುಭವದ ಸಂದಿಗ್ಧತೆಯ ನಿಟ್ಟಿನಿಂದ ಮಾತ್ರ ಮಾರ್ಕ್ವೆಸ್‌ನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ. "ಇಡಿಯಾಗಿ ಅಮೆರಿಕಾ ಖಂಡಗಳಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಮತ್ತು ತಪ್ಪುಗಳನ್ನು ಸರಿಪಡಿಸುವುದೆ ನನ್ನ ಕೆಲಸ"[೧೧] ಎಂದು ಮಾರ್ಕ್ವೆಸ್ ಹೇಳಿರುವುದು ಈ ದೃಷ್ಟಿಯಿಂದ. "ನಾನು ಯಾವುದೇ ರಾಜಕೀಯ ಪಕ್ಷದ ಸಕ್ರಿಯ ಹೋರಾಟಗಾರ ಅಲ್ಲ. ಒಂದು ದೇಶದ ರಾಜಕಾರಣದಲ್ಲಿ ಆಸಕ್ತಿ ವಹಿಸುತ್ತಿಲ್ಲ. ಅತ್ಯಂತ ವಿಶಾಲಾರ್ಥದಲ್ಲಿ ನಾನೊಬ್ಬ ಲ್ಯಾಟಿನ್ ಅಮೆರಿಕನ್ ಆಗಿದ್ದೇನೆ. ಆದ್ದರಿಂದ ನನ್ನ ಅಂತಾರಾಷ್ಟ್ರೀಯ ಜನಪ್ರಿಯತೆಯನ್ನು ನಾನು ಅಧಿಕಾರರಹಿತ ರಾಜತಂತ್ರಕ್ಕೆ ಬಳಸಿ ಕೊಳ್ಳುತ್ತಿದ್ದೇನೆ"[೧೨] ಎಂಬ ಮಾತುಗಳಿಂದ ಅವನೊಬ್ಬ ತೃತೀಯ ಜಗತ್ತಿನ ಪ್ರತಿನಿಧಿ, ಹೊಸ ಆದರ್ಶ ಒಂದರ ಪ್ರತಿಪಾದಕ ಎಂಬುದು ಸ್ಪಷ್ಟವಾಗುತ್ತದೆ.

VI

ಮಾರ್ಕ್ವೆಸ್‌ನ ಕಥಾ ಜಗತ್ತು ತುಂಬ ವಿಚಿತ್ರವಾದದ್ದು. ಅದು ಸಾಮಾಜಿಕ ವಾಸ್ತವ ಅಥವಾ ಭೌತಿಕ ವಾಸ್ತವವನ್ನಷ್ಟೆ ಹಿಡಿಯುತ್ತ ಕೂರುವುದಿಲ್ಲ. ಅಸ್ತಿತ್ವವಾದಿ ನಿರೂಪಣೆ, ಅಧಿ ಭೌತಿಕ ಕಲ್ಪನೆ, ಪ್ರಜ್ಞಾಪ್ರವಾಹ ತಂತ್ರ, ಅಸಂಗತತೆ, ಅನಾಥಪ್ರಜ್ಞೆ, ಮುಂತಾದವುಗಳ ಮೂಲಕ ಒಂದು ಅಲೌಕಿಕ ವಾತಾವರಣವನ್ನು ನಿರ್ಮಿಸುತ್ತದೆ. ಆಧುನಿಕ ಮನಸ್ಸಿನ ಹಳವಂಡಗಳು, ವಾಸ್ತವದ ಗಡಿ ದಾಟುವ ಅದ್ಭುತಗಳು, ಅರ್ಥದಾಚೆಗೆ ನಿಲ್ಲುವ ಅಸಾಮಾನ್ಯ ಅನುಭವಗಳು ಈ ಕಥಾಜಗತ್ತಿನಲ್ಲಿ

---

೧೧. 'Play Boy' ಪತ್ರಿಕೆಗೆ Clandia Dreitur ನಡೆಸಿದ ಸಂದರ್ಶನದಲ್ಲಿ.

೧೨. ಅದೇ.

ಸರ್ವೇಸಾಮಾನ್ಯ. ವಸಾಹತುಶಾಹಿ ಅನುಭವಗಳಿಂದ ಚೇತರಿಸಿಕೊಳ್ಳುತ್ತಿರುವ ತೃತೀಯ ಜಗತ್ತಿನ ತುಮುಲಗಳನ್ನ ಹಿಡಿದಿಡುವುದೆ ಮಾರ್ಕ್ವೆಸ್‌ನ ಕಥೆಗಳ ಉದ್ದೇಶವಾಗಿದೆ ಎನ್ನಬಹುದು.

"ನನ್ನ ಅತ್ಯುತ್ತಮ ಕತೆಯಾದ **'ನೋ ಒನ್ ರೈಟ್ಸ್ ಟು ದಿ ಕರ್ನಲ್'** ಅನ್ನು ಜನ ಓದುವಂತೆ ಮಾಡಲು ನಾನು **'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್'** ಬರೆಯ ಬೇಕಾಯಿತು"[೧೩] ಎನ್ನುತ್ತಾನೆ ಮಾರ್ಕ್ವೆಸ್. **'ನೋ ಒನ್ ರೈಟ್ಸ್ ಟು ದಿ ಕರ್ನಲ್'** ವಾಸ್ತವ ಶೈಲಿಯಲ್ಲಿಯೆ ಬದುಕಿನ ದಾರುಣ ವಾಸ್ತವವನ್ನು ಚಿತ್ರಿಸುವ ಕತೆ. ದೇಶಕ್ಕಾಗಿ ಹೋರಾಡಿದ ಕರ್ನಲ್ ಮತ್ತು ಅವನ ಆಸ್ತಮಾ ಪೀಡಿತ ಹೆಂಡತಿ ತಮ್ಮ ವೃದ್ಧಾಪ್ಯದುದ್ದಕ್ಕೂ ಸರ್ಕಾರ ನೀಡಬೇಕಾಗಿರುವ ರಾಜಕೀಯ ನಿವೃತ್ತಿ ವೇತನಕ್ಕಾಗಿ ಕಾಯುತ್ತಾ ಕಾಯುತ್ತಾ ಬಡತನ, ದಾರಿದ್ರ್ಯ ಹಸಿವು , ಹತಾಶೆಗಳಿಗೆ ಇಂಚಿಂಚಾಗಿ ಜಾರಿ ಕೊಂಡಿರುವ ಈ ದಂಪತಿಗಳು ಬದುಕನ್ನ ಇನ್ನಿಲ್ಲದ ಆತ್ಮಸ್ಥೈರ್ಯದಿಂದ ಎದುರಿಸುತ್ತಾರೆ. "ಜೀವಂತವಾಗಿದ್ದು ಕೊಳೆಯುತ್ತಿದ್ದೀವಿ" ಅನ್ನುವ ಮುದುಕಿಯ ಮಾತು ಮರ್ಮ ಭೇದಕವಾದದ್ದು. ತಮ್ಮನ್ನು ತಾವೆ ತಮ್ಮ ಮಗ ಬಿಟ್ಟುಹೋಗಿರುವ ತಬ್ಬಲಿಗಳು ಅಂದುಕೊಳ್ಳುವ ಈ ಮುದಿಜೀವಿಗಳು ನಲವತ್ತು ವರ್ಷಗಳುದ್ದದ ವೈವಾಹಿಕ ಬದುಕನ್ನು, ಹಸಿವನ್ನು, ಸಂಕಟವನ್ನು ಹಂಚಿಕೊಂಡಿರುವವರು. ಸರ್ಕಾರದಿಂದ ಬರಬೇಕಾಗಿರುವ ಪತ್ರಕ್ಕಾಗಿ ಕೊನೆಯಿಲ್ಲದೆ ಕಾಯುತ್ತಿರುವ ಅವರ ಸ್ಥಿತಿಗತಿ **'ವೆಯ್ಟಿಂಗ್ ಫಾರ್ ಗಾಡೊ'**ದ ನಿಷ್ಫಲ ಕಾಯುವಿಕೆಯನ್ನು ನೆನಪಿಸುತ್ತದೆ. ತಾವಿಬ್ಬರೂ ಉಪವಾಸ ಬಿದ್ದು, ಮಗ ಸಾಕಿದ ಅಂಕದ ಹುಂಜಕ್ಕೆ ಕಾಳು ನೀಡುತ್ತ, ಅದು ಪಂದ್ಯದಲ್ಲಿ ಗೆದ್ದರೆ ತಮ್ಮ ಬದುಕು ಸಾಗಬಹುದು ಎಂದು ಹಂಬಲಿಸುತ್ತಿರುವಾಗ "ಅಲ್ಲಿಯವರೆಗು ಏನು ತಿನ್ನೋಣ?" ಎಂಬ ಹೆಂಡತಿಯ ಪ್ರಶ್ನೆಗೆ ಕರ್ನಲ್ ತಣ್ಣಗೆ ಉತ್ತರಿಸುತ್ತಾನೆ "ಹೇಲು" ಎಂದು ಅದೆ ಕತೆಯ ಕೊನೆ ಶಬ್ದ.

"ದ ಇನ್‌ಕ್ರೆಡಿಬಲ್ ಆ್ಯಂಡ್ ಸ್ಯಾಡ್ ಟೇಲ್ ಆಫ್ ಇನಸೆಂಟ್ ಎರೆಂಡಿರ ಅಂಡ್ ಹರ್ ಹಾರ್ಟ್‌ಲೆಸ್ ಗ್ರ್ಯಾಂಡ್‌ಮದರ್" ಎಂಬುದು ಇನ್ನೊಂದು ನೀಳ್ಗತೆ. ಕಲ್ಲೆದೆಯ

---

೧೩. 'ಮಾರ್ಕ್ವೆಜ್ ವಿಸಿಟ್ಸ್ ಮಾಸ್ಕೋ' - ವೀರಾ ಕುಟೇಶ್ಚಿಕೋವಾ - ಸೋವಿಯತ್ ಲಿಟರೇಚರ್ ನಂ. ೪ (೩೮೫) ೧೯೮೦

ಮುದುಕಿಯೊಬ್ಬಳು ತನ್ನ ಶ್ರೀಮಂತಿಕೆಯ ಅಟ್ಟಹಾಸಕ್ಕೆ ತನ್ನ ಮೊಮ್ಮಗಳನ್ನ ಬಲಿಕೊಡುವ ಕಥೆ ಇದು. ಮಗ ಸೊಸೆ ಸತ್ತನಂತರ ಮೊಮ್ಮಗಳಾದ ಎರೆಂಡಿರಳನ್ನು ತನ್ನ ಸೇವಕಿಯನ್ನಾಗಿಸಿಕೊಳ್ಳುತ್ತಾಳೆ ಮುದುಕಿ. ಒಂದು ರಾತ್ರಿ ದುಡಿ ದುಡಿದು ಸುಸ್ತಾದ ಎರೆಂಡಿರ ಉರಿಯುವ ಮೊಂಬತ್ತಿಯನ್ನು ಆರಿಸದೆ ಮೇಜಿನ ಮೇಲಿಟ್ಟು ಹಾಗೆಯೆ ಹಾಸಿಗೆಯಲ್ಲಿ ಉರುಳಿಕೊಂಡಾಗ ಅವಳ ದುರಾದೃಷ್ಟದ ಗಾಳಿ ಬೀಸಿ ಬಂದು ಮೊಂಬತ್ತಿಯನ್ನು ಕೆಡವಿ ಕರ್ಟನ್ನಿಗೆ ಬೆಂಕಿ ತಗುಲಿಸಿ ಮನೆಯನ್ನೆ ಸುಟ್ಟುಹಾಕುತ್ತದೆ. ಇದರಿಂದ ಕ್ರುದ್ಧಳಾದ ಮುದುಕಿ ಈ ನಷ್ಟವನ್ನೆಲ್ಲ ತೀರಿಸಿ ಕೊಡಲೆಂದು ಎರೆಂಡಿರಳನ್ನು ಸೂಳೆಗಾರಿಕೆಗೆ ಇಳಿಸುತ್ತಾಳೆ. ಮರುಭೂಮಿಯೊಂದರಲ್ಲಿ ಟೆಂಟು ಹಾಕಿ ಗಿರಾಕಿಗಳನ್ನು ಕ್ಯೂನಲ್ಲಿ ನಿಲ್ಲಿಸಿ ಎರೆಂಡಿರಳ ದೇಹದ ತ್ರಾಣ, ಮನಸ್ಸಿನ ಇಷ್ಟ ಯಾವುದನ್ನೂ ಲೆಕ್ಕಿಸದೆ ಅವಳನ್ನು ಶೋಷಿಸುತ್ತಾಳೆ. ಅದೆ ಇನ್ನೂ ಹರೆಯಕ್ಕೆ ಕಾಲಿಟ್ಟ ಯೂಲಿಸಿಸ್ ಎಂಬ ಹುಡುಗನಿಗೆ ಎರೆಂಡಿರಳ ಬಗ್ಗೆ ಅಪಾರ ಪ್ರೀತಿ ಉಕ್ಕುತ್ತದೆ. ಅವಳೂ ಅವನನ್ನ ಪ್ರೀತಿಸುತ್ತಾಳೆ. ಅವಳು ಅವನ ಜೊತೆ ಓಡಿ ಹೋದಂತೆಲ್ಲ ರಾಷ್ಟ್ರದ ಸರ್ಕಾರವನ್ನು ಬಳಸಿ ಅವಳನ್ನು ಹಿಡಿಸಿ ತರುತ್ತಾಳೆ ಘಮಂಡಿ ಮುದುಕಿ. ಯೂಲಿಸಿಸ್ ಪಿಯಾನೊದಲ್ಲಿ ಸ್ಫೋಟಕವನ್ನಿಟ್ಟು ಅವಳನ್ನು ಕೊಲ್ಲಲು ಹೊಂಚುತ್ತಾನೆ. ಆ ಉಪಾಯವೂ ವಿಫಲವಾಗುತ್ತದೆ. ಕಡೆಗೆ ಎದುರಾ ಎದುರಾ ಬಂದು ಚಾಕು ಹಾಕಿ ಅವಳನ್ನ ಕೊಲ್ಲುತ್ತಾನೆ. ಆದರೆ ಅಜ್ಜಿಯ ಹೆಣಮುಖ ನೋಡಿದ ಎರೆಂಡಿರಳಿಗೆ ವಿಚಿತ್ರ ಜ್ಞಾನೋದಯವಾಗುತ್ತದೆ. ಅವನು ಎಷ್ಟು ಕರೆದರೂ ನಿಲ್ಲದಂತೆ ಯಾರ ಕಣ್ಣಿಗೂ ಬೀಳದಂತೆ ಕಿತ್ತಂಪಾರ ಓಡಿಹೋಗುತ್ತಾಳೆ.

"ಐ ಓನ್ಲಿ ಕೇಮ್ ಟು ಯೂಸ್ ದ ಫೋನ್" ಎಂಬ ಕತೆ ಸರ್‍ರಿಯಲಿಸ್ಟ್ ಶೈಲಿಯದು. ಮರಿಯಾ ಎಂಬ ಮ್ಯೂಸಿಕ್ ಹಾಲ್ ಕಲಾವಿದೆ ತನ್ನ ಬಾಡಿಗೆ ಕಾರಿನಲ್ಲಿ ಬಾರ್ಸಿಲೋನಾದಿಂದ ವಾಪಸ್ ಮನೆಗೆ ಬರುತ್ತಿರುವಾಗ ಮೊನೆಗ್ರಾಸ್ ಮರುಭೂಮಿಯಲ್ಲಿ ಕಾರು ಕೆಟ್ಟುಹೋಗುತ್ತದೆ. ಅವಳು ಎಷ್ಟು ಕೈ ಮಾಡಿದರೂ ಯಾವ ವಾಹನವೂ ನಿಲ್ಲುವುದಿಲ್ಲ. ಕಡೆಗೊಂದು ಲಟಾರಿ ಬಸ್ಸು ಕನಿಕರಗೊಂಡು ನಿಲ್ಲುತ್ತದೆ. ಹತ್ತಿರದಲ್ಲಿ ಎಲ್ಲಾದರೂ ಫೋನು ಸಿಕ್ಕರೆ ಸಾಕು, ತನ್ನ ಜಾದೂಗಾರ ಗಂಡನಿಗೆ ಸುದ್ದಿ ಕೊಡಬಹುದು ಎಂದುಕೊಂಡು ಬಸ್ಸು ಹತ್ತುತ್ತಾಳೆ. ಅದರ ತುಂಬ

ಅರೆ ಎಚ್ಚರದಲ್ಲಿರುವ ಮನೋರೋಗಿ ಹೆಂಗಸರು ಪ್ರಯಾಣಿಸುತ್ತಿರುತ್ತಾರೆ. ಕಾಡಿನ ಮಧ್ಯದ ಒಂದು ಕಾನ್ವೆಂಟ್ ನಂಥ ಆಸ್ಪತ್ರೆಗೆ ಎಲ್ಲರನ್ನೂ ಸಾಗಿಸಲಾಗುತ್ತದೆ. ತಾನು ಬರಿ ಫೋನು ಮಾಡಲು ಬಂದಿರುವುದಾಗಿ ಪದೆ ಪದೆ ಹೇಳಿಕೊಂಡರೂ ಯಾರೂ ಅವಳ ಮಾತಿಗೆ ಲಕ್ಷ್ಯ ಕೊಡುವುದೇ ಇಲ್ಲ. ಆ ಕನ್ಯಾಮಠದಂಥ, ಜೈಲಿನಂಥ ಆಸ್ಪತ್ರೆಯಲ್ಲಿ ಬಂದಿಯಾಗಿ ಬಿಡುತ್ತಾಳೆ ಮರಿಯಾ. ಎಷ್ಟೋ ದಿನದವರೆಗೆ ಅವಳಿಗೆ ಫೋನ್ ಮಾಡುವ ಅವಕಾಶವೆ ಸಿಗುವುದಿಲ್ಲ. ಆ ನರಕದ ಗುಂಡಿಯ ಎಲ್ಲ ಬಗೆಯ ಹಿಂಸೆಗೆ ಒಳಗಾಗುತ್ತಾಳೆ. ಕಡೆಗೊಂದು ದಿನ ಸಮಯ ಸಾಧಿಸಿ ಗಂಡನಿಗೆ ಫೋನ್ ಮಾಡುತ್ತಾಳೆ. ಅವನು ಬರುತ್ತಾನೆ. ಆದರೆ ಇವಳಿಗೆ ನಿಜವಾಗಲೂ ಹುಚ್ಚು ಹಿಡಿದಿದೆ ಎಂಬಂತೆ ನಡೆದು ಕೊಳ್ಳುತ್ತಾನೆ. ಅವಳಿಗೆ ಇನ್ನೊಮ್ಮೆ ಆಘಾತವಾಗುತ್ತದೆ. ಮಾರನೆ ಸಲ ಅವ ಬಂದಾಗ ಅವನನ್ನು ನೋಡಲು ತಿರಸ್ಕರಿಸುತ್ತಾಳೆ. ಅವನ ಪತ್ರಗಳನ್ನು ಓದದೆ ವಾಪಸ್ ಕಳಿಸುತ್ತಾಳೆ. ಆ ಹುಚ್ಚಾಸ್ಪತ್ರೆ ಹಾಳು ಬೀಳುವವರೆಗು ಅಲ್ಲೆ ಬಿದ್ದು ಕೊಳೆಯುತ್ತಾಳೆ.

ಮೇಲೆ ಹೇಳಿದ ಮೂರೂ ಕತೆಗಳು ವಾಸ್ತವವನ್ನು ಉತ್ಪ್ರೇಕ್ಷಿಸಿ ವಿಡಂಬಿಸುತ್ತವೆ. ಮೂರೂ ಕತೆಗಳು ದುರಂತ ವ್ಯಂಗ್ಯದಲ್ಲಿ ಕೊನೆಗೊಳುತ್ತವೆ. ಅದರಿಂದಾಗಿ ಅವುಗಳ ಧ್ವನಿ ಸಾಧ್ಯತೆ ಹೆಚ್ಚುತ್ತದೆ. ಓದುಗನ ಮನಸ್ಸಿನಲ್ಲಿ ಆಳವಾದ ವಿಷಾದ ಮಡುಗಟ್ಟುತ್ತದೆ.

ಮಾರ್ಕ್ವೆಸ್‌ನ ಕಥಾಜಗತ್ತಿನ ಮೂರು ವಿಭಿನ್ನ ಪ್ರಾತಿನಿಧಿಕ ಮಾದರಿಗಳೆನ್ನ ಬಹುದಾದ ಈ ಕತೆಗಳು ಅವನ ಮೂರು ಮುಖ್ಯ ಆಬ್ಸೆಷನ್‌ಗಳನ್ನು ಎತ್ತಿಹಿಡಿಯುತ್ತವೆ. ಅವನನ್ನು ತಲ್ಲಣಕ್ಕೆ ತಳ್ಳುವ ಮೂರು ಸಂಗತಿಗಳೆಂದರೆ ಸರ್ವಾಧಿಕಾರ, ಕಾಮ ಮತ್ತು ಸಾವು.

ಮೊದಲನೆ ಕತೆಯಲ್ಲಿ ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದಿರುವ ಸರ್ವಾಧಿಕಾರಿ ಸರ್ಕಾರ ನಿಜವಾದ ಕ್ರಾಂತಿಕಾರಿಗಳ ಬದುಕನ್ನ ಅದೆಷ್ಟು ಹದಗೆಡಿಸಿದೆ ಎಂಬುದನ್ನ ನೋಡುತ್ತೇವೆ. ಮಾನವೀಯತೆಯ ಲವಲೇಶವೂ ಇಲ್ಲದ ಸರ್ವಾಧಿಕಾರಿ ಆಳ್ವಿಕೆ ನಿಷ್ಠಾವಂತರಿಗು ಮಣ್ಣು ಮುಕ್ಕಿಸುವ ದಿವ್ಯನಿರ್ಲಕ್ಷ್ಯ, ಅಮಾನವೀಯತೆಯನ್ನು ಮೆರೆಯುತ್ತದೆ. ಎಂಥ ಆಶಾವಾದಿಗಳ ಎದೆಯನ್ನೂ ಹತಾಶೆಯ ಮಂಜುಗತ್ತಿಯಿಂದ

ತಿವಿಯುತ್ತದೆ. ಮನುಷ್ಯ ಮನುಷ್ಯನಾಗಿ ಉಳಿಯದೆ ಮೃಗದ ಮಟ್ಟಕ್ಕೆ ಇಳಿಯುವಂಥ ಕ್ರೂರ ವಾತಾವರಣ ನಿರ್ಮಿಸುತ್ತದೆ.

ಎರಡನೆ ಕತೆ ಮನುಕುಲದ ಮತ್ತೊಂದು ಗೀಳಾದ ಕಾಮವನ್ನ ಅದರ ಅತಿರೇಕಾವಸ್ಥೆಯಲ್ಲಿ ಚಿತ್ರಿಸುತ್ತದೆ. ಹೆಣ್ಣೆ ಹೆಣ್ಣನ್ನು ಹುರಿದು ಮುಕ್ಕುವ, ಅಜ್ಜಿಯೆ ಮೊಮ್ಮಗಳನ್ನು ಹರಾಜು ಹಾಕುವ ತಲೆಹಿಡುಕತನವನ್ನ ವಿಡಂಬಿಸುತ್ತದೆ. ಕಾಮದ ಕೈಗೊಂಬೆಯಾದ ಹುಡುಗಿಯ ದೇಹದ ತ್ರಾಣವಾಗಲಿ ಜೀವದ ಹಲುಬುಗಳಾಗಲಿ, ಕ್ಯೂನಿಂತು ಮಜಾಮಾಡಿ ಹೋಗುವ ತರಾವರಿ ಅವಸರದ ಗಂಡಸರಿಗೆ ಮುಖ್ಯವಾಗುವುದಿಲ್ಲ. ತೀಟೆತೀರಿಸುವ ಭೋಗವಸ್ತುವಿಗೆ ಇನ್ನೊಂದು ಹೆಸರೆ ಹೆಣ್ಣು ಎಂಬಂತೆ ನಡೆದುಕೊಳ್ಳುತ್ತಾಳೆ. ಅಂಥ ವಿಕೃತ ವಾತಾವರಣದಲ್ಲಿ ಹುಟ್ಟುವ ಪ್ರೇಮಕ್ಕೂ ಒಂದು ಬಗೆಯ ವಿಕೃತ ಅಂಟಿಕೊಂಡಿರುತ್ತದೆ. ಪ್ರೇಮದ ಎಲ್ಲ ಕೋಮಲಸಾಧ್ಯತೆಗಳನ್ನೂ ತುಳಿದು ಹಾಕಿದ ಕಾಮುಕತೆಯಿಂದಾಗಿ ಪ್ರೇಮಕುಸುಮ ಅರಳಬೇಕಾದ ಹೊತ್ತಿನಲ್ಲೆ ಮುರುಟಿಕೊಂಡು ಹೋಗುತ್ತದೆ. ಎಲ್ಲ ಬಂಧನಗಳಿಂದ ಬಿಡುಗಡೆ ಪಡೆದ ಹೊತ್ತಿನಲ್ಲೆ ಪ್ರೇಮವೂ ಬಂಧನವಾದೀತು ಎಂಬ ಹೆದರಿಕೆಯಿಂದ ಹುಡುಗಿ ದಿಕ್ಕುದಿಸೆಯಿಲ್ಲದಂತೆ ಓಡಿ ಹೋಗುತ್ತಾಳೆ. ಅವಳಿಗಾಗಿ ಕೊಲೆಗಡುಕನಾದ ಹುಡುಗ ಕೂಗುತ್ತ ನಿಲ್ಲುತ್ತಾನೆ.

ಮೂರನೆ ಕತೆ ಬದುಕಿನಲ್ಲೆ ಸಾವು ನರಕಗಳ ಭಯಾನಕ ಅನುಭವಗಳ ಒದಗುವ ಸಾಧ್ಯತೆಗೆ ಕನ್ನಡಿ ಹಿಡಿಯುತ್ತದೆ. ತುಂಬ ಮಾಮೂಲಿ ರೀತಿಯಲ್ಲಿ ಸಾಗುವ ಬದುಕು ಧಿಡೀರನೆ ವಿಚಿತ್ರವಾದ ದಾರುಣವಾದ ಭೀಕರವಾದ ತಿರುವು ಪಡೆದುಕೊಳ್ಳುವ ಬಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಇದರೊಂದಿಗೆ ಇಲ್ಲಿ ಸಂಬಂಧ ಸ್ನೇಹಗಳ ಸಾವನ್ನೂ ತುಂಬ ಮರ್ಮಭೇದಕವಾಗಿ ವ್ಯಕ್ತಪಡಿಸಲಾಗಿದೆ. ಆಧುನಿಕ ಬದುಕಿನಲ್ಲಿ ಸರ್ವಸಾಮಾನ್ಯವಾಗಿ ಹೋಗುತ್ತಿರುವ ರಕ್ತಸಂಬಂಧಗಳ, ದೇಹಸಂಬಂಧಗಳ, ಸ್ನೇಹಸಂಬಂಧಗಳ ಸಾವನ್ನು ಈ ಕತೆ ದಿಗಿಲು ಹುಟ್ಟಿಸುವಂತೆ ಮನದಟ್ಟು ಮಾಡಿಸುತ್ತದೆ. ಈ ದೃಷ್ಟಿಯಲ್ಲಿ ಈ ಕತೆ ಚೆಕಾಫ್‌ನ "ವಾರ್ಡ ನಂಬರ್ ೬" ಕತೆಯನ್ನು ಹೋಲುತ್ತದೆ.

ಈ ವಾಚಿಕೆಯಲ್ಲಿ ಸಂಕಲಿತಗೊಂಡಿರುವ ಹತ್ತು ಕತೆಗಳು ಲ್ಯಾಟಿನ್ ಅಮೆರಿಕನ್ ಜನತೆಯ ಕಲ್ಪನಾವಿಲಾಸ, ಕಲಾಪ್ರಜ್ಞೆ, ಮಾನವ ಪ್ರೇಮ, ನಿಸರ್ಗಮಗ್ನತೆ, ನಾಗರಿಕ

ಹಳವಂಡ ಮುಂತಾದವುಗಳನ್ನು ಪರಿಚಯಿಸುತ್ತವೆ. **'ನೀರಿನಂಥ ಬೆಳಕು'** ಓದುಗನನ್ನು ಗಕ್ಕನೆ ಹಿಡಿದು ನಿಲ್ಲಿಸುವಂಥ ವೈಜ್ಞಾನಿಕ ಕತೆಯಾಗಿದ್ದು, ಮಾರ್ಕ್ವೆಸ್‌ನ ಮ್ಯಾಜಿಕ್ ರಿಯಲಿಸಮ್‌ಗೆ ಒಳ್ಳೆಯ ದೃಷ್ಟಾಂತವಾಗಿದೆ. **'ಕಾಗದದ ಗುಲಾಬಿಗಳು'** ಹದಿಹರೆಯದವರ ಜಗತ್ತನ್ನು ಮುದಿವಯಸ್ಸಿನವರ ಜಗತ್ತನ್ನು ಪಕ್ಕಪಕ್ಕ ನಿಲ್ಲಿಸಿ, ಅಲ್ಲಿನ ವೈರುಧ್ಯವನ್ನು ಚಿತ್ರಿಸುವ ನವ್ಯಕತೆಯಂತಿದೆ. **'ಪಂಜರ'** ಕಲಾತ್ಮಕ ತಲ್ಲೀನತೆಯನ್ನೂ, ಕಲೆಗೆ ಬೆಲೆಕಟ್ಟುವಲ್ಲಿ ಸಮಾಜ ಸದಾ ಸೋಲುತ್ತದೆ ಎಂಬ ಸಂಗತಿಯನ್ನೂ **'ಬಾಲ್ತಜಾರ್'** ಎಂಬ ಕಲಾವಿದನ ಭ್ರಮನಿರಸನವನ್ನೂ ಬಣ್ಣಿಸುತ್ತದೆ. **'ನಿದ್ದೆಯಲ್ಲೆ ನಡೆದಾಡುವ ಮೂವರ ಕಹಿ ಅನುಭವ'** 'ಒಂದು ಒಳ್ಳೆ ಗದ್ಯಕವಿತೆಯಂತಿದ್ದು, ತಾಯಿ ಜೀವದ ಕೊನೆ ಕ್ಷಣಗಳನ್ನು ಜೋಪಾನ ಮಾಡಲು ಹೆಣಗುವ ಮಕ್ಕಳ ಹಳಹಳಿಕೆಗಳನ್ನು ಮಾರ್ಮಿಕವಾಗಿ ಕಟ್ಟಿಕೊಡುತ್ತದೆ. **'ಆ ಊರಿನಲ್ಲಿ ಕಳ್ಳರೇ ಇಲ್ಲ'** ಬಡತನದ ಒತ್ತಡದಲ್ಲಿ ಕಳ್ಳತನಕ್ಕೆ ಬಿದ್ದ ದಮಾಸೊ ಕೆಲಸಕ್ಕೆ ಬಾರದ ಮೂರು ಬಿಲಿಯರ್ಡ್ ಬಾಲುಗಳನ್ನ ಕದ್ದು, ಅವನ್ನ ಎಲ್ಲೆಲ್ಲೂ ಮುಚ್ಚಿಡಲಾಗದೆ, ಹಿಂತಿರುಗಿ ಅವು ಮೊದಲಿದ್ದ ಜಾಗದಲ್ಲೆ ಇಡಲು ಹೋದಾಗ ಸಿಕ್ಕಿ ಬೀಳುವ ಪ್ರಸಂಗದ ಮೂಲಕ ಹಾಸ್ಯ ವ್ಯಂಗ್ಯ ಬೆರೆತ ವಿಷಾದವನ್ನು ಕಡೆಯುತ್ತದೆ. **'ಮಕಾಂಡೋದಲ್ಲಿ ಮಳೆ ಸುರಿಯುವುದನ್ನೆ ನೋಡುತ್ತಿರುವ ಇಸಬೆಲ್ಲಾಳ ಸ್ವಗತ'** ಉಸಿರುಗಟ್ಟಿ ಸುರಿಯುವ ಮಳೆಯ ವಿಚಿತ್ರ ವಾತಾವರಣವನ್ನು ಓದುಗರ ಸುತ್ತ ನಿರ್ಮಿಸುತ್ತ ತೇಜಸ್ವಿಯವರ 'ನಿಗೂಢ ಮನುಷ್ಯರು' ಕತೆಯ ವಾತಾವರಣ ಮತ್ತು ಏಕತಾನತೆಗಳನ್ನು ನೆನಪಿಗೆ ತರುತ್ತದೆ. **'ಉದ್ದುದ್ದ ರೆಕ್ಕೆಗಳ ಮುದುಕಜ್ಜನೊಬ್ಬ'** ಫ್ಯಾಂಟಸಿ ಮೂಲಕ ಓದುಗರನ್ನ ಆಕರ್ಷಿಸುತ್ತ ಆಳವಾದ ಸಾಮಾಜಿಕ ವಿಡಂಬನೆಗೆ ತೊಡಗುವ ಕತೆ. **'ಮಂಗಳವಾರ ಮಧ್ಯಾಹ್ನದ ಲಘುನಿದ್ರೆ'** ಕೊಲೆಯಾದ ಕಳ್ಳನ ತಾಯಿ, ಅವನ ಗೋರಿಯನ್ನು ತೋರಿಸೆಂದು ಪಾದ್ರಿಯನ್ನು ಕೇಳಲು ಹೋಗುವ ದಾರುಣ ಪ್ರಸಂಗದ ಮೂಲಕ ಮಾನವತಾವಾದಿ ಅನುಕಂಪವನ್ನು ಓದುಗರಲ್ಲಿ ಹುಟ್ಟುಹಾಕುತ್ತದೆ. **'ಪ್ರಪಂಚದಲ್ಲಿ ಮುಳುಗಿ ಹೋದ ಮಹಾಚೆಲುವ'** ಕತೆ ಕೂಡ ಫ್ಯಾಂಟಸಿ ಆವರಣ ಹೊಂದುತ್ತ **'ಉದ್ದುದ್ದ ರೆಕ್ಕೆಗಳ ಮುದಕಜ್ಜನೊಬ್ಬ'** ಕತೆಯನ್ನು ನೆನಪಿಸುತ್ತದೆಯಾದರೂ ಒಂದು ಶವದ ಬಗೆಗೆ ಎಲ್ಲರಲ್ಲಿನ ಕೂತುಹಲವನ್ನು ಬಣ್ಣಿಸುತ್ತದೆ.

ಕಲಾತ್ಮಕತೆ ಮತ್ತು ಸಮಾಜವಾದಿ ಆದರ್ಶಗಳನ್ನು ಒಟ್ಟಿಗೆ ಬೆಸೆಯುವ ಪ್ರಯತ್ನಗಳಾಗಿ ಮಾರ್ಕ್ವೆಸ್ ಕತೆಗಳು ಗಮನಾರ್ಹವಾಗಿವೆ. ಕೆಲವೊಮ್ಮೆ ವಾಸ್ತವದ ಪಾತಳಿಯಲ್ಲಿ ಇನ್ನು ಕೆಲವೊಮ್ಮೆ ಅತಿವಾಸ್ತವದ ಫ್ಯಾಂಟಸಿ ಪಾತಳಿಯಲ್ಲಿ ಕತೆ ಕಟ್ಟುವ ಮಾರ್ಕ್ವೆಸ್ ಒಂದೇ ಬಗೆಯ ತಂತ್ರಗಾರಿಕೆಗೆ ಕಟ್ಟು ಬೀಳುವವನಲ್ಲ. ಸಮಾಜ ಮತ್ತು ಮನುಷ್ಯ ಮನಸ್ಸುಗಳ ವಿವಿಧ ಆಳ ಅಗಲಗಳನ್ನು ಅನಾವರಣ ಮಾಡುತ್ತ ಹೋಗುವುದೆ ಅವನ ಕಥೆಗಳ ಗೊತ್ತುಗುರಿಯಾಗಿದೆ.

ಅವನ ಕತೆಗಳ ಅನುವಾದ ಕಷ್ಟ. ವಿವಿಧ ಅನುವಾದಕರ ಪ್ರಯತ್ನಗಳು ಇಲ್ಲಿವೆ. ಅಕ್ಷರಶಃ ಅನುವಾದದ ವಿಧೇಯತೆಗಿಂತ, ದೇಶ - ಭಾಷೆಗಳ ವಿಶಿಷ್ಟ ಇಂಗಿತಗಳ ಮೂಲಕ ಇಳಿದು ಬರುವ ಸಾಂಸ್ಕೃತಿಕ ಅನುವಾದವನ್ನು ಅವನ ಕತೆಗಳು ಬೇಡುತ್ತವೆ. ಕೃತಿಚೌರ್ಯದ ಹುಯ್ಲಿನ ಜೊತೆ ಅನುವಾದ ಚೌರ್ಯದ ಹುಯ್ಲೂ ಏಳುವುದು ಒಂದು ಬಗೆಯ ಸಾಹಿತ್ಯದ ದಾರಿದ್ರ್ಯವನ್ನು ಸೂಚಿಸುತ್ತದೆ. ಅದು ಪೇಟೆಂಟ್ ಹಕ್ಕಿನ ಅತಿರೇಕಕ್ಕೂ ನಮ್ಮನ್ನು ಒಯ್ದುಬಿಡಬಹುದು.

VII

ಕಥೆ ಕಾದಂಬರಿಗಳ ನಡುವೆ ಮಾರ್ಕ್ವೆಸ್ ಒಂದೆರಡು ನಿಜಜೀವನದ ಘಟನೆಗಳನ್ನು ಆಧರಿಸಿದ ಪುಸ್ತಕಗಳನ್ನೂ ಬರೆದಿದ್ದಾನೆ. ಇವು ಅವನ ಸ್ನೇಹಿತರ ಅನುಭವ ಕಥನದ ನಿರೂಪಣೆಗಳು.

'ದ ಸ್ಟೋರಿ ಆಫ್ ಎ ಶಿಪ್‌ರೆಕ್ಡ್ ಸೆಯ್ಲರ್' ಎಂಬುದು ಲೂಯಿ ಅವೆಜಾಂಡ್ರೊ ವೆಲಾಸ್ಕೊ ಎಂಬುವನಿಗಾದ ಒಂದು ಪ್ರಚಂಡ ಅನುಭವದ ಕಥನ ಗ್ರಂಥ. ಬೊಗೋಟಾದ ನ್ಯಾಷನಲ್ ಯೂನಿವರ್ಸಿಟಿಯಲ್ಲಿ ತನ್ನ ವಿದ್ಯಾಭ್ಯಾಸ ಮುಗಿಸಿದ ಮಾರ್ಕ್ವೆಸ್ ಪತ್ರಕರ್ತನ ಬದುಕಿಗೆ ಕಾಲಿಟ್ಟನಷ್ಟೆ. ಆ ದಿನಗಳಲ್ಲಿ ಅವನು ಕೊಲಂಬಿಯದ ಒಳಗೆ ಹಾಗೂ ಹೊರ ರಾಷ್ಟ್ರಗಳಲ್ಲಿ ಸಾಕಷ್ಟು ಸುತ್ತಾಡಬೇಕಾಯಿತು. ಆ ದಿನಗಳಲ್ಲೆ ಒಮ್ಮೆ ವೆಲಾಸ್ಕೊ ಅವನನ್ನು ಹುಡುಕಿಕೊಂಡು ಬಂದು ತನ್ನ ಅದ್ಭುತ ಸಾಹಸದ ಯಾವತ್ತೂ ಕಥೆಯನ್ನು ಅವನಿಗೆ ಹೇಳಿಕೊಂಡದ್ದು. ಒಂದು ಭೀಕರ ನೌಕಾಪಘಾತದಲ್ಲಿ ವೆಲಾಸ್ಕೊ ಒಬ್ಬನೆ ಬದುಕಿ ಉಳಿದಿದ್ದ. ಅವನು ಪಾರಾಗಿ ಬಂದ ರೀತಿ ಪವಾಡ

ಸದೃಶವಾಗಿತ್ತು. ಕೊಲಂಬಿಯದ ಜನತೆಯ ಕಣ್ಣಿನಲ್ಲಿ ಅವನೊಬ್ಬ ರಾಷ್ಟ್ರವೀರನಾಗಿ ಹೋಗಿದ್ದ. ವೆಲಾಸ್ಕೊ ಮಾರ್ಕ್ವೆಸ್‌ಗೆ ಹೇಳಿದ ಸತ್ಯವೃತ್ತಾಂತಕ್ಕೂ ಅದಕ್ಕೂ ಮುಂಚೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳಿಗೂ ಅಜಗಜಾಂತರ ವ್ಯತ್ಯಾಸ ಕಂಡಿತು. ಸತ್ಯವೃತ್ತಾಂತವನ್ನು ಆಧರಿಸಿ ಮಾರ್ಕ್ವೆಸ್ ಬರೆದ ಕೃತಿ ಅವನು ಕೆಲಸ ಮಾಡುತ್ತಿದ್ದ *EL ESPECTADOR* ಪತ್ರಿಕೆಯಲ್ಲಿ ಪ್ರಕಟವಾದಾಗ ರಾಜಕೀಯ ಗೊಂದಲ ಏರ್ಪಟ್ಟಿತು. ಇದರಿಂದಾಗಿ *ESPECTADOR* ಪತ್ರಿಕೆ ನಿಂತು ಹೋಯಿತು. ನಿಧಾನವಾಗಿ ವೆಲಾಸ್ಕೊ ಮರೆವಿಗೆ ತಳ್ಳಲ್ಪಟ್ಟು , ಪ್ರಕರಣ ತಣ್ಣಗಾಯಿತು.

'ಕ್ಲ್ಯಾಂಡೆಸ್ಟಿನ್ ಇನ್ ಚಿಲಿ' ಎಂಬುದು ಮಾರ್ಕ್ವೆಸ್‌ನ ಇನ್ನೊಬ್ಬ ಸ್ನೇಹಿತ ಮಿಗ್ಯೂಲ್ ಲೆಟಿನ್ ತನ್ನ ದೇಶದಲ್ಲಿ ತಾನೆ ಮಾರುವೇಷದಲ್ಲಿ ಆರುವಾರ ಕಳೆದದ್ದರ ಕಥನ. ಇದರಲ್ಲಿ ಮಾರ್ಕ್ವೆಸ್, ಲೆಟಿನ್‌ನನ್ನೆ ನಿರೂಪಕನನ್ನಾಗಿಸಿದ್ದಾನೆ. ಈ ಪುಟ್ಟ ಪುಸ್ತಕ ಆತ್ಮಕಥನದ ಧಾಟಿಯಲ್ಲಿದೆ. ಲೆಟಿನ್ ಚಿಲಿ ದೇಶದ ಚಲನಚಿತ್ರ ನಿರ್ದೇಶಕ. ಚಿಲಿ ಸರ್ಕಾರ ಅವನನ್ನು ಗಡೀಪಾರು ಮಾಡಿತ್ತು. ಆದರೂ ಅವನು ೧೯೮೫ ರಲ್ಲಿ ಮಾರು ವೇಷದಲ್ಲಿ ಚಿಲಿ ದೇಶವನ್ನು ಹೊಕ್ಕು ಅಲ್ಲಿನ ಸ್ಥಿತಿಗತಿಗಳ ಬಗ್ಗೆ ೧,೦೦,೦೦೦ ಅಡಿ ಉದ್ದದ ಸಾಕ್ಷ್ಯಚಿತ್ರವನ್ನು ಚಿತ್ರೀಕರಿಸಿದ. ಅಷ್ಟೊತ್ತಿಗಾಗಲೆ ಚಿಲಿ ದೇಶ ಹನ್ನೆರಡು ವರ್ಷಗಳ ಸರ್ವಾಧಿಕಾರಿ ಆಡಳಿತವನ್ನು ಅನುಭವಿಸಿತ್ತು. ಉರುಗ್ವೆ ವ್ಯಾಪಾರಸ್ಥನ ಥರ ವೇಷ ಬದಲಿಸಿಕೊಂಡು ಸುಳ್ಳು ಪಾಸ್‌ಪೋರ್ಟು ಹಿಡಿದುಕೊಂಡು ಲೆಟಿನ್ ತನ್ನ ತಾಯ್ನಾಡಿಗೆ ಹೋದ. ಭೂಗತ ಕ್ರಾಂತಿಕಾರಿಗಳು ಅವನ ಸಂರಕ್ಷಣೆಗೆ ನಿಂತರು. ಅಲ್ಲಿ ಅಧ್ಯಕ್ಷ ಪಿನೋಚೆಯ ಖಾಸಗಿ ಕಛೇರಿಯ ವಿದ್ಯಮಾನಗಳನ್ನೂ ಲೆಟಿನ್ ಚಿತ್ರಿಸಿಕೊಂಡ. ಚಿಲಿಯ ಜನಪ್ರಿಯ ಕವಿ ಪ್ಯಾಬ್ಲೊ ನೆರೂಡಾನ ಜನ್ಮ ಸ್ಥಳವಾದ ಇಸ್ಲಾ ನೆಗ್ರಾದಲ್ಲಿ ಕವಿಯ ಮನೆಯನ್ನು ಚಿತ್ರೀಕರಿಸಿದ. ಮಹಾನ್ ಕ್ರಾಂತಿಕಾರಿ ಸಾಲ್ವಡಾರ್ ಅವೆಂಡಿಯ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಿದ. ಸರ್ವಾಧಿಕಾರಿ ಪಿನೋಚೆಯ ಕೈಗೆ ಸಿಕ್ಕಿ ಹಾಕಿಕೊಳ್ಳದಂತೆ ಸುರಕ್ಷಿತವಾಗಿ ತಪ್ಪಿಸಿಕೊಂಡು ಬಂದ. ತಾಯ್ನಾಡಿನಿಂದ ಹೊರಬಿದ್ದವನೆ ಅಲ್ಲಿನ ದಾರುಣ ಪರಿಸ್ಥಿತಿ ಬಗ್ಗೆ ನಾಲ್ಕು ಗಂಟೆ ಅವಧಿಯ ಸುದೀರ್ಘ ಚಿತ್ರ ತಯಾರಿಸಿ ಬಿಡುಗಡೆ ಮಾಡಿದ. ಇದೆಲ್ಲದರ ಹಿಂದಿನ ಸಾಹಸ ಪ್ರಜ್ಞೆ ಮಾರ್ಕ್ವೆಸ್‌ನನ್ನು ಈ ಪುಸ್ತಕ ಬರೆಯಲು ಪ್ರೇರೇಪಿಸಿತು. ಹಿಟ್ಲರ್‌ನ ಸರ್ವಾಧಿಕಾರವನ್ನು

ಲೇವಡಿ ಮಾಡಿ ಚಾರ್ಲಿಚಾಪ್ಲಿನ್ ತೆಗೆದ 'ದ ಗ್ರೇಟ್ ಡಿಕ್ಟೇಟರ್' ನಂತೆ ಲೆಟಿನ್ ಶೂಟ್ ಮಾಡಿದ ಚಿತ್ರವೂ ಜನಪ್ರಿಯವಾಯಿತು. ಜೊತೆಗೆ ಇದನ್ನೆಲ್ಲ ವಿಧಿವತ್ತಾಗಿ ವರ್ಣಿಸುವ ಮಾರ್ಕ್ವೆಸ್‌ನ ಪುಸ್ತಕವೂ ಜನಪ್ರಿಯವಾಗಿ ಕೈಯಿಂದ ಕೈಗೆ ಓಡಾಡಿ ಓದಿಸಿಕೊಂಡಿತು.

VIII

ಮಾರ್ಕ್ವೆಸ್ ಈವರೆಗೆ ಬರೆದಿರುವ ಕಾದಂಬರಿಗಳು ಆರು. 'ಲವ್ ಅಂಡ್ ಅದರ್ ಡ್ರೀಮ್ಸ್' ಎಂಬ ಚಾರಿತ್ರಿಕ ಕಾದಂಬರಿಯನ್ನು ಇದೀಗ ಬರೆದು ಮುಗಿಸಿದ್ದಾನೆಂದು ವರದಿಯಾಗಿದೆ."[೧೪] ಅದರ ಬಗ್ಗೆ ಮತ್ತೇನೂ ಹೆಚ್ಚಿನ ಮಾಹಿತಿ ದೊರೆತಿಲ್ಲ.

೧೯೬೮ ರಲ್ಲಿ ಪ್ರಕಟವಾದ **'ಇನ್ ಇವಿಲ್ ಅವರ್'** ಮೌಲ್ಯಪತನವನ್ನು ಚಿತ್ರಿಸುವ ನವ್ಯ ಕಾದಂಬರಿ. ವಾಸ್ತವವಾದಿ ಶೈಲಿಯಲ್ಲೇ ರಚಿತವಾಗಿರುವ ಈ ಕೃತಿ ಮನುಷ್ಯನೊಳಗೆ ಸದಾ ಸುಪ್ತವಾಗಿದ್ದು ಸ್ಫೋಟಗೊಳ್ಳಲು ಹವಣಿಸುವ ಸರ್ವಾಧಿಕಾರಿ ಪ್ರವೃತ್ತಿಯನ್ನು ಶೋಧಿಸುವ ಪ್ರಯತ್ನ ಮಾಡುತ್ತದೆ. ಅದರ ಜೊತೆಗೇ ಮನುಷ್ಯನೊಳಗೆ ಅಂತರ್ಗತವಾಗಿರುವ ಅನೈತಿಕತೆ, ಅರಾಜಕಭಾವ ಹಿಂಸಾಪ್ರವೃತ್ತಿಗಳನ್ನೂ ಅನಾವರಣಗೊಳಿಸುತ್ತದೆ. ತುಂಬ ಪುಟ್ಟದೂ ಅಲ್ಲದ ತುಂಬ ದೊಡ್ಡದೂ ಅಲ್ಲದ ಮಧ್ಯಮಗಾತ್ರದ ಒಂದು ಊರಿನ ಕತೆ ಇದು. ಮಿಲಿಟರಿ ಸರ್ವಾಧಿಕಾರಿಯಾಗುವ ಲಕ್ಷಣಗಳುಳ್ಳ ಒಬ್ಬ ಪಾದ್ರಿ ಹಾಗು ಒಬ್ಬ ನ್ಯಾಯಾಧೀಶ ಈ ನಾಲ್ವರು ಇಲ್ಲಿನ ಸಮಾಜ ರಕ್ಷಕ ಕಂಬಗಳು. ಇವರ ನಡುವೆ ಹೊರಳಾಡುವ ಈ ಊರಿಗೆ ಆರ್ಥಿಕ ಕಷ್ಟಕಾಲ ಬಂದಿದೆ, ನೈತಿಕ ಸಮಸ್ಯೆಗಳು ಎದುರಾಗಿವೆ.

ಈ ನಾಲ್ಕು ಪಾತ್ರಗಳಲ್ಲಿ ಮೇಯರ್‌ನನ್ನೆ ಪ್ರಮುಖನಾಗಿಸುವ, ಅವನ ವ್ಯಕ್ತಿತ್ವ ಶೋಧನೆಯ ಮೂಲಕವೆ ಊರಿನ ಆಗುಹೋಗುಗಳನ್ನ ಚಿತ್ರಿಸುವ ಪ್ರಯತ್ನದಿಂದಾಗಿ ಈ ಕಾದಂಬರಿ ಒಂದು ರಾಜಕೀಯ ಕಾದಂಬರಿ ಎನಿಸಿಕೊಳ್ಳುತ್ತದೆ. ಮಳೆಯಿಂದಾಗಿ ಅಥವಾ ಪ್ರವಾಹದಿಂದಾಗಿ ನಿರಾಶ್ರಿತರಾದವರಿಗೆ ಊರಹೊರಗಿನ ಸ್ಮಶಾನದ ಜಾಗವನ್ನು

೧೪. ದಿ ಸಂಡೆ ಟೈಮ್ಸ್ ಆಫ್ ಇಂಡಿಯ, ೨೬.೬.೯೪ ಪುಟ - ೧೯

ನೀಡಿ ಅವರ ಸರಕು ಸರಂಜಾಮುಗಳ ಸಾಗಣೆಯ ಉಸ್ತುವಾರಿ ನೋಡುವಾಗ ಊರ ಜನರ ಮಾನ ಹರಾಜು ಹಾಕುವಂಥ ಹಾದರದ ಗಾಸಿಪ್ ಗಾಳಿಮಾತುಗಳ ಲ್ಯಾಂಪೂನ್‌ಗಳನ್ನ ಪ್ರತಿ ರಾತ್ರಿ ಮನೆಗಳ ಮುಂದೆ ಬಾಗಿಲ ಮೇಲೆ ಅಂಟಿಸುತ್ತಿರುವವರನ್ನು ಹಿಡಿಯಲು ಕಳಕಳಿಯಿಂದ ಪ್ರಯತ್ನಿಸುವಾಗ, ಸ್ನೇಹಿತರ ಜೊತೆ ಗಳಾಬಿಳಿಯಾಗಿ ಸಂಭಾಷಿಸುವಾಗ ತುಂಬಾ ಮಾನವೀಯ ವ್ಯಕ್ತಿತ್ವವುಳ್ಳವನಾಗಿ ಕಾಣುತ್ತಾನೆ. ಜನರ ಮನಸ್ಸಿನಲ್ಲಿರುವುದನ್ನು ತಿಳಿಸಬಲ್ಲ ಸರ್ಕಸ್ ಸುಂದರಿ ಕ್ಯಸಾಂದ್ರಳನ್ನು ಒಂದು ರಾತ್ರಿಗೆ ಗೊತ್ತುಮಾಡಿಕೊಂಡು ಕರೆಸಿ ಅವಳು ತನ್ನ ಕಾರ್ಡ್ಸ್ ಬಳಸಿ ಲ್ಯಾಂಪೂನ್ ಜನಕರು ಯಾರೆಂದು ಹೇಳಬೇಕೆಂದು ಕೇಳುವಾಗ, ಸಿನಿಮಾಗಳ ಮೇಲೆ ವಿಚಿತ್ರ ನಿರ್ಬಂಧಗಳನ್ನು ಹೇರುತ್ತಿರುವ ಪಾದ್ರಿಯ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಸಿನಿಮಾಗಳು ಡೀಸೆಂಟಾಗಿರಬೇಕಾದ ಪ್ರಮೇಯವಿಲ್ಲ, ಕೆಟ್ಟದ್ದಾಗೆ ಇರಲಿ ಜನ ನೋಡಿ ಖುಷಿ ಪಡಲಿ ಎನ್ನುವಾಗ ವಿಲಕ್ಷಣ ಬುದ್ಧಿವಂತನಂತೆ ಕಾಣುತ್ತಾನೆ. ಲ್ಯಾಂಪೂನ್ ಅಂಟಿಸುತ್ತಿದ್ದ ಗುಮಾನಿಯ ಮೇಲೆ ಬಂಧಿಸಲ್ಪಡುವ ಪೆಪೆ ಎಂಬ ಹುಡುಗನನ್ನು ಲಾಕಪ್ಪಿನಲ್ಲಿ ಪೇದೆಗಳು ಹೊಡೆದು ಸಾಯಿಸಿದ ಮೇಲೆ, ಅವನನ್ನು ಗುಟ್ಟಾಗಿ ಹೂಳಿಸಿ, ಗನ್ ಹಿಡಿದು ಗೆಳೆಯರಾದ ಡಾಕ್ಟರು, ಪಾದ್ರಿ, ನ್ಯಾಯಾಧೀಶ ಎಲ್ಲರನ್ನೂ ಹೆದರಿಸುತ್ತ ಪರಿಸ್ಥಿತಿಯ ಹತೋಟಿಗಾಗಿ ಪ್ರಯತ್ನಿಸುವಾಗ ಬಿಗಿಮುಷ್ಟಿಯ ಸರ್ವಾಧಿಕಾರಿಯಾದ ಲೆಫ್ಟಿನೆಂಟ್ ಆಗುತ್ತಾನೆ. ಅಧಿಕಾರ ಮತ್ತು ಶಕ್ತಿ ಹೇಗೆ ಎಂಥವನನ್ನೂ ಕ್ರೌರ್ಯ, ದರ್ಪ, ದಬ್ಬಾಳಿಕೆಗಳಿಗೆ ಪ್ರೇರೇಪಿಸುತ್ತವೆ ಎಂಬುದಕ್ಕೆ ಅವನ ಪಾತ್ರ ಸಾಕ್ಷಿಯಾಗಿದೆ.

ಲ್ಯಾಂಪೂನ್‌ಗಳ ಸೃಷ್ಟಿಕರ್ತನೆಂಬ ಗುಮಾನಿಗೆ ಒಳಗಾಗುವ ಹಲ್ಲಿನ ಡಾಕ್ಟರು, ಧರ್ಮದ ಅವನತಿಯಿಂದಾಗಿ ಜನರನ್ನು ನೈತಿಕವಾಗಿ ಹದ್‌ಬಸ್ತಿನಲ್ಲಿಡಲು ಸೋಲುತ್ತ ಸಂಶಯವಾದಿಯೂ ಕ್ರೂರಿಯೂ ಆಗುವ ಪಾದ್ರಿ, ನ್ಯಾಯವನ್ನು ಅಧಿಕಾರದಲ್ಲಿರುವವರ ಸಂಜ್ಞೆಗಳಿಗೆ ತಕ್ಕಂತೆ ಬಳಸುವ ನ್ಯಾಯಾಧೀಶ ಇವರೆಲ್ಲರು ಮೇಯರ್‌ನನ್ನು ನಿರಂಕುಶ ಪ್ರಭುವಾಗಿಸುವಲ್ಲಿ ಪಾಲುದಾರರಾಗುತ್ತಾರೆ. ಇಡಿ ಊರೆ ಸಂಶಯ, ಭೀತಿ, ಹತಾಶೆಗಳ ಹಳವಂಡಕ್ಕೆ ಉರುಳಿ ಕೊಳ್ಳುತ್ತದೆ. ಜನ ಕಾಡಿಗೆ ಓಡಿ ಹೋಗಿ ಗೆರಿಲ್ಲಾಗಳ ಜತೆ ಸೇರಿ ಬಂಡಾಯ ಹೂಡುವ ಸೂಚನೆಯೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ. ಬದುಕಿನಲ್ಲಿ ಶ್ರದ್ಧೆ ಹೊರಟುಹೋಗುವಂಥ ಹತಾಶ ಸಂದರ್ಭದಲ್ಲು ಭರವಸೆಯ ಸೂಚನೆ ನೀಡುವುದು ಕಾದಂಬರಿಯ ಕೊನೆಯ ಇಂಗಿತವಾಗಿದೆ.

೧೯೭೦ರಲ್ಲಿ ಬೆಳಕು ಕಂಡ **'ಆಟಮ್ ಆಫ್ ದ ಪೇಟ್ರಿಯಾರ್ಕ್'** (ಕುಲಪತಿಯ ಅವನತಿಯ ಆರಂಭಕಾಲ) ಮಾರ್ಕ್ವೆಸ್‌ನ ಕಾದಂಬರಿಗಳಲ್ಲೆ ಅತ್ಯಂತ ಕ್ಲಿಷ್ಟವಾದ ಕೃತಿ. ವಾಸ್ತವವಾದಿ ಶೈಲಿಗೆ ಒಗ್ಗಿ ಹೋಗಿರುವ ಓದುಗರು ಇದನ್ನು ಓದುವ ಕಷ್ಟ ಸಹಿಸಲಾರದೆ ಅರ್ಧದಲ್ಲೆ ಕೈಬಿಟ್ಟರೆ ಆಶ್ಚರ್ಯವಿಲ್ಲ. ಇದಕ್ಕೆ ಕಾರಣ ಈ ಕಾದಂಬರಿಯ ಸರ್‍ರಿಯಲಿಸ್ಟ್ ಶೈಲಿ ಮತ್ತು ಪ್ರಜ್ಞಾಪ್ರವಾಹ ತಂತ್ರದ ಬಳಕೆ. ಪುಟಗಟ್ಟಲೆ ಪೂರ್ಣವಿರಾಮವೆ ಇರದೆ ಓಡುವ ವಾಕ್ಯಗಳು,ಕೃತಕ ಕೊಂಡಿಗಳಿಂದ ಜೋಡಿಸಲ್ಪಟ್ಟ ವಾಕ್ಯಖಂಡಗಳು, ಒಂದೆ ವಾಕ್ಯದಲ್ಲಿ ಇಡುಕಿರಿದ ಹತ್ತಾರು ಪರಸ್ಪರ ಸಂಬಂಧವಿರದ ಸಂಗತಿಗಳು, ನೆನಪುಗಳು, ಲಹರಿಗಳು ವಾಸ್ತವದ ನೆಲೆಯಿಂದ ಪದೆ ಪದೆ ತಪ್ಪಿಸಿಕೊಳ್ಳುವ ಹಳವಂಡ, ಹಗಲುಗನಸು, ಭೀಭತ್ಸ ಕಲ್ಪನೆಗಳ ನಿರೂಪಣೆ ಇವು ಈ ಕಾದಂಬರಿಯ ವೈಶಿಷ್ಟ್ಯಗಳು. ಅರ್ಥವಾಗುವ ಭಾಷೆಯಲ್ಲೆ ಅರ್ಥವಾಗದಂಥ ರೀತಿಯಲ್ಲಿ ಬರೆದ ಕೃತಿ. ಅನುಭವಗಳೆಲ್ಲ ತರ್ಕಾತೀತವಾದಂಥವು ಎಂಬ ನೆಲೆಯಿಂದ ಹೊರಟು, ಅರ್ಥ ಸಂದಿಗ್ಧತೆಯನ್ನೆ ಬದುಕಿನ ಒಂದು ಪ್ರಮುಖ ಮೌಲ್ಯವನ್ನಾಗಿ ಸ್ಥಾಪಿಸುವ ತಾತ್ವಿಕ ಹವಣಿಕೆಯಿದೆ ಈ ಕೃತಿಯಲ್ಲಿ. ವಸ್ತುವಿಗಿಂತ ಆಕೃತಿ ಮುಖ್ಯ ಎಂಬ ಇಂಗಿತವೂ ಹೊರಡುತ್ತದೆ ಇಲ್ಲಿ.

ಅನವತಿಯ ಹಾದಿ ಹಿಡಿದಿರುವ ಒಬ್ಬ ಸರ್ವಾಧಿಕಾರಿಯ ಅಂತರಂಗದ ಅನಾವರಣವೆ ಈ ಕಾದಂಬರಿಯ ವಸ್ತುವೆನ್ನಬಹುದು. ಈ ದೃಷ್ಟಿಯಲ್ಲಿ ಇದು ಆಧುನಿಕ ಜಗತ್ತಿನ ಗಮನಾರ್ಹ ಕೊಡುಗೆಯಾದ ರಾಜಕೀಯ ಕಾದಂಬರಿಯ ಘನೀಭೂತ ಮಾದರಿ. ಸರ್ವಾಧಿಕಾರಿಯ ಅಂತರಂಗದ ಸಮಗ್ರ ವ್ಯಾಪಾರಗಳನ್ನು ಬಿಂಬಿಸುವ ಈ ಕನ್ನಡಿಯಲ್ಲಿ ಅವನ ದೌರ್ಬಲ್ಯಗಳು, ತೆವಲುಗಳು, ತತ್ಕಾತೀಕ ವ್ಯಕ್ತಿವಿಶಿಷ್ಟತೆಗಳು, ಹೆದರಿಕೆಗಳು, ಆತಂಕಗಳು, ಆಕಾಂಕ್ಷೆಗಳು, ಹಳವಂಡಗಳು ಎಲ್ಲವೂ ನಮಗೆ ಕಾಣಸುತ್ತವೆ. ಅವನ ಅತ್ಯಾಚಾರಗಳು, ಆಕ್ರಮಣಗಳು, ಅನ್ಯಾಯಗಳು. ಕ್ರೂರ ದಬ್ಬಾಳಿಕೆ ಇವೆಲ್ಲವು ಎಳೆ ಎಳೆಯಾಗಿ ವರ್ಣಿತವಾಗಿದೆ. ಆದರೆ ಮಾರ್ಕ್ವೆಸ್ ಈ ಕೃತಿಯನ್ನು ಶೈಲೀಕೃತಗೊಳಿಸಿರುವುದರಿಂದಾಗಿ, ಒಂದರೊಳಗೊಂಡು ಸಿಕ್ಕಿಕೊಂಡು ಗೋಜಲಾಗಿರುವ ಎಳೆಗಳನ್ನು ಬಿಡಿಸಿಕೊಳ್ಳುವ ಶ್ರಮ ವಹಿಸಬೇಕಾಗುತ್ತದೆ. ಪುರಸೊತ್ತಿಲ್ಲದೆ ಉರಿಯುವ ಸರ್ವಾಧಿಕಾರಿಗಳಿಗೆ ಈ ಶೈಲಿಯ ಬರಹ

ಅರ್ಥವಾಗುವುದು ಕಷ್ಟ. ಅವರಿಗೆ ಅರ್ಥವಾಗುವ ಹಾಗೆ ಬರೆದರೆ ಅವರು ಬರಹಗಾರರನ್ನು ಬದುಕಲು ಬಿಡುತ್ತಾರೆ ಎಂಬ ಯಾವ ಭರವಸೆಯೂ ಇಲ್ಲ. ಈ ಸಂಗತಿಗಳೂ ಕೂಡ ಇಂಥ ಶೈಲಿಯ ಆಯ್ಕೆಗೆ ಕಾರಣವಾಗಿರಬಹುದು.

ಇಲ್ಲಿನ ಸರ್ವಾಧಿಕಾರಿಗೆ ಅಪಾರ ಜೀವಭಯ. ಅದರಿಂದಾಗಿಯೇ ಅವನು ಸಾಲು ಸಾಲು ಕೊಲೆ ಮಾಡಿಸುತ್ತ ಹೋಗುವುದು, ಎಲ್ಲರನ್ನು ಗುಮಾನಿಯಿಂದ ನೋಡುವುದು. ಇಂಥ ಸರ್ವಾಧಿಕಾರಿಗೆ ಒಮ್ಮೆ ತನ್ನಂತೆಯೆ ಇರುವ ಒಬ್ಬ ಭಿಕಾರಿ ಸಿಕ್ಕುಬಿಡುತ್ತಾನೆ. ಅವನನ್ನೆ ತನ್ನ ಡಮ್ಮಿಯನ್ನಾಗಿ ಮಾಡಿಕೊಂಡು, ತನ್ನನ್ನ ಕಾಪಾಡುವ ಗುರಾಣಿಯನ್ನಾಗಿ ಬಳಸಿ ರಕ್ಷಣಾತಂತ್ರದ ಹೊಸ ಆವಿಷ್ಕಾರಕ್ಕೆ ಕಾರಣವಾಗುತ್ತಾನೆ. ಈ ವಸ್ತು ಹೊಸದೇನಲ್ಲ. ಇದನ್ನಿಟ್ಟುಕೊಂಡು ಕಲಾಕೃತಿ ರಚಿಸಿದವರಲ್ಲಿ ಮಾರ್ಕ್ವೆಸ್‌ನೇ ಮೊದಲಿಗನೂ ಅಲ್ಲ. ಚಲನಚಿತ್ರರಂಗದ ಪ್ರಾರಂಭಿಕ ದಾರ್ಶನಿಕನಾದ ಚಾರ್ಲಿ ಚಾಪ್ಲಿನ್ 'ದ ಗ್ರೇಟ್ ಡಿಕ್ಟೇಟರ್' ಚಿತ್ರದಲ್ಲಿ ಇದೇ ವಸ್ತುವನ್ನು ಬಳಸಿದ್ದಾನೆ. ಜಪಾನಿನ ಚಿತ್ರನಿರ್ದೇಶಕ ಕುರೋಸಾವಾನ 'ಕಾಗೆಮೂಷಾ' ಚಿತ್ರದ ವಸ್ತುವೂ ಇದೆ. 'ಉತ್ತಮ ಪುತ್ರನ್' ಎಂಬ ಹಳೆಯ ತಮಿಳು ಚಿತ್ರ ಕೂಡ ಹೆಚ್ಚೂಕಡಿಮೆ ಇಂಥದೇ ಕಥೆ ಹೊಂದಿದೆ. ನಮ್ಮ ಕನ್ನಡದ ನಾಟಕಕಾರ ಪ್ರಸನ್ನ 'ಆಟಮ್ ಆಫ್ ದ ಪೇಟ್ರಿಯಾರ್ಕ್' ಕಾದಂಬರಿಯನ್ನ ಆಧರಿಸಿ ಬರೆದಿರುವ 'ತದ್ರೂಪಿ' ನಾಟಕದಿಂದಾಗಿ ಹೆಗ್ಗೋಡಿನ ತಿರುಗಾಟ ತಂಡದವರಿಂದಾಗಿ ಪ್ರತಿಭಾವಂತ ನಟ ಏಣಗಿ ನಟರಾಜರ ಚಮತ್ಕಾರದ ಅಭಿನಯದಿಂದಾಗಿ, ಈ ವಸ್ತು ನಮಗೆಲ್ಲ ಪರಿಚಿತವಾಗಿದೆ.

ಈ ಕಾದಂಬರಿಯನ್ನು ಬರೆದು ಮುಗಿಸಲು ಮಾರ್ಕ್ವೆಸ್‌ಗೆ ಏಳು ವರ್ಷ ಹಿಡಿಯಿತಂತೆ. "ಬರಿ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಮಾತ್ರವಲ್ಲ, ನನ್ನ ಮೊದಲ ಎಲ್ಲಾ ಬರಹಗಳೂ 'ಆಟಮ್ ಆಫ್ ದ ಪೇಟ್ರಿಯಾರ್ಕ್'ಗೆ ಮುನ್ನುಡಿ ಇದ್ದಂತೆ" ಎಂದಿದ್ದಾನೆ. "ನನ್ನ ಪ್ರಮುಖ ಆಸಕ್ತಿ ಯಾವಾಗಲೂ ಅಧಿಕಾರದ ಸಮಸ್ಯೆ... ಸರ್ವಾಧಿಕಾರಿಯೊಬ್ಬನ ಬಗೆಗೇ ಬರೆಯಬೇಕಾದ ಇನ್ನೊಂದು ಪುಸ್ತಕಕ್ಕಿರಲಿ ಎಂದುಕೊಂಡು ಬಿಟ್ಟಿದ್ದೆ. ಬಹಳಷ್ಟು ವರ್ಷಗಳಿಂದ ನಾನು ಬರೆಯಬೇಕೆಂದು ತಯಾರಾಗುತ್ತಿದ್ದ ಪುಸ್ತಕ ಅದು... ನಾನು ಇಷ್ಟು ದಿನಗಳವರೆಗೆ ಹುಡುಕುತ್ತಿದ್ದ, ಹಾಗು ಬರೆಯಬೇಕೆಂದು ಕೊಂಡಿದ್ದ ಕೃತಿ 'ಒನ್ ಹಂಡ್ರೆಡ್ ಇಯರ್ಸ್ ಆಫ್

ಸಾಲಿಟ್ಯೂಡ್' ಅಲ್ಲ 'ಆಟಮ್ ಆಫ್ ದ ಪೇಟ್ರಿಯಾರ್ಕ್'.... ಅದು ಒಂದು ನಿರ್ದಿಷ್ಟ ಸಾಹಿತ್ಯಕ ನೆಲೆಗಟ್ಟನ್ನು ಒತ್ತಾಯಿಸುತ್ತೆ. ನಾನದನ್ನ ಇಷ್ಟಪಡೋದು ಈ ಕಾರಣಕ್ಕಾಗಿಯೇ" ಎಂದು ಹೇಳಿಕೊಂಡಿದ್ದಾನೆ.[೧೫]

೧೯೮೨ ರಲ್ಲಿ ಪ್ರಕಟವಾದ 'ಕ್ರಾನಿಕಲ್ ಆಫ್ ಎ ಡೆತ್ ಫೋರ್‌ಟೋಲ್ಡ್' ಒಂದು ಪತ್ತೇದಾರಿ ಕಾದಂಬರಿಯಂತೆ ಕುತೂಹಲ ಕೆರಳಿಸುತ್ತ ಸಾಗುವ ಕೃತಿ. ವಾಸ್ತವವಾದಿ ಶೈಲಿಯಲ್ಲಿ ಸರಳವಾಗಿ ಸಾಗುವ ಈ ಕೃತಿ ಸಾಮಾನ್ಯ ಓದುಗರನ್ನೂ ತನ್ನೆಡೆಗೆ ಸೆಳೆದುಕೊಂಡು ಅವರ ಕುತೂಹಲ ಕೆರಳಿಸುವ ಮತ್ತು ತಣಿಸುವ ಕೆಲಸವನ್ನ ಅಚ್ಚುಗಟ್ಟಾಗಿ ಮಾಡಿ ಮುಗಿಸುತ್ತದೆ. ಇದೊಂದು ನೀಟಾದ ಪುಟ್ಟ ಕಾದಂಬರಿ.

ಏಂಜೆಲಾ ವಿಕಾರಿನೊ ಎಂಬ ಹುಡುಗಿಯ ಮದುವೆ ಬಮಾಡೋ ಎಂಬ ಶ್ರೀಮಂತನೊಡನೆ ಜರುಗುತ್ತದೆ. ಆದರೆ ಮಾರನೆ ಬೆಳಗಿನ ಜಾವವೆ ಗಂಡ ತನ್ನ ಹೆಂಡತಿಯನ್ನು ತಂದು ತವರು ಮನೆಗೆ ನೂಕುತ್ತಾನೆ. ಹುಡುಗಿಯ ಅವಳಿ ಜವಳಿ ಸಹೋದರರಾದ ಪ್ಯಾಬ್ಲೋ ಮತ್ತು ಪೆಡ್ರೊ ಕತ್ತಿಗಳನ್ನು ಮಸೆದುಕೊಂಡು ಊರೆಲ್ಲ ಸುದ್ದಿ ಮಾಡಿ ಹಾಡಹಗಲೆ ಸಾಂಟಿಯಾಗೊ ನಾಸರ್ ಎಂಬ ಮುಸ್ಲಿಂ ಯುವಕನನ್ನು ಕೊಂದು ಪೋಲೀಸರಿಗೆ ತಾವೆ ಶರಣಾಗುತ್ತಾರೆ. ಮೂರು ವರ್ಷ ಜೈಲಲ್ಲಿ ಇದ್ದು ಹೊರಬಂದು ಮದುವೆಯಾಗಿ ಸುಖವಾಗಿ ಸಂಸಾರ ಮಾಡುತ್ತಾರೆ. ಕಡೆಗೆ ನಮಗೆ ತಿಳಿಯುವ ಸಂಗತಿ ಇಷ್ಟು, ಸಾಂಟಿಯಾಗೊಗೂ ಏಂಜೆಲಾಗು ಮದುವೆಗೆ ಮುಂಚಿನ ಸಂಬಂಧವಿತ್ತು ಎಂದು ತಿಳಿದ ಬಮಾಡೋ ಅವಳನ್ನ ತಿರಸ್ಕರಿಸಿದ. ಆ ಕಾರಣಕ್ಕಾಗಿಯೇ ಪ್ಯಾಬ್ಲೋ ಮತ್ತು ಪೆಡ್ರೊ ಸಾಂಟಿಯಾಗೊನನ್ನ ಕೊಲೆ ಮಾಡಿದರು.

ಇಷ್ಟೆಲ್ಲವನ್ನೂ ಪತ್ತೆ ಮಾಡಲು ಹೊರಟಂಥ ನಿರೂಪಕ ಕಥೆಯನ್ನು ಮೊದಲು ನಿಗೂಢಗೊಳಿಸಿ ನಂತರ ಎಳೆಎಳೆಯಾಗಿ ಬಿಡಿಸಿ ಹೇಳುತ್ತಾನೆ. ರೈತನೊಬ್ಬನ ಒಕ್ಕಲು ಮನೆಯನ್ನು ತನ್ನ ಪ್ರಸ್ತಕ್ಕಾಗಿ ಬಯಾರ್ಡೊ ಕಬಳಿಸುವ ರೀತಿ, ಮರಿಯಾ ಅಲೆಜಾಂಡ್ರಿನಾ ಎಂಬ ಊರಸೂಳೆ ಅಲ್ಲಿನ ಹುಡುಗರೆಲ್ಲರ ಕೌಮಾರ್ಯ ಭಂಗ ಮಾಡುವಲ್ಲಿನ ವಿಕೃತಿ ಇವು ಕಾದಂಬರಿಯಲ್ಲಿ ಸಂಚಾರಿ ಭಾವಗಳಂತೆ ಸುಳಿಯುತ್ತವೆ. ಓದಿಸಿಕೊಳ್ಳುವ ಗುಣ ದೊಂದಿಗೇ ಈ ಕಾದಂಬರಿ ವಸಾಹತುಷಾಹಿಯ ಸೂಕ್ಷ್ಮ ಎಳೆಯನ್ನೂ ತನ್ನೊಳಗೆ ಹುದುಗಿಸಿಕೊಂಡಿದೆ. ಏಂಜಲಾಳನ್ನು ಮದುವೆಯಾಗುವ ಬಮಾಡೋನ ಪ್ರವೇಶ

---

೧೫. "ಬರಹಗಾರನ ಪಾಕಸಾಲೆ" ಸಂದರ್ಶನದಲ್ಲಿ

ವಸಾಹತುಶಾಹಿಯ ಪ್ರವೇಶದಂತಿದ್ದು, ಒಂದು ಊರಿನ ಬದುಕು ಈತನಿಂದ ಕಲಕುವ ನೋಟದಲ್ಲಿ ಈ ಅಂಶಕ್ಕೆ ಹೆಚ್ಚು ಒತ್ತು ಬಿದ್ದಿದೆ. ಚಲನಚಿತ್ರವಾಗಿರುವ ಈ ಕಾದಂಬರಿ ವಸಾಹತುಶಾಹಿ ಅಂಶವನ್ನೂ ಸಮರ್ಥವಾಗಿ ಧ್ವನಿಸಿದೆ.

೧೯೮೫ ರಲ್ಲಿ ಪ್ರಕಟವಾಗಿರುವ 'ಲವ್ ಇನ್ ದ ಟೈಮ್ ಆಫ್ ಕಾಲರಾ' ಒಂದು ಅಸ್ತಿತ್ವವಾದಿ ಕಾದಂಬರಿ. ಆಧುನಿಕ ಬದುಕಿನಲ್ಲಿ ಮತ್ತೆಲ್ಲ ಮೌಲ್ಯಗಳೂ ಗಾಳಿ ಪಾಲಾಗಿರುವುದರ ಹಿನ್ನೆಲೆಯಲ್ಲಿ, ಮುಕ್ತಲೈಂಗಿಕತೆಯನ್ನೆ ಒಂದು ಮಹಾ ಮೌಲ್ಯವನ್ನಾಗಿಸಿಕೊಳ್ಳುವುದು ಇಲ್ಲಿನ ಹವಣಿಕೆ. ಪ್ಲೆಟಾನಿಕ್ ಪ್ರೇಮದ ಚೌಕಟ್ಟನ್ನು ಇಟ್ಟುಕೊಂಡೇ ಮುಕ್ತ ಕಾಮದ ಬೀಭತ್ಸತೆಯನ್ನು ಧಾಳವಾಗಿ ಚಿತ್ರಿಸುವ ಮಾಯಾವಾದಿ ಕಾದಂಬರಿ ಇದು.

ಫರ್ಮಿನಾ ಡ್ಯಾಜಾ ಎಂಬ ಶಾಲಾ ಬಾಲಾಕಿಯನ್ನು ಪ್ಲಾರೆಂಟಿನೊ ಅರಿಜಾ ಎಂಬ ತಂತಿ ಇಲಾಖೆ ನೌಕರ ಮೋಹಿಸುತ್ತಾನೆ. ಇಬ್ಬರೂ ಗುಪ್ತವಾಗಿ ಪ್ರೇಮ ಪತ್ರಗಳನ್ನು ಹಂಚಿಕೊಳ್ಳುತ್ತಾರೆ. ಫರ್ಮಿನಾಳ ಮನೆಯವರಿಗೆ ಇದು ಗೊತ್ತಾಗಿ ಅವನನ್ನು ಬೇರೆ ಕಡೆಗೆ ವರ್ಗಮಾಡಿಸುತ್ತಾರೆ. ಡಾ. ಜುವೆನೆಲ್ ಅರ್ಬಿನೊ ಜತೆ ಅವಳ ಮದುವೆಯಾಗುತ್ತದೆ. ಅವರ ದೀರ್ಘ ದಾಂಪತ್ಯ ಪ್ರೇಮರಹಿತವಾಗಿ ಸಾಗುತ್ತದೆ. ಮುದುಕ ಡಾ.ಜುವೆನೆಲ್ ಅರ್ಬಿನೊ ಒಂದು ದಿನ ಮರಹತ್ತಲು ಹೋಗಿ ಬಿದ್ದು ಸಾಯುತ್ತಾನೆ. ಇದಕ್ಕೆ ಕಾಯುತ್ತಿದ್ದ ಮುದುಕ ಪ್ಲಾರೆಂಟಿನೋ ಸತ್ತ ಮನೆಯಲ್ಲಿ ಹಾಜರಾಗಿ ಮುದುಕಿ ಫರ್ಮಿನಾಳನ್ನು ಮರುಳು ಮಾಡುತ್ತಾನೆ. ನಿರಂತರ ಅತ್ತಿಂದಿತ್ತ ಇತ್ತಿಂದತ್ತ ತಿರುಗಾಡುವ ಹಡಗೊಂದರಲ್ಲಿ ಅವರು ಕೂಡುತ್ತಾರೆ. ಇದು ಪ್ರೇಮದ ಈಡೇರಿಕೆಯೇ ಕಾಮದ ಈಡೇರಿಕೆಯೇ ಎಂಬುದು ಬಿಡಿಸಲು ಬಾರದ ಚಿದಂಬರ ರಹಸ್ಯ. ಈ ಕಥೆಯ ಚೌಕಟ್ಟಿನೊಳಗೆ ಅಗಾಧ ಗಾತ್ರಕ್ಕೆ ಬೆಳೆದು ನಿಲ್ಲುವ ಚಿತ್ರವೆಂದರೆ ಫರ್ಮಿನಾಳಿಗಾಗಿ ಕಾಯುತ್ತಿರುವ ವರ್ಷಗಳಲ್ಲಿ ಫ್ಲಾರೆಂಟಿನೊ ಮಾಡುವ ಅಸಂಖ್ಯ ಲೈಂಗಿಕ ಅಪರಾಧಗಳದ್ದು. ಮುಕ್ತ ಕಾಮಕೇಳಿಯನ್ನೆ ದಿನನಿತ್ಯದ ಬದುಕಿನ ಶೈಲಿಯನ್ನಾಗಿಸಿಕೊಳ್ಳುವ ಫ್ಲಾರೆಂಟಿನೊ ಒಂದು ಬಗೆಯ ಸ್ಯಾಡಿಸ್ಟ್ ಆಗಿ, ತನ್ನನ್ನು ನಂಬಿದ ಹೆಣ್ಣುಗಳು ಪ್ರಾಣ ಕಳೆದುಕೊಳ್ಳುವಂತೆ ಮಾಡುತ್ತಾನೆ. ಆದರೂ ಅವನನ್ನು ಯಾವುದೇ ಪಾಪಪ್ರಜ್ಞೆ ಕಾಡುವುದಿಲ್ಲ. ಬೇರೆಯವರ ಹೆಂಡಂದಿರೊಡನೆ ಹಾದರಗೈಯುತ್ತಾನೆ. ಸಾಕಷ್ಟು ಸೂಳೆಯರ ಸಂಗ ಮಾಡುತ್ತಾನೆ. ಆದರೂ ಅವನಿಗೆ ಯಾವುದೇ ಲೈಂಗಿಕ ರೋಗ ತಗಲುವುದಿಲ್ಲ. ಹೀಗೆ ಅವನೊಬ್ಬ

ಅತಿಮಾನವನಾಗುತ್ತಾನೆ. ಫರ್ಮಿನಾಳ ಮೇಲಿನ ರಿವೆಂಜಿನಿಂದಾಗಿ ಫರ್ಮಿನಾ ಪರಿಚಯವಾಗಿದ್ದಾಗ ಕಾಣುತ್ತಿದ್ದ ಳಲ್ಲ ಹಾಗೆಯೆ ಕಾಣುವ ಒಬ್ಬ ಪುಟ್ಟ ಹುಡುಗಿಯಿಂದ ಹಿಡಿದು ಮುದಿಹೆಂಗಸರ ತನಕ ಎಲ್ಲರ ಸಂಪರ್ಕ ಬೆಳೆಸಿಯೂ, ಮಾನವ ಸಹಜವಾದ ಯಾವ ದೈಹಿಕ, ಮಾನಸಿಕ ಆಘಾತಗಳಿಗೂ ಈಡಾಗದೆ, ಪವಾಡ ಸದೃಶವಾಗಿ ಪಾರಾಗುತ್ತಾನೆ. ಅವನೊಬ್ಬ ಆಧುನಿಕ ಜಗತ್ತಿನ ಸೆಕ್ಸೀ ಹೀ ಮ್ಯಾನ್ ಥರ ಕಾಣುತ್ತಾನೆಯೆ ಹೊರತು, ವಾಸ್ತವ ಬದುಕಿನ ಮಾನವ ಪ್ರತಿನಿಧಿಯಂತೆ ಕಾಣುವುದೇ ಇಲ್ಲ. "My heart has more rooms than a whorehouse" ಎಂದು ಅವನಿಗೆ ಅವನೆ ಹೇಳಿಕೊಳ್ಳುವ ಮಾತು ಅವನ ಇಡಿ ವ್ಯಕ್ತಿತ್ವವನ್ನೆ ಅನಾವರಣಗೊಳಿಸುತ್ತದೆ (ಪುಟ - ೨೭೦)

ನಬಕೋವ್‌ನ 'ಲೋಲಿತಾ' ಯೂಕಿವೋ ಮಿಷಿಮಾನ 'ದ ಸೀ ಆಫ್ ಫರ್ಟಿಲಿಟಿ', ಭೈರಪ್ಪನವರ 'ಸಾಕ್ಷಿ' ಕಾದಂಬರಿಗಳ ಥರ 'ಲವ್ ಇನ್ ದ ಟೈಮ್ ಆಫ್ ಕಾಲರಾ' ಕೂಡ ಸಹಜ ಪ್ರೇಮದ ಶೋಧನೆಗೆ ಹೊರಟು, ಲೈಂಗಿಕ ವಿಕೃತಿಗಳಲ್ಲಿ ಮೈಮರೆತು, ತಾತ್ವಿಕವಾಗಿ ಎಚ್ಚರ ತಪ್ಪುವ ಕೃತಿಯಾಗಿದೆ. ಲಾರೆನ್ಸ್‌ನ 'ಲೇಡಿ ಚಾಟರ್ಲೀಸ್ ಲವರ್' ಹಾಗು 'ಸನ್ಸ್ ಅಂಡ್ ಲವರ್ಸ್' ಕಾದಂಬರಿಗಳಲ್ಲಿ ಕಾಣುವ ಸಾಂಸ್ಕೃತಿಕ ಜವಾಬ್ದಾರಿಯಾಗಲಿ, ಪ್ರೇಮಕಾಮಗಳನ್ನ ಅವಿನಾಭಾವದಲ್ಲಿ ಬೆಸೆಯುವ ಅನುಭಾವಿ ದೃಷ್ಟಿಕೋನವಾಗಲಿ 'ಲವ್ ಇನ್ ದ ಟೈಮ್ ಆಫ್ ಕಾಲರಾ' ದಲ್ಲಿ ಕಾಣಿಸುವುದಿಲ್ಲ. ಈ ಅಂಶ ಈ ಕಾದಂಬರಿಯ ತಾತ್ವಿಕ ಶೈಥಿಲ್ಯಕ್ಕೆ ಕಾರಣವಾಗಿದೆ. ಹೀಗಾಗಿ ಕಮರ್ಷಿಯಲ್ ಸಿನೆಮಾದಂಥ ಮಸಾಲೆ ಕಲೆಗೆ ಈ ಕೃತಿ ಸಿಕ್ಕಿಹಾಕಿಕೊಂಡಿರು ವಂತೆ ಕಾಣುತ್ತದೆ.

"Nobody teacher life anything" (ಪುಟ-೧೭೬) ಎನ್ನುವಂಥ ನಿರಾಶಾವಾದಿ ಧೋರಣೆ ಹೇಗೆ ಸ್ವಚ್ಛಂದ ವ್ಯಕ್ತಿವಾದಕ್ಕೆ, ಹತಾಶೆಯಿಂದ ಹುಟ್ಟುವ ಹಿಂಸೆ ಕ್ರೌರ್ಯಗಳಿಗೆ , ಲಂಗು ಲಗಾಮಿಲ್ಲದ ಜೀವನ ಶೈಲಿಗೆ ಒಯ್ದು ಮುಟ್ಟಿಸುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ ಈ ಕಾದಂಬರಿ. ಹೆಣ್ಣು ಗಂಡು ಚೇತನಗಳ ಸಂಮಿಲನ, ಅರ್ಥಪೂರ್ಣ ದಾಂಪತ್ಯ, ಸಂತಾನ ಚಕ್ರ, ತಲೆಮಾರುಗಳಲ್ಲಿ ನವನವೋನ್ಮೇಷವಾಗಿ ಅರಳುತ್ತ ಹೋಗುವ ಮನುಷ್ಯ ಸಂಸ್ಕೃತಿ ಈ ಯಾವುದರಲ್ಲೂ ಶ್ರದ್ಧೆಯಿರದ ದೃಷ್ಟಿಕೋನದಿಂದ ಹುಟ್ಟಿರುವ ಕಲಾಕೃತಿ ಇದು. ಈ ಸದ್ಯದ ಆಧುನಿಕ ಮನಸ್ಸಿಗೆ ರಂಜನೆಯಾಗುವ ಹಾಗೆ ಬರೆದರೆ ಅದೆ ಉತ್ತಮ ಸಾಹಿತ್ಯ ಎಂಬ ಇಂಗಿತ ಇಲ್ಲಿದೆ.

ಹೀಗೆ ಸಾಕಷ್ಟು ತಾತ್ವಿಕ ತಕರಾರುಗಳನ್ನು ಎತ್ತಬಹುದಾದ ಕಾದಂಬರಿ ಇದು.

೧೯೮೯ ರಲ್ಲಿ ಪ್ರಕಟವಾದ 'ದ ಜನರಲ್ ಇನ್ ಹಿಸ್ ಲ್ಯಾಬಿರಿಂತ್' ಎಂಬ ಕಾದಂಬರಿ ಸೈಮನ್ ಬೊಲಿವರ್‌ನನ್ನ ಕುರಿತು ಬರೆದದ್ದು. ೧೮೩೦ ರ ಡಿಸೆಂಬರ್ ೧೭ ರಂದು ತೀರಿಕೊಂಡ ಲ್ಯಾಟಿನ್ ಅಮೆರಿಕನ್ ಕಾಂತ್ರಿವೀರ ಸೈಮನ್ ಬೊಲಿವರ್, ಸಾಯುವುದಕ್ಕೆ ಒಂದು ವಾರ ಮುಂಚೆ "How will I ever get out of this labyrinth!" (ಪುಟ-೨೬೫) ಎಂದು ಅಲವತ್ತು ಕೊಂಡಿದ್ದ. ಆ ವಾಕ್ಯದ ಪ್ರೇರಣೆ ಪಡೆದೇ ಈ ಕಾದಂಬರಿಗೆ ಮಾರ್ಕ್ವೆಸ್ ಈ ಹೆಸರು ಇಟ್ಟಿದ್ದು. ಒಬ್ಬ ಐತಿಹಾಸಿಕ ನಾಯಕ ಸತ್ತ ಒಂದೂವರೆ ಶತಮಾನಗಳ ನಂತರ ಅವನ ಜೀವನವನ್ನು ಯಥಾವತ್ತಾಗಿ ಕಾದಂಬರಿಗೆ ಒಗ್ಗಿಸುವ ಮಾರ್ಕ್ವೆಸ್‌ನ ಪ್ರಯತ್ನಕ್ಕೆ ಅಡ್ಡಿ ಆತಂಕ ಒಡ್ಡುವವರಂತೂ ಯಾರೂ ಇದ್ದಿರಲಿಕ್ಕಿಲ್ಲ. ಅಲ್ಲದೆ ಲ್ಯಾಟಿನ್ ಅಮೆರಿಕವನ್ನು ಪ್ರೀತಿಸುವ ಮಾರ್ಕ್ವೆಸ್, ಲ್ಯಾಟಿನ್ ಅಮೆರಿಕದ ಐದು ರಾಷ್ಟ್ರಗಳ ನಾಯಕನಾಗಿದ್ದ ಸೈಮನ್ ಬೊಲಿವರ್ ನನ್ನು ತುಂಬು ಗೌರವ ಅಭಿಮಾನಗಳಿಂದಲೆ ಚಿತ್ರಿಸಿದ್ದಾನೆ. ದಕ್ಷಿಣ ಅಮೆರಿಕದಲ್ಲಿ ಸ್ಪ್ಯಾನಿಶ್ ಆಳ್ವಿಕೆಯನ್ನು ಕೊನೆಗೊಳಿಸಿ ದೇಶೀಯರಿಗೆ ಸ್ವಾತಂತ್ರ್ಯ ತಂದುಕೊಟ್ಟ ಬೊಲಿವರ್ ತನ್ನ ಬದುಕಿನ ಕೊನೆದಿನಗಳಲ್ಲಿ ಮಾತ್ರ ಬಹಿಷ್ಕೃತನಾಗಿ ಕೊಲಂಬಿಯದ ಮಹಾನದಿ ಮಾಗ್ದಲೀನಾದ ಗುಂಟ ಸಾಗಿ ಸಾವಿನಲ್ಲಿ ಮರೆಯಾಗಬೇಕಾಯಿತು. ಜನರಲ್ ಎಂದೆ ಅವನನ್ನು ಕಾದಂಬರಿಯುದ್ದಕ್ಕೂ ಕರೆಯುವ ಮಾರ್ಕ್ವೆಸ್‌ಗೆ ಆತನ ಬಗ್ಗೆ ಒಂದು ಬಗೆಯ ಭಕ್ತಿಯಿರುವಂತೆ ಕಾಣುತ್ತದೆ. ಹೆಂಗಸರೊಡನೆ ಜನರಲ್‌ಗೆ ಇದ್ದ ಸಂಬಂಧವನ್ನು ಕೂಡ ತುಂಬ ಡೀಸೆಂಟಾಗಿ, ಆದರಪೂರ್ವಕವಾಗಿ ಚಿತ್ರಿಸಿದ್ದಾನೆ.

"Europeans believe that only what Europe invents is good for the entire universe, and anything else is detestable" (ಪುಟ 122) ಎಂಬ ಜನರಲ್‌ನ ಮಾತು ಇಡಿ ಲ್ಯಾಟಿನ್ ಅಮೆರಿಕದ ಅಂತರಂಗದ ಮಾತಾಗಿದೆ. ಮುಂದುವರಿದು ಯೂರೋಪಿಗೆ ಜನರಲ್ ಹೀಗೆ ತಾಕೀತು ಮಾಡುತ್ತಾನೆ."....stop doing us the favour of telling us what we should do.... Don't attempt to teach us how we should be, don't attempt to make us just like you, don't try to have us do well in twenty years what you have done so badly in two thousand" (ಪುಟ-124) ಈ ಮಾತುಗಳು ಸೈಮನ್ ಬೊಲಿವರ್‌ನವಷ್ಟೆ ಅಲ್ಲ, ಮಾರ್ಕ್ವೆಸ್‌ನವು

ಕೂಡ. ಅಷ್ಟೆ ಅಲ್ಲ ಯುರೋಪಿಯನ್ನರ ವಸಾಹತುಶಾಹಿ ದಬ್ಬಾಳಿಕೆಗೆ ಒಳಗಾಗಿ ಶತಮಾನಗಳಗಟ್ಟಲೆ ನರಳಿರುವ ತೃತೀಯ ಜಗತ್ತಿನ ರಾಷ್ಟ್ರಗಳ ಒಕ್ಕೊರಲಿನ ಮಾತುಗಳು. ಈ ದೃಷ್ಟಿಯಲ್ಲಿ ಈ ಕಾದಂಬರಿ ಸಾಧಿಸುವ ಸಾರ್ವತ್ರಿಕ ಪರಿಣಾಮ ಅಗಾಧವಾದದ್ದು.

IX

೧೯೬೭ ರಲ್ಲಿ ಬೆಳಕು ಕಂಡ ಮಾರ್ಕ್ವೆಸ್‌ನ ಮೊಟ್ಟ ಮೊದಲ ಕಾದಂಬರಿ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' (ಒಂಟಿತನದ ಒಂದು ನೂರು ವರುಷಗಳು) ಅವನ ಮಾಗ್ನಮ್ ಓಪಸ್ ಎಂಬುದರಲ್ಲಿ ಸಂದೇಹವಿಲ್ಲ. ಸ್ವತಃ ಮಾರ್ಕ್ವೆಸ್, 'ನೋ ಒನ್ ರೈಟ್ಸ್ ಟು ದ ಕರ್ನಲ್', ನೀಳ್ಗತೆಯನ್ನು 'the best thing I have writen"[೧೬] ಎಂದು ಕೊಂಡಿದ್ದಾನಾದರೂ ನಾನು ಇಷ್ಟು ದಿನಗಳವರೆಗೆ ಹುಡುಕುತ್ತಿದ್ದ, ಹಾಗೂ ಬರೆಯಬೇಕೆಂದು ಕೊಂಡಿದ್ದ ಕೃತಿ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಅಲ್ಲ 'ಆಟಮ್ ಆಫ್ ದಿ ಪೇಟ್ರಿಯಾರ್ಕ್'[೧೭] ಎಂದು ಹೇಳಿಕೊಂಡಿದ್ದಾನಾದರೂ ಅವನ ಅತ್ಯದ್ಭುತ ಕೃತಿ ಎಂದರೆ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಎಂದು ಸಾಹಿತ್ಯ ಲೋಕ ಘೋಷಿಸಿದೆ, ಓದುಗರ ಜಗತ್ತು ನಿರ್ಧರಿಸಿದೆ.

ಈ ಕಾದಂಬರಿಯನ್ನು ಮೊದಲು ಓದಿಬಿಟ್ಟರೆ ಅನಂತರ ಓದುವ ಅವನ ಯಾವ ಕೃತಿಗಳೂ ಇದರಷ್ಟು ಪರಿಣಾಮಕಾರಿ ಎನ್ನಿಸುವುದೆ ಇಲ್ಲ. ಸತ್ಯಜಿತ್ ರಾಯ್ ಅವರ ಮೊಟ್ಟ ಮೊದಲ ಚಿತ್ರ 'ಪಥೇರ್ ಪಾಂಚಾಲಿ'ಯ ಮಟ್ಟಕ್ಕೆ ಅವರ ಮುಂದಿನ ಯಾವ ಚಿತ್ರವೂ ಬರಲಿಲ್ಲ. ಅದೇ ರೀತಿ ಮಾರ್ಕ್ವೆಸ್‌ನ ಮೊದಲ ಕಾದಂಬರಿಯಾದ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಮಟ್ಟಕ್ಕೆ ಅವನ ಉಳಿದ ಯಾವ ಕೃತಿಗಳೂ ಬರುವುದಿಲ್ಲ.

ಈ ಕಾದಂಬರಿ ಜಗತ್ತಿನಾದ್ಯಂತ ವಿಮರ್ಶಕರನ್ನು ದಂಗು ಬಡಿಸಿದೆ. ಓದುಗರನ್ನು ಹುಚ್ಚೆಬ್ಬಿಸಿದೆ. ಗಂಭೀರ ಕಲಾಕೃತಿಯಾಗಿದ್ದೂ ಬಿಸಿದೋಸೆಯಂತೆ ಖರ್ಚಾಗಿ Best Seller ಪಟ್ಟಗಿಟ್ಟಿಸಿದೆ. ಇದಕ್ಕೆ ಕಾರಣ ಇದರ ವಸ್ತು ಮತ್ತು ಶೈಲಿಯ ಹೊಚ್ಚ ಹೊಸತನ. ಕುಲಸ್ಮೃತಿಯಿಂದ ಪ್ರೇರಿತವಾದ ಐದಾರು ತಲೆಮಾರುಗಳ ಚರಿತ್ರ ಕಥನ

---

೧೬. ಮಾರ್ಕ್ವೆಜ್, ವಿಸಿಟ್ಸ್ ಮಾಸ್ಕೊ - ವೀರಾ ಕುಟೀಶ್ಚಿಕೋವಾ

೧೭. ಬರಹಗಾರನ ಪಾಕಶಾಲೆ, ಸಂದರ್ಶನ.

ಇಲ್ಲಿನ ವಸ್ತುವಾಗಿದೆ. ಮಿಂಚಿನ ಓಟದಲ್ಲಿ ಸಾಗುವ ಮ್ಯಾಜಿಕ್ ರಿಯಲಿಸಮ್ 'ಮಾಂತ್ರಿಕ ವಾಸ್ತವತೆ'ನ ಅದ್ಭುತ ಶೈಲಿ ಓದುಗರನ್ನ ಬೆಚ್ಚಿಬೀಳಿಸುತ್ತ, ಹೃದಯಕ್ಕೆ ಕಚಗುಳಿ ಇಡುತ್ತ ಬದುಕಿನ ದುರಂತವ್ಯಂಗ್ಯ 'ಟ್ರಾಜಿಕ್ ಐರನಿ'ದ ಕಡೆ ಸಾಗುತ್ತದೆ. ಮಾರ್ಕ್ವೆಸ್‌ನ ಮಾಂತ್ರಿಕ ಶೈಲಿಗೆ ಒಂದು ವಿಚಿತ್ರ ಸಂಗ್ರಹ ಶಕ್ತಿ ಇದೆ. ಅದು ಒಂದು ವಾಕ್ಯದಲ್ಲೆ ಒಂದು ಇಡಿ ಕತೆಯನ್ನ ಹೇಳಬಲ್ಲದು, ಒಂದು ಕಾದಂಬರಿಯ ಸಾರವನ್ನು ಒಂದೇ ಒಂದು ಪ್ಯಾರಾದಲ್ಲಿ ನೀಡಬಲ್ಲದು. ಈಗಿರುವಂತೆ ೩೩೬ ಪುಟಗಳ ಈ ಕಾದಂಬರಿ, ಬಹುಶಃ ಮಾರ್ಕ್ವೆಸ್ ಬರೆಯಬೇಕೆಂದು ಕೊಂಡಿದ್ದ ಕಾದಂಬರಿಯ ಮೂರನೆ ಒಂದು ಗಾತ್ರದ ಸಂಕ್ಷಿಪ್ತರೂಪ. ಇದನ್ನು ಈಗಿರುವುದಕ್ಕಿಂತ ಮೂರುಪಟ್ಟು ವಿಸ್ತರಿಸಿ ಹೇಳಲು ಸಾಧ್ಯವಿದೆಯೆ ಹೊರತು, ಇದರ ಸಂಕ್ಷಿಪ್ತೀಕರಣ ಮಾತ್ರ ಸಾಧ್ಯವೇ ಇಲ್ಲ. ಅಸಂಖ್ಯಾತ ವಿವರಗಳಲ್ಲಿ ಉಕ್ಕಿ ಸೊಕ್ಕುವ ಈ ಕಾದಂಬರಿ ಕಡಲು, ಕಾದಂಬರಿ ಪ್ರಕಾರವನ್ನು ಆಧುನಿಕ ಯುಗದ ಮಹಾಕಾವ್ಯವನ್ನಾಗಿಸಲು ಒಂದು ಹೊಸಮಾರ್ಗವನ್ನೆ ತೆರೆದುತೋರಿಸುವಂತಿದೆ. ಓದಿ ದಶಕಗಳು ಕಳೆದರೂ ಇದರ ಜೀವಂತ ದೃಶ್ಯಗಳು, ಘಟನೆಗಳು ಮಾಸದೆ ಮನಸ್ಸಿನಲ್ಲಿ ನೆಟ್ಟು ನಿಂತಿರುತ್ತವೆ. ಇದೆ ಉತ್ತಮ ಕಾದಂಬರಿಯ ತಾಳಿಕೆ ಗುಣಕ್ಕೆ ಸಾಕ್ಷಿಯಾಗುವ ಸಂಗತಿ. ವಾಸ್ತವ ಮತ್ತು ಅದ್ಭುತಗಳು ಒಂದರೊಳಗೊಂದು ಹದವಾಗಿ ಬೆರೆತು ಪಾಕಗೊಳ್ಳುವುದೆ ಈ ಶೈಲಿಯ ಮಹತ್ಸಾಧನೆ.

'ಪ್ಲೇಬಾಯ್' ಪತ್ರಿಕೆಗಾಗಿ ಮಾರ್ಕ್ವೆಸ್‌ನನ್ನು ಸಂದರ್ಶಿಸಿದ ಕ್ಲಾಡಿಯಾ ಡ್ರೀಫಸ್ **'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್'** ಕಾದಂಬರಿಯ ಸಾರಾಂಶವನ್ನು ಹೀಗೆ ಹೇಳಿದ್ದಾಳೆ. "ಮಕಂಡೊ ಎಂಬ ಕಾಲ್ಪನಿಕ ಹಳ್ಳಿಯ ಬುಯೆಂಡಿಯ ಎಂಬ ಮನೆತನದ ಆರು ತಲೆಮಾರುಗಳನ್ನು ಚಿತ್ರಿಸುತ್ತದೆ. 'ಜಗತ್ತು ಎಷ್ಟು ಹೊಸದಾಗಿತ್ತೆಂದರೆ ಎಷ್ಟೊ ವಸ್ತುಗಳಿಗೆ ಹೆಸರುಗಳೆ ಇರಲಿಲ್ಲ' ಎನ್ನುವಂಥ ದಿನಗಳಲ್ಲಿ ಆ ಹಳ್ಳಿಯನ್ನು ಕಟ್ಟುವಲ್ಲಿಂದ ಪ್ರಾರಂಭವಾಗಿ, ಬುಯೆಂಡಿಯ ಮನೆತನದ ಕೊನೆ ತಲೆಯೊಡನೆ ಕೊನೆಗೊಳ್ಳುತ್ತದೆ. ಈ ಕೊನೆ ತಲೆಯ ಹುಡುಗನಿಗೆ ಒಂದು ಹಂದಿ ಬಾಲ ಇರುತ್ತದೆ. ಅವನು ಮಗುವಾಗಿರುವಾಗಲೆ ಕೋಟ್ಯಾಂತರ ಇರುವೆಗಳು ಅವನನ್ನು ಎಳೆದುಕೊಂಡು ಹೋಗುತ್ತವೆ. ಅಲ್ಲಿಗೆ ಬುಯೆಂಡಿಯ ಮನೆತನ ಹೇಳ ಹೆಸರಿಲ್ಲದಂತಾಗುತ್ತದೆ. ಇಷ್ಟೆಲ್ಲದರ ನಡುವೆ ಮಕಂಡೊ 'ಬಾಳೇ ಜ್ವರ' 'ನಿದ್ರಾಹೀನತೆಯ ಪ್ಲೇಗು', ೩೨

---

೧೮. 'ಪ್ಲೇಬಾಯ್' ಸಂದರ್ಶನ

ಅಂತರ್ಯುದ್ಧಗಳು, ಕ್ರಾಂತಿ, ಪ್ರತಿಕ್ರಾಂತಿ, ಹರತಾಳ ಐದು ವರ್ಷಗಳವರೆಗೆ ಸತತವಾಗಿ ಸುರಿವ ಮಳೆ ಇವನ್ನೆಲ್ಲ ಅನುಭವಿಸುತ್ತದೆ." [೧೬]

ಮಾರಿಯೊ ವೆರ್ಗಾಸ್ ಲೋಸಾ ಈ ಕಾದಂಬರಿಯನ್ನು ಹೀಗೆ ವಿಶ್ಲೇಷಿಸಿದ್ದಾನೆ: "ಅದು ಏಕಕೇಂದ್ರದಿಂದ ಹೊರಟು, ಕಿರಿವರ್ತುಲದಿಂದ ಹಿರಿ ವರ್ತುಲಗಳವರೆಗೆ ವಿಸ್ತರಿಸಿಕೊಳ್ಳುತ್ತ ಮೇಲೇರುವ ಏಣಿ ಇದ್ದಹಾಗೆ. ಅದರ ಮೊದಲ ವರ್ತುಲದಲ್ಲಿ ಒಂದು ದುಂದುಗಾರರ ಕುಟುಂಬವಿದೆ. ಎರಡನೆ ವರ್ತುಲದಲ್ಲಿ ಪುರಾಣಕತೆಗಳಿಂದ, ಸಮಸ್ಯೆಗಳಿಂದ ಇಡುಕಿರಿದ ಅರಕಾಟಕ ಎಂಬ ಪುಟ್ಟ ಊರಿದೆ. ಮೂರನೆ ವರ್ತುಲದಲ್ಲಿ ಕೊಲಂಬಿಯಾ ದೇಶವಿದೆ. ನಾಲ್ಕನೆಯದರಲ್ಲಿ ಇಡಿ ಲ್ಯಾಟಿನ್ ಅಮೆರಿಕ ಇದೆ. ಕೊನೆಯ ವರ್ತುಲ ಸಮಗ್ರ ಮನುಕುಲವನ್ನೆ ಒಳಗೊಂಡಿದೆ..... ಬುಯೆಂಡಿಯರ ಕಥೆ ಒಂದು ಅಪರಾಧದಿಂದ ಪ್ರಾರಂಭವಾಗಿ ಒಂದು ಶತಮಾನದುದ್ದಕ್ಕೂ ಸಾಗಿ, ಹಂದಿಬಾಲವುಳ್ಳ ವಿಚಿತ್ರ ಮಗುವಿನ ಭೀಕರ ಹುಟ್ಟಿನಲ್ಲಿ ಕೊನೆಗೊಳ್ಳುತ್ತದೆ. ಈ ಎರಡು ಸತ್ಯಸಂಗತಿಗಳ ನಡುವೆ ಅಸಂಬದ್ಧ ಸಾಹಸಗಳು, ಪ್ರಚಂಡ ಅದ್ಭುತಗಳು ಮುಗಿಯದಂತೆ ಕುದಿಯುತ್ತಲೆ ಇರುತ್ತವೆ. ದೇವರನ್ನು ಚಿತ್ರಿಸಲು ಹೊರಟು ದೆವ್ವಶಾಸ್ತ್ರವನ್ನು ಕಲಿಯುವ, ನಾಶಮಾಡುವುದಕ್ಕಾಗಿಯೆ ಸೃಷ್ಟಿಮಾಡುವುದರಲ್ಲಿ ಖುಷಿ ಪಡುವ, ಅಸಂಭವನೀಯ ಯುದ್ಧಗಳಲ್ಲಿ ಮುಳುಗೇಳುವ, ಬೈಬಲ್ಲಿನ ಸಂತರಂತೆ ಗುಹಾಗತರಾಗುವ ಈ ಸಂತತಿಯ ದುಂದುಗಾರ ಜೀವಿಗಳು ಬರಿ ಕಲ್ಪನಾ ವಿಲಾಸದ ಲೀಲಾಭಾವದ ಜೀವಿಗಳಲ್ಲ; ಅಗಾಧ ಅರ್ಥಪರಂಪರೆ ಹೊತ್ತು ನಿಂತ ಮಾನವಾನುಭವದ ರೂಪಕಗಳು - ಪುರಾವೆಗಳು. ಬುಯೆಂಡಿಯರ ವಂಶಾವಳಿಯಲ್ಲಿ ಗಂಡಸರ ಹೆಸರು ಆರ್ಕೇಡಿಯೊ ಅಥವಾ ಆರೇಲಿಯಾನೊ ಆದರೆ ಹೆಂಗಸರ ಹೆಸರು ಉರ್ಸುಲಾ ಅಥವಾ ಅಮೆರಾಂಟಾ ಆಗಿರುತ್ತದೆ. ಇವರ ಕ್ರಿಯೆ ಮತ್ತು ಕನಸುಗಳಲ್ಲಿ ಮನುಷ್ಯರು ಏನು ಮಾಡಬಯಸುತ್ತಾರೆ ಆದರೆ ಏನು ಮಾಡುತ್ತಾರೆ, ಯಾವುದು ಅವರ ಭೌತಿಕ ಶಕ್ತಿಗೆ ನಿಲುಕುವಂಥಾದ್ದು ಮತ್ತು ಯಾವುದು ಅವರ ಹುಚ್ಚು ಕನಸು ಕಲ್ಪನಾವಿಲಾಸಗಳಿಂದ ಘಟಿಸುತ್ತದೆ ಎಂಬುದೆಲ್ಲ ಬೆರೆತಿವೆ. ಆದರೆ ಬುಯೆಂಡಿಯರ ವಿಪರ್ಯಾಸದ ಎಚ್ಚರದಲ್ಲಿ ಮತ್ತು ಅವರ ಸಾಹಸಗಳಲ್ಲಿ ಅವರ ಹಳವಂಡಗಳು ಸಂಕಟಗಳು ಕೂಡಾ ಆಕಾರ ಪಡೆಯುತ್ತವೆ. ಅವು ಯಾವುವೆಂದರೆ ಅವರ ಅನುವಂಶೀಯ 'ಒಂಟಿತನ'ದ 'ಮನೋವ್ಯಾಧಿ', ಯಾವುದೇ

ಬಗೆಯ ಸಂವಹನವೂ ಅವರಿಗೆ ಅಸಾಧ್ಯವೆನಿಸುವಂತೆ ಮಾಡಿ, ಅವರು ಕೈಗೊಳ್ಳುವ ಕೆಲಸಗಳೆಲ್ಲ ಹತಾಶೆಯಲ್ಲಿ ಪರ್ಯವಸಾನವಾಗುವಂತೆ ಮಾಡುವ ಅನಾಥ ಪ್ರಜ್ಞೆ, ಮತ್ತು ತಮಗೆ ಅರ್ಥವೇ ಆಗದ ಜಗತ್ತಿಗೆ, ಸುಖ ಒಂದನ್ನು ಬಿಟ್ಟು ಮತ್ತೆಲ್ಲವೂ ಸಂಭವಿಸುವ ಸಮಾಜಕ್ಕೆ ಒಗ್ಗಿಕೊಳ್ಳಲಾಗದ 'ಅಶಕ್ತತೆ' . [೧೯]

ಕಾರ್ಲೋಸ್ ಫುಮೆಂಟಿಸ್ ಈ ಕಾದಂಬರಿಯ ತಾತ್ವಿಕ ತಳಹದಿಯನ್ನು ಹೀಗೆ ಹಿಡಿದಿಟ್ಟಿದ್ದಾನೆ. "ಮಕಂಡೊ ಮತ್ತು ಬುಯೆಂಡಿಯರ ಈ ವೀರಗಾಥೆ ಗತಕಾಲದ ಪುರಾಣಗಳ ಐತಿಹ್ಯಗಳ ಹೇಳು ಕೇಳು ಪರಂಪರೆಯನ್ನು ಸಮಗ್ರವಾಗಿ ಒಳಗೊಂಡಿದೆ. ಇದು ನಮಗೆ ಹೇಳುವುದು ಏನೆಂದರೆ ಕೇವಲ ಅಧಿಕೃತವಾಗಿ ದಾಖಲೆಯಾಗಿರುವ ಚರಿತ್ರೆಯಿಂದ ನಾವು ತೃಪ್ತರಾಗುವಂತಿಲ್ಲ ಎಂದು: ಚರಿತ್ರೆ ಎಂದರೆ ಮನುಷ್ಯರು ತಮ್ಮನ್ನು ತಾವೆ ಸಂರಕ್ಷಿಸಿ ಕೊಳ್ಳುವ ಸಲುವಾಗಿ ತಮ್ಮನ್ನು ತಾವೆ ನಾಶ ಮಾಡಿಕೊಳ್ಳುವ ಸಲುವಾಗಿ ಕನಸು ಕಂಡ, ಕಲ್ಪಿಸಿಕೊಂಡ, ಹಂಬಲಿಸಿದ ಎಲ್ಲ ಒಳ್ಳೆಯದು ಮತ್ತು ಎಲ್ಲ ಕೆಟ್ಟದ್ದರ ಮೊತ್ತ ಎಂದು." [೨೦]

"ಒಳ್ಳೆಯ ಕಾದಂಬರಿ ಜಗತ್ತಿನ ಒಗಟಾಗಿರುತ್ತದೆ." ಎನ್ನುತ್ತಾನೆ ಮಾರ್ಕ್ವೆಸ್. ಅವನ ಪ್ರಕಾರ ಸಾಮಾಜಿಕ ರಾಜಕೀಯ ವಾಸ್ತವವನ್ನಷ್ಟೆ ಹಿಡಿದು ಕೊಡುವ 'ಸಾಮಾಜಿಕ ಕಾದಂಬರಿ' ಸೋತಿದೆ. ಸಾಮಾಜಿಕ ರಾಜಕೀಯ ವಾಸ್ತವ ದಿನನಿತ್ಯ ಕಣ್ಣಿಗೆ ರಾಚುತ್ತಿರುವುದರಿಂದ ಓದುಗವರ್ಗ ಅದನ್ನು ಬಿಟ್ಟು ಮತ್ತೇನನ್ನೋ ಅರಸುತ್ತಿದೆ ಸಾಹಿತ್ಯದಲ್ಲಿ. ವಿಮರ್ಶಕರು ಈ ಕಾದಂಬರಿಯನ್ನು ಅರ್ಥೈಸುವಲ್ಲಿ ಸೋತಿದ್ದಾರೆ ಎನ್ನುತ್ತ ಮಾರ್ಕ್ವೆಸ್ ಹೀಗೆ ಹೇಳಿದ್ದಾನೆ: "ಈ ಕಾದಂಬರಿ ಗಾಂಭೀರ್ಯವನ್ನು ಸಂಪೂರ್ಣವಾಗಿ ಕೈ ಬಿಟ್ಟಿದೆ ಎಂಬ ಸುಸ್ಪಷ್ಟ ವೈಚಾರಿಕನೆಲೆಯಿಂದ ಹೊರಬರದಿದ್ದರೆ, ತನ್ನ ಆಚಾರ್ಯಧೋರಣೆ, ಗತ್ತುಗಾರಿಕೆಗಳನ್ನು ಬಿಟ್ಟುಕೊಡದಿದ್ದರೆ, ಯಾವ ವಿಮರ್ಶಕನೂ **'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್'**ನ ನಿಜವಾದ ದರ್ಶನವನ್ನು ಓದುಗರಿಗೆ ಮಾಡಿಸಲಾರ. ನಾನು ಇದನ್ನು ಬೇಕೆಂತಲೇ ಈ ರೀತಿಯಾಗಿ ಬರೆದಿದ್ದೇನೆ. ರಾಶಿರಾಶಿ ಗ್ರಾಂಥಿಕ ಕಥಾನಕಗಳು, ಅದೃಷ್ಟದಾಟದ ಪ್ರಸಂಗಗಳು, ಕಥೆ

೧೯. 'ಫ್ರಮ್ ಅರಕಾಟಕ ಟು ಮಕಂಡೊ' - ಮಾರಿಯೊ ವೆರ್ಗಾಸ್ ಲೋಸಾ ರಿವ್ಯೂ ೭೦ (೧೯೭೧) ಪುಟ - ೧೪೧ - ೨

೨೦. ಮಕಂಡೊ, ಸೀಟ್ ಆಫ್ ಟೈಮ್ಸ್ ಕಾರ್ಲೋಸ್ ಫುಯೆಂಟಿಸ್‌ಯ್ಯ ೭೦ (೧೯೭೧) ಪುಟ - ೧೨೦

ಹೇಳುವ ಕಾಳಜಿಗಿಂತ ಸರ್ಕಾರವನ್ನು ಬೀಳಿಸುವ ಕಾಳಜಿ ಹಚ್ಚಿಕೊಂಡಿರುವ ಕಾದಂಬರಿಗಳು ಇವುಗಳನ್ನ ಕಂಡು ಬೇಸತ್ತು, ನಾವು ಲೇಖಕರು ಬಹಳ ಗಂಭೀರವಂತರು ಬಹಳ ಮುಖ್ಯರು ಎಂಬ ಸಂಗತಿ ಕೇಳಿ ಕೇಳಿ ಸಾಕಾಗಿ ಹೀಗೆ ಬರೆದಿದ್ದೇನೆ. ಈ ಜಿಜ್ಞಾಸಾತ್ಮಕ ಗಾಂಭೀರ್ಯದಿಂದಲೇ ನಾವು ಭಾವನಾತ್ಮಕತೆ, ಅಳುಬುರುಕತನ, 'ಕ್ಯಾಂಪ್', ನೈತಿಕ ನಿಗೂಢತೆ ಮುಂತಾದ,ಬದುಕಿನಲ್ಲಿ ದಿನನಿತ್ಯದ ಸತ್ಯವಾಗಿರುವ ಆದರೆ ಸಾಹಿತ್ಯದಲ್ಲಿ ಸತ್ಯವಾಗದೆ ಇರುವ, ಸಂಗತಿಗಳಿಂದ ತಪ್ಪಿಸಿಕೊಳ್ಳುತ್ತಿರುವುದು".

ಈ ವಾಚಿಕೆಯ ಸಂಪಾದಕನಾದ ನನ್ನ ಅಭಿಪ್ರಾಯ ಇಷ್ಟು : 'ಒಂಟಿತನದ ಒಂದು ನೂರು ವರುಷಗಳು' ಕಾದಂಬರಿ ಮಾರ್ಕ್ವೆಸ್‌ನ ಮೂರು ಪ್ರಮುಖ ಪೂರ್ವಗ್ರಹಗಳ ಹದವಾದ ಪಾಕವಾಗಿದೆ: ಸ್ಪ್ಯಾನಿಶ್ ಗೂಳಿಕಾಳಗವನ್ನು ನೆನಪಿಸುವ ಸ್ವಚ್ಛಂದ ಲೈಂಗಿಕತೆ; ಅಮೆರಿಕನ್ ಸಾಮ್ರಾಜ್ಯಶಾಹಿಗೆ ಪ್ರತಿಕ್ರಿಯಾತ್ಮಕವಾಗಿ ಹುಟ್ಟಿರುವ ಸರ್ವಾಧಿಕಾರಿ ಪ್ರವೃತ್ತಿ; ಮತ್ತು ಇಂಕಾ - ಮಾಯಾ - ಅಜ್‌ಟೆಕ್ ಬುಡಕಟ್ಟುಗಳಲ್ಲಿ ಸಾವಿನ ಬಗೆಗಿದ್ದ ರಹಸ್ಯಜ್ಞಾನ - ಈ ಮೂರೂ ಸಂಗತಿಗಳು ಈ ಕಾದಂಬರಿಯ ಆರು ತಲೆಮಾರುಗಳ ವೈವಿಧ್ಯಮಯ ಮನುಷ್ಯ ಮಾದರಿಗಳಲ್ಲಿ ಪದೇ ಪದೇ ತಲೆ ಎತ್ತುವ ಅಲೆಗಳಾಗಿವೆ. ವಂಶಸ್ಮೃತಿಯ ಚರಿತ್ರೆಯನ್ನು ಮನುಕುಲದ ಕಥೆಯ ಅಣುಚರಿತ್ರೆಯಂಥ ರಂಜನೀಯ ರೂಪಕವನ್ನಾಗಿಸುವುದೇ ಕಾದಂಬರಿಕಾರನ ಉದ್ದೇಶವಾಗಿದೆ. ಇಷ್ಟು ಅಗಾಧವಾದ ಕಥಾನಕವನ್ನು ಅತ್ಯಂತ ಕಡಿಮೆ ಗಾತ್ರದ ಕಾದಂಬರಿಯಲ್ಲಿ ಹೇಳಹೊರಟಿದ್ದರಿಂದ ಮತ್ತು ಒಂದು ನಿಶ್ಚಿತ ಅವಧಿಯಲ್ಲಿ ತುರ್ತಾಗಿ ಬರೆದು ಮುಗಿಸುವ ಒತ್ತಡಕ್ಕೆ ಬಿದ್ದುದರಿಂದ, ಅನಿವಾರ್ಯವಾಗಿಯೊ ಎಂಬಂತೆ ಇಲ್ಲಿನ ಶೈಲಿಗೆ ಓಡುವ ಕುದುರೆ ನಡಿಗೆ ಮತ್ತು 'ಮಾಂತ್ರಿಕ ವಾಸ್ತವತೆ' ಎನ್ನಲಾದ ಅಡಕಗೊಳಿಸುವ ಗುಣ ದಕ್ಕಿವೆ. 'ಡಾನ್ ಕ್ವಿಕ್ಸೋಟ್', 'ವಾರ್ ಅಂಡ್ ಪೀಸ್' ಕಾದಂಬರಿಗಳ ವಿಶ್ರಾಂತ ಶೈಲಿಗೆ ವ್ಯತಿರಿಕ್ತವಾದ ಶೈಲಿ ಇದು. ವಾಸ್ತವ - ಅದ್ಭುತಗಳು ಒಂದರೊಳಗೊಂದು ಕಲಸಿಕೊಳ್ಳುವುದರಿಂದ ಓದುಗನಿಗೆ ಕಚಗುಳಿ ಇಡುವ ಅನುಭವವಾಗಿ, ಕಾದಂಬರಿಯ ಓದಿಸಿಕೊಳ್ಳುವ ಗುಣ ಹೆಚ್ಚಿದೆ. ಕ್ಲಾಸಿಕಲ್ ಲಿಟರೇಚರ್‌ನ 'ಟ್ರಾಜಿಕ್ ಐರನಿ'ಗೆ ಅಂದರೆ 'ದುರಂತ ವ್ಯಂಗ್ಯ'ಕ್ಕೆ ತದ್ವಿರುದ್ಧವಾದ 'ಕಾಮಿಕ್ ಅಥವ ಸಟೈರಿಕಲ್ ಐರನಿ' ಅಂದರೆ 'ವಿಡಂಬನಾತ್ಮಕ ವ್ಯಂಗ್ಯ' ಈ ಕಾದಂಬರಿಯ ಪ್ರಬಲ ಸಾಹಿತ್ಯಾಸ್ತ್ರವಾಗಿವೆ. ಆದರೆ ಇಂಥ ವ್ಯಂಗ್ಯ ಮೂಲಭೂತವಾಗಿ ಜೀವನದ ಬಗೆಗಿನ ನಿರಾಶಾವಾದದಿಂದ ಪ್ರೇರಿತವಾಗಿದೆಯೆ ಎಂಬ ಗುಮಾನಿ ಹುಟ್ಟುತ್ತದೆ. ಯಾಕೆಂದರೆ ಈ ಕಾದಂಬರಿ ಓದುಗರಲ್ಲಿ ಬಿಟ್ಟು ಹೋಗುವ ಅಂತಿಮ ಭಾವ ವಿಷಾದ, ಹತಾಶೆಗಳ ಭಾವವಾಗಿದೆ. ಬದುಕು ಅರ್ಥಹೀನ ಎಂಬ ಭಾವವಾಗಿದೆ. ಸಮಾಜವಾದಿ ಲೇಖಕ ಯಾವತ್ತೂ

ಆಶಾವಾದ ಮತ್ತು ಮಾನತಾವಾದಗಳಲ್ಲಿ ನಂಬಿಕೆ ಕಳೆದುಕೊಳ್ಳುವುದಿಲ್ಲ.

X

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ನ ಈವರೆಗಿನ ಸಮಗ್ರ ಸಾಹಿತ್ಯದ ಅಧ್ಯಯನದ ನಂತರ ಈ ಕೆಳಗಿನ ತೀರ್ಮಾನಗಳನ್ನು ಕೈಕೊಳ್ಳಬಹುದಾಗಿದೆ:

೧. ಒಬ್ಬೊಬ್ಬ ಲೇಖಕನಿಗೆ ಒಂದೊಂದು ಶೈಲಿ ಎಂಬುದನ್ನು ಮುರಿದಿರುವ ಮಾರ್ಕ್ವೆಸ್ ತನ್ನ ಕೃತಿಗಳಲ್ಲಿ ವಾಸ್ತವವಾದಿ ಶೈಲಿ, ಅರೆವಾಸ್ತವ ಶೈಲಿ, ಮಾಂತ್ರಿಕ ವಾಸ್ತವದ ಶೈಲಿ, ಸರ್ರಿಯಲಿಸ್ಟಿಕ್ಕಾದ ಅರ್ಥಾತೀತ ಶೈಲಿ ಮುಂತಾದ ವೈವಿಧ್ಯಮಯ ಪ್ರಯೋಗಗಳನ್ನು ನಡೆಸಿದ್ದಾನೆ.

೨. ಸಮಾಜವಾದಿ ಆದರ್ಶದಿಂದ ಅಷ್ಟಿಷ್ಟು ಪ್ರಭಾವಿತನಾಗಿದ್ದರೂ, ಲ್ಯಾಟಿನ್ ಅಮೆರಿಕದ ದಿನನಿತ್ಯದ ಬದುಕಿನ ಸಂಕೀರ್ಣ ಅನುಭವಗಳಿಂದ ಮತ್ತು ಯೂರೋಪಿಯನ್ ತಿರುಗಾಟದ ಅನುಭವಗಳಿಂದಾಗಿ ಮಾರ್ಕ್ವೆಸ್ ವ್ಯಕ್ತಿ ವಿಶಿಷ್ಟತೆ, ವೈಯಕ್ತಿಕ ಅಭಿವ್ಯಕ್ತಿ ಸ್ವಾತಂತ್ರ್ಯಗಳಲ್ಲಿ ನಂಬಿಕೆ ಬೆಳೆಸಿಕೊಂಡಿರುವ ವ್ಯಕ್ತಿವಾದಿ ಲೇಖಕನೇ ಆಗಿದ್ದಾನೆ. ಅವನಿಗೆ ಸಾಮಾಜಿಕ ಕಳಕಳಿಗಿಂತ ಅಭಿವ್ಯಕ್ತಿ ಸ್ವಾತಂತ್ರ್ಯವೇ ಮುಖ್ಯವಾಗಿದೆ.

೩. ವ್ಯಂಗ್ಯ, ವಿಡಂಬನೆಗಳ ಮಾರ್ಗವಾಗಿ ಆಗಾಗ ನಿರಾಶಾವಾದಿ ನಿಲುವಿಗೆ ತಲುಪುವ ಮಾರ್ಕ್ವೆಸ್ ಮೂಲಭೂತವಾಗಿ ಮಹಾ ಉತ್ಸಾಹಿಯಾದ ವ್ಯಕ್ತಿ. ವ್ಯಕ್ತಿ ಮತ್ತು ಅಭಿವ್ಯಕ್ತಿಗಳ ನಡುವಿನ ಈ ದ್ವಂದ್ವದ ಪರಿಣಾಮ ಬಹಳ ವಿಚಿತ್ರವಾಗಿದೆ : ಸರ್ವಾಧಿಕಾರವನ್ನು ಖಂಡಿಸುತ್ತಲೆ ಅದು ಅನಿವಾರ್ಯವೇನೊ ಎಂಬ ಅಭಿಪ್ರಾಯಕ್ಕೆ ಬಂದು ಬಿಡುವುದು; ಅತಿ ಲೈಂಗಿಕತೆಯನ್ನು ಗೇಲಿ ಮಾಡುತ್ತಲೇ ಸ್ವಚ್ಛಂದ ಕಾಮದ ಪ್ರತಿಪಾದನೆಗೆ ಒತ್ತುಕೊಟ್ಟುಬಿಡುವುದು; ಸಾವಿನ ರಹಸ್ಯವನ್ನು ತಿಳಿಯಬಯಸುವ ಕಾತರದಿಂದ ಸಾವನ್ನೇ ಮೋಹಿಸತೊಡಗುವುದು.

೪. ದಾಸ್ತೊವ್‌ಸ್ಕಿಯ ಹಾಗೆ ಮನುಷ್ಯಲೋಕದ ವೈವಿಧ್ಯಮಯ ಮಾದರಿಗಳನ್ನು ಅನ್ವೇಷಿಸುತ್ತ ಹೋಗುವ ಮಾರ್ಕ್ವೆಸ್‌ಗೆ ಮನುಷ್ಯನ ಸತ್ವದ ಬಗ್ಗೆ ದಾಸ್ತೋವ್‌ಸ್ಕಿಗಿರುವ ಸ್ಪಷ್ಟವಾದ ತಾತ್ವಿಕ ತಿಳಿವಳಿಕೆ

ಇರುವಂತೆ ಕಾಣುವುದಿಲ್ಲ. ಹೀಗಾಗಿ ಮಾರ್ಕ್ವೆಸ್‌ನ ಕಥಾಜಗತ್ತು ಅಂತರ್‌ವೈರುಧ್ಯಗಳಿಂದ ತುಂಬಿದೆ.

೫. ಮೂಲಭೂತವಾಗಿ ಪತ್ರಿಕಾ ವರದಿಗಾರನಾದ ಮಾರ್ಕ್ವೆಸ್ ಸಲೀಸಾದ ಸಂವಹನದ ಒಂದು ಹೊಸ ಭಾಷಾಶೈಲಿಯನ್ನು ಸ್ಥಾಪಿಸಲು ಹೊರಟರೂ, ಅವನ ಮೇಲೆ ಗಾಢವಾದ ಪ್ರಭಾವ ಬೀರಿರುವ ಫಾಕ್ನರ್, ಕಾಫ್ಕ, ವರ್ಜೀನಿಯಾ ವೂಲ್ಫ್ ಮುಂತಾದವರ ನವ್ಯ ಶೈಲಿಯಿಂದ ಬಿಡಿಸಿಕೊಳ್ಳದಿದ್ದುದರ ಪರಿಣಾಮವಾಗಿ, ಅದು ಸಾಧ್ಯವಾಗಿಲ್ಲ.

XI

ಈ ವಾಚಿಕೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಹೊರಿಸಿದ ಆತ್ಮೀಯರಾದ ಬರಗೂರು ರಾಮಚಂದ್ರಪ್ಪನವರಿಗೆ;

ಆಕರಗ್ರಂಥಗಳನ್ನ ಒದಗಿಸಿ ಪ್ರೋತ್ಸಾಹಿಸಿದ ಜಿ.ಕೆ.ಗೋವಿಂದರಾವ್, ಲಿಂಗರಾಜು, ಎಸ್.ದಿವಾಕರ್, ಕೆ.ಜಿ.ಅನಂತರಿಗೆ ;

ತಮ್ಮ ಅನುವಾದಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಜಿ.ಎಸ್.ಸದಾಶಿವ, ಎಸ್.ದಿವಾಕರ್, ಜಯಶ್ರೀ ದಿವಾಕರ್, ಈಶ್ವರ ಚಂದ್ರ, ನರಹಳ್ಳಿ ಬಾಲಸುಬ್ರಹ್ಮಣ್ಯ, ಕೆ.ಶಾಮಲಾ, ಹಾ.ಮ.ಕನಕ ಹಾಗೂ ನಂದಾ ಇವರಿಗೆ;

ವಿಶ್ವಕಥಾಕೋಶದ ೨೪ನೆ ಸಂಪುಟದಿಂದ 'ಮಂಗಳವಾರ ಮಧ್ಯಾಹ್ನದ ಲಘು ನಿದ್ರೆ' ಕತೆಯ ಅನುವಾದವನ್ನು ಎತ್ತಿಕೊಳ್ಳಲು ಅನುಮತಿ ನೀಡಿದ ಮಿತ್ರರಾದ ನವಕರ್ನಾಟಕ ಪ್ರಕಾಶನದ ಆರ್.ಎಸ್.ರಾಜಾರಾಂ ಅವರಿಗೆ;

ಈ ಕೃತಿಯು ಸಿದ್ಧತೆಯ ಹಂತದಲ್ಲಿ ಸಹಕರಿಸಿದ ಮಿತ್ರರಾದ ಎಸ್.ಟಿ.ಉಗ್ರಾಣಕರ್, ಜಿ.ಧನಂಜಯಪ್ಪ ಹಾಗೂ ಬಿ.ಜಿ. ಚನ್ನೇಶ್ ಇವರಿಗೆ; ಅಕಾಡೆಮಿಯ ಅಧ್ಯಕ್ಷರು ಮತ್ತು ರಿಜಿಸ್ಟ್ರಾರ್ ಅವರಿಗೆ; ಅಕಾಡೆಮಿಯ ಎಲ್ಲ ಸದಸ್ಯರಿಗೆ;

ನನೆಗುದಿಯಲ್ಲಿ ಬಿದ್ದಿದ್ದ ಈ ವಾಚಿಕೆಯನ್ನು ಪ್ರಕಟಣೆಗೆ ಎತ್ತಿಕೊಂಡಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ನೆಲಮನೆ ದೇವೇಗೌಡರಿಗೆ; ಮುದ್ರಕ ಬಂಧುಗಳಿಗೆ; ರಕ್ಷಾಪುಟದ ಕಲಾವಿದರಿಗೆ -ಎಲ್ಲರಿಗೂ ಅನಂತ ಕೃತಜ್ಞತೆಗಳು.

- ಬಿದರಹಳ್ಳಿ ನರಸಿಂಹಮೂರ್ತಿ

ಕಾದಂಬರಿ

ಒಂಟಿತನದ ಒಂದು ನೂರು ವರುಷಗಳು

(ಆಯ್ದ ಭಾಗಗಳು)

ಎಷ್ಟೋ ವರುಷಗಳ ನಂತರ ಫೈರಿಂಗ್ ಸ್ಕ್ವಾಡಿನ ಎದುರು ನಿಂತಾಗ ಕರ್ನಲ್ ಆರೇಲಿಯಾನೊ ಬುಯೆಂಡಿಯನನ್ನು ಹಳೆಯ ನೆನಪುಗಳೆಲ್ಲ ಮುತ್ತಿಕೊಳ್ಳಲಿದ್ದವು. ಬಹಳ ಹಿಂದೆ ಒಂದು ಮಧ್ಯಾಹ್ನ ಅವರಪ್ಪ ಅವನನ್ನು ಕರೆದುಕೊಂಡು 'ಬರ್ಫ' ಎಂಬ ವಿಚಿತ್ರ ವಸ್ತುವನ್ನು ನೋಡಲು ಹೋಗಿದ್ದ. ಮಕಂಡೊ ಆ ದಿನಗಳಲ್ಲಿ ಬರಿ ಹತ್ತಿಪ್ಪತ್ತು ಹಸಿಯಿಟ್ಟಿಗೆ ಮನೆಗಳ ಹಳ್ಳಿಯಾಗಿತ್ತು. ಆ ಹಳ್ಳಿ ತಿಳಿನೀರ ಹೊಳೆದಂಡೆಯ ಮೇಲೆ ನಿಂತಿತ್ತು. ಆ ಹೊಳೆ ಪ್ರಾಗಿತಿಹಾಸದ ಭಾರಿ ಮೊಟ್ಟೆಗಳಂತೆ ಬೆಳ್ಳಗೆ ಮಿರುಗುತ್ತಿದ್ದ ಮಹಾಕಾಯದ ಬಂಡೆಗಳ ನಡುವೆ ಹರಿಯುತ್ತಿತ್ತು. ಆಗಿನ ಕಾಲದಲ್ಲಿ ಎಷ್ಟೊ ವಸ್ತುಗಳಿಗೆ ಸರಿಯಾದ ಹೆಸರುಗಳೇ ಇರಲಿಲ್ಲ. ಎಷ್ಟೋ ವಸ್ತುಗಳನ್ನು ಬೆರಳಿನಿಂದ ಮುಟ್ಟಿ ಮುಟ್ಟಿ ತೋರಿಸಿ ಮಾತಾಡಬೇಕಾಗಿತ್ತು. ಜಗತ್ತು ಬಲು ಹೊಚ್ಚಹೊಸದಾಗಿತ್ತು. ಪ್ರತಿ ಬೇಸಿಗೆಯಲ್ಲಿ ಹಯವರಟು ಜಿಪ್ಸಿಗಳ ತಂಡವೊಂದು ಹಳ್ಳಿಯ ಹೊರಗೆ ಟೆಂಟು ಹಾಕುತ್ತಿತ್ತು. ಅವರು ಹಿತ್ತಾಳೆ ಬ್ಯಾಂಡು ಬಾರಿಸುತ್ತ ಪಿಳ್ಳಂಗೋವಿ ಊದುತ್ತ ಹೊಸಹೊಸ ಅಚ್ಚರಿ ವಸ್ತುಗಳನ್ನು ಪ್ರದರ್ಶನಕ್ಕೆ ಇಡುತ್ತಿದ್ದರು. ಮೊಟ್ಟಮೊದಲು ಅವರು ತಂದದ್ದು ಅಯಸ್ಕಾಂತ. ಮೆಲ್ಕ್ವಿಯಡಿಸ್ ಎಂಬ ಮುಳ್ಳುಗಡ್ಡದ ದೊಡ್ಡ ಜಿಪ್ಸಿ ತನ್ನ ಗುಬ್ಬಿಕೈಗಳನ್ನ ಆಡಿಸುತ್ತ ಆ ಅಯಸ್ಕಾಂತ ಮ್ಯಾಸಿಡೋನಿಯದ ರಸವಿದ್ಯಾತಜ್ಞರ ಎಂಟನೆ ಅದ್ಭುತ ಶೋಧ ಎಂದು ವರ್ಣಿಸಿದ್ದ.

ಅವ ರಸ್ತೆಯ ಮೇಲೆ ಎರಡು ಲೋಹದ ಗಟ್ಟಿಗಳನ್ನು ಎಳೆದುಕೊಂಡು ಹೊರಟರೆ ಸಾಕು ಮನೆ ಮನೆಯಿಂದ ಕಬ್ಬಿಣದ ಕೊಡಪಾನಗಳು ತಂಡಾಸಗಳು, ಅಗ್ಗಿಷ್ಟಿಕೆಗಳು ಉರುಳಾಡಿ ಬಿದ್ದು ಓಡೋಡಿ ಬರುತ್ತಿದ್ದವು. ಎಲ್ಲಿರಿಗೂ ಗಾಬರಿಯಾಗುವಷ್ಟು ಅಚ್ಚರಿ ಉಂಟಾಗುತ್ತಿತ್ತು. ಮೊಳೆಗಳು ಹೊಡೆದಲ್ಲಿಂದ ಎದ್ದು ಬರಲು ಒದ್ದಾಡಿದಾಗ ತೊಲೆಗಳು ನೋವಿನಿಂದ ಕಿರುಗುಡುತ್ತಿದ್ದವು. ಕಳೆದು ಹೋಗಿದ್ದ ವಸ್ತುಗಳು ಹುಡುಕಾಡಿ ಕೈಬಿಟ್ಟ ಜಾಗಗಳಿಂದಲೇ ಬುದಂಗನೆ ಎದ್ದು ಮೆಲ್ಕ್ವಿಯಡಿಸ್‌ನ ಮಾಯಾಲೋಹದ ಸೆಳೆತಕ್ಕೊಳಗಾಗಿ ಪ್ರಚಂಡ ಕೋಲಾಹಲ ಮಾಡುತ್ತ ರಸ್ತೆ ಮೇಲೆ ದಿಬ್ಬಣ ಹೊರಡುತ್ತಿದ್ದವು. "ಎಲ್ಲಾ ವಸ್ತುಗೋಳಿಗೂ ಆತುಮಾ ಅನ್ನದು ಇರತ್ತೈತೆ. ಆತುಮಗಳನ್ನ ಎಬ್ಬರಿಸಿ ಬಿಟ್ಟರಾತು ಎದ್ದು ಬಂದು ಬಿಡತಾವೆ" ಎಂದು ಕರ್ಕಶವಾಗಿ ಕಿರುಚುತ್ತಿದ್ದ ಆ ಜಿಪ್ಸಿ. ಲಂಗು ಲಗಾಮು ಇರದ ಯೋಸ್ ಆರ್ಕೇಡಿಯೊ ಬುಯೆಂಡಿಯನ ಕಲ್ಪನಾಶಕ್ತಿಯು ನೈಸರ್ಗಿಕ ಬುದ್ಧಿಶಕ್ತಿಯನ್ನಷ್ಟೆ ಅಲ್ಲ ಪವಾಡಮಯ ಮಂತ್ರಶಕ್ತಿಯನ್ನೂ ಹಿಂದೆ ಹಾಕಿ ಬಿಡುತ್ತಿತ್ತು. ಅವನು ಕೆಲಸಕ್ಕೆ ಬಾರದ ಈ ಸಂಶೋಧನೆಯನ್ನು ಸರಿಯಾಗಿ ಬಳಸಿದರೆ ಭೂಗರ್ಭದಲ್ಲಿ ಅಡಗಿರುವ ಬಂಗಾರವನ್ನೆಲ್ಲ ಹೊರಗೆ ಎಳೆದುಬಿಡಬಹುದು ಎಂದು ತಲೆ ಓಡಿಸಿದ. ಪ್ರಾಮಾಣಿಕವಾಗಿದ್ದ ಮೆಲ್ಕ್ವಿಯಡಿಸ್ "ಇದು ಅಂತಾ ಕೆಲ್ಸಕ್ಕೆಲ್ಲ ಬರಾಕಿಲ್ಲ ಬಿಡ್ರಿ" ಎಂದು ಎಚ್ಚರಿಸಿದ. ಆದರೆ ಯೋಸ್ ಆರ್ಕೇಡಿಯೋ ಬುಯೆಂಡಿಯಗೆ ಜಿಪ್ಸಿಗಳ ಪ್ರಾಮಾಣಿಕತೆ ಬಗ್ಗೆ ಇನ್ನೂ ನಂಬಿಕೆ ಬಂದಿರಲಿಲ್ಲ. ತನ್ನ ಹೇಸರಗತ್ತೆ ಮತ್ತು ಒಂದು ಜೊತೆ ಆಡುಗಳನ್ನ ಕೊಟ್ಟು ಆ ಮಾಯಾಲೋಹದ ಗಟ್ಟಿಗಳನ್ನು ಸಾಟಿ ಮಾಡಿಕೊಂಡ. ಅವನ ಹೆಂಡತಿ ಉರ್ಸುಲಾ ಇಗಾರನ್ ಇದನ್ನು ತಪ್ಪಿಸಬೇಕೆಂದು ಎಷ್ಟು ಪ್ರಯತ್ನ ಮಾಡಿದರೂ ಆಗಲೆ ಇಲ್ಲ. ತಮ್ಮ ಬಡಕುಟುಂಬ ಆ ಪ್ರಾಣಿಗಳಿಂದಾಗಿ ಸುಧಾರಿಸಬಹುದು ಅಂದುಕೊಂಡಿದ್ದಳು. "ನೋಡ್ತಿರು, ಇಷ್ಟರೊಳಗೇ ನೆಲಕ್ಕೆಲ್ಲ ಹಾಸುವಷ್ಟು ಬಂಗಾರ ಬಂದು ಬೀಳ್ತದೆ ನಮ್ಮನಿಗೆ" ಅಂದ ಯೋಸ್ ಆರ್ಕೇಡಿಯೊ ಬುಯೆಂಡಿಯ ತಾನು ನಂಬಿದ್ದು ಸತ್ಯ ಎಂದು ಸಿದ್ಧ ಮಾಡಲು ತಿಂಗಳುಗಟ್ಟಲೆ ಒದ್ದಾಡಿದ. ಮೇಲ್ಕ್ವಿಯಡಿಸ್ ಹೇಳಿಕೊಟ್ಟಿದ್ದ ಮಂತ್ರವನ್ನು ಜೋರಾಗಿ ಹೇಳುತ್ತ ಮಾಯಾಲೋಹದ ಗಟ್ಟಿಗಳನ್ನು ಎಳೆದುಕೊಂಡು ಊರೆಲ್ಲ ಸುತ್ತಿ ನದಿದಂಡೆಯೆಲ್ಲ ಅಂಡಲೆದ. ಹುಗಿದು ಹೋಗಿದ್ದ ಹದಿನೈದನೆ ಶತಮಾನದ ಒಂದು ಉಕ್ಕಿನ ಕವಚ ಮಾತ್ರ ಹೊರಗೆ ಬಂತು. ಅದರ ಭಾಗಗಳು

ತುಕ್ಕಿಡಿದು ಒಂದಕ್ಕೊಂದು ಅಂಟಿಕೊಂಡಿತ್ತು. ಅದರ ಟೊಳ್ಳು ಶರೀರ ಕಲ್ಲು ಹರಳು ತುಂಬಿಸಿದ ಸೋರೆ ಬುರುಡೆಯಂತೆ ಸದ್ದು ಮಾಡುತ್ತಿತ್ತು. ನಾಲ್ವರು ಸಂಗಡಿಗರೊಡನೆ ಕಷ್ಟಪಟ್ಟು ಯೋಸ್ ಅದನ್ನ ತೆರೆದಾಗ ಅದರೊಳಗೆ ಸುಣ್ಣಗಟ್ಟಿದ ಅಸ್ಥಿಪಂಜರವಿತ್ತು. ಅಸ್ಥಿಪಂಜರದ ಕುತ್ತಿಗೆಗೆ ನೇತಿದ್ದ ತಾಮ್ರ ಪದಕದ ಡಬ್ಬಿಯಲ್ಲಿ ಯಾವುದೋ ಹೆಂಗಸಿನ ಕೂದಲಿತ್ತು.

ಮಾರ್ಚಿಯಲ್ಲಿ ಜಿಪ್ಸಿಗಳು ಮತ್ತೆ ಬಂದರು. ಈ ಸಲ ಅವರೇ ದೂರದರ್ಶಕ ಹಾಗು ತವಟೆಯಗಲದ ಭೂತಗಾಜು ತಂದು ಪ್ರದರ್ಶನಕ್ಕಿಟ್ಟರು. ಅವು ಆಮ್‌ಸ್ಟರ್‌ಡಾಮಿನ ಯಹೂದಿಗಳ ಹೊಸ ಶೋಧಗಳು ಎಂದರು. ಹಳ್ಳಿಯ ಆಚೆ ತುದಿಗೆ ಒಬ್ಬ ಜಿಪ್ಸಿ ಹೆಂಗಸನ್ನು ನಿಲ್ಲಿಸಿ ಈಚೆಗೆ ಟೆಂಟಿನ ಪ್ರವೇಶದಲ್ಲಿ ದೂರದರ್ಶನ ಇಟ್ಟು ಐದು ರಿಯೋಲ್ ಕೊಟ್ಟವರಿಗೆಲ್ಲ ನೋಡಲು ಬಿಟ್ಟರು. ಅದರ ಮೂಲಕ ನೋಡಿದಾಗ ಆ ಜಿಪ್ಸಿ ಹೆಂಗಸು ಬರಿ ಒಂದು ಮೊಳದೂರದಲ್ಲಿ ನಿಂತಿರುವಂತೆ ಕಾಣುತ್ತಿತ್ತು. "ದೂರ ಅನ್ನದನ್ನೆ ಇಲ್ಲದಂಗೆ ಮಾಡ್ಯೆತಿ ಇಜ್ಞಾನ. ಮನ್ಸ ತನ್ ಮನಿಯಾಗೆ ಕುಂತಕಂಡು ಪರ್‌ಪಂಚದ ಯಾಯಾ ಭಾಗದಾಗೆ ಏನೇನಾಗತ್ಯೆತಿ ಅನ್ನದನ್ನ ನೋಡೊಂತಾ ದಿಂವ್ಸನೂ ಬರತ್ಯೆತಿ" ಎಂದು ಘೋಷಿಸಿದ ಮೆಲ್ಕ್ವಿಯಡಿಸ್. ಒಂದು ರಣರಣ ಮಧ್ಯಾಹ್ನ ರಸ್ತೆ ಮಧ್ಯ ಒಣಹುಲ್ಲಿನ ಪೆಂಡಿಗಳನ್ನ ಒಟ್ಟಿ ದೈತ್ಯಗಾತ್ರದ ಭೂತಗಾಜಿಗೆ ಸೂರ್ಯ ಕಿರಣಗಳನ್ನು ಸೆಳೆದು ಹುಲ್ಲಿಗೆ ಬೆಂಕಿ ಹಚ್ಚಿಬಿಟ್ಟ. ಅಯಸ್ಕಾಂತ ಸಾಹಸದ ಸೋಲನ್ನಿನ್ನೂ ಒಪ್ಪಿಕೊಂಡಿರದಿದ್ದ ಯೋಸ್ ಆರ್ಕೇಡಿಯೊ ಬುಯೆಂಡಿಯ ಭೂತಗಾಜಿನ ಅದ್ಭುತ ಶಕ್ತಿಗೆ ಮನಸೋತ. ಅದು ಅವನಿಗೆ ಪ್ರಚಂಡ ಯುದ್ಧಾಸ್ತ್ರವಾಗಿ ಕಂಡಿತು. ಅವನ ಉತ್ಸಾಹವನ್ನು ತಣ್ಣಗೆ ಮಾಡಲಾಗದ ಮೆಲ್ಕ್ವಿಯಡಿಸ್ ತಾನೆ ಕೊಟ್ಟ ಅಯಸ್ಕಾಂತದ ಗಟ್ಟಿಗಳನ್ನು ವಾಪ್‌ಸ್ ಇಸ್ಕೊಂಡು ಮೇಲೆ ಮೂರು ವಸಾಹತು ಕಾಲದ ನಾಣ್ಯಗಳನ್ನು ಇಸ್ಕೊಂಡು ಆ ಭೂತಗಾಜನ್ನು ಅವನಿಗೆ ಮಾರಿದ. ಉರ್ಸುಲ ಗಳಗಳ ಅತ್ತಳು. ಅವಳಪ್ಪ ಜೀವಮಾನವಿಡಿ ದರಿದ್ರನಂತೆ ಬದುಕಿ ಕೂಡಿಟ್ಟಿದ್ದ ಬಂಗಾರದ ನಾಣ್ಯಗಳ ಸಂಪೂಷ್ಟದಿಂದ ಆ ನಾಣ್ಯಗಳನ್ನು ಕದ್ದಿದ್ದ ಅವಳ ಗಂಡ. ಗುಪ್ತವಾಗಿ ತನ್ನ ಹಾಸಿಗೆ ಕೆಳಗೆ ಅದನ್ನು ಹೂತಿಟ್ಟಿದ್ದ ಉರ್ಸುಲ ಸದುಪಯೋಗದ ಮುಹೂರ್ತಕ್ಕಾಗಿ ಕಾಯುತ್ತಿದ್ದಳು. ಯೋಸ್ ಅವಳನ್ನೇನು ಸಮಾಧಾನ ಮಾಡುವ ಗೋಜಿಗೆ ಹೋಗಲಿಲ್ಲ. ವಿಜ್ಞಾನಿಗೆ ಹೇಳಿಸಿದ ನಿರ್ಮಮಕಾರದಲ್ಲಿ ಕೂಟಯುದ್ಧದ ಪ್ರಯೋಗಗಳಲ್ಲಿ

ತಲ್ಲೀನನಾಗಿ ಬಿಟ್ಟ. ಶತ್ರು ಪಡೆಯ ಮೇಲೆ ಭೂತಗಾಜು ಉಂಟುಮಾಡಬಹುದಾದ ಪರಿಣಾಮವನ್ನು ತೋರಿಸಲು ಜೀವದ ಹಂಗನ್ನೂ ತೆರೆದು ಪ್ರಯತ್ನಿಸುವಾಗ, ತನ್ನ ಮೇಲೆ ತಾನೆ ಸೂರ್ಯಶಾಖವನ್ನು ಕೇಂದ್ರೀಕರಿಸಿಕೊಂಡು ಮೈಮೇಲೆಲ್ಲ ಸುಟ್ಟಗಾಯಗಳನ್ನು ಮಾಡಿಕೊಂಡ. ಅವುಗಳ ತುಂಬ ಕೀವು ತುಂಬಿ ವಾಸಿಯಾಗಲು ಸಾಕಷ್ಟು ಕಾಲ ಹಿಡಿಯಿತು. ಅಂಥ ಭಯಾನಕ ಸಂಶೋಧನೆಯಿಂದ ದಿಗ್ಭ್ರಾಂತಳಾದ ಹೆಂಡತಿ ಅದನ್ನ ವಿರೋಧಿಸಿದಾಗ ಇಡಿ ಮನೆಯನ್ನೆ ಸುಟ್ಟುಬಿಡಲು ಹೊರಟಿದ್ದ. ಎಷ್ಟೊ ತಾಸುಗಳವರೆಗೆ ಕೂಟ ತಂತ್ರದ ಲೆಕ್ಕಾಚಾರ ಮಾಡುತ್ತ ತನ್ನ ಕೋಣೆಯಲ್ಲೆ ಕೂತುಬಿಡುತ್ತಿದ್ದ. ಅಂತೂ ಕೊನೆಗೆ ಆ ಹೊಸ ಅಸ್ತ್ರವನ್ನು ಬಳಸುವ ಭಯಾನಕ ವಿಧಾನಗಳನ್ನು ವಿವರಿಸುವ ಒಂದು ಪುಸ್ತಕ ಬರೆದ. ಪ್ರತಿಯೊಂದು ಅಂಶವನ್ನೂ ಅದರಲ್ಲಿ ನಿಖರವಾಗಿ ಚರ್ಚಿಸಿದ್ದ. ಒಬ್ಬ ಆಳನ್ನು ಗೊತ್ತುಮಾಡಿ ಅವನ ಕೈಲಿ ಆ ಪುಸ್ತಕವನ್ನೂ, ಕೆಲವು ಉಪಯುಕ್ತ ಮಾದರಿ ಚಿತ್ರಗಳ ಹಾಳೆಗಳನ್ನೂ ಸರ್ಕಾರಕ್ಕೆ ಕಳಿಸಿಕೊಟ್ಟ. ಆ ಆಳು ಪರ್ವತಗಳನ್ನು ದಾಟಿ, ಮುಗಿಯದ ಜವುಗುಗಳಲ್ಲಿ ಕಳೆದು ಹೋಗಿ, ಬಿರುಗಾಳಿಯಿಂದಾಗಿ ಅಬ್ಬರಿಸುವ ನದಿಗಳನ್ನೆಲ್ಲ ದಾಟಿ ಪ್ಲೇಗು, ಕ್ರೂರಪ್ರಾಣಿಗಳು, ಎಂತೆಂಥವೊ ಕಷ್ಟಗಳಿಗೆಲ್ಲ ಸಿಕ್ಕು ಸತ್ತೇಹೋದ ಎನ್ನುವಷ್ಟರಲ್ಲಿ ಒಂದು ದಾರಿ ಕಂಡಿತು. ಆ ದಾರಿ ಅಂಚೆಯ ಮ್ಯೂಲ್‌ಗಳು ಓಡಾಡುವ ಮತ್ತೊಂದು ದಾರಿಗೆ ಒಯ್ದು ಮುಟ್ಟಿಸಿತು. ಆ ಕಾಲದಲ್ಲಿ ರಾಜಧಾನಿಗೆ ಹೋಗಿಬರುವುದೆಂದರೆ ಅಸಾಧ್ಯದ ಮಾತಾಗಿತ್ತು. ಆದರೂ ಸರ್ಕಾರ ಹೂಂ ಎಂದ ಕೂಡಲೆ ತಾನು ಬಂದು ತನ್ನ ಶೋಧನೆಯ ಪ್ರಾಯೋಗಿಕ ಪ್ರದರ್ಶನ ನೀಡುವುದಾಗಿಯೂ, ಮಿಲಿಟರಿ ಮುಖಂಡರನ್ನು ಸೌರಯುದ್ಧದ ಸಂಕೀರ್ಣ ಕಲೆಯಲ್ಲಿ ನಿಷ್ಣಾತರನ್ನಾಗಿಸುವ ತರಬೇತಿ ನೀಡುವುದಾಗಿಯೂ ಯೋಸ್ ಆರ್ಕೇಡಿಯೊ ಬಯೆಂಡಿಯ ಭರವಸೆ ನೀಡಿದ್ದ. ಉತ್ತರಕ್ಕಾಗಿ ಬಹಳ ವರ್ಷ ಕಾದು, ಕಡೆಗೆ ಮೆಲ್ಕ್ವಿಯಡಿಸ್ ಬಳಿ ತನ್ನ ಕೈಗೂಡದ ಯೋಜನೆಯಿಂದ ತನಗಾದ ನಿರಾಶೆಯನ್ನು ತೋಡಿಕೊಂಡ. ಆ ಜಿಪ್ಸಿ ತನ್ನ ಪ್ರಾಮಾಣಿಕತೆಗೆ ಪುರಾವೆ ನೀಡುವಂತೆ ಆ ಭೂತಗಾಜನ್ನು ವಾಪಸ್ ಇಸ್ಕೊಂಡು ಅವನ ವಸಾಹತುಕಾಲದ ನಾಣ್ಯಗಳನ್ನು ಅವನಿಗೆ ಕೊಟ್ಟು ಬಿಟ್ಟ. ಜೊತೆಗೆ ಪೋರ್ಚುಗೀಸ್ ಭೂಪಟಗಳನ್ನೂ ನೌಕಾಯಾನದ ಉಪಕರಣಗಳನ್ನು ಕೊಟ್ಟ. ಮಾಂಕ್ ಹರ್ಮನನ್ನ ಅಧ್ಯಯನ ಸಾರವನ್ನು ತನ್ನ ಕೈಬರಹದಲ್ಲೆ ಬರೆದುಕೊಟ್ಟು, ಆ ಆಸ್ಟ್ರಲೇಬ್, ಕಂಪಾಸ್

ಚೆಲುವೆ ರೆಮಿಡಿಯೋಸ್ ಒಂಟಿತನದ ಮರಳುಗಾಡಿನಲ್ಲೆ ಅಲೆಯುತ್ತ ಇದ್ದುಬಿಟ್ಟಿದ್ದಳು. ಬೆನ್ನಮೇಲೆ ಯಾವ ಶಿಲುಬೆಯನ್ನೂ ಹೊತ್ತಿರದ ಆ ಚೆಲುವೆ ಹಳವಂಡಗಳಿರದ ಕನಸುಗಳಲ್ಲಿ, ಕೊನೆಯಿರದ ಸ್ನಾನಗಳಲ್ಲಿ, ಹೊತ್ತುಗೊತ್ತಿಲ್ಲದ ಊಟಗಳಲ್ಲಿ, ನೆನಪುಗಳೆ ಇರದ ಆಳವಾದ ಮತ್ತು ನೀಳವಾದ ಮನಗಳಲ್ಲಿ ಮೆಲ್ಲಗೆ ಮಾಗುತ್ತ ಬಂದಿದ್ದಳು. ಮಾರ್ಚಿ ತಿಂಗಳ ಒಂದು ಮಧ್ಯಾಹ್ನ ತೋಟದಲ್ಲಿ ಹಾಸಿದ್ದ ಬ್ರ್ಯಾಬಂಟ್ ನಾರಗಸೆ ಜಮಖಾನೆಯನ್ನು ಮಡಿಸಿಡಲು ಫರ್ನಾಂಡಾ, ಉಳಿದ ಹೆಂಗಸರನ್ನು ಕರೆದಳು. ಮಡಿಸ ಹೊರಟಾಗ ಚೆಲುವೆ ರೆಮಿಡಿಯೋಸ್ ಪುಟ್ಟಪೂರಾ ಬಿಳಿಚಿಕೊಂಡಿರುವಂತೆ ಕಂಡು ಅಮೆರಾಂಟಾ ಕೇಳಿದಳು "ಆರಾಮಿಲ್ಲವಾ"? ಎಂದು. ಜಮಖಾನೆಯನ್ನು ಹಿಡಿದುಕೊಂಡಿದ್ದ ಚೆಲುವೆ ರೆಮಿಡಿಯೋಸ್ ಕರುಣಾರ್ದ್ರವಾಗಿ ಮುಗಳುನಕ್ಕು "ಇವತ್ತಿನಷ್ಟು ಆರಾಮು ಯಾವತ್ತೂ ಇರಲಿಲ್ಲ", ಎಂದಳು. ಅವಳು ಅಷ್ಟು ಹೇಳುವಷ್ಟರಲ್ಲೆ ಬೆಳಕುಳ್ಳ ಗಾಳಿಯ ಒಂದು ಕೋಮಲ ಅಲೆ ಬೀಸಿ ಬಂದು ಫರ್ನಾಂಡಾಳ ಕೈಯಿಂದ ಜಮಖಾನೆಯನ್ನು ಕಿತ್ತುಕೊಂಡು ಅಗಲವಾಗಿ ಹರಡಿಬಿಟ್ಟಿತು. ಅಮೆರಾಂಟಾಳ ಒಳಲಂಗದ ಅಂಚುಗಳಲ್ಲಿ ನಿಗೂಢ ಕಂಪನ ಉಂಟಾಯಿತು. ಬೀಳದಂತೆ ಜಮಖಾನವನ್ನು ಹಿಡಿದುಕೊಳ್ಳಲು ಹೆಣಗಿದಳು. ಅಷ್ಟರಲ್ಲಿ ಜಮಖಾನೆಯ ಮಧ್ಯದಲ್ಲಿದ್ದ ಚೆಲುವೆ ರೆಮಿಡಿಯೋಸ್ ಅದರ ಸಮೇತ ಮೆಲ್ಲಗೆ ಮೇಲೇರಲಾರಂಭಿಸಿದಳು. ಆಗಲೆ ಪೂರ್ತಿ ಕುರುಡಿಯಾಗಿ ಹೋಗಿದ್ದ ಉರ್ಸುಲಾ ಒಬ್ಬಳು ಮಾತ್ರ ಆ ನಿಶ್ಚಯಿಸಿಬಿಟ್ಟಿದ್ದ ಗಾಳಿಯ ಸ್ವಭಾವವನ್ನು ತಣ್ಣಗೆ ಅರ್ಥಮಾಡಿಕೊಂಡು ಸುಮ್ಮನೆ ಆ ಜಮಖಾನೆಯನ್ನು ಬೆಳಕಿನ ಕೈಗೆ ಕೊಟ್ಟುಬಿಟ್ಟಳು. ಅಂಚುಗಳನ್ನ ಬೀಸುತ್ತ ತನ್ನನ್ನು ಹೊತ್ತೊಯ್ಯುತ್ತಿದ್ದ ಜಮಖಾನೆಯ ಮಧ್ಯದಲ್ಲಿದ್ದ ಚೆಲುವೆ ರೆಮಿಡಿಯೋಸ್ ವಿದಾಯ ಹೇಳುವಂತೆ ಕೈಬೀಸುತ್ತಿರುವುದನ್ನೇ ನೋಡುತ್ತಾ ನಿಂತುಬಿಟ್ಟಳು. ಅವಳಿದ್ದ ಜೀರುಂಡೆಗಳ, ಡೇಲಿಯಾಗಳ ಪರಿಸರವನ್ನು ತ್ಯಜಿಸಿ ಗಾಳಿಯಗುಂಟ ಮೇಲೇರುತ್ತಿದ್ದಾಗ ಸಂಜೆಯ ನಾಕು ಗಂಟೆ ಹೊಡೆಯುವ ಹೊತ್ತಾಗಿತ್ತು. ತುಂಬಾ ಎತ್ತರಕ್ಕೆ ಹಾರುವ ನೆನಪಿನ ಹಕ್ಕಿಗಳೂ ಹಾರಲಾಗದ ಎತ್ತರದಲ್ಲಿ, ವಾತಾವರಣದ ಅಂಚಿನಲ್ಲಿ ಹಾರುತ್ತ, ಆ ಜಮಖಾನೆಯ ಸಮೇತ ಚೆಲುವೆ ರೆಮಿಡಿಯೋಸ್ ಮತ್ತೆಂದೂ ಯಾರ ಕಣ್ಣಿಗೂ ಬೀಳದಂತೆ ಮಾಯವಾಗಿಹೋದಳು.

(ಪುಟ ೧೯೫)

❄ ❄ ❄

''ಎಂಥಾ ಮಳೆ'' ಎಂದಳು ಉರ್ಸುಲಾ.

"ಅಕ್ಟೋಬರ್" ಎಂದ ಅವನು.

ಹಾಗೆ ಹೇಳುವಾಗ ಅವನು ಅವತ್ತಿನ ಮೊದಲ ಮೀನಿನಿಂದ ಯಾಕೆ ತನ್ನ ಕಣ್ಣೆತ್ತಿನೋಡಲಿಲ್ಲ ಎಂದರೆ ಅದರ ಕಣ್ಣಿನಲ್ಲಿ ಪದ್ಮರಾಗದ ಪುಟಾಣಿ ಹರಳು ಕೂರಿಸುತ್ತಿದ್ದ. "ಅದನ್ನ ಮಾಡಿ ಮುಗಿಸಿ ಆ ಮೀನನ್ನ ಡಬರಿಯಲ್ಲಿದ್ದ ಇತರ ಮೀನುಗಳ ಜೊತೆ ಇರಿಸಿದ ಮೇಲೆಯೆ ಅವನು ಸೂಪು ಕುಡಿದದ್ದು. ನಂತರ ತುಂಬ ನಿಧಾನವಾಗಿ ಈರುಳ್ಳಿ ಹಾಕಿ ಬೇಯಿಸಿದ ಮಾಂಸದ ತುಂಡು, ಬಿಳಿ ಅನ್ನವನ್ನು ಬಾಳೆಕಾಯಿಯ ಉಪ್ಪೇರಿ ಜೊತೆ ನೆಂಚಿಕೊಳ್ಳುತ್ತ ತಿಂದ. ಹದವಾದ ಸಂದರ್ಭವಾಗಿರಲಿ ಹದಗೆಟ್ಟ ಸಂದರ್ಭವಾಗಿರಲಿ ಅವನ ಹಸಿವಿನಲ್ಲಿ ಯಾವುದೇ ಏರುಪೇರು ಉಂಟಾಗುತ್ತಿರಲಿಲ್ಲ. ಊಟದ ನಂತರ ಜಡದ ಮಂಪರು ಅವನನ್ನು ಕವಿಯಿತು. ಉಂಡದ್ದೆಲ್ಲ ಎರಡು ತಾಸು ಜೀರ್ಣವಾಗುವವರೆಗೆ ಯಾವುದೆ ಕೆಲಸ ಮಾಡಬಾರದು, ಏನನ್ನೂ ಓದಬಾರದು, ಸ್ನಾನ ಮಾಡಬಾರದು, ಕಡೆಗೆ ಮೈಥುನದಲ್ಲೂ ತೊಡಗಬಾರದು ಎಂಬ ವೈಜ್ಞಾನಿಕ ಮೂಢನಂಬಿಕೆ ಇತ್ತು ಅವನಿಗೆ. ಆ ನಂಬಿಕೆ ಎಷ್ಟು ಆಳವಾಗಿ ಬೇರು ಬಿಟ್ಟಿತ್ತೆಂದರೆ ಯುದ್ಧರಂಗದಲ್ಲಿ ಕೂಡ ತನ್ನ ತುಕುಡಿಗಳನ್ನ ಅಜೀರ್ಣದ ತೊಂದರೆಗೆ ಒಡ್ಡಬಾರದೆಂಬ ಉದ್ದೇಶದಿಂದ ಯುದ್ಧದ ಚಟುವಟಿಕೆಗಳನ್ನು ಎರಡು ತಾಸು ನಿಲ್ಲಿಸಿಬಿಡುತ್ತಿದ್ದ. ಆದ್ದರಿಂದಲೆ ಒಂದು ಪೆನ್ ನೈಫಿನಿಂದ ಕಿವಿಯೊಳಗಿನ ಗುಣಿ ತೆಗೆದುಕೊಳ್ಳುತ್ತ ತೂಗುಹಾಸಿಗೆಯಲ್ಲಿ ಒರಗಿದ. ಕೆಲವೆ ನಿಮಿಷಗಳಲ್ಲಿ ಅವನಿಗೆ ನಿದ್ದೆ ಹತ್ತಿತು. ಬಿಳಿಗೋಡೆಗಳಿದ್ದ ಒಂದು ಖಾಲಿ ಮನೆಯಲ್ಲಿ ಒಬ್ಬನೆ ಓಡಾಡುತ್ತಿರುವಂತೆ ಕನಸು ಕಂಡ. ತಾನೆ ಆ ಮನೆಯನ್ನು ಪ್ರವೇಶಿಸುತ್ತಿರುವ ಮೊದಲ ಮನುಷ್ಯಜೀವಿ ಎಂಬ ಭಾವನೆಯಿಂದ ಕಳವಳಗೊಂಡ. ಹಿಂದಿನ ರಾತ್ರಿ ಮತ್ತು ಅದರ ಹಿಂದಿನ ಎಷ್ಟೋ ರಾತ್ರಿ ಅದೇ ಕನಸು ಬಿದ್ದಿತ್ತು ಎಂಬುದು ಆ ಕನಸಿನಲ್ಲಿ ಅವನಿಗೆ ನೆನಪಾಯಿತು. ಎಷ್ಟೊ ವರ್ಷಗಳಿಂದ ಬೀಳುತ್ತಿದ್ದ ಆ ಕನಸಿನ ಚಿತ್ರ ತಾನು ಎಚ್ಚರಗೊಂಡಕೂಡಲೆ ನೆನಪಿನಿಂದ ಅಳಿಸಿ ಹೋಗುತ್ತದೆ ಎಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಯಾಕೆಂದರೆ ಕನಸಿನೊಳಗೆ ಮಾತ್ರ ನೆನಪಾಗುವುದೆ ಆ ಪದೆ ಪದೆ ಬೀಳುತ್ತಿದ್ದ ಕನಸಿನ ಲಕ್ಷಣವಾಗಿತ್ತು. ಮಲಗಿ ಒಂದು ಕ್ಷಣವಾಗಿತ್ತೋ ಇಲ್ಲವೊ ಅಷ್ಟರಲ್ಲಿ ಕ್ಷೌರಿಕ ಬಂದು ಕುಲುಮೆಯ ಬಾಗಿಲು ತಟ್ಟಿದ. ಕರ್ನಲ್ ಆರೇಲಿಯಾನೊ ಬಯೆಂಡಿಯ ತನಗೆ ಅರಿವಿಲ್ಲದೆ

ಬಂದುಬಿಟ್ಟಿದ್ದ ಆ ನಿದ್ದೆಯಲ್ಲಿ ಕನಸು ಕಾಣಲು ಪುರಸೊತ್ತೆ ಇರಲಿಲ್ಲವಲ್ಲ ಎಂದು ಕೊಳ್ಳುತ್ತ ಎದ್ದ.

"ಇವತ್ತು ಬೇಡ ಶುಕ್ರವಾರ ನೋಡೋಣ" ಎಂದು ಕ್ಷೌರಿಕನಿಗೆ ಹೇಳಿದ.

(ಪುಟ ೨೧೭)

❄ ❄ ❄

ಪ್ರಜ್ಞೆ ಬಂದಾಗ ಯೋಸ್ ಆರ್ಕೇಡಿಯೊ ಸೆಗಂಡೊ ಕತ್ತಲಲ್ಲಿ ಅಂಗಾತ ಮಲಗಿದ್ದ. ಶಬ್ದವನ್ನೆ ಮಾಡದ ಕೊನೆಯೆ ಇಲ್ಲದ ರೈಲಿನಲ್ಲಿ ತಾನು ಪ್ರಯಾಣಿಸುತ್ತಿರುವುದು ಅರಿವಿಗೆ ಬಂತು. ತಲೆ ಹೆಪ್ಪುಗಟ್ಟಿದ ರಕ್ತದಿಂದ ಜಡೆಗಟ್ಟಿತ್ತು. ಮೈ ಮೂಳೆಗಳೆಲ್ಲ ನೋಯುತ್ತಿದ್ದವು. ತಡೆದುಕೊಳ್ಳಲಾರದಂಥ ನಿದ್ದೆ ಆವರಿಸಿತು. ಎಲ್ಲ ಭಯಗಳನ್ನೂ ಬದಿಗೊತ್ತಿ ಗಂಟೆಗಟ್ಟಲೆ ನಿದ್ದೆ ಮಾಡಬೇಕೆಂಬ ಬಯಕೆಯಿಂದ ನೋವು ಕಮ್ಮಿ ಇದ್ದ ಮಗ್ಗುಲಿಗೆ ಹೊರಳಿದ. ಆಗಲೆ ಅವನಿಗೆ ಅರಿವಾದದ್ದು ತಾನು ಮಲಗಿರುವುದು ಸತ್ತ ಜನಗಳ ಮೈಮೇಲೆ ಎಂದು. ಮಧ್ಯೆ ಒಡಾಡಲು ಇದ್ದ ಕಿರುದಾರಿ ಬಿಟ್ಟರೆ ಇಡಿ ಬೋಗಿಯಲ್ಲಿ ಒಂದಿಂಚೂ ಜಾಗವಿರಲಿಲ್ಲ. ಹತ್ಯಾಕಾಂಡ ನಡೆದು ಸಾಕಷ್ಟು ಸಮಯವಾಗಿರಬೇಕು. ಯಾಕೆಂದರೆ ಹೆಣಗಳು ಪ್ಲಾಸ್ಟರ್ ಶರತ್ಕಾಲದಲ್ಲಿ ತಣ್ಣಗಿರುತ್ತದಲ್ಲ ಅಷ್ಟು ತಣ್ಣಗಾಗಿದ್ದವು. ಪ್ಲಾಸ್ಟರಿನೊಳಗಿನ ಗಂಟುಕಟ್ಟಿದ ಬೂರುಗದಂತೆ ಜಡ್ಡುಗಟ್ಟಿ ಶೆಟೆದು ಕೊಂಡಿದ್ದವು. ಬೋಗಿಯಲ್ಲಿ ಬಾಳೆಹಣ್ಣುಗಳನ್ನು ಸಾಗಿಸುವಾಗ ಪೇರಿಸುವ ಅವಸರದಲ್ಲೆ ಹೆಣಗಳನ್ನು ಪೇರಿಸಿದ್ದರು. ಈ ಹಳವಂಡದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಯೋಸ್ ಆರ್ಕೇಡಿಯೊ ಸೆಗಂಡೊ ರೈಲು ಓಡುತ್ತಿದ್ದ ಹಾಗೆಯೆ ಬೋಗಿಯಿಂದ ಬೋಗಿಗೆ ಕಾಲೆಳೆದುಕೊಂಡು ಹೊರಟ. ಮಲಗಿದ್ದ ಊರುಗಳನ್ನು ಹಾದು ಹೋಗುವಾಗ ರೈಲಿನ ಕಿಟಕಿ ಚೌಕಟ್ಟುಗಳಿಂದ ನುಗ್ಗಿ ಬರುತ್ತಿದ್ದ ಬೆಳಕಿನಲ್ಲಿ ಕೊಳೆತ ಬಾಳೆಹಣ್ಣುಗಳನ್ನ ಆರಿಸಿ ಬಿಸಾಡುವಂತೆ ಸಮುದ್ರಕ್ಕೆ ಎಸೆಯಲೆಂದು ಸಾಗಿಸುತ್ತಿದ್ದ ಗಂಡು ಹೆಣಗಳು, ಹೆಣ್ಣು ಹೆಣಗಳು ಮಕ್ಕಳ ಹೆಣಗಳನ್ನ ಕಂಡ. ಚೌಕದಲ್ಲಿ ಹೆಂಡ ಮಾರುತ್ತಿದ್ದ ಹೆಂಗಸು ಹಾಗು ಮೊರಿಲಿಯ ಬೆಳ್ಳಿ ಬಕಲ್ಲಿನ ಬೆಲ್ಟನ್ನು ಕೈಗೆ ಸುತ್ತಿಕೊಂಡು ಬೀಸುತ್ತ ಭಯಭೀತಿ ಜನಜಂಗುಳಿಯಿಂದ ಹೊರಹೋಗಲು ನೋಡುತ್ತಿದ್ದ ಕರ್ನಲ್ ಗ್ಯಾವಿಲನ್ ಇವರಿಬ್ಬರ ಗುರ್ತು ಮಾತ್ರ ಸಿಕ್ಕಿತು. ಮೊದಲ ಬೋಗಿಗೆ ಬಂದವನೆ ಹೊರಗಿನ ಕತ್ತಲೆಗೆ ಹಾರಿಕೊಂಡು ರೈಲು ಮುಂದೆ ಸಾಗುವವರೆಗು

ಹಳಿಗಳ ಬದಿಯಲ್ಲೆ ಸುಮ್ಮನೆ ಬಿದ್ದುಕೊಂಡ. ಅಂಥ ಉದ್ದಾನುದ್ದ ರೈಲನ್ನು ಅವನು ಎಂದೂ ನೋಡಿರಲಿಲ್ಲ. ಹತ್ತಿರ ಹತ್ತಿರ ಇನ್ನೂರು ಸರಕು ಸಾಗಣೆ ಬೋಗಿಗಳಿದ್ದವು. ಹಿಂದೊಂದು ಮುಂದೊಂದು ಮಧ್ಯದಲ್ಲೊಂದು ಒಟ್ಟು ಮೂರು ಎಂಜಿನ್ನುಗಳಿದ್ದವು. ರೈಲಿಗೆ ತಲೆದೀಪಗಳೂ ಇರಲಿಲ್ಲ ಹಸಿರು ಕೆಂಪು ದಾರಿದೀಪಗಳೂ ಇರಲಿಲ್ಲ. ಕಳ್ಳನ ಹಾಗೆ ನಿಶಾಚರ ವೇಗದಲ್ಲಿ ನುಸುಳಿ ಹೋಗುತ್ತಿತ್ತು ರೈಲು. ಬೋಗಿಗಳ ಮೇಲೆ ಮೆಶಿನ್‌ಗನ್ ಹಿಡಿದ ಸೈನಿಕರ ಕಪ್ಪು ಆಕೃತಿಗಳು ಅಲುಗಾಡದೆ ನಿಂತಿದ್ದವು.

ಮಧ್ಯರಾತ್ರಿಯ ಹೊತ್ತಿಗೆ ಧೋ ದೋ ಮಳೆ ಸುರಿಯತೊಡಗಿತು. ತಾನು ಹಾರಿದ್ದು ಯಾವ ಊರಿನ ಹತ್ತಿರ ಎಂದು ಯೋಸ್ ಆರ್ಕೇಡಿಯೊ ಸೆಗಂಡೊಗೆ ತಿಳಿಯಲಿಲ್ಲ. ಆದರೆ ರೈಲು ಹೋಗುತ್ತಿರುವುದರ ವಿರುದ್ಧ ದಿಕ್ಕಿಗೆ ಹೋದರೆ ಮಕಂಡೊ ಸಿಗುತ್ತದೆ ಎಂಬುದಷ್ಟು ಗೊತ್ತಿತ್ತು. ತಲೆ ವಿಪರೀತ ಸಿಡಿಯತೊಡಗಿತ್ತು. ತಪತಪ ತೊಯ್ಸಿಕೊಳ್ಳುತ್ತ ಮೂರುಗಂಟೆಗಿಂತ ಹೆಚ್ಚು ಹೊತ್ತು ನಡೆಯುತ್ತ ಹೋದಮೇಲೆ ಬೆಳಗಿನ ಜಾವದ ಚುಮು ಚುಮು ಬೆಳಕಲ್ಲಿ ಮೊದಲ ಮನೆಗಳ ಸಾಲು ಕಂಡವನೆ ಕಾಫಿ ವಾಸನೆಯ ಸೆಳೆತಕ್ಕೊಳಗಾಗಿ ಸೀದಾ ಘನೆಯೊಂದರ ಅಡಿಗೆ ಮನೆಗೆ ನುಗ್ಗಿದ. ಮಗುವನ್ನೆತ್ತಿಕೊಂಡಿದ್ದ ಹೆಂಗುಸೊಬ್ಬಳು ಒಲೆ ಕಡೆ ಬಾಗಿ ಕೂತಿದ್ದಳು.

"ಹಲೋ! ನಾನು ಯೋಸ್ ಆರ್ಕೇಡಿಯೊ ಸೆಗಂಡೊ ಬುಯೆಂಡಿಯ ಎಂದು ಸುಸ್ತಾ ಹೊಡೆದಿದ್ದ ದನಿಯಲ್ಲಿ ಹೇಳಿದ. ತಾನು ಬದುಕಿರುವುದನ್ನ ಅವಳಿಗೆ ಖಾತ್ರಿ ಮಾಡಿಕೊಡುವ ಸಲುವಾಗಿ ತನ್ನ ಇಡಿ ಹೆಸರನ್ನು ಅಕ್ಷರಕ್ಷರ ಬಿಡಿ ಬಿಡಿಸಿ ಹೇಳಿದ್ದ. ಅವನು ಹಾಗೆ ಹೇಳಿದ್ದೆ ಒಳ್ಳೆಯದಾಯಿತು. ಯಾಕೆಂದರೆ ಇವನ ರಕ್ತದಲ್ಲಿ ತೊಯ್ದ ಬಟ್ಟೆ, ಕೆಸರು ಮೆತ್ತಿದ ಮೈಯಿ, ರಕ್ತಸಿಕ್ತಮುಖ, ಸಾವು ಲೇಪಿಸಿದಂಥ ಅವನ ಒಟ್ಟು ಅವತಾರವನ್ನು ಕಂಡು ಆ ಹೆಂಗಸು ಯಾವುದೋ ಪ್ರೇತಾತ್ಮ ಒಳಗೆ ನುಗ್ಗಿಬಿಟ್ಟಿದೆ ಎಂದು ಭಯಭೀತಳಾಗಿ ಬಿಟ್ಟಿದ್ಧಳು. ಕಡೆಗಂತೂ ಅವಳು ಅವನ ಗುರ್ತು ಹಿಡಿದಳು. ಹೊದ್ದುಕೊಳ್ಳಲು ಒಂದು ಕಂಬಳಿಕೊಟ್ಟಳು. ಮಾಂಸ ಕಾಣಿಸುತ್ತಿದ್ದ ಗಾಯಗಳನ್ನು ತೊಳೆದುಕೊಳ್ಳಲು ನೀರು ಕಾಯಿಸಿಕೊಟ್ಟಳು. ತಲೆಗೆ ಪಟ್ಟಿ ಕಟ್ಟಿಕೊಳ್ಳಲು ಕೂಸಿನದೆ ಒಂದು ಚೌಕವನ್ನು ಕೊಟ್ಟಳು. ನಂತರ ಸಕ್ಕರೆ ಹಾಕದ ಒಂದು ಮಗ್ ಕಾಫಿ ಕೊಟ್ಟಳು. ಬುಯೆಂಡಿಯರೆಲ್ಲ ಕಹಿ ಕಾಫಿಯನ್ನೆ ಕುಡಿಯೋದು ಎಂದು ಜನ ಮಾತಾಡಿಕೊಳ್ಳುತ್ತಿದ್ದುದನ್ನು ಅವಳು ಕೇಳಿದ್ದಳು. ಅವನ ಬಟ್ಟೆಗಳನ್ನು ಒಣಗಿಸಲೆಂದು ಉರಿವ ಬೆಂಕಿಯ ಮುಂದೆ ಹರಡಿದಳು.

ಕಾಫಿ ಕುಡಿದು ಮುಗಿಸುವವರೆಗು ಯೋಸ್ ಆರ್ಕೇಡಿಯೊ ಸೆಗಂಡೊ ಒಂದು ಚೂರೂ ಮಾತಾಡಲಿಲ್ಲ. ನಂತರ ಪಿಸುಗುಟ್ಟುವಂತೆ ಹೇಳಿದ: "ಸುಮಾರು ಮೂರು ಸಾವಿರ ಮಂದಿ ಇದ್ದರು."

"ಯಾರು?"

"ಅದೆ ಸತ್ತವರು" ಎಂದು ಸ್ಪಷ್ಟಪಡಿಸಿದ. "ಸ್ಟೇಷನ್ನಿನಲ್ಲಿ ಇದ್ದೋರನ್ನೆಲ್ಲ ಕೊಂದೆ ಹಾಕಿದರು ಅನ್ಸತ್ತೆ". ಆ ಹೆಂಗಸು ಅವನನ್ನು ಅನುಕಂಪದ ಕಣ್ಣುಗಳಿಂದ ನೋಡಿದಳು. "ಇಲ್ಲಿ ಯಾರ್‍ಯಾರೂ ಸತ್ತಿಲ್ಲ" ಎಂದಳು. "ನಿಮ್ಮ ಚಿಕ್ಕಪ್ಪ ಕರ್ನಲ್ ಇದ್ದರಲ್ಲ ಅವರ ಕಾಲದಿಂದಲೂ ಇಲ್ಲಿ ಯಾರ್‍ಯಾರೂ ಸತ್ತಿಲ್ಲ. ಈ ಮಕಂಡೋಲ್ಲಿ ಏನೋನೂ ನಡೆದೇ ಇಲ್ಲ" ಎಂದಳು. ತಮ್ಮ ಮನೆಗೆ ಹೋಗುವುದಕ್ಕೆ ಮುಂಚೆ ಯೋಸ್ ಆರ್ಕೇಡಿಯೋ ಸೆಗಂಡೊ ಇಣುಕಿಟ್ಟ ಮೂರು ಅಡಿಗೆ ಮನೆಗಳಲ್ಲೂ ಜನ ಒಂದೇ ಥರ ಹೇಳಿದರು: "ಇಲ್ಲಿ ಯಾರ್‍ಯಾರೂ ಸತ್ತಿಲ್ಲ". ಪುಟ್ಟ ಚೌಕವನ್ನು ದಾಟಿ ರೈಲ್ವೆ ಸ್ಟೇಷನ್ನಿಗೆ ಹೋದ. ಅಲ್ಲಿ ತಿಂಡಿ ಖಾನೆಗಳನ್ನ ನೀಟಾಗಿ ಒಂದರ ಮೇಲೊಂದು ಜೋಡಿಸಿ ಇಟ್ಟಿದ್ದರು. ಅಲ್ಲೆಲ್ಲೂ ಹತ್ಯಾಕಾಂಡದ ಯಾವ ಕುರುಹೂ ಇರಲಿಲ್ಲ.

(ಪುಟ ೨೪೯ - ೨೫೧)

❄ ❄ ❄

ಅವನು ಆ ಕೂಸನ್ನು ಕಂಡದ್ದು ಅವಾಗಲೆ. ಒಣಗಿ ಊದಿಕೊಂಡ ಚರ್ಮದ ಚೀಲವಾಗಿದ್ದ ಆ ಕೂಸನ್ನು ಜಗತ್ತಿನಲ್ಲಿರುವ ಇರುವೆಗಳೆಲ್ಲ ಸೇರಿ ತೋಟದ ಕಾಲುದಾರಿಯ ಕಲ್ಲಸಂದಿಯಲ್ಲಿದ್ದ ತಮ್ಮ ಗೂಡುಗಳ ಕಡೆಗೆ ಎಳೆದು ಒಯ್ಯುತ್ತಿದ್ದವು. ಆರೇಲಿಯಾನೊಗೆ ಹೆಜ್ಜೆ ಕೀಳಲಾಗಲಿಲ್ಲ. ಭಯದಿಂದ ನಿರ್ವಿಣ್ಣನಾಗಿದ್ದ ಎಂದಲ್ಲ. ಆ ವಿಲಕ್ಷಣ ಕ್ಷಣದಲ್ಲಿ ಅವನಿಗೆ ಮೆಲ್ಕಿಡಿಯಸ್ ರಹಸ್ಯದ ಕಟ್ಟಕಡೆಯ ಕೀಲಿ ಸಿಕ್ಕುಬಿಟ್ಟಿತ್ತು. ಆ ಚರ್ಮಪತ್ರದಲ್ಲಿ ನಿಖರವಾಗಿ ಮನುಷ್ಯನ ಕಾಲದೇಶದ ಪರಿಕಲ್ಪನೆಗೆ ಪಕ್ಕಾಗಿ ಲಿಖಿತವಾಗಿದ್ದ ಭವಿಷ್ಯವಾಕ್ಯದ ಮೇಲೆ ಕಣ್ಣಾಡಿಸಿದ: "**ಈ ಸಂತತಿಯ ಮೊದಲ ಮನುಷ್ಯ ಒಂದು ಮರಕ್ಕೆ ಬಂಧಿತನಾಗಿರುತ್ತಾನೆ. ಕೊನೆಯವನನ್ನು ಇರುವೆಗಳು ತಿಂದುಹಾಕುತ್ತವೆ.**"

ಕೂಡಲೇ ಆರೇಲಿಯಾನೊ ಹಿಂದೆಂದೂ ಇಲ್ಲದಷ್ಟು ಲವಲವಿಕೆಯಿಂದ ಕಾರ್ಯಪ್ರವೃತ್ತನಾದ. ಸತ್ತುಹೋದ ತನ್ನ ಬಂಧುಗಳನ್ನೂ ಅವರ ನೋವುಗಳನ್ನೂ

ಮರೆತು ಫರ್ನಾಂಡಾಳ ಮರದ ಶಿಲುಬೆಗಳನ್ನು ಮೊಳೆಗಳಿಂದ ಬಾಗಿಲು ಕಿಟಕಿಗಳಿಗೆಲ್ಲ ಬಡಿದು ಜೋಡಿಸಿದ. ಇನ್ನು ಯಾವುದೇ ಲೌಕಿಕ ಪ್ರಲೋಭನೆಗಳಿಗೂ ಒಳಗಾಗಬಾರದೆಂದೆ ಹಾಗೆ ಮಾಡಿದ್ದು ಅವ. ತಾನು ಓದತೊಡಗಿದ್ದ ಮೇಲ್ಕ್ವಿಯಡಿಸ್‌ನ ಚರ್ಮಪತ್ರಗಳಲ್ಲಿ ತನ್ನ ಹಣೆಬರಹವೂ ಹುದುಗಿದೆ ಎಂಬುದರ ಸುಳಿವು ಸಿಕ್ಕುಬಿಟ್ಟಿತ್ತು ಅವನಿಗೆ. ಮನುಷ್ಯ ಹಾದುಹೋದ ಯಾವ ಗುರುತೂ ಉಳಿಯದಂತೆ ಆ ಕೋಣೆಯನ್ನು ಮಾರ್ಪಡಿಸಿದ್ದ. ಹೊಲೆಯುವ ಕ್ರಿಮಿಗಳು, ಹಬೆ ಎಬ್ಬಿಸುವ ಪುಟ್ಟ ನೀರ್ಗುಡಿಗಳು, ಪುರಾತನ ಸಸ್ಯಗಳ ನಡುವೆ ಆ ಚರ್ಮಪತ್ರಗಳು ಮುಕ್ಕು ಮುರಿಯದೆ ಕೂತಿದ್ದವು. ಅವನ್ನು ಹೊರಗೆ ಬೆಳಕಿಗೆ ತಂದು ನೋಡುವಷ್ಟು ವ್ಯವಧಾನವಿರಲಿಲ್ಲ ಅವನಿಗೆ. ಅಲ್ಲೆ ನಿಂತಕೊಂಡು ಸ್ವಲ್ಪವೂ ಕಷ್ಟಪಡದೆ ಸಾಲೀಸಾದ ಸ್ಪಾನಿಶ್ ಭಾಷೆಯಲ್ಲಿ ಬರೆದಿರುವುದನ್ನ ನಟ್ಟ ನಡುಹಗಲಲ್ಲಿ ನಿಂತು ಓದುತ್ತಿದ್ದಾನೇನೊ ಎನ್ನುವಂತೆ ಜೋರಾಗಿ ಓದಿ ಕೊಳ್ಳತೊಡಗಿದ. ಅದು ಮೆಲ್ಕ್ವಿಯಡಿಸ್ ಬರೆದಿಟ್ಟಿದ್ದ ಮುಂದಿನ ಒಂದು ನೂರು ವರುಷಗಳವರೆಗಿನ ಇವರ ಮನೆತನದ ಚರಿತ್ರೆಯಾಗಿತ್ತು. ಅದು ಅವರ ವಂಶಾವಳಿಯ ಅತ್ಯಂತ ಕ್ಷುಲ್ಲಕ ವಿವರಗಳನ್ನೂ ಒಳಗೊಂಡಿತ್ತು. ಅದನ್ನು ಅವನು ತನ್ನ ಮಾತೃಭಾಷೆಯಾದ ಸಂಸ್ಕೃತದಲ್ಲಿ ಬರೆದಿಟ್ಟಿದ್ದ. ಅದರೊಳಗಿನ ಸರಿಸಾಲುಗಳನ್ನು ಸಾಮ್ರಾಟ ಅಗಸ್ಟಸ್‌ನ ಖಾಸಗಿ ಸಂಕೇತಾಕ್ಷರಗಳಿಂದಲೂ ಬೆಸ ಸಾಲುಗಳನ್ನು ಲ್ಯಾಸಿಡಿಯೋನಿಯನ್ ಮಿಲಿಟರಿ ಸಂಕೇತಗಳಿಂದಲೂ ಸೂತ್ರೀಕರಿಸಿದ್ದ. ಅಂತಿಮವಾದ ರಕ್ಷಣಾತಂತ್ರವಾಗಿ ಘಟನೆಗಳನ್ನ ಮಾನವನ ಕಾಲಪ್ರಜ್ಞೆಗೆ ಅನುಗುಣವಾಗಿ ಬರೆಯದೆ ಇಡಿ ಒಂದು ಶತಮಾನದ ದಿನನಿತ್ಯದ ಘಟನೆಗಳೆಲ್ಲ ಒಂದೇ ಕ್ಷಣದಲ್ಲಿ ಸಂಯೋಜನೆಗೊಳ್ಳುವಂತೆ ಬರೆದಿಟ್ಟಿದ್ದ. ಈ ಅಂಶ ಆರೇಲಿಯಾನೊಗೆ ಅರಿವಿಗೆ ಬಂದದ್ದು ಅಮೆರಾಂಟಾ ಉರ್ಸುಲಾಳ ಪ್ರೇಮದ ಬಗ್ಗೆ ಗೊಂದಲವುಂಟಾಗಿ ಮತ್ತೆಲ್ಲ ಹೊಸದಾಗಿ ಹುಡುಕುತ್ತ ಹೋದಾಗಲೆ. ಈ ಶೋಧನೆಯಿಂದಾಗಿ ಒಂದು ಬಗೆಯ ಗುಂಗು ಹಿಡಿದವನಂತೆ, ಆರೇಲಿಯಾನೊ ಆ ನಿರೂಪಗಳನ್ನೆಲ್ಲ ಒಂದೂ ಬಿಡದೆ ಜೋರಾಗಿ ಓದುತ್ತಾಹೋದ. ಮೇಲ್ಕ್ವಿಯಡಿಸ್ಸನೆ ಅವುಗಳನ್ನೆಲ್ಲ ಆರ್ಕೇಡಿಯೋಸ್‌ಗೆ ಓದಿ ಹೇಳಿದ್ದನಷ್ಟೆ. ವಾಸ್ತವವಾಗಿ ಅದು ಅವನ ಮರಣದಂಡನೆಯ ಭವಿಷ್ಯನುಡಿಯೆ ಆಗಿತ್ತು. ಜಗತ್ತಿನಲ್ಲೆ ಅತ್ಯಂತ ಸುಂದರಿಯಾಗುವ ಮಗು ಹುಟ್ಟುವುದು. ಆ ಸುಂದರಿ ದೇಹ ಆತ್ಮಗಳ ಸಮೇತವಾಗಿಯೆ ಸ್ವರ್ಗಾರೋಹಣ ಮಾಡುವುದು, ಅಪ್ಪ ಸತ್ತಮೇಲೆ ಹುಟ್ಟುವ ಅವಳಿ ಜವಳಿಗಳು ಈ ಚರ್ಮ ಪತ್ರಗಳನ್ನು ಆತುರಾತುರವಾಗಿ ಓದುವುದು

ತಪ್ಪೆಂದು ಕೈಬಿಡುವುದು. ಈ ಎಲ್ಲಾ ಹೇಳಿಕೆಗಳನ್ನೂ ಓದುತ್ತಾ ಹೋದ. ಆ ಕ್ಷಣದಲ್ಲಿ ಆರೇಲಿಯಾನೊಗೆ ತನ್ನ ಮೂಲವನ್ನೂ ತಿಳಿದೇ ಬಿಡಬೇಕೆಂಬ ಹಂಬಲವುಂಟಾಗಿ ಒಂದಿಷ್ಟು ಪುಟಗಳನ್ನು ಹಾರಿಸಿ ಮುಂದೆ ಹೋದ. ಇದ್ದಕ್ಕಿದ್ದಂತೆ ಎಳೆಗಾಳಿ ಬೆಚ್ಚಗೆ ಬೀಸಲಾರಂಭಿಸಿತು. ಗತಕಾಲದ ಧ್ವನಿಗಳು, ಪುರಾತನ ಕೊಕ್ಕರೆಕಾಯಿ ಗೊಣಗಾಟಗಳು, ಅದ್ಭುತ ಹಂಬಲಕ್ಕು ಮುಂಚಿನ ಹತಾಶೆಯ ನಿಟ್ಟುಸಿರುಗಳು ಇವುಗಳಿಂದ ಇಡುಕಿರಿದ ಆ ಗಾಳಿಯನ್ನು ಅವನು ಯಾಕೆ ಗಮನಿಸಲಿಲ್ಲವೆಂದರೆ ಅದೇ ಹೊತ್ತಿಗೆ ಅವನು ತನ್ನದೆ ಗುಣಗಳ ಪಡಿಯಚ್ಚಿನಂತಿದ್ದ ಒಬ್ಬ ಅಜ್ಜನ ಕಾಮುಕತನದ ಬಗ್ಗೆ ಓದ ತೊಡಗಿದ್ದ. ಆ ಅಜ್ಜ ತನ್ನನ್ನು ಎಂದಿಗು ಸುಖವಾಗಿಡದ ಒಬ್ಬ ಸುಂದರಿಯ ಬೆನ್ನು ಹತ್ತಿ ಹುಚ್ಚನಂತೆ ಹಳವಂಡದ ನಾಡುಗಳನ್ನೆಲ್ಲ ಅಂಡಲೆಯುವುದನ್ನ ಓದಿದ. ಅವನ ಸಂತತಿಯ ರಹಸ್ಯ ಜಾಡುಗಳನ್ನೆಲ್ಲ ಕಂಡುಕೊಂಡ ಆರೇಲಿಯಾನೊ ತನ್ನ ತಾಯಿಯು ತನ್ನನ್ನು ಗರ್ಭೀಕರಿಸಿಕೊಂಡ ಕ್ಷಣವನ್ನೂ ಕಂಡ. ಚೇಳುಗಳು, ಹಳದಿ ಚಿಟ್ಟೆಗಳಿಂದ ತುಂಬಿದ ಒಂದು ಬಚ್ಚಲ ಮನೆಯಲ್ಲಿ ಒಬ್ಬ ಹೆಂಗಸು ರೊಚ್ಚಿನಿಂದ ಒಬ್ಬ ಮೆಕ್ಯಾನಿಕ್‌ನ ಕಾಮಪಿಪಾಸೆಗೆ ಒಡ್ಡಿಕೊಂಡ ಕ್ಷಣದಲ್ಲಿ ಇವನ ಹುಟ್ಟಿನ ಬೀಜಾಂಕುರವಾಗಿತ್ತು. ಅವನು ಎಷ್ಟು ತನ್ಮಯನಾಗಿ ಓದುತ್ತಿದ್ದನೆಂದರೆ ಗಾಳಿ ಎರಡನೆ ಸಲ ಬಿರುಗಾಳಿಯಾಗಿ ಬೀಸಿ ಆವೇಶದಿಂದ ಕಿಟಕಿ ಬಾಗಿಲುಗಳನ್ನು ಪಟಪಟ ಬಡಿದಾಡಿಸಿ ಮರಡುಗಳಿಂದ ಅವುಗಳನ್ನ ಕಿತ್ತೆಸೆದದ್ದು, ಪೂರ್ವಭಾಗದ ಛಾವಣಿಯನ್ನು ಅನಾಮತ್ತು ಕೆಡವಿದ್ದು, ನೆಲಗಟ್ಟನ್ನೆ ಹಿಡಿದು ಅಲುಗಾಡಿಸಿದ್ದು ಯಾವುದೂ ಅವನ ಗಮನಕ್ಕೆ ಬರಲೇ ಇಲ್ಲ. ಆಗ ತಕ್ಷಣ ಅವನಿಗೆ ಅರಿವಾಯಿತು ಅಮೆರಾಂಟಾ ಉರ್ಸುಲಾ ತನ್ನ ಅಕ್ಕನಲ್ಲ ಅತ್ತೆ ಎಂದು; ಫ್ರಾನ್ಸಿಸ್ ಡ್ರೇಕ್ ರಿಯೋಹಚದ ಮೇಲೆ ದಾಳಿ ಮಾಡಿದ್ದು, ಗೋಜಲು ಗೋಜಲಾದ ರಕ್ತ ಸಂಬಂಧದ ಚಕ್ರ ಭೀಮನಕೋಟೆಯೊಳಗೆ ಅವರು ಒಬ್ಬರನ್ನೊಬ್ಬರು ಹುಡುಕಾಡಿ ಕೂಡಿದ್ದು, ಇಡಿ ಈ ಸಂತತಿಯನ್ನೆ ಕೊನೆಗಾಣಿಸುವ ಪುರಾಣ ಜೀವಿಗೆ ಜನ್ಮ ನೀಡಲೆಂದು ಎಂಬುದು ಅರ್ಥವಾಯಿತು. ಅಷ್ಟುಹೊತ್ತಿಗೆ ಮಕಂಡೊ ಇಡಿಯಾಗಿ ಭಯಾನಕವಾಗಿ ಧೂಳೆದ್ದ ಸುಂಟರಗಾಳಿಯಾಗಿ ಹೋಗಿತ್ತು. ಕಲ್ಲುದುಂಡಿಗಳು ಮಣ್ಣುಹೆಂಟೆಗಳು ಎಲ್ಲ ಕಡೆ ಬೀಳತೊಡಗಿದ್ದವು. ಬೈಬಲ್ಲಿನಲ್ಲಿ ಉಕ್ತವಾಗಿರುವ ಬಿರುಗಾಳಿಯಂತೆಯೆ ಬೀಸತೊಡಗಿತ್ತು ಈ ಬಿರುಗಾಳಿಯೂ. ಹನ್ನೊಂದು ಪುಟಗಳನ್ನು ಹಾರಿಸಿ ಮುಂದೆ ಹೋದ ಆರೇಲಿಯಾನೊಗೆ ತನ್ನ ಆ ಆಕ್ಷಣದ ಬದುಕಿನ ಆಗುಹೋಗನ್ನು ಓದತೊಡಗಿದ. ಚರ್ಮಪತ್ರದ ಕೊನೆ ಕೊನೆ ಪುಟಗಳನ್ನು ತಿರುವಿ ಹಾಕುತ್ತ ತನ್ನ

ಭವಿಷ್ಯವನ್ನು ತಾನೆ ಓದಿಕೊಳ್ಳುತ್ತಿದ್ದಾಗ ಮಾತನಾಡುವ ಕನ್ನಡಿಯೊಳಗೆ ನೋಡಿಕೊಂಡಂತಾಯಿತು. ಇನ್ನೊಂದಿಷ್ಟು ಪುಟಹಾರಿಸಿ ಮುಂದೆ ಹೋಗಿ ತಾನು ಸಾಯುವ ತಾರೀಖು, ಸಾವು ಬರುವ ಬಗೆ ಇತ್ಯಾದಿಗಳ ಭವಿಷ್ಯವನ್ನು ಖಾತ್ರಿ ಮಾಡಿಕೊಳ್ಳಲು ಹೆಣಗಿದ. ಕೊನೆ ಸಾಲನ್ನು ಓದುವುದರೊಳಗೆ ಎಲ್ಲ ಅರ್ಥವಾಗಿ, ಆ ಕೋಣೆಬಿಟ್ಟು ಹೊರಹೋಗುವುದು ತನ್ನ ಹಣೆಯಲ್ಲಿ ಬರೆದಿಲ್ಲ ಎಂಬುದು ಅರಿವಾಗಿ ಆ ಕನ್ನಡಿಗಳ ನಗರ (ಅಥವಾ ಮರೀಚಿಕೆಗಳ ನಗರ) ಒಂದು ಪ್ರಚಂಡ ಬಿರುಗಾಳಿಯಿಂದಾಗಿ ಅಳಿಸಿಹೋಗುತ್ತದೆಂದೂ ಹೂತುಹೋಗುತ್ತದೆಂದೂ, ಮನುಷ್ಯರ ನೆನಪಿನಿಂದ ಮೂಸಿ ಹೋಗುತ್ತದೆಂದೂ ತಿಳಿದು ಹೋಯಿತು. ಆರೇಲಿಯಾ ಬ್ಯಾಬಿಯೋನಿಯ ಎಂಬುವನು ಇದನ್ನ ಓದಿ ಮುಗಿಸುತ್ತಿದಂತೆಯೆ ಇಷ್ಟೆಲ್ಲ ಸಂಭವಿಸುತ್ತದೆಂದು ಬರೆಯಲಾಗಿತ್ತು. ಇಲ್ಲಿ ಬರೆಯಲಾಗಿರುವುದು ಪುನರಾವರ್ತನೆ ಯಾಗುವುದಿಲ್ಲವೆಂದೂ, ಯಾಕೆಂದರೆ ಅನಾದಿಕಾಲದಿಂದಲೂ ಒಂದು ನೂರು ವರುಷಗಳ ಒಂಟಿತನಕ್ಕೆ ಗುರಿಯಾದ ಯಾವ ಸಂತತಿಗೂ ಈ ಭೂಮಿಯ ಮೇಲೆ ಅಂಥ ಮತ್ತೊಂದು ಅವಕಾಶ ದೊರಕುವ ಸಂಭವವೇ ಇಲ್ಲವೆಂತಲೂ ಅದರಲ್ಲಿ ಬರೆಯಲಾಗಿತ್ತು.

(ಪುಟ ೩೩೪ ರಿಂದ ೩೩೬)

- ಮುಗಿಯಿತು -

ಕಥೆಗಳು

ಪೀಠಿಕೆ: ಯಾಕೆ ಹನ್ನೆರಡು, ಯಾಕೆ ಕಥೆಗಳು ಯಾಕೆ ಯಾತ್ರಿಕರು *

ಈ ಪುಸ್ತಕದ ಹನ್ನೆರಡು ಕಥೆಗಳು ಕಳೆದ ಹದಿನೆಂಟು ವರುಷಗಳಲ್ಲಿ ಬರೆದಂಥವು. ಈಗಿನ ರೂಪಕ್ಕೆ ಬರುವ ಮುಂಚೆ ಇವುಗಳಲ್ಲಿ ಐದು ಪತ್ರಿಕಾ ಟಿಪ್ಪಣಿಗಳು, ಚಿತ್ರನಾಟಕಗಳು ಆಗಿದ್ದು ಒಂದು ಮಾತ್ರ ದೂರದರ್ಶನದ ಧಾರಾವಾಹಿಯಾಗಿತ್ತು. ಇನ್ನೊಂದನ್ನ ಹದಿನೈದು ವರ್ಷಗಳ ಹಿಂದೆ ಗೆಳೆಯನೊಬ್ಬ ಧ್ವನಿಮುದ್ರಿಸಿಕೊಂಡ ಸಂದರ್ಶನದಲ್ಲಿ ಹೇಳಿದ್ದೆ. ಅದನ್ನವನು ಬರೆದು ಕಥೆ ಎಂದು ಪ್ರಕಟಿಸಿದ್ದ. ಅದರ ಆಧಾರದ ಮೇಲೆ ಅದನ್ನ ಮತ್ತೆ ಬರೆದಿದ್ದೇನೆ. ಇದೊಂದು ವಿಚಿತ್ರವಾದ ಹೇಳಿಕೊಳ್ಳಲೇಬೇಕಾದ ಸೃಜನಶೀಲ ಅನುಭವ. ದೊಡ್ಡವರಾದ ಮೇಲೆ ಬರಹಗಾರರಾಗುವ ಕನಸುಕಾಣುವ ಮಕ್ಕಳಿಗಾದರೂ ಕಡೆಪಕ್ಷ ಇದು ಉಪಯುಕ್ತವಾದೀತು. ಬರವಣಿಗೆ ಎಂಬುದು ಎಂಥ ತಣಿಯಲಾರದ, ತೇದುಕೊಳ್ಳುವ ಪ್ರವೃತ್ತಿ ಎಂಬುದು ಅವರ ಅರಿವಿಗೆ ಬರುತ್ತದೆ.

ಮೊದಲ ಕತೆಯ ಹೊಳಹು ಸಿಕ್ಕಿದ್ದು ೧೯೭೦ರ ಪ್ರಾರಂಭದಲ್ಲಿ. ಬಾರ್ಸಿಲೋನಾದಲ್ಲಿ ಐದು ವರ್ಷ ವಾಸಮಾಡಿದ ಮೇಲೆ ಬಿದ್ದಂಥ ಒಂದು ಕೋರೈಸುವ ಕನಸಿನ ಫಲ ಅದು. ನನ್ನ ಶವಯಾತ್ರೆಗೆ ನಾನೂ ಹೊರಟಂತೆ ಕನಸು ಬಿದ್ದಿತ್ತು. ಸೂತಕದ ಬಟ್ಟೆ ಹಾಕಿಕೊಂಡಿದ್ದರೂ ಗೆಳೆಯರ ಸಂಗಡ ಹೊರಟಾಗ ಹಬ್ಬದ ಸಂಭ್ರಮದಲ್ಲಿದ್ದೆ.

---

*ನಾಲ್ಕನೆ ಕಥಾ ಸಂಕಲನ 'ಸ್ಟ್ರೇಂಜ್ ಪಿಲ್‌ಗ್ರಿಮ್ಸ್' ಗೆ ಬರೆದಿರುವ ಮುನ್ನುಡಿ.

ಒಟ್ಟಿಗೆ ಸೇರಿದ್ದೇವೆಂದು ನಮಗೆಲ್ಲ ಖುಷಿಯಾಗಿತ್ತು. ನನಗೆ ಎಲ್ಲರಿಗಿಂತ ಹೆಚ್ಚು ಖುಷಿಯಾಗಿತ್ತು. ಯಾಕೆಂದರೆ ಈ ಸಾವಿನಿಂದಾಗಿ ನನಗೆ ಲ್ಯಾಟಿನ್ ಅಮೆರಿಕದ ಹಳೆಯ ಗೆಳೆಯರನ್ನೆಲ್ಲ ನೋಡುವ ಅವಕಾಶ ಒದಗಿ ಬಂದಿತ್ತು. ಅವರನ್ನೆಲ್ಲ ನೋಡಿ ಎಷ್ಟೋ ದಿನಗಳಾದ್ದವು. ಶವಸಂಸ್ಕಾರದ ನಂತರ ಎಲ್ಲರೂ ಹೊರಟುನಿಂತಾಗ ನಾನು ಅವರೊಡನೆ ಹೊರಟು ನಿಂತೆ. ಒಬ್ಬ ಗೆಳೆಯ ಮುಖಕ್ಕೆ ಹೊಡೆದಂತೆ ಹೇಳಿದ "ನಮ್ಮಗಳ ಜೊತೆ ಬರಬಾರದವನು ಅಂದರೆ ನೀನೊಬ್ಬನೆ" ಎಂದು. ನನ್ನ ಪಾಲಿಗೆ ಸಮಾರಂಭ ಅಷ್ಟಕ್ಕೇ ಮುಗಿದುಹೋಗಿತ್ತು. ನನಗಾಗ ಅರ್ಥವಾಯಿತು ಸಾಯುವುದು ಎಂದರೆ ಮತ್ತೆಂದೂ ಗೆಳೆಯರೊಡನೆ ಬೆರೆಯಲಾರದ ಸ್ಥಿತಿ ಎಂದು.

ದೃಷ್ಟಾಂತದಂಥ ಈ ಕನಸು ನನ್ನ ಅಂತಸ್ಸಾಕ್ಷಿಯ ಎದುರು ನಡೆದ ನನ್ನ ಅಸ್ತಿತ್ವದ ಸತ್ವ ಪರೀಕ್ಷೆ ಎಂದು ನಾನು ತಿಳಿದು ಕೊಂಡಿದ್ದೇನೆ. ಯಾಕೆ ಎಂದು ಕೇಳಿದರೆ ನನ್ನ ಬಳಿ ಉತ್ತರವಿಲ್ಲ. ಲ್ಯಾಟಿನ್ ಅಮೆರಿಕನ್ನರಿಗೆ ಯುರೋಪಿನಲ್ಲಿ ಆಗುವ ವಿಚಿತ್ರ ಅನುಭವಗಳ ಬಗ್ಗೆ ಬರೆಯಲು ಒಂದು ಹೊಸ ರೀತಿಯಾಗಿ ಈ ಕನಸು ನನಗೆ ಕಂಡಿತು. ಅತ್ಯಂತ ಕಷ್ಟದಾಯಕವೂ ಸಾಹಸಮಯವೂ ಆದ ಬರವಣಿಗೆಯ ಅನುಭವವಾಗಿ ಪರಿಣಮಿಸಿದ ನನ್ನ ಕಾದಂಬರಿ "ದ ಆಟಮ್ ಆಫ್ ದ ಫೆಟ್ರಿಯಾರ್ಕ್" ಅನ್ನು ಅದೆ ತಾನೆ ಬರೆದು ಮುಗಿಸಿದ್ದ ನನಗೆ ಮುಂದೆ ಏನು ಮಾಡಬೇಕೆಂಬುದೆ ಹೊಳೆಯದಿದ್ದಾಗ ಈ ಕನಸು ಭರವಸೆಯ ನಿಧಿಯಾಗಿ ಕಂಡಿತು.

ಎರಡು ವರ್ಷಗಳ ತನಕ ನನಗೆ ಹೊಳೆದ ಕಥಾವಸ್ತುಗಳ ಟಿಪ್ಪಣಿ ಮಾಡುತ್ತ ಬಂದೆ. ಆದರೂ ಅವುಗಳನ್ನ ಯಾವ ರೀತಿ ಬಳಸಬೇಕು ಎಂಬುದು ಅರ್ಥವಾಗಲಿಲ್ಲ. ಬರವಣಿಗೆ ಪ್ರಾರಂಭಿಸಿಬೇಕು ಎಂದು ಹೊರಟ ರಾತ್ರಿ ನನ್ನ ಬಳಿ ಒಂದು ನೋಟ್‌ಬುಕ್ ಸಹಿತ ಇರಲಿಲ್ಲ. ನನ್ನ ಮಕ್ಕಳೆ ತಮ್ಮದೊಂದು ನೋಟ್ ಬುಕ್ ನೀಡಿದರು. ನಾವು ಪದೆ ಪದೆ ಕೈಗೊಂಡ ಪ್ರಯಾಣಗಳ ಉದ್ದಕ್ಕೂ ನಮ್ಮ ಮಕ್ಕಳೆ ಆ ನೋಟ್‌ಬುಕ್ ನಾಪತ್ತೆಯಾಗದಂತೆ ಜೋಪಾನವಾಗಿ ತಮ್ಮ ಶಾಲೆಯ ಚೀಲಗಳಲ್ಲಿ ಇಟ್ಟುಕೊಂಡು ಕಾಪಾಡಿದರು. ಸವಿವರವಾದ ಟಿಪ್ಪಣಿಗಳಿದ್ದ ಅರವತ್ತ ನಾಲಕ್ಕು ಕಥಾವಸ್ತುಗಳನ್ನು ಕಲೆಹಾಕಿದ್ದೆ. ಬರೆಯುವುದೊಂದೆ ಬಾಕಿ ಉಳಿದಿತ್ತು.

೧೯೭೪ರಲ್ಲಿ ಬಾರ್ಸಿಲೋನಾದಿಂದ ಮೆಕ್ಸಿಕೋಗೆ ವಾಪಸ್ ಬಂದಮೇಲೆ ನನಗೆ ಅರಿವಾಯಿತು: ಮೊದಲು ಅಂದುಕೊಂಡ ಹಾಗೆ ಇದನ್ನೆಲ್ಲ ಸೇರಿಸಿ ಕಾದಂಬರಿ ಬರೆಯಲು ಹೋಗಬಾರದು, ಬದಲಿಗೆ ಒಂದು ಒಳ್ಳೆಯ ಕಥಾಸಂಕಲನವನ್ನಾಗಿಸಬೇಕು

ಎಂದು. ಈ ಕಥೆಗಳು ಪತ್ರಿಕಾ ವರದಿಗಳನ್ನ ಆಧರಿಸಿದ್ದೂ, ತಮ್ಮ ಕಾವ್ಯಾತ್ಮಕತೆ ಯಿಂದಾಗಿಯೆ ನಾಕು ಕಾಲ ಬಾಳಿಕೆ ಬರುವಂಥವಾಗಬೇಕು ಎಂದು ನಿರ್ಧರಿಸಿದೆ. ಆಗಲೆ ನಾನು ಮೂರು ಕಥಾಸಂಕಲನಗಳನ್ನು ಪ್ರಕಟಿಸಿದ್ದೆ. ಆದರೆ ಆ ಸಂಕಲನಗಳನ್ನು ಇಡಿಯಾದ ಒಟ್ಟಾದ ಒಂದು ಕಥಾಸರಣಿ ಎಂಬಂತೆ ಪರಿಭಾವಿಸಿ ರಚಿಸಿರಲಿಲ್ಲ. ಬದಲಿಗೆ ಅವುಗಳಲ್ಲಿನ ಪ್ರತಿಯೊಂದು ಕತೆಯೂ ಸಾಂದರ್ಭಿಕವೂ ಸ್ವತಂತ್ರ ಅಸ್ತಿತ್ವವುಳ್ಳಂಥದೂ ಆಗಿತ್ತು. ಆದ್ದರಿಂದ ಈಗ ಓದುಗನ ನೆನಪಿನಲ್ಲಿ ಪ್ರತ್ಯೇಕ ಕತೆಗಳಾಗಿ ನಿಲ್ಲದೆ, ಧ್ವನಿ ಮತ್ತು ಶೈಲಿಯ ಆಂತರಂಗಿಕ ಐಕ್ಯತೆಯನ್ನು ಕಾಪಾಡಿಕೊಳ್ಳುವಂಥ ಅರವತ್ತ ನಾಲಕ್ಕು ಕಥಾವಸ್ತುಗಳನ್ನ ಒಂದೇ ಸಲ ಕೂತು ಬರೆಯುವುದು ಕುತೂಹಲಕಾರಿ ಸಾಹಸವಾಗಿ ಕಂಡಿತು.

'ಹಿಮದಲ್ಲಿ ನಿನ್ನ ರಕ್ತದ ಕಲೆಗಳು', 'ಮಿಸ್ ಫೋರ್ಬ್ಸ್‌ಳ ಖುಷಿಯ ಬೇಸಿಗೆ' ಎಂಬ ಮೊದಲ ಎರಡು ಕತೆಗಳನ್ನ ೧೯೭೬ ರಲ್ಲಿ ಬರೆದೆ. ಕೂಡಲೆ ಅವು ಬೇರೆ ಬೇರೆ ದೇಶಗಳ ಸಾಹಿತ್ಯಕ ಪುರವಣಿಗಳಲ್ಲಿ ಪ್ರಕಟವಾದವು. ನಾನಂತೂ ಬಿಟ್ಟೂಬಿಡದೆ ಬರೆಯತೊಡಗಿದೆ. ಆದರೆ ಮೂರನೆ ಕತೆ ಅರ್ಧದಷ್ಟು ಮುಗಿದಾಗ ಕಾದಂಬರಿ ಬರೆಯುವುದಕ್ಕಿಂತ ಹೆಚ್ಚಿನ ತ್ರಾಸು ತೆಗೆದು ಕೊಳ್ಳುತ್ತಿದ್ದೇನೆ ಅನ್ನಿಸಿತು. ಅದು ನನ್ನ ಶವಸಂಸ್ಕಾರದ ಬಗೆಗಿನ ಕತೆಯಾಗಿತ್ತು. ನಾಲ್ಕನೆ ಕತೆ ಬರೆಯುವಾಗಲೂ ಅದೆ ಅನುಭವವಾಯಿತು. ನಿಜ ಹೇಳಬೇಕೆಂದರೆ ಅವನ್ನು ಬರೆದು ಮುಗಿಸುವಷ್ಟು ಶಕ್ತಿ ನನ್ನಲ್ಲಿ ಉಳಿದೇ ಇಲ್ಲ ಅನ್ನಿಸತೊಡಗಿತ್ತು. ಈಗ ಗೊತ್ತಾಗುತ್ತಾ ಇದೆ ಯಾಕೆ ಹಾಗಾಯಿತು ಎಂದು. ಕಾದಂಬರಿ ಪ್ರಾರಂಭಿಸಲು ಬೇಕಾಗುವ ಗಂಭಿರ ಯತ್ನವೆ ಸಣ್ಣಕತೆಯನ್ನು ಬರೆಯುವಾಗಲೂ ಬೇಕಾಗುತ್ತದೆ. ಮೊದಲ ಪ್ಯಾರಾದಲ್ಲೆ ಅಲ್ಲಿ ಎಲ್ಲವನ್ನೂ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆಕೃತಿ, ಧ್ವನಿ, ಶೈಲಿ, ಲಯ, ವ್ಯಾಪ್ತಿ ಜೊತೆಗೆ ಪಾತ್ರದ ವ್ಯಕ್ತಿತ್ವವನ್ನು ಕೂಡ ಹೇಳಬೇಕಾಗಿ ಬರುತ್ತದೆ. ಮುಂದೆ ಉಳಿಯುವುದೆಂದರೆ ಬರವಣಿಗೆಯ ಖುಷಿ ಒಂದೆ. ಒಂಟಿಯಾಗಿದ್ದಾಗ ತುಂಬ ಖುಷಿಕೊಡುವ, ಹಿತ ನೀಡುವ ಕೆಲಸವೆಂದರೆ ಬರವಣಿಗೆ. ಮಿಕ್ಕ ಬದುಕಿನುದ್ದಕ್ಕೂ ಆ ಕಾದಂಬರಿಯನ್ನು ತಿದ್ದುತ್ತಾ ಕೂರುವ ಪ್ರಮೇಯವಿರುವುದಿಲ್ಲ. ಯಾಕೆಂದರೆ ಕಾದಂಬರಿ ಪ್ರಾರಂಭಿಸುವಾಗ ಇದ್ದ ಗಟ್ಟಿ ಮನಸ್ಸೆ ಅದನ್ನ ಮುಗಿಸುವಾಗಲೂ ಇರಬೇಕಾಗುತ್ತದೆ. ಆದರೆ ಸಣ್ಣಕತೆಗೆ ಆರಂಭವೂ ಇಲ್ಲ ಮುಗಿತಾಯವೂ ಇಲ್ಲ. ಅದು ಕೈಗೂಡಿದರೆ ಕೂಡಿತು ಇಲ್ಲದಿದ್ದರೆ ಇಲ್ಲ ಅಷ್ಟೆ. ನನ್ನ ಹಾಗು ನನ್ನಂಥ ಇನ್ನೂ ಹಲವರ ಅನುಭವದ

ಪ್ರಕಾರ ಅದು ಕೈಗೂಡದೆ ಹೋದಾಗ ಅದನ್ನ ಇನ್ನೊಂದು ಕೋನದಿಂದ ಪುನಃ ಹೊಸತಾಗಿ ಬರೆಯಲಾರಂಭಿಸುವುದೆ ಒಳ್ಳೆಯದು. ನಮ್ಮ ಆರೋಗ್ಯಕ್ಕು ಅದು ಒಳ್ಳೆಯದು. ಅದು ಸಾಧ್ಯವಾಗದಿದ್ದರೆ ಅದನ್ನೆತ್ತಿ ಕಸದ ಬುಟ್ಟಿಗೆ ಎಸೆಯಬೇಕು. ಯಾರೊ ಬಹಳ ಚೆನ್ನಾಗಿ ಹೇಳಿದ್ದಾರಲ್ಲ, ಯಾರು ಅಂತ ನೆನಪಾಗುತ್ತಿಲ್ಲ ಈಗ: "ಒಳ್ಳೆ ಲೇಖಕರು ಪ್ರಕಟಿಸಿದ್ದಕ್ಕಿಂತ ಹೆಚ್ಚು ಮೆಚ್ಚುಗೆ ಗಳಿಸಿದ್ದು ಹರಿದು ಹಾಕಿದ ಕೃತಿಗಳಿಂದಲೆ" ಅಂತ. ನನ್ನ ಟಿಪ್ಪಣಿಗಳನ್ನ ಮತ್ತು ಮೊದಲ ಕರಡು ಪ್ರತಿಗಳನ್ನ ಹರಿದುಹಾಕಲಿಲ್ಲ ಅನ್ನುವುದು ನಿಜ. ನಾನು ಮಾಡಿದ್ದು ಅದಕ್ಕಿಂತ ನಾಲಾಯಖ್ಖಾದ ಕೆಲಸ. ಅಂದರೆ ಅವನ್ನೆಲ್ಲ ಮರೆವಿನ ಲೋಕಕ್ಕೆ ತೂರಿಬಿಟ್ಟೆ.

ಮೆಕ್ಸಿಕೋದಲ್ಲಿ ೧೯೭೮ ರವರೆಗು ಆ ನೋಟ್‌ಬುಕ್ಕು ನನ್ನ ಡೆಸ್ಕಿನ ಮೇಲೆ ಪುಸ್ತಕಗಳ ರಾಶಿಯಲ್ಲಿತ್ತು. ಒಂದು ದಿನ ಮತ್ತೇನನ್ನೊ ಹುಡುಕುತ್ತಿದ್ದಾಗ ಇದ್ದಕ್ಕಿದ್ದಂತೆ ನನಗೆ ಅರಿವಾಯಿತು ಆ ನೋಟ್‌ಬುಕ್ಕು ಬಹಳ ದಿನಗಳಿಂದ ಕಣ್ಣಿಗೇ ಬಿದ್ದಿಲ್ಲ ಎಂದು. ಅದು ನನ್ನ ಡೆಸ್ಕಿನ ಮೇಲೆ ಇಲ್ಲವೇ ಇಲ್ಲ ಎಂದು ಖಾತ್ರಿಯಾದಾಗ ನಾನು ದಿಗಿಲುಗೊಂಡೆ. ಎಲ್ಲರು ಸೇರಿ ಮನೆಯ ಮೂಲೆ ಮೂಲೆ ಹುಡುಕಾಡಿದೆವು. ಫರ್ನೀಚರ್ರೆಲ್ಲ, ಸರಿಸಾಡಿದೆವು. ಗ್ರಂಥ ಭಂಡಾರದ ಪುಸ್ತಕಗಳನ್ನೆಲ್ಲ ಚೆಲ್ಲಾಪಿಲ್ಲಿ ಕಿತ್ತಾಡಿ ನೋಡಿದೆವು. ಅದು ಎಲ್ಲು ಸಿಗಲೆ ಇಲ್ಲ. ಮನೆಗೆಲಸದವರ ಮೇಲೆ ಸ್ನೇಹಿತರ ಮೇಲೆ ಗುಮಾನಿ ಬಂದು ಕೇಳಬಾರದ ಪ್ರಶ್ನೆಗಳನ್ನೆಲ್ಲ ಕೇಳಿದೆವು. ಆದರೂ ಪುಸ್ತಕ ಪತ್ತೆಯಾಗಲೆ ಇಲ್ಲ. ನಾವು ಪದೆ ಪದೆ ರದ್ದಿ ಪೇಪರ್ ವಿಲೇವಾರಿ ಮಾಡುವಾಗ ಎಲ್ಲೋ ತಪ್ಪಿಸಿಕೊಂಡು ನಾಪತ್ತೆಯಾಗಿಬಿಟ್ಟಿದೆ ಆ ನೋಟ್ ಬುಕ್ಕು ಎಂದುಕೊಂಡೆವು.

ನನ್ನ ಪ್ರತಿಕ್ರಿಯೆಗೆ ನಾನೆ ಅಚ್ಚರಿಪಟ್ಟೆ. ಹೆಚ್ಚೂ ಕಡಿಮೆ ನಾಲ್ಕು ವರ್ಷಗಳಿಂದ ಮರೆತೇ ಬಿಟ್ಟಿದ್ದ ಕಥಾವಸ್ತುಗಳ ಕಡತ ಈಗ ಕಳೆದು ಹೋದದ್ದು ನನ್ನ ಮರ್ಯಾದೆಯ ಪ್ರಶ್ನೆಯಾಗಿಬಿಟ್ಟಿತು. ಏನಾದರೂ ಮಾಡಿ ಅವುಗಳನ್ನ ವಾಪಸ್ ಪಡೆಯಲೆಬೇಕೆಂಬ ಹಂಬಲ ಹುಟ್ಟಿತು. ಮೂಲ ಬರವಣಿಗೆಯನ್ನು ಮಾಡವಷ್ಟೆ ತ್ರಾಸು ತೆಗೆದುಕೊಂಡು ಮೂವತ್ತು ಕತೆಗಳ ಟಿಪ್ಪಣಿಗಳನ್ನು ಮರುಸೃಷ್ಟಿ ಮಾಡಿದೆ. ಮತ್ತೆ ನೆನಪಿಸಿಕೊಳ್ಳುವ ಆ ಕ್ರಿಯೆ ಪಾಪವನ್ನು ತೊಳೆದು ಕೊಳ್ಳುವ ಪ್ರಕ್ರಿಯೆಯಾಯಿತು. ಸಂರಕ್ಷಣೆ ಮಾಡಲಾಗದ ಕಥಾವಸ್ತುಗಳನ್ನ ಕೈ ಬಿಟ್ಟೆ. ಕೇವಲ ಹದಿನಾಲ್ಕನ್ನು ಉಳಿಸಿಕೊಂಡೆ. ಈ ಸಲ ಒಂದೇ ಸಮ ಕೂತು ಬರೆದುಬಿಡಬೇಕು ಎಂದುಕೊಂಡೆ. ಅಷ್ಟರಲ್ಲೆ ಅವುಗಳ ಬಗ್ಗೆ ನನ್ನ ಉತ್ಸಾಹ ತಣ್ಣಗಾಗತೊಡಗಿತು. ಆದರೂ ಅವನ್ನ ಹರಿದೆಸೆಯದೆ

ಉಳಿಸಿಕೊಂಡೆ, ಬರಹಗಾರರಿಗೆ ನಾನೆ ನೀಡುತ್ತಿದ್ದ ಸಲಹೆಗೆ ವ್ಯತಿರಿಕ್ತವಾಗಿ. ಮುಂದೆ ಕೆಲಸಕ್ಕೆ ಬರಬಹುದು ಎಂದುಕೊಂಡು ಫೈಲಿಗೆ ಸೇರಿಸಿದೆ.

೧೯೭೯ರಲ್ಲಿ 'ಕ್ರಾನಿಕಲ್ ಆಫ್ ಎ ಡೆತ್ ಫೋರ್‌ಟೋಲ್ಡ್' ಕಾದಂಬರಿ ಬರೆಯಲು ಪ್ರಾರಂಭಿಸಿದಾಗ ಒಂದು ವಿಷಯ ನನ್ನ ಗಮನಕ್ಕೆ ಬಂತು. ಪುಸ್ತಕಗಳ ಬರವಣಿಗೆಯ ನಡುವಿನ ನಿಲುಗಡೆಗಳಿಂದಾಗಿ ನಾನು ಬರೆಯುವ ಅಭ್ಯಾಸಕ್ಕೇ ಎರವಾಗುತ್ತಿದ್ದೇನೆ ಎನ್ನಿಸಿತು. ಮತ್ತೆ ಪ್ರಾರಂಭಿಸುವುದು ಹೆಚ್ಚು ಹೆಚ್ಚು ತ್ರಾಸದಾಯಕವೆನಿಸತೊಡಗಿತು. ಅದಕ್ಕೋಸ್ಕರ ೧೯೮೦ರ ಅಕ್ಟೋಬರ್‌ನಿಂದ ೧೯೮೪ರ ಮಾರ್ಚ್‌ವರೆಗೆ ವಾರಕ್ಕೊಮ್ಮೆ ಬೇರೆ ಬೇರೆ ದೇಶಗಳ ಪತ್ರಿಕೆಗಳಿಗೆ ವಯಕ್ತಿಕ ಅಭಿಪ್ರಾಯಗಳ ಕಾಲಂ ಬರೆಯತೊಡಗಿದೆ. ಕೈ ಕುದುರಲೆಂದು ನನಗೆ ನಾನೆ ಈ ಶಿಸ್ತನ್ನು ವಿಧಿಸಿಕೊಂಡೆ. ಕಳೆದು ಹೋದ ನೋಟುಬುಕ್ಕಿನೊಳಗಿದ್ದ ಕಥಾವಸ್ತುಗಳ ಸಂಘರ್ಷ ಯಾವ ಬಗೆಯದು ಎಂಬುದು ನನಗಾಗ ಅರ್ಥವಾಯಿತು. ಅವು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರಬೇಕು ಎಂಬ ಪ್ರಶ್ನೆ ಎದ್ದಿತು. ಕಥೆಗಳಾಗುವುದಕ್ಕಿಂತ ಅವು ಪತ್ರಿಕಾ ವರದಿಗಳಾಗಲು ಹೆಚ್ಚು ಲಾಯಖ್ಖಾಗಿವೆ ಎನ್ನಿಸಿತು. ಆದರೆ ಐದು ಕಾಲಂಗಳು ಪ್ರಕಟವಾಗುವುದರೊಳಗೆಯೆ ನನ್ನ ಮನಸ್ಸು ಪುನಃ ಬದಲಾಯಿತು. ಅವು ಸಿನೆಮಾಗಳಾದರೆ ಇನ್ನೂ ಚೆನ್ನಾಗಿರುತ್ತದೆ ಎನ್ನಿಸಿತು. ಹಾಗಾಗಿಯೆ ಐದು ಸಿನೆಮಾಗಳು ಹಾಗೂ ಒಂದು ಟಿ.ವಿ.ಧಾರಾವಾಹಿ ಸಿದ್ಧವಾದದ್ದು.

ಪತ್ರಿಕೆಗಳಿಗೆ ಮತ್ತು ಚಲನಚಿತ್ರಗಳಿಗಾಗಿ ಬರೆಯತೊಡಗಿದರೆ ನನ್ನ ಕಥೆಗಳ ಕಥಾವಸ್ತುವೆ ಬದಲಾಗಿಹೋಗಬಹುದು ಎಂಬ ಸಂಗತಿ ಮೊದಮೊದಲು ನನ್ನ ಗಮನಕ್ಕೇ ಬರಲಿಲ್ಲ. ಆದ್ದರಿಂದಾಗಿ ಈಗ ಅಂತಿಮವಾಗಿ ಅವನ್ನ ಕಥೆಗಳನ್ನಾಗಿ ಮಾಡುವಾಗ ನಿರ್ದೇಶಕರುಗಳು ನನ್ನ ತಲೆಗೆ ತುಂಬಿದ ವಿಚಾರಗಳಿಂದ ನನ್ನ ಮೂಲ ಕಥಾವಸ್ತುವನ್ನ ಬೇರ್ಪಡಿಸಲು ಎಚ್ಚರದ ತಂಡಾಸವನ್ನು ಬಳಸಬೇಕಾಯಿತು. ಐವರು ಬೇರೆ ಬೇರೆ ರೀತಿಯ ಸೃಜನಶೀಲ ಕಲಾವಿದರೊಡನೆ ದುಡಿಯುವಾಗ ಒಂದು ಬೇರೆಯೆ ಥರದ ಕಥನ ಕ್ರಮ ಹೊಳೆದಂತಾಗಿತ್ತು. ಒಂದನ್ನ ಬರೆಯತೊಡಗುವುದು, ಬೇಸರ ಬಂದಾಗ, ಅಥವಾ ಇನ್ನಾವುದೊ ಯೋಜನೆ ಎದುರಾದಾಗ ಇದನ್ನ ಕೈಬಿಡುವುದು. ಹೀಗೆ ಮಾಡಿದಾಗ ಒಂದೆ ವರ್ಷದ ಒಳಗೆ ಹದಿನೆಂಟರ ಪೈಕಿ ಆರು ಕಥಾವಸ್ತುಗಳು ಕಸದ ಬುಟ್ಟಿ ಸೇರಿದ್ದವು. ನನ್ನ ಶವಸಂಸ್ಕಾರ ಕುರಿತ ಕಥೆಯೂ ಅದರಲ್ಲಿ ಸೇರಿತ್ತು. ಯಾಕೆಂದರೆ ಆ ವಸ್ತು ನನ್ನ ಕನಸಿನಲ್ಲಿ ನೀಡಿದ್ದ ಅದ್ಭುತ ರೌದ್ರ ಅನುಭವವನ್ನು

ನನ್ನ ಲಿಖಿತಕತೆ ನೀಡದೆ ಹೋಯಿತು. ಉಳಿದ ಕಥಾವಸ್ತುಗಳೇನೊ ಪಾಪ, ಸಾಕಷ್ಟು ಕಾಲ ಬಾಳುವಂಥ ಕತೆಗಳಾಗುವ ಸೂಚನೆ ನೀಡಿದವು.

ಅವೆ ಈ ಸಂಕಲನದಲ್ಲಿರುವ ಹನ್ನೆರಡು ಕತೆಗಳು. ಎರಡು ವರ್ಷದ ಬಿಟ್ಟೂಬಿಡದ ದುಡಿಮೆಯ ನಂತರ ಕಳೆದ ಸೆಪ್ಟೆಂಬರಿನಲ್ಲಿ ಅವು ಅಚ್ಚಿನ ಮನೆ ಕಂಡವು. ಅಲ್ಲಿಗೆ ಮೇಜಿನಿಂದ ಕಸದ ಬುಟ್ಟಿಗೆ ಕಸದ ಬುಟ್ಟಿಯಿಂದ ಮೇಜಿಗೆ ಅವು ನಡೆಸುತ್ತಿದ್ದ ನಿರಂತರ ಯಾತ್ರೆ ಕೊನೆಗೊಂಡಂತಾಯಿತು. ಆದರೆ ಅಷ್ಟರಲ್ಲಿ ಇನ್ನೊಂದು ಅನಿಷ್ಟ ಅನುಮಾನ ನನ್ನ ಬೆನ್ನು ಹತ್ತಿತ್ತು. ಈ ಕತೆಗಳು ಘಟಿಸುವುದು ಯೂರೋಪಿಯನ್ ನಗರಗಳಲ್ಲಿ. ಅವುಗಳಲ್ಲಿದ್ದು ಬಂದ ಇಪ್ಪತ್ತು ವರ್ಷಗಳ ನಂತರ ದೂರದೇಶದಲ್ಲಿ ಕೂತು ಬರೆದ ಈ ಕತೆಗಳ ಸಂಬಂಧದ ನನ್ನ ನೆನಪುಗಳ ನಿಖರತೆಯನ್ನು ಈಗ ಮತ್ತೊಮ್ಮೆ ತಾಳೆ ನೋಡಬೇಕೆನಿಸಿತು. ಕೂಡಲೆ ನಾನು ಬಾರ್ಸಿಲೋನಾ, ಜಿನೀವಾ, ರೋಂ ಮತ್ತು ಪ್ಯಾರಿಸ್‌ಗಳಿಗೆ ಮಿಂಚಿನ ಭೇಟಿ ನೀಡಿ ಅವುಗಳ ಮರುಪರಿಚಯ ಮಾಡಿಕೊಂಡೆ.

ಇವತ್ತಿನ ಆ ನಗರಗಳಿಗು ನನ್ನ ನೆನಪಿಗು ಯಾವುದೇ ಸಂಬಂಧವಿಲ್ಲ ಎನ್ನಿಸಿತು. ಇದೊಳ್ಳೆ ವಿಪರ್ಯಾಸ ಎನ್ನಿಸಿತು. ವರ್ತಮಾನದ ಯುರೋಪಿನ ಹಾಗೆ ಆ ನಗರಗಳೆಲ್ಲವೂ ಅಪರಿಚಿತವೆನಿಸಿದವು. ನನ್ನ ನೆನಪುಗಳೆ ದುಃಸ್ವಪ್ನದಂತೆ ಕಂಡವು. ಸುಳ್ಳು ನೆನಪುಗಳು ವಾಸ್ತವದ ಸ್ಥಾನವನ್ನು ಆಕ್ರಮಿಸಿಕೊಂಡಿದ್ದವು. ಹಳೆಯ ಹಂಬಲಗಳು ಮತ್ತು ಹೊಸ ನಿರಸನಗಳ ನಡುವಿನ ವಿಭಾಜಕ ರೇಖೆ ಕಾಮದಂತಾಗಿತ್ತು. ಅದೊಂದು ನಿರ್ಣೀತ ಪರಿಹಾರದಂತಿತ್ತು. ಕೇವಲ ಸರಿದು ಹೋಗುವ ವರ್ಷಗಳು ಮಾತ್ರ ನೀಡುವಂಥದ್ದನ್ನ, ಒಂದು ಪುಸ್ತಕ ಮುಗಿಸಲು ಅತ್ಯಂತ ಅವಶ್ಯಕವಾದದ್ದನ್ನ, ಕಟ್ಟಕಡೆಗೆ ಹಿಡಿದು ಬಿಟ್ಟಿದ್ದೆ: ಅದೆ 'ಕಾಲದ ಕಣ್ಣೆಲೆ'.

ಸುದೈವದ ಈ ಪ್ರವಾಸದಿಂದ ವಾಪಸ್ ಬಂದ ಮೇಲೆ ಎಂಟು ತಿಂಗಳು ದೆವ್ವ ಹಿಡಿದವನಂತೆ ಬರೆಯುತ್ತ ಕೂತು ಎಲ್ಲ ಕತೆಗಳನ್ನೂ ಹೊಸದಾಗಿ ಸೃಷ್ಟಿಸಿದೆ. ಯುರೋಪಿನಲ್ಲಿ ಇಪ್ಪತ್ತು ವರ್ಷಗಳ ಹಿಂದೆ ನನ್ನ ಅನುಭವಕ್ಕೆ ಬಂದದ್ದು ಯಾವುದೂ ನಿಜವಿರಲಿಕ್ಕಿಲ್ಲ ಎಂಬ ಉಪಯುಕ್ತ ಗುಮಾನಿಯಿಂದಾಗಿ, ಜೀವನ ಎಲ್ಲಿ ಮುಗಿಯುತ್ತದೆ ಕಲ್ಪನೆ ಎಲ್ಲಿ ಪ್ರಾರಂಭವಾಗುತ್ತದೆ ಎಂದು ನನ್ನನ್ನು ನಾನೆ ಕೇಳಿ ಕೊಳ್ಳಬೇಕಾದ ಪ್ರಮೇಯವೇ ಉಳಿದಿರಲಿಲ್ಲ, ಅಷ್ಟುಹೊತ್ತಿಗೆ ಬರವಣಿಗೆಯೂ ಬಹಳ ಸಲೀಸಾಗಿ ಹೋಗಿತ್ತು. ಕತೆ ಹೇಳುವ ಖುಷಿಗಾಗಿಯಷ್ಟೆ ಹೇಳುತ್ತಿದ್ದೇನೆ ಎಂದು ಎಷ್ಟೋ

ಸಲ ಅನ್ನಿಸಿತು. ಲಘಿಮಾಶಕ್ತಿಗೆ ಹತ್ತಿರವಾದ ಮಾನವಾನುಭವ ಅಂದರೆ ಇದೆ ಇರಬಹುದು. ಎಲ್ಲಾ ಕತೆಗಳನ್ನೂ ಒಟ್ಟೊಟ್ಟಿಗೆ ಬರೆಯಲಾರಂಭಿಸಿದ್ದರಿಂದ, ಬೇಕಾದಂತೆ ಹಿಂದಕ್ಕೂ ಮುಂದಕ್ಕೂ ಕಾಲದಲ್ಲಿ ಸರಿದಾಡಬಲ್ಲೆನಾಗಿದ್ದರಿಂದ ಒಂದು ಅಗಾಧವಾದ ಅಖಂಡ ದೃಷ್ಟಿ ಒದಗಿತ್ತು. ಬೇಸ್ತು ಬೀಳಿಸುವ ಕಾಲಕ್ರಮತೆಯಿಂದ ಅದು ನನ್ನನ್ನು ಕಾಪಾಡಿತು. ಅಷ್ಟೆ ಅಲ್ಲ, ಬೇಜವಾಬ್ದಾರಿಯ ಪುನರುಕ್ತಿಗಳನ್ನೂ ದುರಾದೃಷ್ಟಕರ ವಿರೋಧಾಭಾಸಗಳನ್ನೂ ತೊಡೆದು ಹಾಕುವ ಕಲೆಯನ್ನು ಕಲಿಸಿತು. ಹೀಗಾಗಿ ನನ್ನ ಕಲ್ಪನೆಯಲ್ಲಿದ್ದ ಕಥಾಸಂಕಲನಕ್ಕೆ ಅತ್ಯಂತ ಹತ್ತಿರವಾಗಿರುವಂತೆ ಈ ಕಥಾಸಂಕಲನವನ್ನು ಸಿದ್ಧಪಡಿಸಲು ಸಾಧ್ಯವಾಯಿತು.

ಇಷ್ಟೆಲ್ಲ ಸುತ್ತಾಟದ ನಂತರ ಇದೀಗ ಈ ಸಂಕಲನ ಓದುಗರ ಕೈಗೆ ಒದಗಿದೆ. ಅನಿಶ್ಚಿತತೆಯ ವಕ್ರತೆಯಿಂದ ಪಾರಾಗಲು ಹೋರಾಡಿ ಗೆದ್ದಿದೆ. ಮೊದಲ ಎರಡು ಕತೆಗಳನ್ನ ಬಿಟ್ಟರೆ ಉಳಿದವೆಲ್ಲ ಒಟ್ಟೊಟ್ಟಿಗೆ ಬರೆದು ಮುಗಿಸಿದಂಥವು. ಪ್ರತಿಯೊಂದು ಕತೆಯ ಕೊನೆಯಲ್ಲು ಅದನ್ನು ಪ್ರಾರಂಭಿಸಿದ ತಿಂಗಳನ್ನು ನಮೂದಿಸಿದ್ದೇನೆ. ಈ ಸಂಕಲದ ಕತೆಗಳು ಆ ನನ್ನ ನೋಟ್‌ಬುಕ್ಕಿನ ಪರಿವಿಡಿಯನ್ನೆ ಅನುಸರಿಸಿ ಪ್ರಕಟಗೊಂಡಿವೆ.

ಯಾವುದೆ ಕತೆಯ ಬೇರೆ ಬೇರೆ ರೂಪಗಳು ಹಿಂದಿನ ರೂಪಗಳಿಗಿಂತ ಉತ್ತಮವಾಗಿರುತ್ತದೆಂಬುದು ನನ್ನ ನಂಬಿಕೆ. ಹಾಗೆಂದ ಮೇಲೆ ಯಾವುದು ಅಂತಿಮ ರೂಪ ಎಂದು ಹೇಗೆ ನಿರ್ಣಯಿಸುವುದು? ಸಾರು ಸಿದ್ಧವಾಗುವುದು ಯಾವಾಗ ಅನ್ನುವುದು ಅಡಿಗೆಯವನಿಗೆ ಮಾತ್ರ ತಿಳಿಯುವಂತೆ ಇದೂ ಕೂಡಾ ತಾರ್ಕಿಕ ಜಿಜ್ಞಾಸೆಗೆ ಮೀರಿದ ಸಂಗತಿ, ಬರಿ ಪ್ರವೃತ್ತಿಯ ಮೋಡಿಗೆ ಸಿಗುವ ಸಂಗತಿ. ಆದರೂ ಅಕಸ್ಮಾತ್ ಈ ಕತೆಗಳನ್ನ ನಾನೆ ಇನ್ನೊಮ್ಮೆ ಒದುವ ಪ್ರಸಂಗ ಬಂದರೆ? ಅವನ್ನ ಬರೆದದ್ದಕ್ಕೆ ಎಲ್ಲಿ ಪಶ್ಚಾತ್ತಾಪ ಪಡಬೇಕಾಗುತ್ತದೊ ಎಂದು ನಾನು ನನ್ನ ಯಾವ ಪುಸ್ತಕಗಳನ್ನೂ ಓದಲು ಹೋಗುವುದೇ ಇಲ್ಲ. ಈ ಕತೆಗಳನ್ನು ಹೇಗೆ ಸ್ವೀಕರಿಸಬೇಕು ಎಂಬುದು ಹೊಸ ಓದುಗರಿಗೆ ತಿಳಿದೇ ಇರುತ್ತದೆ. ಈ ವಿಚಿತ್ರ ಯಾತ್ರಿಕರಿಗೆ ಅದೃಷ್ಟವಶಾತ್ ಕಸದ ಬುಟ್ಟಿ ಸೇರುವ ಪ್ರಸಂಗ ಬಂದರೆ ವಾಪಸ್ ತಮ್ಮ ಮನೆಗೆ ಹೋದಷ್ಟೇ ಖುಷಿಯಾಗುತ್ತದೆ ಎಂದಷ್ಟೇ ಹೇಳಬಯಸುವೆ.

ನೀರಿನಂಥ ಬೆಳಕು

ಕ್ರಿಸ್‌ಮಸ್‌ನ ದಿವಸ ಮಕ್ಕಳು ಪುನಃ ದೋಣಿಯ ಬೇಡಿಕೆ ಮಂಡಿಸಿದರು.

"ಸರಿ, ಆದರೆ ಈಗಲ್ಲ. ನಾವು ಪುನಃ ಕಾರ್ಟಾಜಿನಕ್ಕೆ ಹಿಂತಿರುಗಿದಾಗ ಕೊಡಿಸುತ್ತೇನೆ." ಎಂದರು.

ಆದರೆ ಒಂಬತ್ತು ವರ್ಷದ ಟೋಟೋ ಹಾಗು ಏಳು ವರ್ಷದ ಜೋಲ್ ಅವರ ಅಪ್ಪ ಅಮ್ಮ ತಿಳಿದು ಕೊಂಡಿದ್ದಕ್ಕಿಂತ ಹೆಚ್ಚಿಗೆ ಹಠವಾದಿಗಳಾಗಿದ್ದರು.

"ಸಾಧ್ಯವೇ ಇಲ್ಲ! ನಮಗೆ ಇಲ್ಲೇ, ಈಗಲೇ ಬೇಕು'; ಎಂದರು ಅವರು ಒಕ್ಕೊರಲಿನಿಂದ.

"ಹೇಳಬೇಕಂದ್ರೆ, ಈ ಊರಿನಲ್ಲಿ ನೀರೇ ಇಲ್ಲವಲ್ಲ. ಮಳೆ ನೀರಲ್ಲಿ ದೋಣಿ ನಡಿಸ್ತೀರಾ?" ಎಂದಳು ಅಮ್ಮ.

ತಾಯಿ ತಂದೆ ಹೇಳಿದ್ದು ಸರಿಯೇ. ಇಂಡಿಯಾಸ್‌ದ ಕಾರ್ಟೇಜಿನಾದಲ್ಲಿ ಅವರ ಮನೆಯ ಹಿತ್ತಲಲ್ಲಿ ಸಮುದ್ರ, ಹಡಗು ಕಟ್ಟೆ, ಎರಡು ದೋಣಿ ನಿಲ್ಲಿಸಬಹುದಾದಂಥ ಒಂದು ಶೆಡ್ ಎಲ್ಲಾ ಇತ್ತು. ಆದರೆ ಈಗ ಅವರಿರುವುದು ಜನನಿಬಿಡ ಮ್ಯಾಡ್ರಿಡ್‌ನಲ್ಲಿ. ಮನೆ, ಪ್ಯಾಸಿಯೋ ಡಿ ಕ್ಯಾಸ್ಟಾಲಿನಾ ಎಂಬ ಗಿಜಿ ಗಿಜಿ ರಸ್ತೆ ೪೭ನೇ ನಂಬರಿನ, ಚಾಳಿನ ಐದನೆಯ ಮಹಡಿಯ ತುದಿಯಲ್ಲಿ. ಅವರು ಮಕ್ಕಳ ಮಾತಿಗೆ ಮಣಿಯಲೇ ಬೇಕಾಯ್ತು.

ಏಕೆಂದರೆ ಶಾಲೆಯಲ್ಲಿ ಮೊದಲ ಬಹುಮಾನ ಗಿಟ್ಟಿಸಿಕೊಂಡರೆ ದಿಕ್ಸೂಚಿ, ಕೋನಮಾಪಕಗಳಿಂದ ಸುಸಜ್ಜಿತ ದೋಣಿ ಕೊಡಿಸುತ್ತೇವೆಂದು ಅವರೇ ತಾನೆ ಭಾಷೆ ನೀಡಿದವರು! ಈಗ ಮಕ್ಕಳು ಮಾತಿನಂತೆ ಮೊದಲ ಬಹುಮಾನಗಳನ್ನು ಗಿಟ್ಟಿಸಿಯಾಗಿದೆ. ಅಂತೂ ಅವರಪ್ಪನೂ ಮಾತಿನಂತೆ ಕೆಳಕ್ಕೆ ಹೊಂಬಣ್ಣದ ನೀರಿನ ಪಟ್ಟೆಯುಳ್ಳ ಸುಂದರವಾದ ಅಲ್ಯೂಮಿನಿಯಂ ದೋಣಿ ತಂದಾಯ್ತು.

"ದೋಣಿ ಗ್ಯಾರೇಜಿನಲ್ಲಿದೆ. ಆದರೆ ಮೇಲಕ್ಕೆ ಹೇಗೆ ತರುವುದು? ಲಿಫ್ಟ್‌ನಲ್ಲಾಗಲೀ ಅಥವಾ ಮೆಟ್ಟಲುಗಳಿಂದಾಗಲಿ ತರಲು ಸಾಧ್ಯವಿಲ್ಲ. ಗ್ಯಾರೇಜಿನಲ್ಲೂ ಇಡಲು ಜಾಗವಿಲ್ಲ." ಎಂದು ಅಪ್ಪ ಕೆಳಗಿನಿಂದಲೇ ಕೂಗಿ ಹೇಳಿದರು.

ಅಂತೂ ಇಂತೂ ದೋಣಿ ಶನಿವಾರ ಮಧ್ಯಾಹ್ನದ ವೇಳೆಗೆ ಮಕ್ಕಳು ಮತ್ತು ಅವರ ಸ್ನೇಹಿತರ ಸಹಾಯದಿಂದ ಮಹಡಿ ಏರಿ ಕೋಣೆ ಸೇರಿತು.

"ಶಹಭಾಶ್ ಮಕ್ಕಳೇ, ಈಗೇನು ಮಾಡುವಿರಿ" ಎಂದರು ಅವರ ಅಪ್ಪ.

"ಏನೂ ಇಲ್ಲ, ನಮಗೆ ಒಂದು ದೋಣಿ ಬೇಕಾಗಿತ್ತು. ಅದು ಸಿಕ್ಕಾಯ್ತು ಅಷ್ಟೇ" ಎಂದವು ಮಕ್ಕಳು.

ಪ್ರತಿ ಬುಧವಾರದಂತೆ ಆ ಬುಧವಾರವೂ ಅವರ ಅಪ್ಪ, ಅಮ್ಮ ಸಿನಿಮಾಕ್ಕೆ ಹೊರಟರು. ತತ್‌ಕ್ಷಣವೇ ಆ ಮನೆಯ ದೊರೆಗಳೂ ಒಡೆಯರೂ ಆದ ಮಕ್ಕಳು. ಬಾಗಿಲು ಮುಚ್ಚಿ ಹಾಲಿನಲ್ಲಿ ಉರಿಯುತ್ತಿದ್ದ ಬಲ್ಬನ್ನು ಪಳ್ಳನೆ ಒಡೆದರು. ಕೂಡಲೆ ತಂಪಾದ ನೀರಿನಂತೆ ಬೆಳಕಿನ ಚಿಲುಮೆ ಪ್ರವಹಿಸಿತು. ಮೂರು ಅಡಿ ಆಳದಷ್ಟು ಬೆಳಕು ಪ್ರವಹಿಸಿದ ನಂತರ ವಿದ್ಯುತ್ ಪ್ರವಾಹವನ್ನು ನಿಲ್ಲಿಸಿ ಹುಟ್ಟು ಹಾಕುತ್ತಾ ಮನೆಯಲ್ಲಿಯೇ ದ್ವೀಪಗಳ ನಡುವೆ ದೋಣಿ ನಡೆಸ ತೊಡಗಿದರು.

ಈ ಅದ್ಭುತ ಸಾಹಸ, ಗೃಹಕೃತ್ಯ ವಸ್ತುಗಳ ಕವಿತ್ವದ ಮೇಲೆ ನಡೆದ ವಿಚಾರ ಸಂಕಿರಣದಲ್ಲಿ ಪ್ರಶ್ನೆಯೊಂದಕ್ಕೆ ನಾನು ಕೊಟ್ಟ ಉಡಾಫೆ ಉತ್ತರದ ಫಲವಾಗಿತ್ತು. "ಸ್ವಿಚ್ ಅದುಮಿದ ಕೂಡಲೇ ಬೆಳಕು ಹೇಗೆ ಚಿಮ್ಮುತ್ತದೆ?" ಟೋ ಟೋ ನನ್ನನ್ನು ಕೇಳಿದ. ಆ ಹುಡುಗನಿಗೆ ತಕ್ಷಣ ಏನೂ ಉತ್ತರ ಹೇಳಲು ನನಗೆ ತೋಚದೆ "ಬೆಳಕೂ ಕೂಡ ನೀರಿನಂತೆಯೇ ನಲ್ಲಿ ತಿರುಗಿಸಿದಾಕ್ಷಣ ನೀರು ಹೊರಗೆ ಬರುವುದಿಲ್ಲವೇ, ಹಾಗೆಯೇ ಸ್ವಿಚ್ ಅದುಮಿದ ಕೂಡಲೇ ಬೆಳಕೂ ಹೊರಹೊಮ್ಮುತ್ತದೆ" ಎಂದಿದ್ದೆ.

ಪ್ರತಿ ಬುಧವಾರ ರಾತ್ರಿ ಅವರು ಹೀಗೆಯೇ ಈಜುತ್ತ ಈಜುತ್ತ ದಿಕ್ಸೂಚಿ.

ಕೋನ ಮಾಪಕಗಳನ್ನು ಬಳಸುವ ಕಲೆಯಲ್ಲಿ ಪರಿಣತಿ ಹೊಂದಿದರು. ಆದರೆ ತಂದೆಯರು ಬರುವ ಹೊತ್ತಿಗೆ ಮಾತ್ರ ಶುಷ್ಕ ಭೂಮಿಯ ಮೇಲೆ ಪವಡಿಸಿರುವ ದೇವತೆಗಳಂತೆ ನಿದ್ರಿಸುತ್ತಿದ್ದರು. ಕೆಲವು ತಿಂಗಳುಗಳು ಉರುಳಿದ ನಂತರ ದೂರ ಹೋಗಬೇಕೆನ್ನುವ ಆಸೆ ತೀವ್ರವಾಗಿ ಅಂತರ್ಜಲ ಉಡುಗೆ ತೊಡುಗೆಗಳಾದ ಮುಖವಾಡ, ಈಜುರೆಕ್ಕೆ. ಕೊಳವೆಗಳು ಹಾಗೂ ಬಂದೂಕುಗಳಿಗೆ ಬೇಡಿಕೆ ಸಲ್ಲಿಸಿದರು.

"ಈಗಾಗಲೇ ದೋಣಿ ಆ ಕೋಣೆಯಲ್ಲಿ ವ್ಯರ್ಥವಾಗಿ ಬಿದ್ದಿದೆ. ಅದು ಸಾಲದೂಂತ ನಿಮಗೆ ಇವೆಲ್ಲ ಉಪಕರಣಗಳು ಬೇರೆ ಬೇಕೋ?" ಅಪ್ಪ ಗದರಿದರು.

"ನಾವು ಮೊದಲ ಸೆಮಿಸ್ಟರ್‌ನಲ್ಲಿ ಚಿನ್ನದ ಪದಕ ಗೆದ್ದು ಕೊಂಡರೆ" ಜೋಲ್ ಕೇಳಿದ.

"ಸಾಕು, ಸಾಕು ಚಿನ್ನದ ಪದಕವೂ ಬೇಡ ಏನು ಬೇಡ", ಅಮ್ಮ ಎಂದಳು.

ಆಕೆಯ ನಿಷ್ಠುರ ನುಡಿಗೆ ಗಂಡನೇ ಅವಳನ್ನು ಗದರಿದ.

"ಈ ಮಕ್ಕಳು ಮಾಡಬೇಕಾದದ್ದನ್ನು ಮಾಡಿ ಎಂದಾಗ ಏನನ್ನೂ ಒಂದು ಉಗುರಿನಷ್ಟೂ ಗೆಲ್ಲುವುದಿಲ್ಲ. ಅವರಿಗೆ ಬೇಕಾದ್ದನ್ನು ಗಿಟ್ಟಿಸಿಕೊಳ್ಳಲು ಮಾತ್ರಾ ಏನನ್ನು ಬೇಕಾದರೂ ಗೆಲ್ಲುತ್ತಾರೆ. ಆ ಉಪಾಧ್ಯಾಯರ ಕುರ್ಚಿಯಾದಿಯಾಗಿ."

ಕೊನೆಯಲ್ಲಿ ಅಪ್ಪ, ಅಮ್ಮ ಹುಂ ಊಹೂಂ ಯಾವುದೂ ಹೇಳಲಿಲ್ಲ. ಆದರೆ ಜುಲೈನಲ್ಲಿ ಟೋಟೋ ಮತ್ತು ಜೋಲ್ ಇಬ್ಬರೂ ಚಿನ್ನದ ಪದಕಗಳನ್ನೂ, ಉಪಾಧ್ಯಾಯರ ಮುಕ್ತ ಪ್ರಶಂಸೆಯನ್ನು ಗೆದ್ದುಕೊಂಡರು. ಮತ್ತು ಅದೇ ಮಧ್ಯಾಹ್ನ ಪುನಃ ಕೇಳದೆಯೇ ಅವರ ಕೋಣೆಯಲ್ಲಿ ಅಂತರ್ಜಲ ಉಪಕರಣಗಳು ಅವರನ್ನು ನಿರೀಕ್ಷಿಸುತ್ತಿದ್ದವು.

ಬುಧವಾರ ಮಾಮೂಲಿನಂತೆ ಅವರ ತಾಯಿ ತಂದೆ "ಲ್ಯಾಸ್ಟ್ ಟ್ಯಾಂಗೋ ಇನ್ ಪ್ಯಾರಿಸ್" ಎಂಬ ಸಿನಿಮ ನೋಡುತ್ತಿದ್ದಾಗ ಮಕ್ಕಳು ಎರಡಾಳಷ್ಟು ಬೆಳಕನ್ನು ಕೋಣೆಯಲ್ಲಿ ತುಂಬಿ ಅಂತರ್ಜಲ ಉಡುಗೆ ತೊಡುಗೆಗಳನ್ನು ತೊಟ್ಟು ಪಳಗಿದ ಶಾರ್ಕ್‌ಗಳಂತೆ ಮಂಚ, ಮೇಜು ಕುರ್ಚಿಗಳ ಕೆಳಗೆಲ್ಲಾ ಈಜ ತೊಡಗಿದರು.

ಶಾಲಾ ಮುಕ್ತಾಯ ಸಮಾರಂಭದಂದು ಈ ಸಹೋದರರನ್ನು ಶಾಲೆಯ ಮಾದರಿ ವಿದ್ಯಾರ್ಥಿಗಳೆಂದು ಘೋಷಿಸಿ ಉತ್ಕೃಷ್ಟತೆಯ ಪ್ರಮಾಣ ಪತ್ರಗಳನ್ನು ನೀಡಲಾಯಿತು. ಈ ಬಾರಿ ಅವರ ಅಪ್ಪನೇ ಅವರಿಗೆ ಏನು ಬೇಕೆಂದು ಕೇಳಿದರು. ಆದರೆ ಮಕ್ಕಳು

ಅವರಿಗಾಗಿ ಏನೂ ಕೇಳದೆ ಅವರ ಸಹಪಾಠಿಗಳಿಗೆ ಮನೆಯಲ್ಲೇ ಔತಣ ಕೊಡಿಸಿದರಾಯಿತೆಂದರು.

"ನೋಡು, ನಮ್ಮ ಮಕ್ಕಳ ಪ್ರಬುದ್ಧತೆಗೆ ಇದೇ ಸಾಕ್ಷಿ" ಎಂದನು ಅಪ್ಪ, ಅಮ್ಮನೊಡನೆ ಏಕಾಂತದಲ್ಲಿ.

"ಸಾಕು ಸಾಕು ಅವರ ಪ್ರಬುದ್ಧತೆ ನಿಮಗೂ, ಆ ದೇವರಿಗೂ ಇಬ್ಬರಿಗೇ ಪ್ರೀತಿ" ಎಂದಳು ಅಮ್ಮ.

ಬುಧವಾರದಂದು ಅಪ್ಪ, ಅಮ್ಮ 'ದಿ ಬ್ಯಾಟಲ್ ಆಫ್ ಆಲ್‌ಜೀರ್ಸ್' ಎಂಬ ಸಿನಿಮಾಕ್ಕೆ ಹೋಗಿದ್ದಾಗ ಪ್ಯಾಸಿಯೋ ಡಿ ಕಾಟ್ಯಾಲಿನಾ ರಸ್ತೆಯಲ್ಲಿ ಓಡಾಡುತ್ತಿದ್ದ ಜನ, ಮರಗಳ ಮಧ್ಯೆ ಅಡಗಿದ್ದ ಒಂದು ಪುರಾತನ ಕಟ್ಟಡದಿಂದ ಧುಮುಕುತ್ತಿರುವ ಬೆಳಕಿನ ಜಲಪಾತವನ್ನು ಕಂಡರು. ಬೆಳಕು ಛಾವಣಿಯ ಮೇಲಿಂದ ಅಲೆ ಅಲೆಯಾಗಿ ಬಂದು ಭವನದಿಂದ ಧುಮುಕುತ್ತಾ ಗೊಡೋರಮಾದವರೆಗಿನ ಸಾಲು ಮರಗಳಿಂದ ಕೂಡಿದ ಆ ವಿಶಾಲ ರಸ್ತೆಯ ಉದ್ದಗಲಕ್ಕೂ ಹೊನ್ನ ಪ್ರವಾಹದಂತೆ ಪ್ರವಹಿಸಿ ಇಡೀ ನಗರವನ್ನೇ ಬೆಳಗಿಸಿತು.

ತುರ್ತು ಕರೆಗೆ ಪ್ರತಿಕ್ರಿಯಿಸಿ ಅಗ್ನಿ ಶಾಮಕದಳ ಐದನೆಯ ಮಹಡಿಯಲ್ಲಿ ಅವರ ಆನೆಯ ಬಾಗಿಲನ್ನು ಬಲವಂತವಾಗಿ ಭೇದಿಸಿ ಹೊಕ್ಕಾಗ ಸೂರಿನವರೆಗೆ ಬೆಳಕು ತುಂಬಿ ಸೂಸುತ್ತಿತ್ತು. ಹಾಲಿನಲ್ಲಿ ಚಿರತೆ ಚರ್ಮ ಹೊದ್ದಿಸಿದ್ದ ಸೋಫಾ, ಅರಾಮ ಕುರ್ಚಿ, ಮನೆಯ ಬಾರ್‌ನಿಂದ ಬಾಟಲ್‌ಗಳು ಎಲ್ಲಾ ತೇಲಾಡುತ್ತಿದ್ದವು. ಪಿಯಾನೊ ಬೆಳಕಿನಲ್ಲಿ ಮುಳುಗಿ, ಅದಕ್ಕೆ ಹೊದ್ದಿಸಿದ ಮನಿಲಾ ಶಾಲಿನ ಅರ್ಧ ಭಾಗ ಮುಳುಗಿ ಉಳಿದರ್ಧ ಭಾಗ ಸುವರ್ಣ ಮ್ಯಾಂಟಾ ಕಿರಣದಂತೆ ಪಟ ಪಟ ಹಾರಾಡುತ್ತಿತ್ತು. ಮನೆಬಳಕೆಯ ವಸ್ತುಗಳು ಗರಿಗೆದರಿ ತಮ್ಮ ಸಂಪೂರ್ಣ ಕವಿತ್ವದೊಂದಿಗೆ ಅಡಿಗೆ ಮನೆಯ ಗಗನಕ್ಕೆ ಲಗ್ಗೆ ಇಟ್ಟವು. ಮಕ್ಕಳು ನೃತ್ಯಕ್ಕೆ ಉಪಯೋಗಿಸುತ್ತಿದ್ದ ವಾದ್ಯಗಳು, ಅವರ ತಾಯಿಯ ಜಲಾಗಾರದಿಂದ ವಿಮುಕ್ತಿಹೊಂದಿದ ಕೋರೈಸುವ ರಂಗು ರಂಗಿನ ಮೀನುಗಳ ನಡುವೆ ಈಜಾಡ ತೊಡಗಿದವು. ಆ ವಿಶಾಲ, ಪೂರ್ಣ ಪ್ರಕಾಶಿತ ಜೊಂಡಿನ ನಡುವೆ ಈ ಮೀನುಗಳು ಮಾತ್ರ ಏಕೈಕ ಸಂತುಷ್ಟ ಜೀವ ಜಂತುವಾಗಿದ್ದವು. ಬಚ್ಚಲ ಮನೆಯಲ್ಲಿ ತೇಲಾಡುತ್ತಿದ್ದ ಎಲ್ಲರ ಟೂತ್‌ಬ್ರಶ್‌ಗಳಿಗೆ ಅಪ್ಪನ ಕಾಂಡೋಂಗಳು ಅಮ್ಮನ ಐಸ್‌ಕ್ರೀಂ

ಜಾಡಿಗಳು, ಬ್ರಿಡ್ಜ್ ಕಾರ್ಡ್‌ಗಳು "ವಯಸ್ಕರಿಗಾಗಿ ಮಾತ್ರ" ಸಿನಿಮಾ ಒಂದರ ಕೊನೆಯ ಅಂಕ ದರ್ಶಿಸುತ್ತಿದ್ದ ಟೆಲಿವಿಶನ್ ಸೆಟ್ ಜೊತೆ ನೀಡಿದವು.

ಹಜಾರದ ಕೊನೆಯಲ್ಲಿ ಟೋ ಟೋ ಬಂದರು ತಲುಪಲು ಅಗತ್ಯವಾದಷ್ಟು ಗಾಳಿಯೊಂದಿಗೆ ಮುಖವಾಡ ಧರಿಸಿ ದೋಣಿಯ ತುದಿಯಲ್ಲಿ ಹುಟ್ಟು ಹಿಡಿದು ಕುಳಿತು ಪ್ರವಾಹದಲ್ಲಿ ಮುನ್ನುಗುತ್ತಾ ಸಮುದ್ರ ದೀಪವನ್ನು ಹುಡುಕುತ್ತಿದ್ದ. ಜೋಲ್ ತನ್ನ ದೋಣಿಯಲ್ಲಿ ಕುಳಿತು ದಿಕ್ಸೂಚಿಯ ಸಹಾಯದಿಂದ ಧ್ರುವ ನಕ್ಷತ್ರವನ್ನು ಹುಡುಕುತ್ತಿದ್ದ. ಜೊತೆಯಲ್ಲಿ ಅವರ ೩೭ ಸಹಪಾಠಿಗಳು ಜಿರಾನಿಯಂ ಪಾಟ್‌ಗಳಲ್ಲಿ ಇಣುಕುತ್ತಾ, ಅಪ್ಪನ ಬಾಟಲ್‌ನಿಂದ ಬ್ರಾಂಡಿ ಕುಡಿಯುವಂತೆ ನಟಿಸುತ್ತಾ ಶಾಲಾಗೀತೆಗಳ ಅಣಕ ಹಾಡುತ್ತಾ ಈಜಿನಲ್ಲಿ ಲೀನವಾಗಿದ್ದರು. ಅವರು ಒಂದೇ ಬಾರಿಗೆ ಬಹಳಷ್ಟು ದೀಪಗಳನ್ನು ಹಾಕಿದ್ದರಿಂದ ಇಡೀ ಭವನವೇ ಬೆಳಕಿನ ಪ್ರವಾಹದಲ್ಲಿ ಮುಳುಗಿ ಸೇಂಟ್ ಜುಲಿಯಾನ ಹಾಸ್ಪಿಟಲರ್‌ನ ಪ್ರಾಥಮಿಕ ಶಾಲೆಯ ಎರಡು ತರಗತಿಗಳು ಸಂಪೂರ್ಣವಾಗಿ ಪ್ಯಾಸಿಯೋ ಡಿ ಕ್ಯಾಸ್ಟಾಲಿವಾದ ೪೭ ನಂಬರಿನ ಐದನೆಯ ಮಹಡಿಯಲ್ಲಿ ಮುಳಗಿ ಹೋಗಿದ್ದವು. ಒಂದು ನದಿಯಾಗಲೀ ಸಮುದ್ರವಾಗಲೀ ಇಲ್ಲದ, ಉರಿಯುವ ಬೇಸಿಗೆ, ಕೊರೆಯುವ ಹಿಮಗಾಳಿಯಿಂದ ಕೂಡಿದ ಸ್ಪೇಯಿನ್‌ನ ಕೊಯಿಮೂಲೆಯಲ್ಲಿರುವ ಮ್ಯಾಡ್ರಿಡ್‌ನ ಜನ ಹಿಂದಂದೂ ಪ್ರಕಾಶಯಾನದ ವಿಜ್ಞಾನದಲ್ಲಿ ಪರಿಣತಿ ಹೊಂದಿರಲಿಲ್ಲ.

ಕನ್ನಡಕ್ಕೆ : ಶ್ಯಾಮಲಾ ಕೆ.

ಕಾಗದದ ಗುಲಾಬಿಗಳು

ನಸುಕಿನಲ್ಲಿಯೇ ಎದ್ದ ಮಿನ್ನಿ ತಾನು ಹೋಗಬೇಕಾದ ದಾರಿಯನ್ನು ಕಲ್ಪಿಸಿಕೊಳ್ಳುತ್ತ, ರಾತ್ರಿಯೇ ತೆಗೆದು ಹಾಸಿಗೆಯ ಪಕ್ಕದಲ್ಲಿಟ್ಟಿದ್ದ ತೋಳಿಲ್ಲದ ಡ್ರೆಸ್ ತೊಟ್ಟುಕೊಂಡಳು. ಬೇರ್ಪಡಿಸಬಹುದಾಗಿದ್ದಂತಹ ತೋಳಿನ ಭಾಗಗಳಿಗಾಗಿ ಸದ್ದು ಮಾಡದೆ ಪೆಟ್ಟಿಗೆಯಲ್ಲಿ ಹುಡುಕಾಡಿದಳು - ಅಲ್ಲಿರಲಿಲ್ಲ; ಗೋಡೆಯ ಮೇಲಿನ ಮೊಳೆಗಳತ್ತ ಕಣ್ಣಾಡಿಸಿದಳು - ಕಾಣಿಸಲಿಲ್ಲ; ಬಾಗಿಲ ಹಿಂದೆ ಇರಬಹುದೇ ಎಂದು ಹುಡುಕಿದಳು - ಇರಲಿಲ್ಲ. ಅಲ್ಲೇ ಮಲಗಿದ್ದ ಕುರುಡಿ ಅಜ್ಜಿಯ ನಿದ್ದೆಗೆ ತೊಂದರೆಯಾಗಬಾರದೆಂದು ಶಬ್ದ ಮಾಡದೆ ಮತ್ತೊಮ್ಮೆ ಎಲ್ಲ ಕಡೆ ನೋಡಿದಳು. ಕಣ್ಣುಗಳು ಕ್ರಮೇಣ ಕತ್ತಲೆಗೆ ಹೊಂದಿಕೊಂಡಂತೆ ಅಜ್ಜಿಯ ಬರಿದಾದ ಹಾಸಿಗೆ ಕಾಣಿಸಿತು. ಅವಳನ್ನೇ ಕೇಳುತ್ತೇನೆಂದುಕೊಂಡು ಅಡಿಗೆ ಮನೆಯತ್ತ ಹೋದಳು.

'ಬಚ್ಚಲುಮನೆಯಲ್ಲಿರಬೇಕು, ನೋಡು. ನೆನ್ನೆ ಒಗೆದು ಒಣಹಾಕಿದ್ದೆ' ಅಜ್ಜಿ ಹೇಳಿದಳು. ತಂತಿಯ ಮೇಲೆ ಹರವಿ ಮರದ ಕ್ಲಿಪ್ ಹಾಕಿದ್ದ ತೋಳುಗಳು ಅಲ್ಲಿ ತೂಗಾಡುತ್ತಿದ್ದವು. ಮಿನ್ನಿ ಹೋಗಿ ಮುಟ್ಟಿ ನೋಡಿದಳು. ಅವಿನ್ನೂ ಒದ್ದೆಯಾಗಿದ್ದವು. ಅವುಗಳನ್ನು ತೆಗೆದುಕೊಂಡು ಅಡಿಗೆಮನೆಗೆ ಹೋಗಿ ಉರಿಯುತ್ತಿದ್ದ ಒಲೆಯ ಮುಂದಿದ್ದ ಕಲ್ಲುಹಾಸಿನ ಮೇಲೆ ಒಣಹಾಕಿದಳು. ಅಲ್ಲಿಯೇ ಪಕ್ಕದಲ್ಲಿ ಅಜ್ಜಿ ಕಾಫಿ ಬೆರೆಸುತ್ತಿದ್ದಳು. ಸ್ವಲ್ಪ ದೂರದಲ್ಲಿ ಆ ಕಡೆ ಹೂವಿನ ಕುಂಡಗಳು ಸಾಲಾಗಿ ಜೋಡಿಸಲ್ಪಟ್ಟಿದ್ದವು.

'ಎಷ್ಟು ಸಲ ಹೇಳೋದು, ಇನ್ನೊಮ್ಮೆ ನನ್ನ ವಸ್ತುಗಳನ್ನ ಮುಟ್ಟಬೇಡ ಅಂತ. ಈ ಬಿಸಿಲನ್ನಂತೂ ಈಗೀಗ ನಂಬೋ ಹಾಗೇ ಇಲ್ಲ' ಮಿನ್ನಿ ಹೇಳಿದಳು.

ಕುರುಡಿ ಅಜ್ಜಿ ಶಬ್ದ ಬಂದ ಕಡೆ ಮುಖ ತಿರುಗಿಸಿ 'ಇವತ್ತು ಮೊದಲ ಶುಕ್ರವಾರ ಅಂತ ಮರೆತುಹೋಗಿತ್ತು' ಎಂದು ಹೇಳಿ ಜೋರಾಗಿ ಒಮ್ಮೆ ಉಸಿರೆಳೆದು, ಕಾಫಿ ಹದವಾಗಿದೆಯೆಂದು ಖಚಿತಪಡಿಸಿಕೊಂಡು ಒಲೆಯ ಮೇಲಿಂದ ಕೆಳಗಿಳಿಸಿ 'ಆ ಕಲ್ಲು ಹಾಸು ತುಂಬ ಕೊಳೆಯಾಗಿದೆ. ಅದರ ಮೇಲೊಂದು ಪೇಪರ್ ಹಾಕಿ ಒಣಹಾಕು' ಎಂದಳು.

ಮಿನ್ನಿ ತನ್ನ ತೋರುಬೆರಳಿನಿಂದ ಕಲ್ಲುಹಾಸಿನ ಮೇಲೊಮ್ಮೆ ಜೋರಾಗಿ ಉಜ್ಜಿದಳು. ಕೊಳೆ ಕೈಗೆ ಮೆತ್ತಿಕೊಂಡಿತು. ಉಜ್ಜಿದರೆ ಮಾತ್ರ ಕೊಳೆ ಅಂಟುತ್ತಿದ್ದುದರಿಂದ ತೋಳಿನ ಭಾಗಗಳನ್ನು ತೆಗೆಯದೆ ಅಲ್ಲೇ ಬಿಟ್ಟಳು.

'ಅವು ಕೊಳೆಯಾದರೆ ಅದು ನಿನ್ನಿಂದಲೇ' ಮಿನ್ನಿ ಅಜ್ಜಿಯನ್ನು ದೂರಿದಳು. ಕುರುಡಿ ಅಜ್ಜಿ ಅದಕ್ಕೆ ಏನೂ ಹೇಳದೆ ತನ್ನ ಪಾಡಿಗೆ ತಾನು ಕಪ್ಪಿಗೆ ಕಾಫಿ ಸುರಿದುಕೊಂಡು ವರಾಂಡಕ್ಕೆ ಹೋಗಿ ಗುಲಾಬಿ ರಾಶಿಯ ಪಕ್ಕದಲ್ಲಿ ಕುರ್ಚಿಯನ್ನೆಳೆದುಕೊಂಡು ಕೂರುತ್ತಾ 'ನಿನಗೆ ಕೋಪ ಬಂದ ಹಾಗಿದೆ. ಕೋಪ ಬಂದಾಗ 'ಮಾಸ್'ಗೆ ಹೋಗೋದು ಒಳ್ಳೇದಲ್ಲ' ಎಂದಳು. 'ಮಾಸ್'ನ ಮೂರನೆಯ ಕರೆ ಕೇಳಿದಾಗ ಮಿನ್ನಿ ಲಗುಬಗೆಯಿಂದ ತೋಳಿನ ಭಾಗಗಳನ್ನು ತೊಟ್ಟುಕೊಂಡಳು. ಅವಿನ್ನೂ ಪೂರ್ತಿ ಒಣಗಿರಲಿಲ್ಲ. ಆದರೆ ಅವುಗಳನ್ನು ಹಾಕಿಕೊಳ್ಳದೆ ವಿಧಿಯಿರಲಿಲ್ಲ. ತೋಳಿಲ್ಲದ ಡ್ರೆಸ್‌ನಲ್ಲಿ ಹೋದರೆ ಫಾದರ್ ಏಂಜೆಲ್ ಅವಳೊಡನೆ ಸಂವಾದಿಸುತ್ತಿರಲಿಲ್ಲ. ತಡವಾಯಿತೆಂದು ಆತುರಾತುರವಾಗಿ ಮುಖಕ್ಕೆ ಹಚ್ಚಿದ ರಂಗನ್ನು ತೊಳೆಯದೆ ಹಾಗೇ ಟವಲ್ಲಿನಲ್ಲಿ ಒರೆಸಿಕೊಂಡು, ಪ್ರಾರ್ಥನೆಯ ಪುಸ್ತಕ ಹಾಗೂ ಶಾಲನ್ನು ತೆಗೆದುಕೊಂಡು ಮಿನ್ನಿ ಮನೆಬಿಟ್ಟಳು.

ಕಾಲುಗಂಟೆಯೊಳಗಾಗಿ ಮತ್ತೆ ಮನೆಗೆ ಹಿಂತಿರುಗಿ ಬಂದ ಮಿನ್ನಿ ನೇರ ಟಾಯ್ಲೆಟ್‌ಗೆ ಹೋದಳು. ಅಜ್ಜಿ 'ಗಾಸ್ಪೆಲ್ ಓದಿ ಮುಗೀತಾ' ಎಂದು ಕೇಳಿದಾಗ ಮಿನ್ನಿ ಅಲ್ಲಿಂದಲೇ 'ಇಲ್ಲ ಇವತ್ತು ನಾನು ಮಾಸ್‌ಗೆ ಹೋಗ್ಲಿಲ್ಲ. ತೋಳುಗಳು ತುಂಬಾ ಒದ್ದೆ ಆಗಿದೆ. ಡ್ರೆಸ್ ಸಹ ಸುಕ್ಕು ಸುಕ್ಕಾಗಿದೆ' ಎಂದು ಉತ್ತರಿಸಿದಳು. ಬಾಗಿಲು ಹಾಕಿದ್ದರೂ ಪರಿಚಿತ ನೋಟ ಬೆನ್ನನ್ನು ಇರಿಯುತ್ತಿರುವಂತೆ ಅವಳಿಗೆ ಭಾಸವಾಯಿತು.

ಮಿನ್ನಿ ಅಡಿಗೆ ಮನೆಗೆ ಹೋಗಿ ಒಂದು ಕಪ್‌ನಲ್ಲಿ ಕಾಫಿ ಹಾಕಿಕೊಂಡು ಅಜ್ಜಿಯ

ಹತ್ತಿರವೇ ಬಂದು, ಒಂದು ಕುರ್ಚಿಯನ್ನೆಳೆದುಕೊಂಡು ಕುಳಿತಳು. ಕಾಫಿ ಯಾಕೋ ಸೇರಲಿಲ್ಲ. ಮನಸ್ಸು ಉದ್ವಿಗ್ನಗೊಂಡಿತ್ತು - 'ಇದಕ್ಕೆಲ್ಲ ನೀನೇ ಕಾರಣ' ಅಜ್ಜಿಯನ್ನವಳು ದೂರಿದಳು. ಅವಳ ದನಿ ಗದ್ಗದಿತವಾಗಿತ್ತು. ಕಣ್ಣುಗಳಲ್ಲಿ ನೀರು ಮಡುಗಟ್ಟಿತ್ತು.

'ನೀನು ಅಳ್ತಾ ಇದೀಯಾ?' ಅಜ್ಜಿ ಕುತೂಹಲ ವ್ಯಕ್ತಪಡಿಸುತ್ತ ಕೇಳಿದಳು.

ಮಿನ್ನಿ ಮಾತನಾಡಲಿಲ್ಲ.

ಕುಂಡಗಳಿಗೆ ನೀರು ಹಾಕುತ್ತಾ ಅಜ್ಜಿ ಮತ್ತೊಮ್ಮೆ ಕೇಳಿದಳು - 'ಮಿನ್ನಿ, ಅಳ್ತಾ ಇದೀಯಾ?'

ಮಿನ್ನಿ ಕಾಫಿಯ ಕಪ್ಪನ್ನು ಕೆಳಗಿಡುತ್ತಾ 'ಹೌದು ಅಳ್ತಾ ಇದೀನಿ. ನಿನ್ನ ಮೇಲಿನ ಕೋಪದಿಂದ ಅಳ್ತಾ ಇದೀನಿ. ಇದು ಮೊದಲ ಶುಕ್ರವಾರ. ಇವತ್ತೇ ನೀನು 'ಮಾಸ್'ಗೆ ಹೋಗದಹಾಗೆ ಮಾಡ್ದೆ. ಹೋಗು ಇದಕ್ಕಾಗಿ ದೇವರ ಬಳಿ ನೀನು ಕ್ಷಮೆ ಕೇಳ್ಕೋ...' ಎಂದು ಬಡಬಡಿಸಿದಳು.

ಅಜ್ಜಿ ಅವಳ ಆವೇಶದ ಮಾತುಗಳಿಂದ ವಿಚಲಿತಳಾಗಲಿಲ್ಲ. ಏನೂ ಹೇಳದೆ, ನಿಂತಲ್ಲಿಂದ ಕದಲದೆ ಹಾಗೇ ವಿಗ್ರಹದಂತೆ ನಿಂತಿದ್ದಳು. ಮಿನ್ನಿ ಅಲ್ಲಿಂದೆದ್ದು ತನ್ನ ಬೆಡ್‌ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡಳು. ಅಜ್ಜಿ ನಿಧಾನವಾಗಿ ಮಿನ್ನಿ ಕುಳಿತಿದ್ದ ಕುರ್ಚಿಯ ಬಳಿ ಹೋಗಿ ಅವಳು ಕುಡಿಯದೇ ಬಿಟ್ಟಿದ್ದ ಕಾಫಿ ಕಪ್ಪನ್ನು ತೆಗೆದುಕೊಂಡು, ಆ ಕಾಫಿಯನ್ನ ಕುಂಡವೊಂದಕ್ಕೆ ಸುರಿಯುತ್ತ 'ಯಾರದು ಎಷ್ಟು ತಪ್ಪು ಅಂತ ದೇವರಿಗೇನು ತಿಳಿಯದೇ?' ಎಂದು ತನಗೆ ತಾನೆ ಹೇಳಿಕೊಂಡಳು.

ರೂಮಿನಿಂದ ಹೊರಬಂದ ಮಿನ್ನಿಯ ತಾಯಿ 'ನೀನು ಯಾರ ಜೊತೆ ಮಾತಾಡ್ತಾ ಇದೀ' ಎಂದಳು.

'ಯಾರ ಜೊತೇನೂ ಇಲ್ಲ. ವಯಸ್ಸಾಯ್ತು ನೋಡು, ಅರಳು ಮರಳು, ಏನೇನೋ ಮಾತಾಡ್ಕೋತೀನಿ' ಎನ್ನುತ್ತಾ ಕುರುಡಿ ಅಜ್ಜಿ ವರಾಂಡದಿಂದಾಚೆಗೆ ಹೆಜ್ಜೆ ಹಾಕಿದಳು.

ಮಿನ್ನಿ ರೂಮಿನ ಬಾಗಿಲನ್ನು ಭದ್ರಪಡಿಸಿ, ಯಾರೂ ತನ್ನನ್ನು ಗಮನಿಸುತ್ತಿಲ್ಲ ವೆಂದು ಖಚಿತಪಡಿಸಿಕೊಂಡು ತನ್ನ ಡ್ರೆಸ್‌ನ ಒಳಭಾಗದಲ್ಲಿ ಪಿನ್ ಮಾಡಿದ್ದ ಮೂರು ಪುಟ್ಟ ಕೀಗಳನ್ನು ಹೊರತೆಗೆದಳು. ಅವುಗಳಲ್ಲೊಂದರಿಂದ ಮೇಜಿನ ಒಳ ಡ್ರಾಯರನ್ನು ತೆಗೆದು ಸುಂದರವಾದ ಚಿಕ್ಕಪೆಟ್ಟಿಗೆಯೊಂದನ್ನು ತೆಗೆದಳು. ಮತ್ತೊಂದು ಕೀಯಿಂದ

ಅದಕ್ಕೆ ಹಾಕಿದ್ದ ಬೀಗವನ್ನು ತೆರೆದು, ರಬ್ಬರ್‌ಬ್ಯಾಂಡಿನಿಂದ ಸುತ್ತಿದ್ದ ಪತ್ರಗಳ ಕಟ್ಟೊಂದನ್ನು ಪೆಟ್ಟಿಗೆಯಿಂದ ಹೊರತೆಗೆದು, ಎದೆಗಪ್ಪಿಕೊಂಡು ಮೃದುವಾಗಿ ಸವರಿದಳು. ಪತ್ರಗಳೆಲ್ಲ ಬಣ್ಣ ಬಣ್ಣದ ಕಾಗದದಲ್ಲಿದ್ದುವು. ಒಂದು ನಿಮಿಷ ಹಾಗೇ ಆ ಪತ್ರಗಳನ್ನು ಎದೆಗವಚಿಕೊಂಡಿದ್ದ ಮಿನ್ನಿ, ತಟಕ್ಕನೆದ್ದು ಆ ಕಟ್ಟನ್ನು ಡ್ರೆಸ್ಸಿನೊಳಗೆ ಬಚ್ಚಿಟ್ಟುಕೊಂಡು ಮತ್ತೆ ಪೆಟ್ಟಿಗೆಗೆ ಬೀಗ ಹಾಕಿ ಅದನ್ನು ಯಥಾಸ್ಥಾನದಲ್ಲಿಟ್ಟು ನಂತರ ರೂಮಿನಿಂದ ಹೊರಬಂದವಳೇ ನೇರ ಟಾಯ್ಲೆಟ್‌ಗೆ ಹೋಗಿ ಪತ್ರಗಳನ್ನು ಚೂರು ಚೂರು ಮಾಡಿ ಚೆಲ್ಲಿ ಜೋರಾಗಿ ನೀರು ಬಿಟ್ಟಳು.

ಮಿನ್ನಿ ಅಡಿಗೆಮನೆಗೆ ಬಂದಾಗ ಅವಳ ತಾಯಿ 'ನೀನು ಇಲ್ಲೇ ಇದೀಯಾ? ಚರ್ಚ್‌ಗೆ ಹೋಗಲಿಲ್ಲವಾ' ಎಂದಳು.

ವರಾಂಡದಲ್ಲಿದ್ದ ಅಜ್ಜಿ ಅಲ್ಲಿಂದಲೇ 'ಇಲ್ಲ, ಇವತ್ತು ಅವಳು ಹೋಗೋಕೆ ಆಗಲಿಲ್ಲ. ಇವತ್ತು ಮೊದಲ ಶುಕ್ರವಾರ ಅನ್ನೋದನ್ನ ಮರತು ನಾನು ನೆನ್ನೆ ರಾತ್ರಿ ಅವಳ ಡ್ರೆಸ್‌ನ ತೋಳುಗಳನ್ನ ಒಗೆದು ಹಾಕಿಬಿಟ್ಟಿದ್ದೆ...' ಎಂದು ಹೇಳುತ್ತಿದ್ದಂತೆ ಮಿನ್ನಿ 'ಅವಿನ್ನೂ ಒಣಗಿಲ್ಲ' ಎಂದು ಮಾತು ಮುಗಿಸಿದಳು.

'ಇತ್ತೀಚೆಗೆ ಯಾಕೋ ತುಂಬ ಕೆಲಸ. ಎಷ್ಟು ಮಾಡಿದ್ರೂ ಮುಗಿಯೋದೇ ಇಲ್ಲ' ಅಜ್ಜಿ ತನಗೆ ತಾನೆ ಎಂಬಂತೆ ಹೇಳಿಕೊಂಡಳು.

'ಈಸ್ಟರ್ ವೇಳೆಗೆ ನಾವು ೧೫೦ ಡಜನ್ ಗುಲಾಬಿಗಳನ್ನು ಕೊಡಬೇಕು ಅಲ್ವಾ?' ಮಿನ್ನಿ ಕೇಳಿದಳು.

ಅಜ್ಜಿ ತಲೆಯಾಡಿಸಿದಳು.

ಸೂರ್ಯ ಕಾಣಿಸಿಕೊಂಡು, ಬಿಸಿಲು ಅಂಗಳವನ್ನು ಆವರಿಸುತ್ತಿದ್ದಂತೆ ಮಿನ್ನಿ ವರಾಂಡದಲ್ಲಿ ತನ್ನ ಗುಲಾಬಿಯ ಕಾರ್ಖಾನೆಯನ್ನು ತೆರೆದಳು. ಒಂದು ಬುಟ್ಟಿಯಲ್ಲಿ ಕತ್ತರಿಸಿದ ಹೂ ದಳಗಳು, ಹೂವಿನ ತೊಟ್ಟು ಮಾಡಲು ತಂತಿ, ಒಂದು ಡಬ್ಬದಲ್ಲಿ ಕ್ರೇಪ್ ಪೇಪರ್, ಎರಡು ಕತ್ತರಿಗಳು, ಒಂದು ದಾರದ ಉಂಡೆ, ಮಣ್ಣಿನ ಕುಡಿಕೆಯಲ್ಲಿ ಅಂಟು - ಎಲ್ಲವನ್ನೂ ಜೋಡಿಸಿಕೊಂಡು ಗುಲಾಬಿಗಳನ್ನು ಮಾಡಲು ಕುಳಿತುಕೊಂಡಳು.

ಮಿನ್ನಿ ತನ್ನ ಕೆಲಸ ಶುರು ಮಾಡುತ್ತಿದ್ದಂತೆ ಕಂಕುಳಲ್ಲಿ ಒಂದು ರಟ್ಟಿನ ಪೆಟ್ಟಿಗೆಯನ್ನು ಇರಿಸಿಕೊಂಡು ಟ್ರಿನ್ನಿ ಬಂದಳು.

'ಇವತ್ತು ಮಾಸ್‌ಗೆ ಹೋಗಲಿಲ್ವಾ?' ಟ್ರಿನ್ನಿ ಕೇಳಿದಳು.

'ಇಲ್ಲ, ಡ್ರೆಸ್‌ನ ತೋಳುಗಳು ಒದ್ದೆಯಾಗಿದ್ವು ಅದಕ್ಕೆ ಹೋಗ್ಲಿಲ್ಲ.'

'ಅಲ್ಲೇ ಯಾರನ್ನಾದ್ರೂ ಕೇಳಿದ್ರೆ ಸ್ವಲ್ಪ ಸಮಯಕ್ಕೆ ಕೊಟ್ಟಿರ್ತಾ ಇರ್ಲಿಲ್ವಾ?' ಎಂದು ಹೇಳುತ್ತಾ ಟ್ರಿನ್ನಿ ಕುರ್ಚಿಯೊಂದನ್ನು ಎಳೆದುಕೊಂಡು ಅವಳ ಬಳಿಯೇ ಕುಳಿತಳು.

'ಹೌದು, ಹಾಗೇ ಮಾಡಬಹುದಿತ್ತು. ಆದರೆ ಲೇಟೂ ಆಗ್ಬಿಟ್ಟಿತ್ತು ಅಂತಿಟ್ಕೋ' ಎನ್ನುತ್ತ ಮಿನ್ನಿ ಮಾಡಿ ಮುಗಿಸಿದ್ದ ಗುಲಾಬಿಯನ್ನು ಕೆಳಗಿಟ್ಟು, ಇನ್ನೊಂದನ್ನು ಮಾಡಲು ದಳಗಳನ್ನು ತೆಗೆದುಕೊಂಡಳು. ಟ್ರಿನ್ನಿ ಸಹ ಗುಲಾಬಿ ಮಾಡುವ ಕೆಲಸದಲ್ಲಿ ಅವಳೊಡನೆ ಸೇರಿಕೊಂಡಳು.

ರಟ್ಟಿನ ಪೆಟ್ಟಿಗೆಯನ್ನು ಗಮನಿಸಿದ ಮಿನ್ನಿ 'ಹೊಸ ಶೂ ಕೊಂಡುಕೊಂಡೆಯಾ?' ಎಂದಳು.

'ಅಯ್ಯೋ ಇಲ್ಲಮ್ಮ. ಅದರಲ್ಲಿ ಸತ್ತ ಇಲಿಗಳಿವೆ.' ಎನ್ನುತ್ತ ಆ ಬಗ್ಗೆ ವಿವರಣೆ ನೀಡಿದಳು. ಮಿನ್ನಿಗೆ ಅದರಲ್ಲಿ ಅಂಥ ಆಸಕ್ತಿಯೇನಿಲ್ಲದೆ ಸುಮ್ಮನೆ ಕೇಳಿಸಿ ಕೊಳ್ಳುತ್ತಿದ್ದಳು.

ಟ್ರಿನ್ನಿ ಹೂ ದಳಗಳನ್ನು ಜೋಡಿಸುವುದರಲ್ಲಿ ನಿಪುಣೆ. ಹೀಗಾಗಿ ಅವಳು ದಳಗಳನ್ನು ಜೋಡಿಸಿ ಮಿನ್ನಿಗೆ ಕೊಡುತ್ತಿದ್ದಳು. ಅವಳು ಅದಕ್ಕೆ ತಂತಿಯಲ್ಲಿ ತೊಟ್ಟುಮಾಡಿ, ಹಸುರು ಕಾಗದ ಸುತ್ತಿ ಒಂದು ರೂಪ ಕೊಡುತ್ತಿದ್ದಳು. ಕೆಲಸದಲ್ಲಿ ಇಬ್ಬರೂ ಸಂಪೂರ್ಣ ತನ್ಮಯರಾಗಿದ್ದರು. ಬಿಸಿಲು ಅಂಗಳವನ್ನು ದಾಟಿ ವರಾಂಡಕ್ಕೆ ಹಬ್ಬತೊಡಗಿತ್ತು. ಕೆಲಸ ನಿಲ್ಲಿಸಿದ ಮಿನ್ನಿ ಟ್ರಿನ್ನಿಯ ಇಳಿಬಿದ್ದ ಕಾಲುಗಳನ್ನೇ ಗಮನಿಸುತ್ತ ಸುಮ್ಮನೆ ಕುಳಿತಳು. ಅವಳು ಹಾಕಿದ್ದ ಶೂಗಳು ಗಂಡಸರ ಶೂಗಳಂತಿದ್ದವು. ಕೆಲವು ದಳಗಳನ್ನು ಬೆರಳುಗಳ ನಡುವೆ ಸಿಕ್ಕಿಸಿಕೊಂಡು ಆಟವಾಡುತ್ತಿದ್ದ ಟ್ರಿನ್ನಿ ಮಿನ್ನಿ ತನ್ನನ್ನೇ ಗಮನಿಸುತ್ತಿರುವುದರ ಅರಿವಾಗಿ ಸಹಜ ಸಂಕೋಚದಿಂದ ಕಾಲುಗಳನ್ನು ಹಿಂದಕ್ಕೆಳೆದುಕೊಂಡಳು.

'ಯಾಕೆ, ಒಂಥರಾ ಇದೀಯ? ಏನ್ ಸಮಾಚಾರ?' ಟ್ರಿನ್ನಿ ಮೌನ ಮುರಿದಳು.

ಮಿನ್ನಿ ನಿಧಾನವಾಗಿ ತಲೆಯೆತ್ತಿ ಟ್ರಿನ್ನಿಯನ್ನೇ ನೋಡುತ್ತ 'ಅವನು ಹೊರಟುಹೋದ' ಎಂದಳು.

ಟ್ರಿನ್ನಿಯ ಕೈಯಲ್ಲಿದ್ದ ಹೂವಿನ ದಳಗಳು ನೆಲಕ್ಕೆ ಬಿದ್ದವು. 'ಹೌದಾ?' ನಿಜವಾಗ್ಲೂ ನಂಗೆ ನಂಬೋಕೆ ಆಗ್ತಿಲ್ಲ' ಎಂದು ಅವಳು ಆಶ್ಚರ್ಯ ವ್ಯಕ್ತಪಡಿಸಿದಳು.

'ಇಲ್ಲ, ನಿಜವಾಗ್ಲೂ ಆತ ಹೊರಟುಹೋದ' ಮಿನ್ನಿ ಪುನರುಚ್ಚರಿಸಿದಳು.

ಟ್ರಿನ್ನಿ ರೆಪ್ಪೆಗಳನ್ನು ಮಿಟುಕಿಸದೆ ಅವಳನ್ನೇ ನೋಡುತ್ತ 'ಈಗ?' ಎಂದಳು.

'ಈಗ, ಈಗ ಏನೂ ಇಲ್ಲ, ಅಷ್ಟೆ' ಮಿನ್ನಿ ನಿರ್ಲಿಪ್ತಳಾಗಿ ನುಡಿದಳು.

ಮಿನ್ನಿಗೆ ಮಾತು ಬೇಕಾಗಿರಲಿಲ್ಲ. ಅದನ್ನರಿತ ಟ್ರಿನ್ನಿ ಸ್ವಲ್ಪ ಹೊತ್ತು ಕುಳಿತಿದ್ದು ಹೊರಟುಹೋದಳು.

ಟ್ರಿನ್ನಿ ಹೊರಟುಹೋದ ಮೇಲೆ ಮಿನ್ನಿ ಅವಳು ಬಿಟ್ಟುಹೋಗಿದ್ದ ರಟ್ಟಿನ ಪೆಟ್ಟಿಗೆಯಲ್ಲಿದ್ದ ಸತ್ತ ಇಲಿಗಳನ್ನು ಟಾಯ್ಲೆಟ್‌ನಲ್ಲಿ ಹಾಕಿ ಬರಲು ಆ ಪೆಟ್ಟಿಗೆಯನ್ನು ತೆಗೆದುಕೊಂಡು ಹೊರಟು ಕುಂಡಗಳಿಗೆ ನೀರು ಹಾಕುತ್ತಿದ್ದ ಅಜ್ಜಿಯ ಹತ್ತಿರ ನಿಂತು 'ಅಜ್ಜಿ, ಇದರಲ್ಲೇನಿದೆ ಹೇಳ್ತೀಯಾ? ಖಂಡಿತಾ ನಿನ್ನ ಕೈಲಾಗೊಲ್ಲ, ಬೇಕಿದ್ರೆ ಪಂದ್ಯ ಕಟ್ತೀನಿ' ಅಂತ ಹೇಳಿ ಅವಳ ಕಿವಿಯ ಹತ್ತಿರ ಪೆಟ್ಟಿಗೆಯನ್ನು ಜೋರಾಗಿ ಕುಲುಕಿದಳು.

ಕುರುಡಿ ಅಜ್ಜಿ ಶಬ್ದವನ್ನು ಶ್ರದ್ಧೆಯಿಂದ ಆಲಿಸಿದಳು. 'ಮತ್ತೊಮ್ಮೆ ಕುಲುಕು' ಎಂದು ಹೇಳಿ ತನ್ನ ತೋರುಬೆರಳನ್ನು ಕಿವಿಯ ಹತ್ತಿರ ಒತ್ತಿ ಇಟ್ಟುಕೊಂಡಳು. ಮಿನ್ನಿ ಪೆಟ್ಟಿಗೆಯನ್ನ ಮತ್ತೊಮ್ಮೆ, ಮಗದೊಮ್ಮೆ ಕುಲುಕಿದರೂ ಅದರೊಳಗಿರುವುದೇನೆಂದು ಪತ್ತೆ ಹಚ್ಚಲು ಅಜ್ಜಿಗೆ ಆಗಲಿಲ್ಲ.

'ನೆನ್ನೆ ರಾತ್ರಿ ಚರ್ಚ್‌ನಲ್ಲಿ ಹಿಡಿದ ಇಲಿಗಳು' ಎನ್ನುತ್ತಾ ಮಿನ್ನಿ ಟಾಯ್ಲೆಟ್‌ಗೆ ಹೋದಳು. ಹಿಂತಿರುಗಿ ಬರುವಾಗ ಅಜ್ಜಿ ಅಲ್ಲಿಯೇ ಇದ್ದರೂ ಗಮನಿಸದಂತೆ ಮೌನವಾಗಿ ಹೋಗಿ ಗುಲಾಬಿಗಳ ರಾಶಿಯ ಬಳಿ ಕುಳಿತು, ಮತ್ತೆ ಕೆಲಸದಲ್ಲಿ ತೊಡಗಿದಳು. ಅಜ್ಜಿಯೂ ಅವಳನ್ನ ಹಿಂಬಾಲಿಸಿ ಬಂದಳು.

'ಮಿನ್ನಿ, ನೀನು ಸಂತೋಷವಾಗಿರಬೇಕಾದ್ರೆ ಎಲ್ಲರ ಬಳಿ ನಿನ್ನ ದುಃಖ ಹೇಳಿಕೋಬಾರದಮ್ಮ' ಅಜ್ಜಿ ಹೇಳಿದಳು.

ಮಿನ್ನಿ ಅಜ್ಜಿಯ ಮುಖವನ್ನೇ ಮೌನವಾಗಿ ದಿಟ್ಟಿಸಿದಳು. ಅಜ್ಜಿ ಅಲ್ಲಿಯೇ ಕುಳಿತು ಅವಳು ಬೇಡವೆಂದರೂ ತಾನೂ ಅವಳ ಕೆಲಸದಲ್ಲಿ ನೆರವಾಗುತ್ತ 'ಯಾಕೆ ಮಂಕಾಗಿದೀಯ ಮಗು' ಎಂದು ಕಕ್ಕುಲತೆಯಿಂದ ಕೇಳಿದಳು.

ಮಿನ್ನಿ ಉತ್ತರಿಸಲಿಲ್ಲ.

'ಮಾಸ್‌ಗೆ ಯಾಕೆ ಹೋಗಲಿಲ್ಲ, ನಿಜ ಹೇಳು?' ಅಜ್ಜಿ ತನಗೆ ಉತ್ತರ ಗೊತ್ತಿದ್ದಂತೆ ಕೇಳಿದಳು. ಆದರೆ ಮಿನ್ನಿ ತಟಕ್ಕನೆ 'ನಂಗಿಂತ ನಿಂಗೇ ಚೆನ್ನಾಗಿ ಗೊತ್ತಲ್ಲ' ಎಂದಳು.

'ಡ್ರೆಸ್‌ನ ತೋಳುಗಳು ಒದ್ದೆಯಾಗಿದ್ದೇ ಕಾರಣ ಅನ್ನೋದಾದ್ರೆ ಖಂಡಿತಾ ನೀನು 'ಮಾಸ್'ನ ತಪ್ಪಿಸಿಕೊಳ್ತಾ ಇರ್ಲಿಲ್ಲ. ನಿನಗೆ ನಿರಾಸೆ ಉಂಟು ಮಾಡಿದ ವ್ಯಕ್ತಿ ದಾರೀಲಿ ಕಾಯ್ತ ಇದ್ದ ಅಲ್ವಾ?'

ಮಿನ್ನಿ ತಲೆಯೆತ್ತಿ ಅಜ್ಜಿಯನ್ನೇ ನೋಡಿದಳು. ಇಲ್ಲದ ಗಾಜನ್ನು ಒರೆಸುವವಳಂತೆ ಕುರುಡಿ ಅಜ್ಜಿಯ ಕಣ್ಣ ಮುಂದೆ ಕೈಯಾಡಿಸಿದಳು.

'ನೀನು ತುಂಬಾ ಕೆಟ್ಟವಳು ಅಜ್ಜಿ'

'ಸಾಮಾನ್ಯವಾಗಿ ನೀನು ಯಾವಾಗ್ಲೂ ಒಂದೇ ಸಲ ಟಾಯ್ಲೆಟ್‌ಗೆ ಹೋಗೋದು. ಇವತ್ತು ಎರಡು ಸಲ ಹೋದೆ ಅಲ್ಲ?' ಅಜ್ಜಿ ಕೇಳಿದಳು.

ಮಿನ್ನಿ ಮಾತನಾಡಲಿಲ್ಲ.

'ನಿನ್ನ ಮೇಜಿನ ಕೆಳಡ್ರಾಯರ್‌ನಲ್ಲಿ ಏನಿದೆ ಅಂತ ನನಗೆ ತೋರಿಸ್ತೀಯಾ?' ಅಜ್ಜಿ ಕೇಳಿದಳು.

ಮಿನ್ನಿ ಕುಳಿತಲ್ಲಿಂದ ಎದ್ದು ತನ್ನ ಕೈಲಿದ್ದ ಗುಲಾಬಿಯನ್ನು ಕಿಟಕಿಯಲ್ಲಿ ಸಿಕ್ಕಿಸಿ, ಡ್ರೆಸ್‌ಗೆ ಪಿನ್ ಮಾಡಿದ್ದ ಮೂರು ಪುಟ್ಟ ಕೀಗಳನ್ನು ತೆಗೆದು ಅಜ್ಜಿಯ ಕೈಲಿಟ್ಟು, ಅವಳ ಬೆರಳುಗಳನ್ನು ಕೀಗಳ ಮೇಲೆ ಭದ್ರವಾಗಿ ಮುಚ್ಚಿ 'ಹೋಗಜ್ಜಿ, ನೀನೇ ಹೋಗಿ ನೋಡು, ಅದರಲ್ಲಿ ಏನಿದೆ ಅಂತ ಕಣ್ಣಾರೆ ಹೋಗಿ ನೋಡು,' ಎಂದಳು.

ಕುರುಡಿ ಅಜ್ಜಿ ತನ್ನ ಕೈಯಲ್ಲಿದ್ದ ಕೀಗಳನ್ನು ಬೆರಳುಗಳಿಂದ ಸವರುತ್ತ 'ಟಾಯ್ಲೆಟ್‌ನಲ್ಲಿ ಕೊಚ್ಚಿ ಹೋದದ್ದನ್ನ ನನ್ನ ಕಣ್ಣುಗಳು ಕಾಣಲಾರವು ಮಗು' ಎಂದಳು. ಮಿನ್ನಿಯ ಉಸಿರಾಟದ ಗತಿ ಜೋರಾಯಿತು. ಅಜ್ಜಿಯನ್ನೇ ಅವಳು ದಿಟ್ಟಿಸಿ ನೋಡುತ್ತ ತಾನು ಉದ್ವಿಗ್ನಳಾಗಿಲ್ಲವೆಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ತಾನು ಅವಳನ್ನೇ ನೋಡುತ್ತಿದ್ದೇನೆ ಎಂದು ಅಜ್ಜಿಗೆ ಗೊತ್ತಾಗಿದೆ ಎನ್ನಿಸಿ 'ನಿಂಗೆ ಅಷ್ಟೊಂದು ಆಸಕ್ತಿ ಇದ್ರೆ ಟಾಯ್ಲಟ್ ಒಳಗೆ ನೀನೇ ಹೋಗಿ ಪರೀಕ್ಷೆ ಮಾಡು' ಎಂದಳು.

'ಇತ್ತೀಚೆಗೆ ನೀನು ಬೆಳಗಿನ ಜಾವದವರೆಗೂ ಬರೀತಾ ಇರ್ತಿದ್ದೆ ಅಲ್ವಾ? ಅಜ್ಜಿ ಸಮಾಧಾನವಾಗಿ ಕೇಳಿದಳು.'

'ನೀನೇ ಬಂದು ದೀಪ ಆರಿಸ್ತಿದ್ದೆಯಲ್ಲ'

'ನಾನು ಆರಿಸಿ ಬಂದ ಮೇಲೆ ನೀನು ಮತ್ತೆ ಬೆಡ್‌ಲ್ಯಾಂಪ್ ಹಾಕ್ಕೊಂಡು ಬರೀತಾ

ಇರ್‍ತಿದ್ದೆ ಅಲ್ವಾ? ನೀನು ನಿನ್ನ ಜೀವಾನೇ ಅಕ್ಷರವಾಗಿಸ್ತಾ ಇದ್ದೆ ಅಂತ ನಂಗೊತ್ತು' ಅಜ್ಜಿ ಹೇಳಿದಳು.

'ನೀನು ಹೇಳೋದೆಲ್ಲ ಕೇಳೋಕೆ ತುಂಬ ಚೆನ್ನಾಗಿದೆ' ಎಂದ ಮಿನ್ನಿ ಸಮಾಧಾನವಾಗಿರಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದಳು. 'ಆಯ್ತು, ಒಂದು ವೇಳೆ ನೀನು ಹೇಳೊದೆಲ್ಲ ನಿಜಾ ಅಂತಾನೆ ಇಟ್ಕೋ. ಏನೀಗ?' ಮಿನ್ನಿ ಕೇಳಿದಳು.

'ಏನಿಲ್ಲ! ನೀನು ಇವತ್ತು 'ಮಾಸ್'ಗೆ ಹೋಗಲಿಲ್ಲ ಅಲ್ವಾ? ಅದಕ್ಕೆ ಅದೇ ಕಾರಣ ಅಷ್ಟೆ.'

ಮಿನ್ನಿ ತನ್ನ ಕೆಲಸ ನಿಲ್ಲಿಸಿ, ದಾರದ ಉಂಡೆ, ಕತ್ತರಿಗಳು, ತಂತಿ ಮೊದಲಾದವುಗಳನ್ನೆಲ್ಲ ಬುಟ್ಟಿಗೆ ತುಂಬಿ 'ನಾನು ಎರಡನೇ ಸಲ ಟಾಯ್ಲೆಟ್‌ಗೆ ಹೋದದ್ದು ಯಾಕೇಂತ ನಿಂಗೊತ್ತಾ?' ಎಂದಳು.

ಅಜ್ಜಿ ಮಾತನಾಡಲಿಲ್ಲ. ಇಬ್ಬರೂ ಸ್ವಲ್ಪ ಹೊತ್ತು ಹಾಗೇ ಮೌನವಾಗಿದ್ದರು. ವಾತಾವರಣದಲ್ಲಿ ಒಂದು ರೀತಿಯ ಬಿಗುವಿತ್ತು. ನಂತರ ಮಿನ್ನಿ ತನ್ನ ಪ್ರಶ್ನೆಗೆ ತಾನೇ ಉತ್ತರ ಕೊಡುತ್ತಾ 'ದಿನಾ ಹೋಗೊ ಹಾಗೇ ಇವತ್ತೂ ಹೋಗಿದ್ದೆ ಅಷ್ಟೆ' ಎಂದಳು.

ಕುರುಡಿ ಅಜ್ಜಿ ತನ್ನ ಕೈಯಲ್ಲಿದ್ದ ಕೀಗಳನ್ನು ಬುಟ್ಟಿಗೆ ಹಾಕಿ 'ಹೌದು ಹಾಗೇ ಅಂದುಕೊಳ್ಳೋಣ ಬಿಡು' ಎನ್ನುತ್ತಾ ಅಡಿಗೆ ಮನೆಯತ್ತ ಹೊರಟು, 'ಮಗು ನಿನ್ನನ್ನ ನಾನು ಹೊಸದಾಗಿ ಇವತ್ತು ನೋಡ್ತಾ ಇಲ್ಲ. ಚಿಕ್ಕವಳಾಗಿರುವಾಗಿನಿಂದ ನೀನು ಏನು ಅಂತ ನಂಗೊತ್ತು. ಬೇರೆ ಯಾರನ್ನಾದ್ರೂ ನಿನ್ನ ಮಾತುಗಳಿಂದ ನಂಬಿಸೋಕೆ ಪ್ರಯತ್ನಿಸು. ಆದರೆ ಈ ಅಜ್ಜೀನಲ್ಲ' ಎಂದು ಮುಗುಳ್ನಕ್ಕಳು. ಅಷ್ಟರಲ್ಲಿ ಮಿನ್ನಿಯ ತಾಯಿ ಬೊಗಸೆಯಲ್ಲಿ ಮುಳ್ಳುಗಳಿಂದ ಕೂಡಿದ ಹೂಗಳನ್ನು ಹಿಡಿದುಕೊಂಡು ಬಂದು 'ಏನದು?' ಎಂದಳು.

'ಏನಿಲ್ಲ! ಏನೊ ಹೇಳ್ತಾ ಇರ್‍ತೀನಿ. ಅರಳು - ಮರಳು ನೋಡು, ಏನೇನೊ ಮಾತಾಡ್ತಾ ಇರ್‍ತೀನಿ. ನೀನೇನೂ ಗಾಬರಿ ಆಗ್ಬೇಡ. ಎಲ್ಲೀವರೆಗೆ ಕಂಡೋರ ಮೇಲೆಲ್ಲ ಕಲ್ಲು ಎಸಿಯೊದಿಲ್ವೋ, ಅಲ್ಲೀವರೆಗೆ ಹುಚ್ಚಾಸ್ಪತ್ರೆಗೆ ಕರ್‍ಕೊಂಡು ಹೋಗೊ ಅಗತ್ಯ ಇಲ್ಲ' ಎನ್ನುತ್ತಾ ಕುರುಡಿ ಅಜ್ಜಿ ಅಡಿಗೆ ಮನೆಯೊಳಕ್ಕೆ ಹೋದಳು.

ಕನ್ನಡಕ್ಕೆ : ನರಹಳ್ಳಿ ಬಾಲಸುಬ್ರಮಣ್ಯ

ಪಂಜರ

ಪಂಜರ ಮಾಡಿ ಮುಗಿಯಿತು. ಅಭ್ಯಾಸಬಲದಿಂದ ಬಾಲ್ತಜಾರ್ ಅದನ್ನು ಮನೆಯ ಸೂರಿಗೆ ತೂಗುಹಾಕಿದ. ಅವನು ಊಟ ಮುಗಿಸುವ ಹೊತ್ತಿಗೆ, ಜಗತ್ತಿನಲ್ಲೇ ಅತ್ಯಂತ ಸುಂದರವಾದ ಪಂಜರ ಅದು ಎಂದು ಪ್ರತಿಯೊಬ್ಬರೂ ಹೇಳುತ್ತಿದ್ದರು. ಅದನ್ನು ನೋಡಲು ಅವನ ಮನೆಯ ಮುಂದೆ ಒಂದು ದೊಡ್ಡ ಗುಂಪೇ ಸೇರಿದ್ದರಿಂದ ಬಾಲ್ತಜಾರ್ ಪಂಜರವನ್ನು ಕೆಳಗಿಳಿಸಿ ಅಂಗಡಿಯ ಬಾಗಿಲು ಹಾಕಬೇಕಾಯಿತು.

'ನೀನು ಶೇವ್ ಮಾಡ್ಕೋಬೇಕು' ಎಂದು ಹೆಂಡತಿ ಉರ್ಸುಲಾ ಹೇಳಿದಳು.

'ಊಟವಾದ ಮೇಲೆ ಶೇವ್ ಮಾಡ್ಕೋಳೋದು ಒಳ್ಳೇದಲ್ಲ' ಎಂದ ಬಾಲ್ತಜಾರ್.

ಎರಡು ವಾರದ ಗಡ್ಡ ಬೆಳೆದಿತ್ತು. ಗಿಡ್ಡನಾದ ಒರಟು ಕೂದಲು. ಹೇಸರಗತ್ತೆಯ ಕತ್ತಿನ ಮೇಲಿರುವಂತೆ. ಇವೆಲ್ಲ ಆತನಿಗೆ ಭಯಗೊಂಡ ಹುಡುಗನೊಬ್ಬನ ಭಾವವನ್ನು ತಂದಿತ್ತು. ಆದರೆ ಅದು ತಪ್ಪು ಭಾವಭಂಗಿ. ಫೆಬ್ರುವರಿಯಲ್ಲಿ ಅವನಿಗೆ ಮೂವತ್ತು ವರ್ಷ. ಮದುವೆಯಾಗದೆ, ಮಕ್ಕಳಿಲ್ಲದೆ ಕಳೆದ ನಾಲ್ಕು ವರ್ಷಗಳಿಂದ ಆತ ಉರ್ಸುಲಾ ಜತೆ ವಾಸವಾಗಿದ್ದ. ತನ್ನ ಜೋಪಾನದಲ್ಲಿ ತಾನಿರುವಂತೆ ಬದುಕು ಅವನಿಗೆ ಹಲವು ಕಾರಣಗಳನ್ನು ಒದಗಿಸಿತ್ತಾದರೂ ಭಯಗೊಳ್ಳಲು ಏನೂ ಕಾರಣಗಳಿರಲಿಲ್ಲ. ತಾನು ಈಗತಾನೇ ಮಾಡಿ ಮುಗಿಸಿದ ಪಂಜರ ಕೆಲವು ಜನರ ಪ್ರಕಾರ ಪ್ರಪಂಚದಲ್ಲೇ ಅತ್ಯಂತ

ಸುಂದರವಾದ್ದೆಂಬ ವಿಷಯ ಕೂಡಾ ಆತನಿಗೆ ತಿಳಿಯದು. ಚಿಕ್ಕಂದಿನಿಂದಲೂ ಪಂಜರಗಳನ್ನು ಮಾಡುತ್ತಾ ಬಂದ ಆತನಿಗೆ ಈಗ ಮಾಡಿ ಮುಗಿಸಿದ ಪಂಜರ ಉಳಿದವುಗಳನ್ನು ಮಾಡಿದ್ದಕ್ಕಿಂತ ಕಷ್ಟಕರವಾಗಿಯೇನೂ ಇರಲಿಲ್ಲ.

'ಹಾಗಾದರೆ ಸ್ವಲ್ಪ, ಹೊತ್ತು ಮಲಕ್ಕೊ, ಆ ಗಡ್ಡ ಇಟ್ಕೊಂಡು ನೀನೀಗ ಹೊರಗೆಲ್ಲೂ ಮುಖ ತೋರಿಸುವಂತಿಲ್ಲ' ಎಂದಳು ಹೆಂಡತಿ.

ಅಕ್ಕಪಕ್ಕದವರಿಗೆ ಪಂಜರ ತೋರಿಸುವುದಕ್ಕಾಗಿ ಆತ ತನ್ನ ಹುರಿಯ ಜೋಲು ಮಂಚದಿಂದ ಹಲವು ಬಾರಿ ಏಳಬೇಕಾಯ್ತು. ಅಲ್ಲಿಯತನಕ ಈ ಪಂಜರದ ಬಗ್ಗೆ ಉರ್ಸುಲಾ ಏನೂ ಲಕ್ಷ್ಯ ಕೊಟ್ಟಿರಲಿಲ್ಲ. ತನ್ನ ಗಂಡ ಮರಗೆಲಸವನ್ನು ಸಂಪೂರ್ಣ ಮರೆತು ಈ ಪಂಜರ ಮಾಡವುದರಲ್ಲಿ ಲೀನವಾಗಿಬಿಟ್ಟಿದ್ದಾನೆಂದೂ ಎರಡು ವಾರಗಳಿಂದ ಆತ ಚೆನ್ನಾಗಿ ನಿದ್ದೆ ಮಾಡಲಿಲ್ಲವೆಂದೂ, ನಿದ್ದೆಯಲ್ಲಿ ಅತ್ತ ಇತ್ತ ಹೊರಳುತ್ತ, ಅಸಂಬದ್ಧವಾದುದನ್ನು ಗೊಣಗುತ್ತಿದ್ದನೆಂದೂ ಮತ್ತು ಶೇವ್ ಮಾಡಿಕೊಳ್ಳುವ ಯೋಚನೆಯನ್ನೂ ಮಾಡಲಿಲ್ಲವೆಂದೂ ಆಕೆಗೆ ಕಿರಿಕಿರಿ ಎನಿಸಿತ್ತು. ಆದರೆ ಆಕೆಯ ಕಿರಿಕಿರಿ, ಪೂರ್ಣಗೊಂಡ ಪಂಜರದ ಎದುರು ಕರಗಿಹೋಯಿತು. ಸಣ್ಣ ನಿದ್ದೆ ತೆಗೆದು ಬಾಲ್ತಜಾರ್ ಏಳುವ ಹೊತ್ತಿಗೆ ಅವಳು ಆತನ ಪ್ಯಾಂಟು, ಶರ್ಟುಗಳನ್ನು ಇಸ್ತ್ರಿ ಮಾಡಿ ಅವನ್ನು ಜೋಲು ಮಂಚದ ಸಮೀಪ ಕುರ್ಚಿಯ ಮೇಲಿರಿಸಿದ್ದಳು. ಪಂಜರವನ್ನು ಊಟದ ಮೇಜಿನ ಬಳಿ ಒಯ್ದು, ಅದರ ಮೇಲಿಟ್ಟು, ಮೌನವಾಗಿ ಅದನ್ನು ಪರಿಶೀಲಿಸಿದಳು.

'ಇದಕ್ಕೆ ಬೆಲೆ ಎಷ್ಟು ಹೇಳ್ತೀಯಾ?' ಎಂದು ಆಕೆ ಕೇಳಿದಳು.

'ಗೊತ್ತಿಲ್ಲ. ಮೂವತ್ತು ಪೆಸೋಗಳನ್ನು ಕೇಳ್ತೇನೆ. ಅಂದರೆ ಇಪ್ಪತ್ತನ್ನು ಕೊಟ್ಟಾರು' ಎಂದ.

'ಐವತ್ತು ಕೇಳು. ಈ ಎರಡು ವಾರದಲ್ಲಿ ಸಾಕಷ್ಟು ನಿದ್ದೆ ಕೆಟ್ಟಿದೀಯ. ಅಲ್ಲದೆ ಇದು ಕೊಂಚದೊಡ್ಡದು. ಬಹುಶಃ ನನ್ನ ಜೀವನದಲ್ಲಿ ನಾನು ನೋಡಿದ ಪಂಜರಗಳೆಲ್ಲದಕ್ಕಿಂತ ಇದು ದೊಡ್ಡದು' ಎಂದಳು ಉರ್ಸುಲಾ.

ಬಾಲ್ತಜಾರ್ ಶೇವ್ ಮಾಡಿಕೊಳ್ಳ ತೊಡಗಿದ.

'ಐವತ್ತು ಪೇಸೋಗಳನ್ನು ಕೊಟ್ಟಾರು ಅಂತಿಯಾ?'

'ಮಿಸ್ಟರ್ ಚೆಪಿ ಮಾಂಟಿಯೆಲ್‌ಗೆ ಅದು ಏನೇನೂ ಅಲ್ಲ. ಅಲ್ಲದೆ ಇದಕ್ಕೆ

ಅಷ್ಟು ದುಡ್ಡಾಗುತ್ತದೆ. ನೀನು ಅರವತ್ತನ್ನೇ ಕೇಳಬೇಕು' ಎಂದಳು ಉರ್ಸುಲಾ.

ಉಸಿರು ಕಟ್ಟಿಸುವ ನೆರಳಿನಲ್ಲಿ ಮನೆ, ಏಪ್ರಿಲ್ ತಿಂಗಳಿನ ಮೊದಲವಾರ. ಜೀರುಂಡೆಯ ಜೀರ್ ಜೀರ್ ಶಬ್ದದಿಂದಾಗಿ ಸೆಖೆ ತಡೆಯಲಸಾಧ್ಯವಾದಂತಿತ್ತು. ಬಟ್ಟೆ ಹಾಕಿಕೊಂಡು, ಮನೆಗೆ ತಣ್ಣನೆಯ ಗಾಳಿ ಬರುವಂತೆ ಮುಂಬಾಗಿಲನ್ನು ತೆರೆದ ಬಾಲ್ತಜಾರ್. ಹುಡುಗರ ಒಂದು ಗುಂಪು ಊಟದ ಕೊಠಡಿಯನ್ನು ಹೊಕ್ಕಿತು.

ಸುದ್ದಿ ಊರೆಲ್ಲ ಹರಡಿತು. ತನ್ನ ವೃತ್ತಿಯಲ್ಲಿ ಆಯಾಸಗೊಂಡ, ಆದರೆ ಜೀವನದಲ್ಲಿ ಸುಖಿಯಾದ ಹಳೆಯ ವೈದ್ಯ ಡಾ|| ಆಕ್ಟಾಬಿಯೋ ಗಿರಾಲ್ಡೊ, ಅಶಕ್ತಳಾದ ತನ್ನ ಹೆಂಡತಿಯ ಜತೆ ಮಧ್ಯಾಹ್ನದ ಊಟ ಮಾಡುತ್ತ ಬಾಲ್ತಜಾರ್‌ನ ಪಂಜರದ ಬಗ್ಗೆ ಯೋಚಿಸಿದರು. ಧಗೆಯ ದಿನಗಳಲ್ಲಿ ಮೇಜನ್ನು ಇರಿಸುವಂಥ ಟೆರೇಸಿನ ಒಳಭಾಗದಲ್ಲಿ ಹಲವಾರು ಹೂವಿನ ಕುಂಡಗಳು ಮತ್ತು ಕ್ಯಾನರಿಗಳಿರುವ ಎರಡು ಪಂಜರಗಳು ಇದ್ದವು. ಆತನ ಹೆಂಡತಿಗೆ ಕ್ಯಾನರಿಗಳೆಂದರೆ ಪ್ರಾಣ. ಬೆಕ್ಕು ಅವನ್ನು ತಿಂದುಬಿಡುತ್ತವೆಂಬ ಕಾರಣದಿಂದಾಗಿ ಆಕೆ ಬೆಕ್ಕನ್ನು ದ್ವೇಷಿಸುತ್ತಿದ್ದಳು. ಅವಳ ಬಗೆಗೇ ಯೋಚಿಸುತ್ತ ಡಾ|| ಗಿರಾಲ್ಡೊ ಅದೇ ಮಧ್ಯಾಹ್ನ ಒಬ್ಬ ರೋಗಿಯನ್ನು ನೋಡಲು ಹೋದರು. ವಾಪಸು ಬರುವಾಗ ಪಂಜರವನ್ನು ನೋಡಿ ಬರಲೆಂದು ಅವರು ಬಾಲ್ತಜಾರ್‌ನ ಮನೆಯ ಕಡೆ ಹೋದರು.

ಊಟದ ಕೊಠಡಿಯಲ್ಲಿ ತುಂಬ ಜನ.

ಪಂಜರವನ್ನು ಮೇಜಿನ ಮೇಲೆ ಪ್ರದರ್ಶಿಸಲಾಗಿತ್ತು. ತಂತಿಯ ಬೃಹದಾಕಾರದ ಗುಮ್ಮಟ; ಒಳಗೆ ಮೂರು ಮಹಡಿಗಳು; ತಿನ್ನಲು, ಮಲಗಲು, ಉಯ್ಯಾಲೆಯಾಡಲು ಬೇರೆ ಬೇರೆ ಸ್ಥಳಗಳು, ದಾರಿಗಳು - ಒಟ್ಟಿನಲ್ಲಿ ಒಂದು ದೊಡ್ಡ ಐಸ್ - ಫ್ಯಾಕ್ಟರಿಯ ಚಿಕ್ಕ ಮಾದರಿಯಂತೆ ಕಾಣುತ್ತಿತ್ತು ಪಂಜರ. ಡಾಕ್ಟರ್ ಅದನ್ನು ಮುಟ್ಟದೆ ಜಾಗರೂಕತೆಯಿಂದ ಪರಿಶೀಲಿಸಿದರು. ಅದಕ್ಕೆ ಸಿಕ್ಕ ಹೊಗಳಿಕೆಗಿಂತಲೂ ಆ ಪಂಜರ ಚೆನ್ನಾಗಿದೆ. ಹೆಂಡತಿಗೆ ಕೊಡಲು ಕನಸು ಕಂಡ ಎಲ್ಲ ಪಂಜರಗಳಿಗಿಂತಲೂ ಅದು ಸುಂದರವಾಗಿದೆ ಎಂದು ಯೋಚಿಸಿದರು.

'ಇದೊಂದು ಕಲ್ಪನೆಯ ನಾಗಾಲೋಟ' ಎಂದರು ಡಾಕ್ಟರ್. ಜನರ ಗುಂಪಿನಲ್ಲಿ ಬಾಲ್ತಜಾರ್‌ನನ್ನು ಹುಡುಕಿ ತೆಗೆದರು. ಕರುಣೆ ತುಂಬಿದ ತನ್ನ ಕಣ್ಣುಗಳನ್ನು ಆತನ ಮೇಲೆ ನೆಟ್ಟು ಡಾಕ್ಟರ್ ಹೇಳಿದರು; ನೀನೊಬ್ಬ ಅಸಾಧಾರಣ ಶಿಲ್ಪಿಯಾಗಬಹುದಾಗಿತ್ತು.

ಬಾಲ್ತಜಾರ್ ನಾಚಿ ನೀರಾದ.

'ಥ್ಯಾಂಕ್ಯು' ಎಂದ.

'ನಾ ಹೇಳಿದ್ದು ನಿಜ' ಎಂದರು ಡಾಕ್ಟರ್, ತನ್ನ ಯೌವನದಲ್ಲಿ ಸುಂದರವಾಗಿದ್ದ ಹೆಣ್ಣಿನಂತೆ ಈ ಡಾಕ್ಟರ್ ಮೃದುವಾಗಿ, ನಯವಾಗಿ ದಪ್ಪಗಿದ್ದರು. ನಾಜೂಕಾದ ಕೈಗಳು, ಅವರ ಧ್ವನಿ ಲ್ಯಾಟಿನ್ ಮಾತಾಡುವ ಪಾದ್ರಿಯಂಥದು. 'ಇದರಲ್ಲಿ ಗಿಳಿಗಳನ್ನೂ ಇಡಬೇಕಾದ್ದಿಲ್ಲ ಎಂದು, ಪಂಜರವನ್ನು ಹರಾಜು ಹಾಕುವವರಂತೆ ಅದನ್ನು ಪ್ರೇಕ್ಷಕರ ಕಣ್ಣೆದುರಿಗೆ ತಿರುಗಿಸುತ್ತ, 'ಮರಕ್ಕೆ ತೂಗು ಹಾಕಿದರೆ ಸಾಕು. ತನ್ನಿಂದತಾನೇ ಅದು ಹಾಡಬಲ್ಲದು' ಎಂದು ಅದನ್ನು ಮೇಜಿನ ಮೇಲಿರಿಸಿದರು. ಒಂದು ಕ್ಷಣ ಯೋಚಿಸಿ, ಮತ್ತೆ ಪಂಜರದ ಕಡೆ ನೋಡುತ್ತಾ ಅವರೆಂದರು: 'ಒಳ್ಳೇದು, ನಾನಿದನ್ನ ಕೊಂಡಕೋತೀನಿ'.

'ಅದನ್ನು ಮಾರಿಯಾಗಿದೆ' ಎಂದಳು ಉರ್ಸುಲಾ.

'ಅದು ಮಿಸ್ಟರ್ ಚೆಪಿ ಮಾಂಟಿಯೆಲ್ ಅವರ ಮಗುವಿಗೆ ಸೇರಿದ್ದು. ವಿಶೇಷವಾಗಿ ಹೇಳಿ ಮಾಡಿಸಿದ್ದು' ಎಂದ ಬಾಲ್ತಜಾರ್.

ಡಾಕ್ಟರ್ ಅತ್ಯಂತ ಗೌರವದ ಮನೋಭಾವ ತಳೆದರು.

'ವಿನ್ಯಾಸ ಹೀಗಿರಬೇಕೆಂದು ಅವರೇ ಸೂಚಿಸಿದ್ದಾರಾ?'

'ಇಲ್ಲ. ಈಗಿದೆಯಲ್ಲ ಇದೇ ಥರ ಒಂದು ದೊಡ್ಡದು ಬೇಕೆಂದಿದ್ದರು. ಒಂದು ಜತೆ ಟ್ರೌಪಿಯಲ್‌ಗೆ ಹಕ್ಕಿಗಳನ್ನ ಇಡುವಂಥದು' ಎಂದ ಬಾಲ್ತಜಾರ್.

ಡಾಕ್ಟರ್ ಪಂಜರದ ಕಡೆ ನೋಡಿದರು.

'ಆದರೆ ಇದು ಟ್ರೌಪಿಯಲ್‌ಗೆ ಆಗುವಂಥ ಪಂಜರ ಅಲ್ಲ.'

'ಇದು ಟ್ರೌಪಿಯಲ್ ಪಂಜರಾನೇ ಸರಿ. ಡಾಕ್ಟರ್' ಎಂದ ಬಾಲ್ತಜಾರ್, ಮೇಜಿನ ಸಮೀಪ ಸರಿಯುತ್ತ, ಮಕ್ಕಳು ಅವನ ಸುತ್ತ ಸೇರಿದರು. 'ಎಲ್ಲ ಅಳತೆಗಳನ್ನೂ ಎಚ್ಚರಿಕೆಯಿಂದ ಲೆಕ್ಕ ಹಾಕಲಾಗಿದೆ' ಎಂದ, ಬೇರೆ ಬೇರೆ ವಿಭಾಗಗಳನ್ನು ತನ್ನ ತೋರು ಬೆರಳಿನಿಂದ ತೋರಿಸುತ್ತ ತನ್ನ ಬೆರಳಗಣ್ಣಿನಿಂದ ಪಂಜರದ ಗುಮ್ಮಟವನ್ನು ಬಡಿದ. ಇಡೀ ಪಂಜರ ತಂತಿಯ ನಾದದಿಂದ ತುಂಬಿ ಹೋಯಿತು.

'ಗಟ್ಟಿಯಾದ ತಂತಿ, ಪ್ರತಿಯೊಂದು ಸಂದುಗಳನ್ನೂ ಭದ್ರವಾಗಿ ಬೆಸುಗೆ ಹಾಕಿದೆ' ಎಂದ.

'ಗಿಳಿಗೆ ಕೂಡಾ ಇದು ದೊಡ್ಡದಾಗಿದೆ' ಎಂದು ಮಧ್ಯೆ ಒಬ್ಬ ಹುಡುಗ ಹೇಳಿದ.

'ಹೌದು, ದೊಡ್ಡದಾಗಿದೆ' ಎಂದ ಬಾಲ್ತಜಾರ್.

ಡಾಕ್ಟರ್ ತಮ್ಮ ತಲೆ ತಿರುಗಿಸಿದರು.

'ಒಳ್ಳೇದು, ಆದರೆ ಇದರ ವಿನ್ಯಾಸವನ್ನು ಅವರು ಕೊಟ್ಟಿರಲಿಲ್ಲ. ಟ್ರೌಪಿಯಲ್‌ಗೆ ಆಗುವಂಥ ದೊಡ್ಡ ಪಂಜರ ಬೇಕೆಂಬುದನ್ನು ಬಿಟ್ಟು ಹೀಗೆ ಹೀಗೇ ಇರಬೇಕೆಂದೇನೂ ಅವರು ಸ್ಪಷ್ಟವಾಗಿ ಹೇಳಿರಲಿಲ್ಲ, ಅಲ್ವೆ?'

'ಅದು ನಿಜ' ಎಂದ ಬಾಲ್ತಜಾರ್.

'ಹಾಗಾದರೆ ಸಮಸ್ಯೆಯೇ ಇಲ್ಲ. ಟ್ರೌಪಿಯಲ್‌ಗೆ ಆಗುವಂಥ ಒಂದು ದೊಡ್ಡ ಪಂಜರ ಅವರಿಗೆ ಬೇಕು. ಇದೇ ಪಂಜರವನ್ನು ನೀನು ಮಾಡಿಕೊಡಬೇಕಾದ್ದೆಂಬುದಕ್ಕೆ ಪುರಾವೆಯೇನೂ ಇಲ್ಲ.

'ಇದೇ ಪಂಜರ. ಅದಕ್ಕೇ ನಾನಿದನ್ನು ಮಾಡಿದ್ದೇನೆ' ಎಂದ ಗೊಂದಲಗೊಂಡ ಬಾಲ್ತಜಾರ್.

ಡಾಕ್ಟರ್ ಅಸಹನೆಯ ಸಂಜ್ಞೆ ಮಾಡಿದರು.

'ನೀನು ಇನ್ನೊಂದು ಪಂಜರ ಮಾಡಬಹುದು' ಎಂದು ಗಂಡನ ಕಡೆ ನೋಡುತ್ತ ಉರ್ಸುಲಾ ಹೇಳಿದಳು. 'ನಿಮಗೇನೂ ಅವಸರ ಇಲ್ಲವಲ್ಲ' ಎಂದು ಡಾಕ್ಟರ್ ಕಡೆ ತಿರುಗಿ ಹೇಳಿದಳು.

'ಇದೇ ಮಧ್ಯಾಹ್ನ ತಂದು ಕೊಡ್ತೇನೆ ಎಂದು ನನ್ನ ಹೆಂಡತಿಗೆ ಮಾತುಕೊಟ್ಟಿದ್ದೇನೆ' ಎಂದರು ಡಾಕ್ಟರ್.

'ಸಾರಿ, ಡಾಕ್ಟರ್... ಈಗಾಗಲೇ ಮಾರಿರುವುದನ್ನು ನಾನು ನಿಮಗೆ ಮಾರಲಾರೆ' ಎಂದ ಬಾಲ್ತಜಾರ್.

ಡಾಕ್ಟರ್ ತಮ್ಮ ಭುಜ ಕುಣಿಸಿದರು. ಕರ್ಚೀಪಿನಿಂದ ತಮ್ಮ ಕತ್ತಿನ ಬೆವರೊರೆಸಿಕೊಳ್ಳುತ್ತ, ದೂರ ದೂರ ತೇಲಿ ಹೋಗುತ್ತಿರುವ ಹಡಗನ್ನು ನೋಡುವಂತೆ ಶೂನ್ಯದೃಷ್ಟಿಯನ್ನು ಪಂಜರದ ಮೇಲೆ ನೆಟ್ಟು ಡಾಕ್ಟರ್ ಯೋಚನಾಮಗ್ನರಾದರು.

'ಇದಕ್ಕೆ ಅವರು ನಿನಗೆ ಎಷ್ಟು ಕೊಟ್ಟರು?'

ಬಾಲ್ತಜಾರ್ ಉತ್ತರ ಕೊಡದೆ ಹೆಂಡತಿಯ ಕಡೆ ನೋಡಿದ.

'ಅರವತ್ತು ಪೆಸೋಗಳು' ಎಂದಳು ಆಕೆ.

ಡಾಕ್ಟರ್ ಪಂಜರದ ಕಡೆ ನೋಡುತ್ತಲೇ ಇದ್ದರು.

'ಬಹಳ ಮುದ್ದಾಗಿದೆ' ಅವರು ನಿಟ್ಟುಸಿರು ಬಿಟ್ಟು, 'ತುಂಬ ಮುದ್ದಾಗಿದೆ' ಎಂದರು. ಬಾಗಿಲತ್ತ ಸರಿಯುತ್ತ, ನಗುತ್ತ ಅವರು ಬಿರುಸಾಗಿ ಗಾಳಿ ಬೀಸಿಕೊಳ್ಳತೊಡಗಿದರು.

'ಮಾಂಟಿಯೆಲ್ ತುಂಬಾ ಶ್ರೀಮಂತ' ಎಂದರು.

ನಿಜ ಹೇಳಬೇಕೆಂದರೆ ಜೋಸೆ ಮಾಂಟಿಯಲ್ ಮೇಲೆ ಕಾಣುವಷ್ಟು ಶ್ರೀಮಂತನಾಗಿರಲಿಲ್ಲ. ಆದರೆ ಶ್ರೀಮಂತನಾಗಲು ಏನು ಬೇಕಾದರೂ ಮಾಡಲು ಸಮರ್ಥನಾಗಿದ್ದ. ಅಲ್ಲಿಂದ ಕೆಲವು ಮನೆಗಳ ದೂರದಲ್ಲಿದ್ದ ಮಾಂಟಿಯಲ್ ಪಂಜರದ ಸುದ್ದಿಯ ಬಗ್ಗೆ ನಿರಾಸಕ್ತನಾಗಿದ್ದ. ಸಾವಿನ ಗೀಳಿನಿಂದ ಮಾನಸಿಕ ಹಿಂಸೆಗೊಳಗಾದ ಆತನ ಹೆಂಡತಿ ಊಟವಾದ ನಂತರ ಕಿಟಕಿ ಬಾಗಿಲುಗಳನ್ನೆಲ್ಲ ಮುಚ್ಚಿ, ಕೋಣೆಯ ನೆರಳಿಗೆ ತನ್ನ ಕಣ್ಣುಗಳನ್ನು ತೆರೆದುಕೊಂಡು ಎರಡು ಗಂಟೆ ಮಲಗಿದ್ದಳು. ಜೋಸೆ ಮಾಂಟಿಯಲ್ ಕೂಡಾ ಮಧ್ಯಾಹ್ನದ ನಿದ್ದೆಯಲ್ಲಿದ್ದ. ಹಲವು ಧ್ವನಿಗಳ ಶಬ್ದದಿಂದ ಅವಳಿಗೆ ಅಚ್ಚರಿಯಾಯಿತು. ದಿವಾನಖಾನೆಯ ಬಾಗಿಲನ್ನು ತೆರೆದಾಗ ಮನೆ ಮುಂದೆ ಒಂದು ಗುಂಪೇ ಕಾಣಿಸಿತು. ಬಿಳಿಯ ಬಟ್ಟೆ ಧರಿಸಿದ, ಆಗತಾನೇ ಮುಖ ಕ್ಷೌರ ಮಾಡಿಕೊಂಡ, ಶ್ರೀಮಂತರ ಮನೆಯನ್ನು ಸಮೀಪಿಸುವ ಬಡವರು ಮುಖದ ಮೇಲೆ ತಂದುಕೊಳ್ಳುವಂಥ ವಿನಯ, ಗಾಂಭೀರ್ಯದ ಮುಖಮುದ್ರೆ ಹೊತ್ತ ಬಾಲ್ತಜಾರ್ ಆ ಗ್ರೂಪಿನ ನಡುವೆ ಪಂಜರದ ಜತೆ ನಿಂತಿದ್ದ.

'ಎಂಥ ಅದ್ಭುತ ಪಂಜರ' ಎಂದು ಜೋಸೆ ಮಾಂಟಿಯಲ್‌ನ ಹೆಂಡತಿ ಉದ್ಗರಿಸಿದಳು., ಸಂತೋಷದಿಂದ ಹೊಳೆಯುತ್ತಿದ್ದ ಆಕೆ ಬಾಲ್ತಜಾರ್‌ನನ್ನು ಒಳಕ್ಕೆ ಕರೆದೊಯ್ದಳು. 'ನನ್ನ ಜೀವನದಲ್ಲೇ ಇಂಥದನ್ನು ನೋಡಿರಲಿಲ್ಲ' ಎಂದಳು. ಬಾಗಿಲ ಬಳಿ ಸೇರಿದ ಗುಂಪಿನಿಂದ ಕಿರಿ ಕಿರಿಗೊಂಡಳು.

'ನಮ್ಮ ದಿವಾನಖಾನೆಯನ್ನು ಅವರು ಸಾರ್ವಜನಿಕ ಮೇಳದ ವೇದಿಕೆ ಮಾಡುವ ಮೊದಲು ಅದನ್ನ ಒಳಗೆ ತಂದುಬಿಡು.'

ಜೋಸೆ ಮಾಂಟಿಯೆಲ್‌ನ ಮನೆಗೆ ಬಾಲ್ತಜಾರ್‌ನೇನೂ ಅಪರಿಚಿತನಲ್ಲ. ಆತನ ಕುಶಲತೆ ಮತ್ತು ಸಾಫ್‌ಸೀದಾ ವ್ಯವಹಾರದಿಂದಾಗಿ ಕೆಲವು ಸಣ್ಣಪುಟ್ಟ ಮರಗೆಲಸದ

ಸಲುವಾಗಿ ಆತ ಅಲ್ಲಿಗೆ ಹಲವು ಸಲ ಬಂದಿದ್ದ. ಆದರೆ ಶ್ರೀಮಂತರ ಸನಿಯದಲ್ಲಿ ಆತ ಆರಾಮಾಗಿರಲು ಆಗುತ್ತಲೇ ಇರಲಿಲ್ಲ. ಆತ ಅವರ ಬಗ್ಗೆ, ಅವರ ಕುರೂಪಿಯಾದ ಒಣವಾದ ಮಾಡುವ ಹೆಂಡತಿಯರ ಬಗ್ಗೆ, ಅವರ ಶಸ್ತ್ರಚಿಕಿತ್ಸೆಗಳ ಬಗ್ಗೆ ಯೋಚಿಸುತ್ತಿದ್ದ, ಅವರ ಬಗ್ಗೆ ಯಾವಾಗಲೂ ಒಂದು ರೀತಿಯ ಕರುಣೆಯ ಭಾವನೆ ಅವನಲ್ಲಿ. ಅವರ ಮನೆಗಳನ್ನು ಪ್ರವೇಶಿಸಿದಾಗ ಕಾಲುಗಳನ್ನು ಎಳೆದೆಳೆದುಕೊಳ್ಳುತ್ತಾ ಹೋಗದೆ ಸಹಜವಾಗಿ ಚಲಿಸುವುದೇ ಸಾಧ್ಯವಾಗುತ್ತಿರಲಿಲ್ಲ.

'ಪೇಪಿ ಮನೇಲಿದಾನ?' ಎಂದು ಕೇಳಿದ.

ಊಟದ ಕೋಣೆಯ ಮೇಜಿನ ಮೇಲೆ ಪಂಜರವನ್ನು ಇರಿಸಿದ.

'ಆತ ಶಾಲೇಲಿದಾನೆ. ಬರೋದು ಹೆಚ್ಚು ಹೊತ್ತಾಗೋಲ್ಲ. ಮಾಂಟಿಯೆಲ್ ಸ್ನಾನ ಮಾಡ್ತಿದಾರೆ' ಎಂದಳು ಮಾಂಟಿಯೆಲ್‌ನ ಹೆಂಡತಿ.

ವಾಸ್ತವವಾಗಿ ಜೋಸೆ ಮಾಂಟಿಯೆಲ್‌ಗೆ ಸ್ನಾನ ಮಾಡಲು ಸಮಯವೇ ಇರಲಿಲ್ಲ. ಹೊರಗೆ ಬಂದು ಏನಾಗುತ್ತಿದೆಯೆಂದು ನೋಡುವ ಸಲುವಾಗಿ ಆತ ತುರ್ತಾಗಿ ಮದ್ಯವನ್ನು ಮೈಗೆ ಉಜ್ಜಿಕೊಳ್ಳುತ್ತಿದ್ದ. ಆತ ಎಷ್ಟು ಜಾಗರೂಕತೆಯ ಮನುಷ್ಯನೆಂದರೆ ತಾನು ಮಲಗಿದಾಗ ಮನೆಯ ಶಬ್ದಗಳನ್ನೆಲ್ಲಾ ಗಮನಿಸುವ ಸಲುವಾಗಿ ವಿದ್ಯುತ್ ಫ್ಯಾನನ್ನು ಕೂಡಾ ಹಾಕಿಕೊಳ್ಳುತ್ತಿರಲಿಲ್ಲ.

'ಅಡಿಲೇಡ್. ಅದೇನು ಗಲಾಟೆ?' ಎಂದು ಕೂಗಿದ.

'ಎಂಥ ಅದ್ಭುತ ವಸ್ತು, ನೀನೇ ಬಂದು ನೋಡು; ಆತನ ಹೆಂಡತಿಯೂ ಕೂಗಿ ಹೇಳಿದಳು.

ಬೊಜ್ಜು ಬೆಳೆದ ರೋಮಭರಿತ ಜೋಸೆ ಮಾಂಟಿಯೆಲ್ ಕತ್ತಿನ ಸುತ್ತ ಟವೆಲನ್ನು ಎಸೆದುಕೊಂಡು ಮಲಗುವ ಕೋಣೆಯ ಕಿಟಕಿಯ ಬಳಿ ಪ್ರತ್ಯಕ್ಷನಾದ.

'ಏನದು?'

'ಪೆಪಿಯ ಪಂಜರ', ಎಂದ ಬಾಲ್ತಜಾರ್. ಆತನ ಹೆಂಡತಿ ದಿಗ್ಭ್ರಮೆಯಿಂದ ಅವನ ಕಡೆ ನೋಡಿದಳು.

'ಯಾರದ್ದು?'

'ಪೆಪೀದು' ಎಂದು ಬಾಲ್ತಜಾರ್ ಉತ್ತರ ಕೊಟ್ಟ. ನಂತರ ಜೋಸೆ ಮಾಂಟಿಯೆಲ್

ಕಡೆ ತಿರುಗಿ 'ಅದಕ್ಕಾಗಿ ಪೆಪಿ ಆರ್ಡರ್ ಕೊಟ್ಟಿದ್ದ' ; ಎಂದ.

ಆ ಗಳಿಗೆಯಲ್ಲಿ ಏನೂ ಆಗಲಿಲ್ಲ, ಆದರೆ ಯಾರೋ ತನ್ನ ಮುಖದೆದುರು ಬಚ್ಚಲಿನ ಬಾಗಿಲು ತೆರೆದಂತೆ ಅನಿಸಿತು ಬಾಲ್ತಜಾರ್‌ಗೆ. ಜೋಸೆ ಮಾಂಟಿಯೆಲ್ ತನ್ನ ಒಳಚಡ್ಡಿಯಲ್ಲೇ ಮಲಗುವ ಕೋಣೆಯಿಂದ ಹೊರಬಂದ.

'ಪೆಪಿ', ಎಂದು ಕೂಗಿದ.

'ಅವನು ಇನ್ನೂ ಬಂದಿಲ್ಲ', ಎಂದು ಅಲ್ಲಾಡದೆ ನಿಂತ ಆತನ ಹೆಂಡತಿ ಪಿಸುಗುಟ್ಟಿದಳು.

ಪೆಪಿ ಬಾಗಿಲಲ್ಲಿ ಕಾಣಿಸಿಕೊಂಡ, ಆತ ಸುಮಾರು ಹನ್ನೆರಡು ವರ್ಷದ ಹುಡುಗ. ತಾಯಿಯಂತೆಯೇ ಡೊಂಕಾದ ರೆಪ್ಪೆ, ಅಷ್ಟೇ ಕರುಣಾಜನಕ ಮುಖ.

'ಇಲ್ಬಾ' ಜೋಸೆ ಮಾಂಟಿಯಲ್ ಅವನನ್ನು ಕರೆದ.

'ನೀನು ಇದಕ್ಕೆ ಆರ್ಡರ್ ಕೊಟ್ಟಿದ್ದೆಯಾ?'

ಹುಡುಗ ಮುಖ ಕೆಳಗೆ ಹಾಕಿದ. ಪೆಪಿ ತನ್ನ ಮುಖವನ್ನು ನೋಡುವಂತೆ ಆತನ ಕೂದಲನ್ನು, ಜಗ್ಗಿ ಹಿಡಿದು ಜೋಸೆ ಮಾಂಟಿಯೆಲ್ ಮೇಲೆತ್ತಿದ.

'ಏನು ಹೇಳು'.

ಹುಡುಗ ಉತ್ತರ ಕೊಡದೆ ತುಟಿ ಕಚ್ಚಿಕೊಂಡ. 'ಮಾಂಟಿಯೆಲ್' ಎಂದು ಮತ್ತೆ ಹೆಂಡತಿ ಪಿಸುಗುಟ್ಟಿದಳು. ಜೋಸೆ ಮಾಂಟಿಯೆಲ್ ಮಗುವನ್ನು ಬಿಟ್ಟು ರೋಷಾವೇಷದಿಂದ ಬಾಲ್ತಜಾರ್ ಕಡೆ ತಿರುಗಿದ. 'ವೆರಿ ಸಾರಿ, ಬಾಲ್ತಜಾರ್, ಅದನ್ನ ಮಾಡೋಕೆ ಮುಂಚೆ ನೀನು ನನ್ನನ್ನು ಕೇಳಬೇಕಾಗಿತ್ತು, ಒಬ್ಬ ಹುಡುಗನ ಜತೆ ವ್ಯವಹರಿಸುವುದು ನಿನಗೆ ಮಾತ್ರ ಹೊಳೆಯುತ್ತದೆ, ನೋಡು', ಆತ ಮಾತಾಡುತ್ತಿದ್ದಂತೆ ಮುಖ ತನ್ನ ಪ್ರಸನ್ನತೆಯನ್ನ ಮರಳಿ ಗಳಿಸಿತು, ಆತ ಪಂಜರವನ್ನು ಅದರ ಜಾಗದಿಂದ ಎತ್ತಿ ಅದರ ಕಡೆ ಕಣ್ಣೂ ಹಾಕದೆ, ಬಾಲ್ತಜಾರ್‌ಗೆ ಕೊಟ್ಟ.

'ಈ ಕೂಡಲೇ ಇದನ್ನ ತಗೊಂಡು ಹೋಗು, ಯಾರಿಗೆ ಬೇಕೋ ಅವರಿಗೆ ಮಾರು' ಎಂದು ಹೇಳಿ ಕೂಡಲೇ, 'ನನ್ನ ಜತೆ ವಾದ ಬೆಳಿಸಬೇಡ' ಎಂದ. ಬಾಲ್ತಜಾರ್‌ನ ಬೆನ್ನು ತಟ್ಟುತ್ತಾ, 'ಕೋಪ ಮಾಡಿಕೊಳ್ಳಬಾರದೆಂದು ನನಗೆ ಡಾಕ್ಟರು ಕಟ್ಟುನಿಟ್ಟಾಗಿ ಹೇಳಿದ್ದಾರೆ', ಎಂದ.

ಬಾಲ್ತ್‌ಜಾರ್ ಪಂಜರವನ್ನು ಕೈಯಲ್ಲಿ ಹಿಡಿದುಕೊಂಡು ಅನಿಶ್ಚಯತೆಯಿಂದ ತನ್ನ ಕಡೆ ನೋಡುವವರೆಗೂ ಪೆಪಿ ಕಣ್ಣು ಮಿಟುಕಿಸದೆ, ಅಲ್ಲಾಡದೆ ನಿಂತಿದ್ದ. ಈಗ ನಾಯಿಯ ಊಳಿನಂತೆ ಆತನ ಗಂಟಲಿನಿಂದ ಒಂದು ಬಗೆಯ ಧ್ವನಿ ಹೊರ ಹೊಮ್ಮಿ, ನೆಲದ ಮೇಲೆ ಕಿರುಚುತ್ತಾ ಹೊರಳಾಡಿದ.

ಜೋಸೆ ಮಾಂಟಿಯೆಲ್ ಸ್ಥಿರವಾಗಿ ನಿಂತು ಮಗನ ಕಡೆ ನೋಡಿದ. ತಾಯಿ ಮಗನನ್ನು ಸಮಾಧಾನ ಪಡಿಸಲು ನೋಡುತ್ತಿದ್ದಳು. 'ಅವನನ್ನು ಅಲ್ಲಿಂದ ಎತ್ತಿಕೊಳ್ಳಬೇಡ, ಆತ ನೆಲದ ಮೇಲೆ ಹೊರಳಾಡಿ ತನ್ನ ತಲೆ ಒಡೆದುಕೊಳ್ಳಲಿ, ನಂತರ ಅದರ ಮೇಲೆ ಉಪ್ಪು, ಲಿಂಬೆಹಣ್ಣು ಹಾಕು. ಅವನಿಗೆ ಸಮಾಧಾನವಾಗುವಷ್ಟು ಕೋಪ, ತಾಪ ಕಾರಿಕೊಳ್ಳಲಿ', ಎಂದ. ತಾಯಿ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಂತೆಯೇ ಹುಡುಗ ಅರಚುತ್ತಿದ್ದ.

'ಅವನನ್ನು ಅವನ ಪಾಡಿಗೆ ಬಿಟ್ಟು ಬಿಡು' ಜೋಸೆ ಮಾಂಟಿಯೆಲ್ ಹಟಹಿಡಿದ.

ಹುಚ್ಚುನಾಯಿಯೊಂದರ ಸಾವಿನ ಸಂಕಟವನ್ನು ಅವಲೋಕಿಸುವವನಂತೆ ಬಾಲ್ತ್‌ಜಾರ್ ಹುಡುಗನನ್ನು ನೋಡಿದ, ಹೆಚ್ಚು ಕಡಿಮೆ ನಾಲ್ಕು ಗಂಟೆಯಾಗಿತ್ತು. ಈ ಹೊತ್ತಿಗೆ ತನ್ನ ಮನೆಯಲ್ಲಿ ಉರ್ಸುಲಾ ಹಳೆಯ ಹಾಡೊಂದನ್ನು ಹೇಳಿಕೊಳ್ಳುತ್ತಾ, ಈರುಳ್ಳಿಯನ್ನು ಕೊಚ್ಚುತ್ತಾ ಇರುತ್ತಾಳೆ.

'ಪೆಪಿ', ಬಾಲ್ತ್‌ಜಾರ್ ಕರೆದ.

ನಸುನಗುತ್ತಾ ಆತ ಹುಡುಗನನ್ನು ಸಮೀಪಿಸಿ ಪಂಜರವನ್ನು ಅವನೆದುರು ಹಿಡಿದ. ಹುಡಗ ಮೇಲಕ್ಕೆ ಜಿಗಿದೆದ್ದ. ಹೆಚ್ಚು ಕಡಿಮೆ ತನ್ನಷ್ಟೇ ದೊಡ್ಡದಿರುವ ಪಂಜರವನ್ನು ಅಪ್ಪಿಕೊಂಡ. ಏನು ಹೇಳಬೇಕೆಂದು ತೋಚದೆ ಪಂಜರದ ತಂತಿಗಳ ಮೂಲಕ ಬಾಲ್ತ್‌ಜಾರ್‌ನನ್ನು ನೋಡುತ್ತ ನಿಂತ ಆತ ಒಂದೇ ಒಂದು ಹನಿ ಕಣ್ಣೀರನ್ನೂ ಸುರಿಸಿರಲಿಲ್ಲ.

'ಬಾಲ್ತ್‌ಜಾರ್, ನಾನಾಗಲೇ ಹೇಳಿದೆ ಅದನ್ನು ತಗೊಂಡು ಹೊರಟುಹೋಗು, ಎಂದು', ಮಾಂಟಿಯೆಲ್ ಮೃದುವಾಗಿ ಹೇಳಿದ.

'ಅದನ್ನ ವಾಪಸು ಕೊಡು' ತಾಯಿ ಮಗನಿಗೆ ಅಪ್ಪಣೆ ಇತ್ತಳು.

'ಇಟ್ಕೋ' ಎಂದ ಬಾಲ್ತ್‌ಜಾರ್. ನಂತರ ಜೋಸೆ ಮಾಂಟಿಯೆಲ್‌ಗೆ ಹೇಳಿದ, ಏಷ್ಟೆಂದರೂ ನಾನು ಅದನ್ನು ಮಾಡಿದ್ದೇ ಅವನಿಗಾಗಿ'.

ಜೋಸೆ ಮಾಂಟಿಯೆಲ್ ಅವನ ಹಿಂದೆಯೇ ದಿವಾನಖಾನೆಗೆ ಹೋದ.

'ಬಾಲ್ತಜಾರ್, ಮೂರ್ಖನಾಗಬೇಡ' ಎಂದು ಬಾಲ್ತಜಾರ್‌ನನ್ನು ಅಡ್ಡಗಟ್ಟಿ ಹೇಳಿದ. 'ಈ ನಿನ್ನ ಫರ್ನೀಚರ್ ತುಂಡನ್ನ ಮನೆಗೆ ತಗೊಂಡು ಹೋಗು, ನಾನು ನಿನಗೆ ಒಂದೇ ಒಂದು ಸೆಂಟ್ ಕೂಡಾ ಕೊಡಲು ತಯಾರಿಲ್ಲ.'

'ಅದೇನು ಪರವಾಗಿಲ್ಲ' ಎಂದ ಬಾಲ್ತಜಾರ್. 'ನಾನು ಅದನ್ನ ಪೆಪಿಗೆ ಉಡುಗೊರೆಯಾಗಿ ಕೊಡಲೆಂದೇ ಮಾಡಿದ್ದೇನೆ. ಅದಕ್ಕೆ ಹಣ ಕೇಳುವುದು ನನ್ನ ಯೋಚನೆಯಲ್ಲಿ ಇರಲಿಲ್ಲ.'

ಬಾಗಿಲಿಗೆ ಅಡ್ಡ ನಿಂತ ಪ್ರೇಕ್ಷಕರ ಮೂಲಕ ಬಾಲ್ತಜಾರ್ ದಾರಿ ಮಾಡಿಕೊಂಡು ಹೋಗುತ್ತಿರುವಾಗ ಜೋಸೆ ಮಾಂಟಿಯೆಲ್ ದಿವಾನಖಾನೆಯ ನಡುವೆ ನಿಂತು ಅರಚುತ್ತಿದ್ದ. ಆತ ಬಿಳುಚಿಕೊಂಡದ್ದ. ಕಣ್ಣುಗಳು ಕೆಂಪಾಗತೊಡಗಿದ್ದವು.

'ಶತಮೂರ್ಖ' ಎಂದು ಕಿರುಚಿದ.

'ನಿನ್ನ ಗುಜರಿ ಸಾಮಾನನ್ನ ತಗೊಂಡು ಹೋಗು. ನನ್ನ ಮನೆಯಲ್ಲಿ ಯಾವನೋ ಒಬ್ಬ ಬಂದು ಆದೇಶ ನೀಡುವುದು ನಮಗೆ ಎಂದೆಂದೂ ಬೇಕಾಗಿಲ್ಲ. ಹಾದರಗಿತ್ತಿ ಮಗನೆ.'

ಪೂಲ್‌ಹಾಲ್‌ನಲ್ಲಿ ಬಾಲ್ತಜಾರ್‌ನನ್ನು ಜಯಘೋಷದೊಂದಿಗೆ ಸ್ವಾಗತಿಸಲಾಯಿತು. ಆ ಘಳಿಗೆಯವರೆಗೆ, ತಾನು ಮೊದಲು ಮಾಡಿದ್ದೆಲ್ಲಕ್ಕಿಂತಲೂ ಉತ್ತಮವಾದ ಒಂದು ಪಂಜರ ಮಾಡಿದ್ದೇನೆ; ಜೋಸೆ ಮಾಂಟಿಯೆಲ್‌ನ ಮಗ ಆಳಬಾರದು ಎನ್ನುವುದಕ್ಕಾಗಿ ಅದನ್ನು ಅವನಿಗೆ ತಾನು ಕೊಡಬೇಕಾಯಿತು ಮತ್ತು ಇವೆಲ್ಲ ಅಂಥ ಮಹತ್ವದ ಸಂಗತಿಗಳಲ್ಲ ಎಂದಿಷ್ಟೇ ಬಾಲ್ತಜಾರ್ ಯೋಚಿಸಿದ್ದ. ಆದರೆ ಈಗ ಇವೆಲ್ಲ ಎಷ್ಟೋ ಜನರಿಗೆ ಏನೋ ಮಹತ್ವದ ವಿಷಯವಾಗಿ ಕಾಣಿಸಿದ್ದು ಅರಿವಾಯಿತು. ಇದರಿಂದ ಆತನೂ ಉತ್ತೇಜಿತನಾದ.

'ಅಂತೂ ಅವರು ನಿನ್ನ ಪಂಜರಕ್ಕೆ ಐವತ್ತು ಪೆಸೋಗಳನ್ನು ಕೊಟ್ಟರು'.

'ಅರವತ್ತು' ಎಂದ ಬಾಲ್ತಜಾರ್.

'ಜೋಸೆ ಮಾಂಟಿಯೆಲ್‌ನಿಂದ ಅಷ್ಟೊಂದು ಹಣವನ್ನು ಪಡೆಯಲು ಸಾಧ್ಯವಾದ್ದು ನಿನಗೊಬ್ಬನಿಗೇ ಸರಿ. ಇದನ್ನ ನಾವು ಆಚರಿಸಲೇಬೇಕು'.

ಅವರು ಆತನಿಗೊಂದು ಬಿಯರ್ ಕೊಡಿಸಿದರು. ಬಾಲ್ತಜಾರ್ ಅಲ್ಲಿರುವ ಪ್ರತಿಯೊಬ್ಬರಿಗೂ ತಿರುಗಿ ಬಿಯರ್ ಕೊಡಿಸಿದ. ಇದೇ ಮೊದಲಬಾರಿಗೆ ಆತ ಹೊರಗೆ ಹೋಗಿ ಕುಡಿಯುತ್ತಿರುವುದರಿಂದ ಸಂಜೆಯ ಹೊತ್ತಿಗೆ ಸಂಪೂರ್ಣ ನಶೆ ಆವರಿಸಿತ್ತು. ಈ ಅಮಲಿನಲ್ಲಿ ಆತ ಒಂದು ಸಾವಿರ ಪಂಜರಗಳನ್ನು ಮಾಡುವ ಅತ್ಯದ್ಭುತ ಯೋಜನೆಯೊಂದರ ಬಗ್ಗೆ ಮಾತಾಡುತ್ತಿದ್ದ. ಒಂದೊಂದು ಪಂಜರಕ್ಕೂ ಅರವತ್ತು ಪೆಸೋಗಳು, ನಂತರ ಹತ್ತು ಲಕ್ಷ ಪಂಜರಗಳು. ಒಟ್ಟು ಅರವತ್ತು ಮಿಲಿಯನ್ ಪೆಸೋಗಳಷ್ಟಾಗುವವರೆಗೂ ಪಂಜರಗಳನ್ನು ಮಾಡುವುದು ಕಣ್ಣು ಕತ್ತಲುಗಟ್ಟುವವರೆಗೆ ಕುಡಿದಿದ್ದ ಆತ, 'ಈ ದುಡ್ಡಿರುವ ಜನ ಸಾಯುವುದರೊಳಗೆ ಪಂಜರಗಳನ್ನು ಅವರಿಗೆ ಮಾರಲು ನಾವು ಸಾಕಷ್ಟು ಕೆಲಸ ಮಾಡಬೇಕಾಗುತ್ತದೆ' ಎನ್ನುತ್ತಿದ್ದ. 'ಅವರೆಲ್ಲರೂ ರೋಗಗ್ರಸ್ತರು. ಎಲ್ಲ ಸಾಯ್ತಾ ಇದಾರೆ. ಅವರೆಲ್ಲ ಎಷ್ಟು ರೋಗಿಗಳಾಗಿದ್ದಾರೆಂದರೆ ಅವರು ಸಿಟ್ಟು ಕೂಡಾ ಮಾಡುವಂತಿಲ್ಲ. 'ಆತ ಎರಡು ಗಂಟೆಗಳವರೆಗೆ ಜೂಕ್ ಬಾಕ್ಸಿಗೆ ದುಡ್ಡು ಸುರಿಯುತ್ತಲೇ ಇದ್ದ. ಅದು ಅವಿರತವಾಗಿ ಹಾಡುತ್ತಿತ್ತು. ಪ್ರತಿಯೊಬ್ಬರೂ ಬಾಲ್ತಜಾರ್‌ನ ಆರೋಗ್ಯಕ್ಕೆ, ಒಳ್ಳೆಯ ಅದೃಷ್ಟಕ್ಕೆ, ಶ್ರೀಮಂತರ ಸಾವಿಗೆ ಕುಡಿಯುತ್ತಿದ್ದರು. ಆದರೆ ಊಟದ ಹೊತ್ತಿಗೆ ಪೂಲ್‌ಹಾಲ್‌ನಲ್ಲಿ ಅವನೊಬ್ಬನನ್ನೇ ಬಿಟ್ಟು ಅವರೆಲ್ಲ ತೆರಳಿದರು.

ಈರುಳ್ಳಿಯ ಹೋಳಿಕೆಗಳನ್ನು ಹಾಕಿ ಹುರಿದ ಮಾಂಸವನ್ನು ಮಾಡಿಟ್ಟುಕೊಂಡು ಆತನಿಗಾಗಿ ಉರ್ಸುಲಾ ಎಂಟು ಗಂಟೆಯತನಕ ಕಾದಳು. ನಿನ್ನ ಗಂಡ ಪೂಲ್‌ಹಾಲ್‌ನಲ್ಲಿದ್ದಾನೆಂದೂ, ಸಂತೋಷದಿಂದ ಉನ್ಮತ್ತನಾಗಿದ್ದಾನೆಂದೂ, ಎಲ್ಲರಿಗೂ ಬಿಯರ್ ಕೊಡಿಸುತ್ತಿದ್ದಾನೆಂದೂ ಯಾರೋ ಬಂದು ಆಕೆಗೆ ಹೇಳಿದರು. ಅದನ್ನು ಆಕೆ ನಂಬಲಿಲ್ಲ. ಬಾಲ್ತಜಾರ್ ಎಂದೂ ಅಮಲೇರುವಷ್ಟು ಕುಡಿದವನಲ್ಲ. ಮಧ್ಯರಾತ್ರಿಯ ಹೊತ್ತಿಗೆ ಉರ್ಸುಲಾ ಮಲಗಿಕೊಳ್ಳಲು ಹೋದಾಗ ಬಾಲ್ತಜಾರ್ ನಾಲ್ಕು ನಾಲ್ಕು ಕುರ್ಚಿಗಳಿರುವ ಸಣ್ಣ ಸಣ್ಣ ಮೇಜಿನ, ಬೆಳಕು ತುಂಬಿದ ರೂಮಿನಲ್ಲಿದ್ದ. ಆ ರೂಮಿನಿಂದ ಆಚೆ ನೃತ್ಯವೇದಿಕೆ. ಆತನ ಮುಖದ ತುಂಬ ರೂಜ್ ಬಣ್ಣ ಮೆತ್ತಿಕೊಂಡಿತ್ತು. ಇನ್ನು ಒಂದೇ ಒಂದು ಹೆಜ್ಜೆಯನ್ನು ಇಡಲು ಸಾಧ್ಯವಿಲ್ಲವಾದ್ದರಿಂದ, ಇಬ್ಬರು ಹೆಂಗಸರನ್ನು ಒಂದೆ ಹಾಸಿಗೆಯಲ್ಲಿ ಮಲಗಿಸಿಕೊಳ್ಳಬೇಕೆಂದುಕೊಂಡ ಆತ. ಆತ ನೀರಿನಂತೆ ಧಾರಾಳ ಖರ್ಚು ಮಾಡಿದ್ದರಿಂದ ತನ್ನ ವಾಚನ್ನು ಅಡವಿಡಬೇಕಾಯಿತು. ಮಾರನೆ ದಿನ ಹಣ ಕೊಡುವುದಾಗಿ ಹೇಳಿ ವಾಚ್ ಅಡವಿಟ್ಟ. ಕೆಲವು ನಿಮಿಷಗಳ

ನಂತರ ರಸ್ತೆಯಲ್ಲಿ ಅಂಗಾತ ಕಾಲುಚಾಚಿ ಮಲಗಿದ ಆತನಿಗೆ ತನ್ನ ಬೂಟುಗಳನ್ನು ಕಿತ್ತುಕೊಂಡಿದ್ದಾರೆಂಬ ಅರಿವಾಯಿತು. ಆದರೆ ತನ್ನ ಜೀವನದ ಸುಂದರ ಕನಸನ್ನು ಬಿಟ್ಟುಕೊಡಲು ಆತ ಸಿದ್ಧನಿರಲಿಲ್ಲ. ಬೆಳಗಿನ ಜಾವ ಐದು ಗಂಟೆಯ ಪ್ರಾರ್ಥನೆಗೆ ಹೋಗುತ್ತಿದ್ದ ಹೆಂಗಸರು ಆತನತ್ತ ನೋಡುವ ಧೈರ್ಯ ಮಾಡಲಿಲ್ಲ. ಆತ ಸತ್ತಿದ್ದಾನೆಂದು ಅವರ ಯೋಚನೆ.

ಕನ್ನಡಕ್ಕೆ : ಜಿ.ಎಸ್ ಸದಾಶಿವ

ನಿದ್ದೆಯಲ್ಲೇ ನಡೆದಾಡುವ ಮೂವರ ಕಹಿ ಅನುಭವ

ಈಗ ಅವಳು ಮನೆಯ ಮೂಲೆಯೊಂದರಲ್ಲಿ ತನ್ನ ಪಾಡಿಗೆ ತಾನು ಇದ್ದು ಬಿಟ್ಟಿದ್ದಳು: ನಾವೇ ಅವಳನ್ನು ಅಲ್ಲಿ ಇರಿಸಿದ್ದು. ಅವಳ ವಸ್ತುಗಳನ್ನು - ಅಂದರೆ ಈಗಷ್ಟೇ ಕಡಿದ ಮರದಂತೆ ವಾಸನೆ ಹೊಡೆಯುವ ಅವಳ ಬಟ್ಟೆಗಳು, ಹಗುರವಾದ ಬೂಟುಗಳು, ಇತ್ಯಾದಿಯನ್ನು - ತರುವ ಮುಂಚೆ ಯಾರೋ ನಮಗೆ ಹೇಳಿದ್ದರು: ಯಾವುದೇ ಸಿಹಿಯ ರುಚಿಯಿಲ್ಲದ ಆ ನಿಧಾನದ ಬದುಕಿಗೆ, ತನ್ನ ಬೆನ್ನ ಮೇಲೆ ಸದಾ ಹೊರೆಯಾಗಿ, ತಡಿಕೆಯಂತೆ ಹೆಣೆದುಕೊಂಡ ನಿಷ್ಠುರ ಏಕಾಂತವನ್ನು ಬಿಟ್ಟರೆ ಬೇರೇನೂ ಆಕರ್ಷಣೆಯಿಲ್ಲದ ಆ ನಿಧಾನದ ಬದುಕಿಗೆ ಅವಳು ಹೊಂದಿಕೊಳ್ಳಲಾರಳು ಅಂತ. ಯಾರೋ ಒಬ್ಬರು ನಮಗೆ ಆಕೆಗೊಂದು ಬಾಲ್ಯವಿತ್ತು ಎಂದೂ ಹೇಳಿದ್ದರು. ಅದು ನಮಗೆ ನೆನಪಾಗುವ ಹೊತ್ತಿಗೆ ಎಷ್ಟೋ ಕಾಲ ಆಗಿಹೋಗಿತ್ತು. ಬಹುಶಃ ಆಗ ಅದನ್ನು ನಾವು ನಂಬಲಿಲ್ಲ. ಆದರೆ ಈಗ, ಅವಳು ತನ್ನ ಕಣ್ಣುಗಳಲ್ಲಿ ಭಯ ತುಳುಕಿಸುತ್ತ ಮೂಲೆಯಲ್ಲಿ ಕುಳಿತು, ತುಟಿಯ ಮೇಲೆ ಒಂದು ಬೆರಳಿಟ್ಟುಕೊಂಡಿರುವುದನ್ನು ನೋಡಿದಾಗ ಒಮ್ಮೆ ಅವಳಿಗೂ ಒಂದು ಬಾಲ್ಯವಿತ್ತು ಎಂಬ ವಾಸ್ತವವನ್ನು, ಮಳೆ ತರಲಿರುವ ತಂಪನ್ನು ಗ್ರಹಿಸುವಂಥ ಸ್ಪರ್ಶೇಂದ್ರಿಯ ಅವಳಲ್ಲಿತ್ತೆಂಬುದನ್ನು, ಅನಿರೀಕ್ಷಿತ ನೆರಳೊಂದನ್ನು ಸದಾ ತನ್ನ ಮೈಗೆ ಪಾರ್ಶ್ವವಾಗಿ ಜೊತೆಯಲ್ಲೇ ಕೊಂಡೊಯ್ಯುತ್ತಿದ್ದಳೆಂಬುದನ್ನು ಬಹುಶಃ ಒಪ್ಪಿಕೊಂಡೆವು.

ಇವೆಲ್ಲವನ್ನು - ಇನ್ನೂ ಏನೇನನ್ನೋ - ನಾವು ನಂಬಿದ್ದು ಅವಳ ಭಯಂಕರ ಉಪಜಗತ್ತಿನ ಮೇಲೆ ಸಂಪೂರ್ಣವಾಗಿ ಅವಳೂ ಮನುಷ್ಯಳೇ ಎಂದು ತಿಳಿದ ಆ ಮಧ್ಯಾಹ್ನ. ಒಳಗಡೆ ಗಾಜು ಒಡೆದ ಹಾಗೆ ಅವಳು ನೋವಿಂದ ಕೂಗತೊಡಗಿದಾಗ ಇದ್ದಕ್ಕಿದಂತೆ ನಮಗೆ ಗೊತ್ತಾಯಿತು. ನಮ್ಮಲ್ಲಿ ಪ್ರತಿಯೊಬ್ಬರ ಹೆಸರನ್ನೂ ಹಿಡಿದು ಕರೆಯತೊಡಗಿದಳು. ನಾವು ಅವಳ ಪಕ್ಕ ಹೋಗಿ ಕುಳಿತುಕೊಳ್ಳುವವರೆಗೂ ಕಣ್ಣೀರು ಸುರಿಸುತ್ತ ಮಾತಾಡುತ್ತಿದ್ದಳು. ಚೂರು ಚೂರಾದ ಗಾಜನ್ನು ಗದ್ದಲವಷ್ಟೇ ಮತ್ತೆ ಕೂಡಿಸಬಹುದೆಂದು ತಿಳಿದ ಹಾಗೆ ನಾವು ಹಾಡಿ, ಚಪ್ಪಾಳೆ ತಟ್ಟತೊಡಗಿದೆವು. ಆಗ ಮಾತ್ರ ಅವಳಿಗೂ ಒಂದು ಕಾಲದಲ್ಲಿ ಬಾಲ್ಯವಿತ್ತೆಂದು ನಂಬುವುದು ಸಾಧ್ಯವಾಯಿತು. ಒಂದು ರೀತಿಯಲ್ಲಿ ಅವಳ ಕೂಗಾಟವೇ ಅರಿವು ಮೂಡಿಸಿತೇನೋ ಎಂಬ ಹಾಗೆ, ಅದರಲ್ಲೇ ಆ ಕಾಲವನ್ನು ನೆನಪಿಗೆ ತರುವ ಕಾಡುಗಳು, ಆಳವಾದ ಎಲ್ಲ ನದಿಗಳು ಇರವುವೇಸೋ ಎಂಬ ಹಾಗೆ ಅನ್ನಿಸಿತು. ಮೇಲೆದ್ದಾಗ ಅವಳು ಸ್ವಲ್ಪ ಕೈ ಊರಿದಳು. ಇನ್ನೂ ಏಪ್ರನ್ನಿನಿಂದ ಮುಖ ಮುಚ್ಚಿಕೊಳ್ಳದೆ, ಮೂಗನ್ನು ಸೀಟದೆ, ಇನ್ನೂ ಅಳುತ್ತಲೇ ನಮಗೆ ಹೇಳಿದಳು:

"ಇನ್ನೆಂದೂ ನಾನು ಮುಗುಳ್ನಗೋಲ್ಲ."

ನಾವು ಮೂವರೂ ಮಾತಾಡದೆ ಅಂಗಳಕ್ಕೆ ಹೋದೆವು. ಬಹುಶಃ ನಮ್ಮೆಲ್ಲರಲ್ಲೂ ಒಂದೇ ಯೋಚನೆ ಇತ್ತೇನೊ. ಮನೆಯ ದೀಪಗಳನ್ನು ಉರಿಸದಿರುವುದೇ ಒಳ್ಳೆಯದೆಂದು ನಾವು ನಿರ್ಧರಿಸಿದೆವೋ ಏನೊ. ಅವಳು ಕತ್ತಲೆ ಕವಿದ ಮೂಲೆಯಲ್ಲಿ ಕೊನೆಯದಾಗಿ ಜಡೆ ಹೆಣೆಯುತ್ತ - ಬಹುಶಃ - ಒಂಟಿಯಾಗಿ ಇರಬಯಸಿದಳು. ಕ್ರೂರ ಮೃಗದ ಕಡೆ ಅವಳು ಸಾಗುವ ದಾರಿಯಲ್ಲಿ ಉಳಿಯುವುದು ಅದೊಂದೇ ಜಡೆ ಎಂದು ಅನಿಸುತ್ತಿತ್ತು.

ಹೊರಗೆ ಹುಳಹುಪ್ಪಟೆಗಳ ಹಾವಳಿಯಲ್ಲಿ ಮುಳುಗಿಹೋಗಿದ್ದ ಅಂಗಳದಲ್ಲಿ ಅವಳ ಬಗ್ಗೆ ಯೋಚಿಸಲೆಂದು ಕುಳಿತುಕೊಂಡೆವು. ಹಿಂದೆ ಎಷ್ಟೋ ಸಲ ಹಾಗೇ ಮಾಡಿದ್ದೆವು. ನಮ್ಮ ಜೀವನದಲ್ಲಿ ಪ್ರತಿದಿನವೂ ಮಾಡುತ್ತಿದ್ದುದನ್ನೇ ಮಾಡುತ್ತಿದ್ದೆವೆಂದು ಹೇಳಬಹುದಿತ್ತು.

ಆದರೂ ಅವತ್ತು ರಾತ್ರಿ ಬೇರೆಯೇ ಯೋಚನೆ: ತಾನು ಇನ್ನೆಂದೂ ಮುಗುಳ್ನಗುವುದಿಲ್ಲವೆಂದು ಹೇಳಿದ್ದಳು. ಅವಳನ್ನು ಅಷ್ಟು ಚೆನ್ನಾಗಿ ಬಲ್ಲ ನಮಗೆ

ದುಃಸ್ವಪ್ನವೇ ಸತ್ಯವಾಗಿದೆ ಎಂಬುದರಲ್ಲಿ ಸಂಶಯವಿರಲಿಲ್ಲ. ಮುಮ್ಮೂಲೆಯಾಗಿ ಕುಳಿತ ನಾವು ಒಳಗೆ ಅವಳು ಅಮೂರ್ತವಾಗಿ, ಕೆಲಸಕ್ಕೆ ಬಾರದ ಹಾಗಾಗಿ, ತಾನು ದೂಳಾಗುತ್ತಿರುವುದನ್ನೇ ಧ್ವನಿಸುತ್ತಿರುವ ಅಸಂಖ್ಯಾತ ಗಡಿಯಾರಗಳ ಸ್ಪಷ್ಟವಾದ, ಅತ್ಯಂತ ಸೂಕ್ಷ್ಮ ಲಯವನ್ನು ಗ್ರಹಿಸಲಾರದಂತೆ ಕುಳಿತುಕೊಂಡಿರುವುದನ್ನು ಕಲ್ಪಿಸಿಕೊಂಡೆವು. "ಅವಳಿಗೆ ಸಾವು ಬರಲಿ ಎಂದು ಬೇಡುವ ಧೈರ್ಯವಿದ್ದಿದ್ದರೆ" ಎಂದು ಮೂವರೂ ಒಂದೇ ಬಾರಿಗೆ ಯೋಚಿಸಿದೆವು. ಆದರೆ ನಮಗೆ ಅವಳು ಹಾಗೆಯೇ ಇರಬೇಕೆಂದಿತ್ತು: ನಮ್ಮ ಒಳಗಿನ ಊನಗಳ ನೀಚ ಪ್ರತಿರೂಪದ ಹಾಗೆ ಕುರುಪಿಯಾಗಿ, ನೀರ್ಗಲ್ಲಿನಂತಾಗಿ.

ಅದಕ್ಕೆ ಮುಂಚೆ, ಎಷ್ಟೋ ವರ್ಷಗಳ ಹಿಂದೆಯೇ ನಾವು ದೊಡ್ಡವರಾಗಿದ್ದೆವು. ಆದರೂ ಮನೆಯಲ್ಲಿ ತುಂಬ ವಯಸ್ಸಾದವಳೆಂದರೆ ಅವಳೇ. ಅದೇ ರಾತ್ರಿ ನಮ್ಮ ಜೊತೆ ಕುಳಿತು ಅಥವಾ ಆರೋಗ್ಯವಾಗಿರುವ ಗಂಡು ಮಕ್ಕಳ ನಡುವೆ ತಾನೇ ಕುಳಿತು ನಕ್ಷತ್ರಗಳ ಕ್ರಮಬದ್ಧ ಮಿಡಿತವನ್ನು ಅನುಭವಿಸಿದ್ದಳು. ಗಟ್ಟಿಕುಳ ಒಬ್ಬನನ್ನು ಮದುವೆಯಾಗಿದ್ದಿದ್ದರೆ ಅಥವಾ ಸಮಯಕ್ಕೆ ಸರಿಯಾಗಿ ಹಾಜರಾಗುವವನೊಬ್ಬನಿಗೆ ಸೂಳೆಯಾಗಿದ್ದಿದ್ದರೆ ಅವಳು ಮನೆಯಲ್ಲಿ ಎಲ್ಲರ ಗೌರವಕ್ಕೆ ಪಾತ್ರಳಾಗಬಹುದಿತ್ತು. ಆದರೆ ನೇರ ಗೆರೆಯಂತೆ ಒಂದೇ ಆಯಾಮದಲ್ಲಿ ಬದುಕುವುದೇ ಅವಳಿಗೆ ರೂಢಿಯಾಯಿತು. ಇದಕ್ಕೆ ಕಾರಣ ಬಹುಶಃ ಅವಳ ಗುಣಗಳು ಅಥವಾ ಅವಗುಣಗಳು ಪಾರ್ಶ್ವನೋಟಕ್ಕೆ ಸಿಕ್ಕುತ್ತಿರಲಿಲ್ಲ. ಇದು ಎಷ್ಟೋ ವರ್ಷಗಳಿಂದ ನಮಗೆ ಗೊತ್ತಿರುವ ವಿಷಯ. ಒಂದು ಬೆಳಗ್ಗೆ ಹಾಸಿಗೆಯಿಂದ ಎದ್ದಾಗ, ಅವಳು ಅಂಗಳದಲ್ಲಿ ಬೋರಲಾಗಿ ಬಿದ್ದು ಭಾವೋದ್ರೇಕದಿಂದ ಮಣ್ಣು ತಿನ್ನುತ್ತಿರುವುದನ್ನು ನೋಡಿದಾಗ ನಮಗೆ ಆಶ್ಚರ್ಯವೂ ಆಗಲಿಲ್ಲ. ಆಗ ಅವಳು ಮುಗುಳ್ನಗುತ್ತಾ ಮತ್ತೆ ನಮ್ಮ ಕಡೆ ನೋಡಿದಳು. ಎರಡನೇ ಮಹಡಿಯ ಕಿಟಕಿಯಿಂದ ಅಂಗಳದ ಗಟ್ಟಿ ನೆಲಕ್ಕೆ ಹಾರಿ ಬಿದ್ದಿದ್ದವಳು ಮಣ್ಣಿನಲ್ಲಿ ಮುಖ ಹುದುಗಿಸಿಕೊಂಡು ಅಲ್ಲಿಯೇ ಭದ್ರವಾಗಿ ಸೆಟೆದುಕೊಂಡಂತೆ ಇದ್ದು ಬಿಟ್ಟಿದ್ದಳು. ಆದರೆ ಆ ಸ್ಥಿತಿಯಲ್ಲೂ ಅವಳಿಗೆ ದೂರಗಳ ಬಗೆಗಿದ್ದ ಭಯ, ಅವಕಾಶವನ್ನು ಕಂಡ ತಕ್ಷಣ ಉಂಟಾಗುತ್ತಿದ್ದ ಸಹಜ ಭಯ ಒಂದಿಷ್ಟೂ ಜಖಂ ಆಗದಂತೆ ಉಳಿದಿತ್ತೆಂದು ನಮಗೆ ಆಮೇಲೆ ತಿಳಿಯಿತು. ಭುಜ ಹಿಡಿದುಕೊಂಡು ಅವಳನ್ನು ಮೇಲೆತ್ತಿದೆವು. ಮೊದಲಿಗೆ ನಮಗೆ ಅನ್ನಿಸಿದಂತೆ ಅವಳೇನೂ ಅಂಥ ಬಿಗಿಯಾಗಿರಲಿಲ್ಲ.

ಸೆಟೆದುಕೊಳ್ಳತೊಡಗಿದ ಉಗುರುಬೆಚ್ಚಗಿನ ಹೆಣದಂತೆ ಅವಳ ಅವಯವಗಳು ಸಡಿಲವಾಗೇ ಇದ್ದುವು.

ಬಿಸಿಲಿನಲ್ಲಿ ಅವಳನ್ನು ಅಂಗತ್ತನಾಗಿ ಮಲಗಿಸಿದಾಗ ಎದುರಿಗೊಂದು ಕನ್ನಡಿ ಇಟ್ಟಂತಾಯಿತು. ಕಣ್ಣು ತೆರೆದುಕೊಂಡಿದ್ದುವು. ಕೊಳಕಾಗಿದ್ದ ಬಾಯಿ. ಮಣ್ಣು ತಿಂದದ್ದರಿಂದ ಆಗಲೇ ಅವಳಿಗೆ ಗೋರಿಯ ಮಣ್ಣಿನ ರುಚಿ ಗೊತ್ತಾಗಿರಬೇಕು ಅಂತ ಅನಿಸಿತು. ನಮ್ಮೆಲ್ಲರ ಕಡೆ ಯಾವ ಭಾವನೆಯನ್ನೂ ತೋರಿಸದೆ ಮಂಕಾಗಿ ನೋಡಿದಳು. ಆ ನೋಟವೇ - ಈಗ ನಾನು ಅವಳನ್ನು ತೋಳುಗಳಲ್ಲಿ ಹಿಡಿದುಕೊಂಡಿದ್ದೆ - ಅವಳ ಗೈರುಹಾಜರಿಯ ಆಳವನ್ನು ತೋರಿಸಿತು. ನಮ್ಮಲ್ಲೊಬ್ಬರು ಸತ್ತು ಹೋಗಿದ್ದಾಳೆ ಎಂದರು. ಆಮೇಲೆ ಅವಳು ಭಾವಶೂನ್ಯವಾಗಿ, ಸದ್ದಿಲ್ಲದೆ ಮುಗುಳ್ನಗುತ್ತಲೇ ಇದ್ದಳು. ರಾತ್ರಿಯ ಹೊತ್ತು ಎಚ್ಚರವಾಗಿದ್ದುಕೊಂಡು ಮನೆಯೊಳಗೆ ಸುತ್ತಾಡುತ್ತಿರುವಾಗ ಅವಳ ಮುಖದಲ್ಲಿ ಕಾಣುತ್ತಿದ್ದಂತಹ ಮುಗುಳ್ನಗು. ತಾನು ಹೇಗೆ ಅಂಗಳಕ್ಕೆ ಹೋಗಿಬಿದ್ದೆ ಎಂಬುದೇ ಗೊತ್ತಿಲ್ಲ ಎಂದಳು. ತನಗೆ ಸಾಕಷ್ಟು ಬೆಚ್ಚಗಿದೆ ಎನ್ನಿಸಿತೆಂದೂ, ಮಿಡತೆಯೊಂದು ತುಂಬ ಹರಿತವಾಗಿ, ಎದೆ ಬಗೆಯುವಂತೆ ಕೂಗುತ್ತಿದ್ದುದನ್ನು ಆಲಿಸುತ್ತಿದ್ದಳೆಂದೂ, ಆ ಕೂಗು ತನ್ನ ಕೋಣೆಯ ಗೋಡೆಯನ್ನು ಇನ್ನೇನು ಉರುಳಿಸಿಬಿಡುತ್ತದೆ ಎಂದು ಅನ್ನಿಸಿತೆಂದೂ - ಅವಳು ಹೇಳಿದ್ದು ಹೀಗೆ - ಆಗ ಸಿಮೆಂಟ್ ನೆಲಕ್ಕೆ ಕೆನ್ನೆ ಒತ್ತಿಕೊಂಡು ಭಾನುವಾರದ ಪ್ರಾರ್ಥನೆಗಳನ್ನು ನೆನಪುಮಾಡಿಕೊಳ್ಳಲು ತೀರ್ಮಾನಿಸಿದಳೆಂದೂ ಹೇಳಿದಳು.

ಆದರೆ ಅವಳಿಗೆ ಯಾವುದೇ ಪ್ರಾರ್ಥನೆ ನೆನಪಾಗುತ್ತಿರಲಿಲ್ಲವೆಂದು ನಮಗೆ ಗೊತ್ತಿತ್ತು. ಯಾಕೆಂದರೆ, ಆ ಮಿಡತೆ ಹೊರಗಿನಿಂದ ಗೋಡೆ ತಳ್ಳುತ್ತಿದ್ದಾಗ ತಾನು ಒಳಗಿನಿಂದ ಅದನ್ನು ಒತ್ತಿ ಹಿಡಿದುಕೊಂಡು ಹಾಗೇ ನಿದ್ದೆ ಹೋಗಿಬಿಟ್ಟಿದ್ದೆ, ಹಾಗೆ ನಿದ್ದೆಯಲ್ಲಿರುವಾಗ ಯಾರೋ ಒಬ್ಬ ತನ್ನನ್ನು ಭುಜ ಹಿಡಿದು ಮೇಲೆತ್ತಿ, ಗೋಡೆಯನ್ನು ಪಕ್ಕಕ್ಕೆ ತಳ್ಳಿ, ಬಿಸಿಲಿನಲ್ಲಿ ಬೋರಲಾಗಿ ಮಲಗಿಸಿದ - ಎಂದೆಲ್ಲ ಅವಳು ಹೇಳಿದ್ದನ್ನು ಕೇಳಿದ ಮೇಲೆ ಇವಳಿಗೆ ಕಾಲದ ಪ್ರಜ್ಞೆಯೇ ಇಲ್ಲವಾಗಿದೆಯೆಂದು ನಾವು ಕಂಡುಕೊಂಡಿದ್ದೆವು.

ಆ ರಾತ್ರಿ ಅಂಗಳದಲ್ಲಿ ಕುಳಿತ ನಮಗೆ ಅವಳು ಇನ್ನೆಂದೂ ಮುಗುಳ್ನಗುವುದಿಲ್ಲವೆಂದು ಗೊತ್ತಿತ್ತು. ಬಹುಶಃ ಏನನ್ನೂ ಹೇಳದ ಅವಳ ಆ

ಗಾಂಭೀರ್ಯ, ಕತ್ತಲೆ ಕವಿದ ಮೂಲೆಯಲ್ಲಿ ಬೇಕೆಂದೇ ಬದುಕಲಿರುವ ಅವಳ ಸ್ಥಿತಿಯನ್ನು ಮೊದಲೇ ಸೂಚಿಸಿ ನಮಗೆ ನೋವು ತಂದಿರಬೇಕು. ಈಗ ಕುಳಿತಿದ್ದಾಳಲ್ಲ, ಆ ಮೂಲೆ, ಅಲ್ಲಿ ಮೊದಲ ದಿನ ಅವಳನ್ನು ನೋಡಿದಾಗ ನಮಗೆ ಎಷ್ಟು ನೋವಾಯಿತೋ ಅಷ್ಟೇ ಆಳವಾದ ನೋವು. ಮತ್ತೆ ಇನ್ನೆಂದೂ ಮನೆಯಲ್ಲಿ ನಡೆದಾಡುವುದಿಲ್ಲವೆಂದು ಬೇರೆ ಹೇಳಿದಳು. ಮೊದಲಿಗೆ ನಮಗೆ ನಂಬಲಾಗಲಿಲ್ಲ. ಅನೇಕ ತಿಂಗಳುಗಳವರೆಗೆ ಅವಳು ಒಂದಿಷ್ಟೂ ಬಾಗದೆ, ಭುಜ ಕೆಳಗಿಳಿಸಿಕೊಂಡು, ದಣಿವೇ ಇಲ್ಲದಂತೆ, ದಿನದ ಎಲ್ಲ ಗಂಟೆಗಳಲ್ಲಿ ಮನೆಯ ಕೋಣೆಗಳಲ್ಲೆಲ್ಲ ಸುತ್ತಾಡುತ್ತಿದ್ದುದನ್ನು ನೋಡಿದ್ದೆವು. ರಾತ್ರಿಯ ಎರಡು ಕತ್ತಲುಗಳ ನಡುವೆ ಸಾಗುತ್ತಿದ್ದ ಅವಳ ದಪ್ಪ ಮೈಯ ಸದ್ದು ಕೇಳಿಸುತ್ತಿತ್ತು. ಅನೇಕ ಸಲ ನಾವು ಹಾಸಿಗೆಯಲ್ಲಿ ಕಣ್ಣು ತೆರೆದುಕೊಂಡೇ ಮಲಗಿದ್ದು ಅವಳು ಕದ್ದು ನಡೆಯುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದೆವು. ನಮ್ಮ ಕಿವಿಯೂ ಅವಳ ಹಿಂದೆಯೇ ಇಡೀ ಮನೆಯನ್ನು ಸುತ್ತಿ ಬರುತ್ತಿತ್ತು. ಒಮ್ಮೆ ಕನ್ನಡಿಯೊಳಗೆ ಮಿಡತೆಯನ್ನು ಕಂಡದ್ದಾಗಿ, ಅದು ತನ್ನನ್ನು ಮುಟ್ಟಲೆಂದು ಗಾಜಿನ ಮೇಲ್ಮೈಯನ್ನೂ ತೂರಿ ಬಂದದ್ದಾಗಿ ಹೇಳಿದ್ದಳು. ಅವಳೇನು ಹೇಳುತ್ತಿದ್ದಾಳೆ ಎಂದು ನಿಜಕ್ಕೂ ನಮಗೆ ಗೊತ್ತಾಗುತ್ತಿರಲಿಲ್ಲ. ಆದರೆ ಇದೀಗ ನೀರಿನ ತೊಟ್ಟಿಯಿಂದ ಇಳಿದು ಬಂದವಳ ಹಾಗೆ ಅವಳ ಬಟ್ಟೆಗಳೆಲ್ಲ ಒದ್ದೆಯಾಗಿ ಮೈಗೆ ಅಂಟಿಕೊಂಡಿರುತ್ತಿದ್ದುದನ್ನು ನಾನು ನೋಡಬಹುದಾಗಿತ್ತು. ಇದಕ್ಕೆಲ್ಲ ಕಾರಣಗಳನ್ನು ವಿವರಿಸುವ ಗೋಜಿಗೆ ಹೋಗದೆ ಮನೆಯೊಳಗಿರುವ ಹುಳಹುಪ್ಪಟೆಗಳನ್ನೆಲ್ಲ ಸಾಯಿಸಬೇಕೆಂದು ತೀರ್ಮಾನಿಸಿದೆವು: ಅವಳನ್ನು ಕಾಡುವ ಪ್ರತಿಯೊಂದು ವಸ್ತುವನ್ನೂ ಹಾಳುಮಾಡಬೇಕು.

ಗೋಡೆಗಳನ್ನು ಶುದ್ಧಮಾಡಿಸಿದೆವು. ಅಂಗಳದಲ್ಲಿದ್ದ ಗಿಡಗಳನ್ನು ಕತ್ತರಿಸಿ ಹಾಕಿಸಿದೆವು. ರಾತ್ರಿಯ ಮೌನವನ್ನೇ ಶುದ್ಧಗೊಳಿಸಿದಂತೆ ಅನ್ನಿಸಿತು. ಆದರೆ ಇನ್ನೆಂದೂ ಅವಳ ನಡಿಗೆ ಕೇಳಿಸಲಿಲ್ಲ: ಮಿಡತೆಗಳ ಬಗ್ಗೆ ಮತ್ತೆಂದೂ ಅವಳ ಮಾತು ಕೇಳಿಸಲಿಲ್ಲ. ಕೊನೆಗೆ ಒಂದು ದಿನ ಊಟವಾದ ಮೇಲೆ ನಮ್ಮನ್ನೇ ನೋಡತೊಡಗಿದಳು; ಸಿಮೆಂಟು ನೆಲದಲ್ಲಿ ಕುಳಿತು ನಮ್ಮ ಕಡೆಗೇ ನೋಡುತ್ತಾ "ನಾನು ಇಲ್ಲಿ ಕೂತುಕೊಂಡೇ ಇರುತ್ತೇನೆ" ಎಂದಳು. ನಮಗೆ ನಡುಕ ಹುಟ್ಟಿತು. ಯಾಕೆಂದರೆ ಅವಳು ಆಗಲೇ ಸಂಪೂರ್ಣವಾಗಿ ಸಾವಿನ ಹಾಗೆ ಕಾಣತೊಡಗಿದ್ದಳು.

ಇದೆಲ್ಲ ಎಷ್ಟೋ ವರ್ಷಗಳ ಹಿಂದಿನ ಮಾತು. ಅವಳು ಅಲ್ಲೇ ಯಾವಾಗಲೂ ಅರ್ಧ ಹೆಣೆದ ಜಡೆಯೊಡನೆ ಕುಳಿತು ತನ್ನ ಏಕಾಂತದಲ್ಲೇ ಲೀನವಾಗಿರುತ್ತಿದ್ದುದಂತೂ ನಮಗೆ ರೂಢಿಯಾಗಿ ಹೋಗಿತ್ತು. ಅವಳು ಅಲ್ಲಿ ಇದ್ದರೂ ಕೂಡ ಇಲ್ಲದಂತೆ. ಆದ್ದರಿಂದಲೇ ಇನ್ನೆಂದೂ ಮುಗುಳ್ನಗಲಾರಳೆಂದು ನಮಗೆ ಗೊತ್ತಿತ್ತು. ಯಾಕೆಂದರೆ ಒಮ್ಮೆ ತಾನು ಇನ್ನೆಂದೂ ನಡೆಯಲಾರೆ ಎಂದು ಎಷ್ಟು ದೃಢವಾಗಿ, ಮನವರಿಕೆಯಾಗುವಂತೆ ಹೇಳಿದ್ದಳೋ ಅಷ್ಟೇ ದೃಢವಾಗಿ ಈ ಮಾತನ್ನೂ ಉಚ್ಚರಿಸಿದ್ದಳು. "ನಾನು ಮತ್ತೆ ಏನನ್ನೂ ಕಾಣಲಾರೆ" ಅಥವಾ "ನಾನು ಮತ್ತೆ ಏನನ್ನೂ ಕೇಳಿಸಿಕೊಳ್ಳಲಾರೆ" ಎಂದು ಹೇಳುತ್ತಾಳೆ ಎಂತಲೂ ನಾವು ನಂಬಿಕೊಂಡಂತಿತ್ತು. ಉದ್ದೇಶಪೂರ್ವಕವಾಗಿಯೇ ತನ್ನೆಲ್ಲ ಮುಖ್ಯ ಅಂಗಗಳನ್ನು ಬಿಟ್ಟುಕೊಟ್ಟರೂ ಅವಳು ಸಾಕಷ್ಟು ಮನುಷ್ಯಳಾಗಿಯೇ ಉಳಿಯಬಲ್ಲಳೆಂದು ನಮಗೆ ಗೊತ್ತಿತ್ತು. ಇಂದ್ರಿಯಗಳನ್ನು ಒಂದೊಂದಾಗಿ ಕಳಚಿಕೊಳ್ಳುತ್ತಾ ಆರಾಮವಾಗಿಯೇ ಕಾಲ ತಳ್ಳುವವಳು ಒಂದು ದಿನ ತನ್ನ ಬದುಕಿನಲ್ಲಿ ಮೊಟ್ಟಮೊದಲ ಬಾರಿ ನಿದ್ದೆಹೋದವಳಂತೆ ಗೋಡೆಗೆ ಒರಗಿಕೊಂಡು ಕುಳಿತಿರುವುದು ನಮಗೇ ಕಾಣಸುತ್ತದೆಯೆಂದೂ ಗೊತ್ತಿತ್ತು. ಬಹುಶಃ ಹಾಗಾಗಲು ಇನ್ನೂ ಸಾಕಷ್ಟು ಸಮಯ ಇದೆ. ಆದರೆ ಆ ರಾತ್ರಿ ಅಂಗಳದಲ್ಲಿ ಕುಳಿತಿದ್ದ ನಾವು ಮೂವರಿಗೆ ಅವಳು ಇದ್ದಕ್ಕಿದ್ದಂತೆ, ಗಾಜು ಒಡೆಯುವ ರೀತಿಯಲ್ಲಿ ಜೋರಾಗಿ ಅತ್ತುಬಿಟ್ಟರೆ ಒಳ್ಳೆಯದು ಎನಿಸುತ್ತಿತ್ತು. ಕೊನೆಯ ಪಕ್ಷ ಮನೆಯಲ್ಲಿ ಒಂದು ಮಗು...ಹೆಣ್ಣು ಮಗು ಹುಟ್ಟಿದೆ ಎಂಬ ಭ್ರಮೆಯಾದರೂ ಉಂಟಾಗುತ್ತಿತ್ತು; ಅವಳು ಮತ್ತೆ ಹುಟ್ಟಿ ಬಂದಳೆಂದು ನಂಬಲೂ ಸಾಧ್ಯವಾಗುತ್ತಿತ್ತು.

ಕನ್ನಡಕ್ಕೆ : ಎಸ್. ದಿವಾಕರ್

ಈ ಊರಿನಲ್ಲಿ ಕಳ್ಳರೇ ಇಲ್ಲ

ದಮಾಸೊ ಬೆಳಕು ಹರಿಯುವ ಹೊತ್ತಿಗೆ ತನ್ನ ರೂಮಿಗೆ ಬಂದ. ಅವನ ಹೆಂಡತಿ ಆನಾ ಆರು ತಿಂಗಳ ಬಸುರಿ. ಅವಳು ಬಟ್ಟೆ ತೊಟ್ಟುಕೊಂಡು, ಕಾಲುಗಳಿಗೆ ಬೂಟುಗಳನ್ನೂ ಏರಿಸಿಕೊಂಡು ಗಂಡನಿಗಾಗಿ ಕಾಯುತ್ತ ಹಾಸಿಗೆಯ ಮೇಲೆ ಕುಳಿತಿದ್ದಳು. ಎಣ್ಣೆಯ ದೀಪ ಇನ್ನೇನು ಆರಿಹೋಗುವುದರಲ್ಲಿತ್ತು. ದಮಾಸೋಗೆ ಆ ಇಡೀ ರಾತ್ರಿ ಒಂದು ಕ್ಷಣವೂ ಬಿಡದಂತೆ ಅವಳು ತನಗಾಗಿಯೇ ಕಾಯುತ್ತಿದ್ದಳೆಂದು ಅನ್ನಿಸಿತು. ಎದುರಿಗೆ ನಿಂತ ತನ್ನನ್ನು ಕಣ್ಣು ತುಂಬ ನೋಡಬಹುದಾಗಿದ್ದ ಆ ಕ್ಷಣದಲ್ಲಿ ಕೂಡ ಅವಳು ಇನ್ನೂ ಕಾಯುತ್ತಲೇ ಕುಳಿತಿದ್ದಂತಿತ್ತು. ಆಯಿತು, ನಾನು ಬಂದಿದ್ದೇನೆ ಎನ್ನುವಂತೆ ತಾನು ಮಾಡಿದ ಸನ್ನೆಯಿಂದಲೂ ಅವಳ ದೃಷ್ಟಿ ಬದಲಾಗಲಿಲ್ಲ. ಈಗ ಅವಳ ಬೆದರುಗಣ್ಣುಗಳು ಅವನ ಕೈಯಲ್ಲಿದ್ದ ಕೆಂಪು ಬಟ್ಟೆಯ ಗಂಟಿನ ಮೇಲೆ ನೆಟ್ಟಿದ್ದುವು. ಬಿಗಿದ ತುಟಿ, ನಡುಗುತ್ತಿರುವ ಮೈ. ದಮಾಸೊ ಒಂದು ಬಗೆಯ ಮೂಕ ಹಿಂಸೆಯಿಂದ ಅವಳ ಬಟ್ಟೆಯ ತುದಿಯನ್ನು ಜಗ್ಗಿದ. ಅವನ ಉಸಿರಿನಲ್ಲಿ ಒಂದು ರೀತಿ ಕಟುವಾಸನೆ.

ಆನಾಳನ್ನು ಹಾಸಿಗೆಯಿಂದ ಮೇಲೆತ್ತಿ ಹಿಡಿದುಕೊಂಡ. ಅವಳು ತನ್ನ ಮೈಯ ಭಾರವನ್ನೆಲ್ಲ ಮುಂದೊತ್ತಿ, ಅವನ ಕೆಂಪು ಪಟ್ಟೆಗಳಿದ್ದ ಷರ್ಟಿನಲ್ಲಿ ಮುಖ ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತಳು. ಸಮಾಧಾನವಾಗುವವರೆಗೂ ಅವನ ನಡುವಿಗೇ ಜೋತು ಬಿದ್ದಳು.

"ಕೂತುಕೊಂಡೇ ನಿದ್ದೆ ಮಾಡಿಬಿಟ್ಟಿದ್ದೆ. ಇದ್ದಕ್ಕಿದ್ದ ಹಾಗೆ ಬಾಗಿಲು ತೆರೀತು. ಯಾರೋ ರಕ್ತದಿಂದ ನೆನೆದ ನಿನ್ನನ್ನ ಒಳಕ್ಕೆ ನೂಕಿದರು" ಎಂದಳು.

ದಮಾಸೊ ಏನೂ ಮಾತಾಡದೆ ಅವಳನ್ನು ಹಿಡಿದುಕೊಂಡೇ ಸ್ವಲ್ಪ ದೂರವಾಗಿ ನಿಂತ. ಮತ್ತೆ ಹಾಸಿಗೆಯ ಮೇಲೆ ಅವಳನ್ನು ಕೂರಿಸಿ, ಆ ಬಟ್ಟೆಯ ಗಂಟನ್ನು ಅವಳ ತೊಡೆಯ ಮೇಲಿಟ್ಟು, ಉಚ್ಚೆಹೊಯ್ಯಲೆಂದು ಅಂಗಳಕ್ಕೆ ಹೋದ. ಅವಳು ಆ ಗಂಟಿನ ದಾರ ಬಿಚ್ಚಿದಳು. ಒಳಗೆ ಮೂರು ಬಿಲಿಯರ್ಡ್ ಬಾಲುಗಳು ಒಂದು ಕೆಂಪು, ಇನ್ನೆರಡು ಬಿಳಿ. ಮೂರು ಬಣ್ಣ ಕಳೆದುಕೊಂಡ, ಉಪಯೋಗಿಸಿ ಉಪಯೋಗಿಸಿ ಸವೆದುಹೋದ ಬಾಲುಗಳು.

ದಮಾಸೊ ಹಿಂತಿರುಗಿ ಬಂದಾಗ ಅವಳು ಏನೋ ಯೋಚನೆಯಲ್ಲಿರುವಂತೆ ಕಾಣಿಸಿತು.

"ಇದರಿಂದ ಏನು ಪ್ರಯೋಜನ?" ಎಂದು ಕೇಳಿದಳು ಅವಳು.

ಅವನು ಭುಜ ಕೊಡವಿ, "ಬಿಲಿಯರ್ಡ್ಸ್ ಆಡಬಹುದು" ಎಂದ.

ಆಮೇಲೆ ಮತ್ತೆ ಗಂಟುಕಟ್ಟಿ ಅದನ್ನು ನಕಲಿ ಬೀಗದ ಕೈ, ಟಾರ್ಚು ಮತ್ತು ಚೂರಿಗಳ ಜೊತೆ ಟ್ರಂಕಿನ ತಳದಲ್ಲಿಟ್ಟ. ಆನಾ ಬಟ್ಟೆಯನ್ನೂ ಕಳಚದೆ ಗೋಡೆಗೆ ಮುಖಮಾಡಿಕೊಂಡು ಮಲಗಿದಳು. ದಮಾಸೊ ಪ್ಯಾಂಟಷ್ಟೇ ಬಿಚ್ಚಿದ. ನಂತರ ಹಾಸಿಗೆಯಲ್ಲಿ ಮೈಚಾಚಿ, ಆ ಕತ್ತಲಿನಲ್ಲೇ ಸಿಗರೇಟು ಸೇದುತ್ತಾ, ಹೆಂಡತಿ ಇನ್ನೂ ಎಚ್ಚರವಾಗಿದ್ದಾಳೆಂದು ಅರಿವಾಗುವವರೆಗೂ ತಾನು ಚುಮುಚುಮು ನಸುಕಿನಲ್ಲಿ ಕೈಗೊಂಡಿದ್ದ ಸಾಹಸದ ಕೆಲವು ಎಳೆಗಳನ್ನಾದರೂ ಗುರುತಿಸಲು ಪ್ರಯತ್ನಿಸಿದ.

"ಏನೂ ಯೋಚನೆ ಮಾಡ್ತಿದೀಯ?"

"ಏನೂ ಇಲ್ಲ."

ಸಾಮಾನ್ಯವಾಗಿ ಮೆಲ್ಲಗೆ ಮೃದುವಾಗಿ ಕೇಳಿಸುತ್ತಿದ್ದ ಅವಳ ಧ್ವನಿ ಈಗ ಸಿಟ್ಟಿನಿಂದ ಗಡುಸಾಗಿರುವಂತೆ ಅನಿಸಿತು. ದಮಾಸೊ ಕೊನೆಯ ದಮ್ಮೆಳೆದು, ಸಿಗರೇಟಿನ ತುಂಡನ್ನು ಮಣ್ಣು ನೆಲದಲ್ಲಿ ಹೊಸಕಿ ಹಾಕಿದ.

"ಅಲ್ಲಿ ಬೇರೇನೂ ಇರಲಿಲ್ಲ. ಒಂದು ಗಂಟೆಹೊತ್ತು ಒಳಗೇ ಇದ್ದೆ" ಎಂದು ನಿಟ್ಟುಸಿರಿಟ್ಟ.

"ಅವರು ಗುಂಡು ಹಾರಿಸಿ ನಿನ್ನ ಕೊಂದ್ಹಾಕಿ ಬಿಡಬಹುದಾಗಿತ್ತಲ್ಲ" ಎಂದಳು.

ದಮಾಸೊ ನಡುಗಿಬಿಟ್ಟ, ತಕ್ಷಣ 'ನಿನ್ನ ಮನೆ ಹಾಳಾಗ' ಎಂದವನೇ ಗೆಣ್ಣಿನಿಂದ ಮರದ ಮಂಚದ ಫ್ರೇಮನ್ನು ಟಪಟಪ ಕುಟ್ಟಿದ. ನೆಲದಲ್ಲಿದ್ದ ಸಿಗರೇಟು, ಕಡ್ಡಿಪೆಟ್ಟಿಗೆಗಾಗಿ ಹುಡುಕಾಡಿದ.

"ನಿಂದು ಕತ್ತೆ ಥರ ಮನಸ್ಸು. ನಾನಿಲ್ಲಿ ನಿದ್ದೆ ಇಲ್ದೆ ರಸ್ತೇಲಿ ಏನು ಸದ್ದಾದ್ರೂ ಸಾಕು, ನಿನ್ನ ಹೆಣ ಹೊತ್ಕೊಂಡು ಬರ್ತಿದಾರೇನೋ ಅಂತ ಹೆದರ್ಕೊಂಡಿರ್ತಿದ್ದೆ. ಅಷ್ಟಾದ್ರೂ ನೆನಪಾಗ್ಬೇಡ್ವೆ ನಿಂಗೆ?" ಎಂದಳು ಆನಾ.

"ಅಷ್ಟೆಲ್ಲ ಹೆದರ್ಕೊಂಡು ಕೂತಿದ್ದಕ್ಕೆ ಸಿಕ್ಕಿದ್ದೇನು? ಮೂರು ಬಿಲಿಯರ್ಸ್ ಬಾಲುಗಳು" ಎಂದೂ ನಿಟ್ಟುಸಿರು ಬಿಟ್ಟಳು.

"ಡ್ರಾಯರಲ್ಲಿ ಇಪ್ಪತ್ತೈದು ಸೆಂಟಷ್ಟೇ ಇದ್ದದ್ದು. ಇನ್ನೇನೂ ಇರಲಿಲ್ಲ."

"ಹಾಗಿದ್ರೆ ನೀನು ಏನೂ ತೊಕೊಂಡು ಬರಬಾರದಾಗಿತ್ತು."

"ಏನು ಮಾಡೋದು ತುಂಬ ಕಷ್ಟಪಟ್ಟು ಒಳಗೆ ಹೋಗಿದ್ದೆನಲ್ಲ, ಬರೀ ಕೈಯಲ್ಲೇ ವಾಪಸ್ಸು ಬರೋದಾ?"

"ಇನ್ನೇನಾದ್ರೂ ತೊಕೊಂಡು ಬರಬೇಕಾಗಿತ್ತು."

"ಅಲ್ಲಿ ಇನ್ನೇನೂ ಇರ್ಲಿಲ್ಲ" ಎಂದ ದಮಾಸೊ.

"ಆ ಕ್ಲಬ್ಬಿನಲ್ಲಿ ಇರೋ ಅಷ್ಟು ಸಾಮಾನು ಬೇರೆ ಎಲ್ಲೂ ಇಲ್ಲ."

"ಹೌದು. ಹಾಗೇ ಅನ್ಸುತ್ತೆ. ಆದ್ರೆ ಒಳಗೆ ಹೋದ್ಮೇಲೆ ಅಲ್ಲಿರೋದನ್ನೆಲ್ಲ ನೋಡ್ತಾ ಬಂದ್ರೆ, ಉಪಯೋಗಕ್ಕೆ ಬರೋ ಅಂಥ ಯಾವ ಸಾಮಾನೂ ಇಲ್ಲ ಅಂತ ಗೊತ್ತಾಗುತ್ತೆ".

ಅವಳು ತುಂಬ ಹೊತ್ತು ಮೌನವಾಗಿದ್ದಳು. ದಮಾಸೊ, ಇವಳು ಬೆಲೆ ಬಾಳುವ ಸಾಮಾನು ಏನಾದರೂ ಅಲ್ಲಿತ್ತಾ ಅಂತ ನೆನಪಿನ ಕತ್ತಲೆಯಲ್ಲಿ ಹುಡುಕುತ್ತಿದ್ದಾಳೆ, ಎಂದುಕೊಂಡ.

"ಹೌದೇನೊ," ಎಂದಳು ಅವಳು.

ದಮಾಸೋನ ಮುಖ ಮತ್ತೆ ಅರಳಿತು. ಮೈಯೆಲ್ಲ ಅಲೆಯೆಬ್ಬಿಸುತ್ತಿದ್ದ ಆಲ್ಕೋಹಾಲಿನ ಅಮಲು ಇಳಿಯತೊಡಗಿತ್ತು. ಈಗ ತನ್ನ ಅಂಗಾಂಗಗಳು ಸ್ವಾಧೀನಕ್ಕೆ

ಬಂದಿದ್ದುವು. "ಅಲ್ಲೊಂದು ಬೆಕ್ಕಿತ್ತು. ಬೆಳಗಿನ ಗಡವ ಬೆಕ್ಕು" ಎಂದ. ಆನಾ ಗಂಡನತ್ತ ತಿರುಗಿ ತನ್ನ ಉಬ್ಬಿದ ಹೊಟ್ಟೆಯನ್ನು ಅವನ ಹೊಟ್ಟೆಗೆ ಒತ್ತಿದಳು; ಅವನ ಮೊಣಕಾಲುಗಳ ಮಧ್ಯೆ ತನ್ನ ಕಾಲುಗಳನ್ನು ಇರುಕಿಸಿದಳು. ಅವಳ ಬಾಯಿಂದ ಉಳ್ಳಾಗೆಡ್ಡೆಯ ವಾಸನೆ.

"ತುಂಬ ಹೆದರ್ಕೊಂಡುಬಿಟ್ಟಿದ್ಯಾ?"

"ನಾನೇ?"

"ಹೂಂ, ಗಂಡಸರೂ ಹೆದರ್ಕೋತಾರೆ ಅಂತಾರಲ್ಲ."

ಅವಳು ಮುಗುಳ್ನಗುತ್ತಿದ್ದಾಳೆ ಎನಿಸಿತು. ತಾನೂ ಮುಗುಳ್ನಕ್ಕ.

"ಎಲ್ಲೋ ಸ್ವಲ್ಪ ಹೆದರಿಕೆ ಆಗಿರಬಹುದು ಅಷ್ಟೆ. ಆದ್ರೆ ನಂಗೆ ತಡೆಯೋಕೇ ಆಗದಷ್ಟು ಉಚ್ಚೆ ಬಂದ್ಬಿಡ್ತು." ಅವಳು ಮುದ್ದಿಸಿದಳು. ತಾನು ಮಾತ್ರ ಮುದ್ದಿಸದೆ ಹಾಗೇ ಇದ್ದ. ಆಮೇಲೆ ತಾನು ಮಾಡಿದ್ದು ಎಂಥ ಅಪಾಯದ ಕೆಲಸ ಎನ್ನಿಸಿತು. ವಿಷಾದವೇನೂ ಆಗಲಿಲ್ಲ. ನಿಧಾನವಾಗಿ ಪ್ರವಾಸವೊಂದರ ನೆನಪುಗಳನ್ನು ತಂದುಕೊಳ್ಳುವವನ ಹಾಗೆ ಅವಳಿಗೆ ತನ್ನ ಸಾಹಸದ ವಿವರಗಳನ್ನು ಹೇಳಿದ.

ತುಂಬ ಹೊತ್ತಾದ ಮೇಲೆ ಅವಳು ಮಾತಾಡಿದಳು:

"ಹುಚ್ಚು ಕೆಲಸ."

"ಶುರು ಮಾಡೋದೇ ಪ್ರಶ್ನೆ. ಮತ್ತೆ ಇದು ಮೊದಲ ಸಾರಿ ಅಲ್ಲವಾ ಅಷ್ಟೇನೂ ಕೆಟ್ಟದಾಗಿ ಆಗಲಿಲ್ಲ." ದಮಾಸೊ ಕಣ್ಣು ಮುಚ್ಚುತ್ತಾ ಹೇಳಿದ.

ಸೂರ್ಯನ ಬಿಸಿ ತಗಲಲು ಸಾಕಷ್ಟು ಹೊತ್ತೇ ಆಯಿತು. ದಮಾಸೋಗೆ ಎಚ್ಚರವಾದಾಗ ಅವನ ಹೆಂಡತಿ ಆಗಲೇ ಎದ್ದುಬಿಟ್ಟಿದ್ದಳು. ಸಂಪೂರ್ಣ ಎಚ್ಚರವಾಗುವವರೆಗೆ ಕೆಲವು ನಿಮಿಷಗಳ ಕಾಲ ಅವನು ಅಂಗಳದ ನಲ್ಲಿಯ ಕೆಳಗೇ ತಲೆ ಒಡ್ಡಿಕೊಂಡು ನಿಂತ. ಬಟ್ಟೆ ಒಣಹಾಕುವುದಕ್ಕಾಗಿ ಕಟ್ಟಿದಂಥ ಹಗ್ಗಗಳಿದ್ದ ಅಂಗಳ. ಅದರ ಸುತ್ತ ಎಲ್ಲ ಒಂದೇ ರೀತಿ ಕಾಣುವ ರೂಮುಗಳು. ಅವುಗಳಲ್ಲಿ ಅವರದೂ ಒಂದು ರೂಮು. ಅದರಲ್ಲಿ ಒಂದು ತಗಡಿನ ಪಾರ್ಟಿಷನ್. ಆ ಪಾರ್ಟಿಷನ್ನಿನ ಆಕಡೆ ಆನಾ ಹಿಂದಿನ ಗೋಡೆಗೆ ಹೊಂದಿಕೊಂಡಂತೆ ಒಂದು ಸ್ಟೋವ್ ಇಟ್ಟಿಕೊಂಡಿದ್ದಳು. ಮತ್ತೆ ಇದೇ ಸ್ಟೋವಿನ ಮೇಲೆಯೇ ಅಡುಗೆಯಾಗಬೇಕು; ಇಸ್ತ್ರಿಪೆಟ್ಟಿಗೆ ಕಾಯಿಸಬೇಕು. ಊಟಕ್ಕಾಗಿ, ಇಸ್ತ್ರಿ ಮಾಡುವುದಕ್ಕಾಗಿ ಅಲ್ಲೊಂದು ಸಣ್ಣ ಟೇಬಲ್ಲೂ ಇತ್ತು. ಗಂಡ

ಮುಖ ತೊಳೆದು ಬರುತ್ತಿರುವುದನ್ನು, ಕಂಡವಳೇ ಆನಾ ಇಸ್ತ್ರಿ ಮಾಡಿದ್ದ ಬಟ್ಟೆಗಳನ್ನು ಒಂದು ಪಕ್ಕಕ್ಕೆ ಸರಿಸಿ, ಕಾಫಿ ಬಿಸಿ ಮಾಡಲೆಂದು ಸ್ಟೌವಿನ ಮೇಲಿದ್ದ ಇಸ್ತ್ರಿ ಪೆಟ್ಟಿಗೆಯನ್ನು ಕೆಳಗಿಳಿಸಿದಳು, ದಮಾಸೋಗಿಂತ ಹೆಚ್ಚು ವಯಸ್ಸಾದವಳು ಆನಾ. ಬಿಳಿಚಿಕೊಂಡ ಮೈತೊಗಲು; ಈ ಬದುಕು ಇಷ್ಟೇ ಎಂದು ತಿಳಿದವರ ಹಾಗೆ ದಕ್ಷತೆಯನ್ನು ತೋರಿಸುವ ಚಲನವಲನಗಳು.

ದಮಾಸೋಗೆ ಮಂಜು ಕವಿದಂತೆ ತಲೆನೋವು. ಆದರೂ ಅವಳು ತನ್ನ ನೋಟದಿಂದಲೇ ಏನನ್ನೋ ಹೇಳಲು ಹವಣಿಸುತ್ತಿದ್ದಾಳೆಂದು ಅನ್ನಿಸಿತು. ಅಲ್ಲಿಯವರೆಗೆ ಅಂಗಳದಿಂದ ಕೇಳಿ ಬರುತ್ತಿದ್ದ ಧ್ವನಿಗಳನ್ನು ಅವನು ಗಮನಿಸಿಯೇ ಇರಲಿಲ್ಲ.

"ಬೆಳಗಿನಿಂದ ಎಲ್ಲ ಅದೇ ವಿಷಯ ಮಾತಾಡ್ತಿದಾರೆ" ಎಂದು ಗೊಣಗಿದಳು ಆನಾ - ಗಂಡನಿಗೆ ಕಾಫಿ ಕೊಡುತ್ತಾ. "ಸ್ವಲ್ಪ ಹೊತ್ತಿಗೆ ಮುಂಚೆ ಗಂಡಸರೆಲ್ಲ ಅಲ್ಲಿಗೆ ಹೋದರು."

ದಮಾಸೊ ಈಗ ಅಂಗಳದಲ್ಲಿ ಗಂಡಸರ, ಮಕ್ಕಳ ಸುಳಿವೆ ಇಲ್ಲದಿರುವುದನ್ನು ಕಂಡುಕೊಂಡ. ಕಾಫಿ ಕುಡಿಯುತ್ತಿರುವಾಗ ಬಿಸಿಲಿನಲ್ಲಿ ಬಟ್ಟೆ ಒಣಹಾಕುತ್ತಾ ಮಾತಾಡುತ್ತಿದ್ದ ಹೆಂಗಸರ ಕಡೆಗೇ ಕಿವಿಗೊಟ್ಟ. ಕೊನೆಗೆ ಒಂದು ಸಿಗರೇಟು ಹಚ್ಚಿಕೊಂಡವನೇ ಅಡುಗೆ ಮನೆಯಿಂದ ಹೊರಬಂದು,

"ತೆರೇಸಾ" ಎಂದು ಕೂಗಿದ.

ಮೈಗೆ ಅಂಟಿಕೊಂಡ ಒದ್ದೆ ಬಟ್ಟೆಯಲ್ಲೇ ಕಾಣಿಸಿಕೊಂಡಳು ಒಬ್ಬ ಹುಡುಗಿ, ಆನಾ "ಹುಶಾರು" ಎಂದು ಪಿಸುಗುಟ್ಟಿದಳು. ಹುಡುಗಿ ಹತ್ತಿರ ಬಂದು ನಿಂತಳು.

"ಏನದು ಗಲಾಟೆ?" ಎಂದು ಕೇಳಿದ ದಮಾಸೊ.

"ಯಾರೋ ಕ್ಲಬ್ಬಿಗೆ ನುಗ್ಗಿ ಅಲ್ಲಿದ್ದದ್ದನ್ನೆಲ್ಲ ಹೊಡಕೊಂಡು ಹೋದ್ರಂತೆ" ಎಂದಳು ಹುಡುಗಿ.

ಅವಳಿಗೆಲ್ಲ ವಿವರಗಳೂ ತಿಳಿದಂತಿತ್ತು. ಹೇಗೆ ಅವರು ಇಡೀ ಕ್ಲಬ್ಬನ್ನು ಜಾಲಾಡಿಸಿ ಬಿಲಿಯರ್ಡ್‌ಟೇಬಲನ್ನೂ ಹೊತ್ತುಕೊಂಡು ಹೋಗಿದ್ದಾರೆ ಎಂದೆಲ್ಲ ವಿವರಿಸಿದಳು. ಎಲ್ಲವನ್ನೂ ಎಷ್ಟೆಲ್ಲ ನಂಬಿಕೆ ಹುಟ್ಟುವ ಹಾಗೆ ಹೇಳಿದಳೆಂದರೆ, ಅದೆಲ್ಲ ಸುಳ್ಳು ಎಂದು ಸ್ವತಃ ದಮಾಸೋಗೋ ನಂಬಲು ಸಾಧ್ಯವಾಗಲಿಲ್ಲ.

ಅಡುಗೆಮನೆಗೆ ತಿರುಗಿ ಬರುತ್ತಾ ಅವನು "ಥತ್" ಎಂದ.

ಆನಾ ಹಲ್ಲು ಕಚ್ಚಿಕೊಂಡು ಯಾವುದೋ ಹಾಡು ಗುನುಗತೊಡಗಿದಳು. ದಮಾಸೊ ಪಾರ್ಟಿಷನ್ನಿಗೆ ಕುರ್ಚಿಯನ್ನು ಒರಗಿಸಿಟ್ಟು ತನ್ನ ಆತಂಕವನ್ನು ಹತ್ತಿಕ್ಕಲು ಯತ್ನಿಸಿದ. ಮೂರೇ ತಿಂಗಳ ಹಿಂದೆ ಇಪ್ಪತ್ತು ತುಂಬಿತ್ತು. ಆಗ ತುಟಿಯ ಮೇಲೆ ಸಣ್ಣಗೆ ಬೆಳೆಯತೊಡಗಿದ್ದ ಮೀಸೆ, ಕಲೆಗಟ್ಟಿದ ಅವನ ಮುಖಕ್ಕೆ ಒಂದು ಬಗೆಯ ಪ್ರಬುದ್ಧತೆಯನ್ನು ತಂದುಕೊಟ್ಟಿತ್ತು. ಆವೊತ್ತಿನಿಂದ ತಾನೊಬ್ಬ ಬೆಳೆದವನು ಎಂದು ಅನಿಸತೊಡಗಿತ್ತು. ಆದರೆ ಇವತ್ತು ಬೆಳಗ್ಗೆ ತಲೆನೋವಿನ ಕೆಸರಿನಲ್ಲೇ ಕಳೆದ ರಾತ್ರಿಯಲ್ಲಿ ನೆನಪುಗಳು ತೇಲತೊಡಗಿ, ಎಲ್ಲಿಂದ ಬದುಕು ಪ್ರಾರಂಭಿಸಬೇಕು ಎಂಬುದೆ ತಿಳಿಯಲಿಲ್ಲ.

ಇಸ್ತ್ರಿ ಮಾಡಿ ಮುಗಿಸಿದ ಮೇಲೆ ಆನಾ ಸಮಾನಾಗಿ ಬಟ್ಟೆಗಳ ಎರಡು ಗಂಟು ಕಟ್ಟಿಕೊಂಡು ಹೊರಗೆ ಹೋಗಲು ಸಿದ್ಧಲಾದಳು.

"ತುಂಬ ಹೊತ್ತು ಮಾಡ್ಬೇಡ" ಎಂಬ ದಮಾಸೊ.

"ಮಾಮೂಲಿನಷ್ಟೇ ಹೊತ್ತು ಆಗೋದು."

ಅವನು ಅವಳ ಹಿಂದೆಯೇ ರೂಮಿಗೆ ಹೋದ. "ನಿನ್ನ ಚೌಕುಳಿ ಷರ್ಟನ್ನ ಅಲ್ಲೇ ಇಟ್ಟಿದೇನೆ. ಮತ್ತೆ ಆ ಪಪ್ಪುಳಿ ಷರ್ಟು ಹಾಕೊಳ್ದೇ ಇರೋದೇ ಒಳ್ಳೇದು" ಎಂದ ಆನಾ ಗಂಡನ ತಿಳಿಯಾದ ಬೆಕ್ಕಿನ ಕಣ್ಣುಗಳಲ್ಲೇ ಕಣ್ಣಿಟ್ಟು ನೋಡಿದಳು.

"ಯಾರಾದ್ರೂ ನಿನ್ನನ್ನ ನೋಡಿದ್ರೋ ಏನೋ, ನಮಗಿನ್ನೂ ಗೊತ್ತಾಗಿಲ್ಲ."

ದಮಾಸೊ ಬೆವರುತ್ತಿದ್ದ ಕೈಗಳನ್ನು ಪ್ಯಾಂಟಿಗೆ ಉಜ್ಜಿದ.

"ಇಲ್ಲ, ಯಾರೂ ನನ್ನನ್ನ ನೋಡಿಲ್ಲಲ್ಲ."

"ನಮಗೆ ಹ್ಯಾಗೆ ಗೊತ್ತು?" ಎಂದು ಹೇಳಿದ ಅವಳು ಈಗ ಎರಡು ಕೈಗಳಲ್ಲೂ ಒಂದೊಂದು ಬಟ್ಟೆ ಗಂಟು ಹೊತ್ತುಕೊಂಡಿದ್ದಳು. "ಅದೂ ಅಲ್ದೆ, ನೀನೀಗ ಹೊರಗೆ ಹೋಗ್ದೇ ಇರೋದೆ ಒಳ್ಳೇದು. ನಾನು ಏನೂ ಆಸಕ್ತಿ ಇಲ್ದೋರ ತರ ಕ್ಲಬ್ಬಿಗೆ ಹೋಗಿ ಒಂದಷ್ಟು ಸುತ್ತಾಡಿ ಬರೋವರ್ಗೂ ಇಲ್ಲೇ ಇರು."

ಊರಿನಲ್ಲಿ ಜನ ಬೇರೇನೂ ಮಾತಾಡುತ್ತಿರಲಿಲ್ಲ. ಆನಾ ಒಂದೇ ಘಟನೆಯ ಬೇರೆ ಬೇರೆಯಾದ, ಪರಸ್ಪರ ವಿರುದ್ಧವಾದ ವಿವರಗಳನ್ನು ಕೇಳಿಸಿಕೊಳ್ಳ

ಬೇಕಾಯಿತು. ಇಸ್ತ್ರಿಯಾದ ಬಟ್ಟೆಗಳನ್ನು ತಲಪಿಸಬೇಕಾದವರಿಗೆ ತಲಪಿಸಿಯಾದ ಮೇಲೆ ಪ್ರತಿ ಶನಿವಾರ ಅವಳು ಮಾರ್ಕೆಟ್ಟಿಗೆ ಹೋಗುತ್ತಿದ್ದುದಿತ್ತು. ಆದರೆ ಇವತ್ತು ಹಾಗೆ ಮಾಡದೆ ಸೀದಾ ಅಂಗಡಿ ಬೀದಿಗೇ ಹೋದಳು.

ಕ್ಲಬ್ಬಿನ ಎದುರಿಗೆ ಅವಳು ಕಲ್ಪಿಸಿಕೊಂಡದ್ದಕ್ಕಿಂತ ಕಡಿಮೆ ಜನರಿದ್ದರು. ಗಂಡಸರು ಕೆಲವರು ಬಾದಾಮಿ ಮರಗಳ ನೆರಳಲ್ಲಿ ಕುಳಿತು ಮಾತಾಡುತ್ತಿದ್ದರು. ಸಿರಿಯನ್ನರು ಮಧ್ಯಾಹ್ನದ ಊಟ ಮಾಡುವುದಕ್ಕಾಗಿ ಬಣ್ಣ ಬಣ್ಣದ ಬಟ್ಟೆಗಳನ್ನು ತೂಗುಬಿಟ್ಟಿದ್ದರು. ಅವರ ಅಂಗಡಿಗಳಂತೂ ತೂಕಡಿಸುತ್ತಿರುಂತೆ ಕಂಡುವು. ಹೋಟೆಲಿನ ಮೊಗಸಾಲೆಯಲ್ಲಿ ತೂಗು ಕುರ್ಚಿಯಲ್ಲಿ ಒರಗಿ ಕುಳಿತವನೊಬ್ಬ ಆ ಎಂದು ಬಾಯಿ ಬಿಟ್ಟುಕೊಂಡು, ಕಾಲುಗಳನ್ನು ಆಗಲಿಸಿ ನಿದ್ದೆ ಹೊಡೆಯುತ್ತಿದ್ದ. ಮಧ್ಯಾಹ್ನದ ಬಿಸಿಲಿನಲ್ಲಿ ಎಲ್ಲವೂ ನಿಶ್ಚಲವಾಗಿದ್ದುವು.

ಆನಾ ಕ್ಲಬ್ಬಿನ **ಬಧಿಯಲ್ಲೇ** ನಡೆದು ಹೋದಳು. ಬಂದರಿನ ಎದುರಿಗಿದ್ದ ಖಾಲಿ ಜಾಗವನ್ನು ದಾಟಿದ **ಮೇಲೆ** ಜನರ ಗುಂಪು ಕಾಣಿಸಿತು. ಆಗ ದಮಾಸೊ ಹೇಳಿದ್ದು ನೆನಪಾಯಿತು. ಎಲ್ಲರಿಗೂ ಗೊತ್ತಿದ್ದದ್ದೇ. ಆದರೆ ಅಲ್ಲಿಗೆ ಹೋಗುವವರು ಮಾತ್ರ ನೆನಪಿಸಿಕೊಳ್ಳುವಂಥಾದ್ದು. ಕ್ಲಬ್ಬಿನ ಹಿಂಬಾಗಿಲು ಖಾಲಿಯಿದ್ದ ಜಾಗಕ್ಕೆ ಮುಖಮಾಡಿಕೊಂಡಿತ್ತು. ಒಂದು ಕ್ಷಣದ ನಂತರ ಹೊಟ್ಟೆಯ ಮೇಲೆ ಕೈ ಕಟ್ಟಿಕೊಂಡು ಗುಂಪಿನಲ್ಲಿ ಸೇರಿಹೋದ ಅವಳು, ಮುರಿದ ಬಾಗಿಲಿನ ಮೇಲೆಯೇ ಕಣ್ಣಿಟ್ಟು ನೋಡಿದಳು. ಬೀಗ ಭದ್ರವಾಗಿಯೇ ಇತ್ತು. ಆದರೆ ಬಾಗಿಲಿನ ಒಂದು ಚಿಲಕವನ್ನು ಮಾತ್ರ ಹಲ್ಲು ಕೀಳುವ ಹಾಗೆ ಕಿತ್ತುಹಾಕಲಾಗಿತ್ತು. ಒಂದು ಕ್ಷಣ ಅವಳು ಅಂಥ ಕಷ್ಟಪಡದೆ ಹಾಳು ಮಾಡಿದ್ದ, ಆ ಮುರಿದ ಚಿಲಕವನ್ನೇ ನೋಡಿದಳು. ತನ್ನ ಗಂಡನ ಬಗ್ಗೆ ಕರುಣೆ ಉಕ್ಕಿ ಬಂತು.

"ಯಾರಂತೆ "? ಎಂದು ವಿಚಾರಿಸಿದಳು.

ಯಕೊ, ಸುತ್ತಮುತ್ತ ನೋಡುವ ಧೈರ್ಯವಾಗಲಿಲ್ಲ.

"ಯಾರಿಗೂ ಗೊತ್ತಿಲ್ಲ. ಯಾರೋ ಹೊಸಬ ಇರಬೇಕು ಅಂತಿದಾರೆ" ಎಂದರು ಜನ.

"ಹೂಂ, ಹೊಸಬನೇ ಇರಬೇಕು. ಈ ಊರಿನಲ್ಲಿ ಯಾವ ಕಳ್ಳರೂ ಇಲ್ಲ. ಇಲ್ಲಿ ಎಲ್ಲರಿಗೂ ಎಲ್ಲರೂ ಗೊತ್ತು" ಎಂದಳು ಹಿಂದೆ ನಿಂತಿದ್ದ ಒಬ್ಬ ಹೆಂಗಸು.

ಆನಾ ಹಿಂದೆ ತಿರುಗಿ "ಸರಿಯಾಗಿ ಹೇಳಿದಿರಿ" ಎಂದು ಮುಗುಳ್ನಕ್ಕಳು. ಮೈಯೆಲ್ಲ ಬೆವರುತ್ತಿತ್ತು. ಪಕ್ಕದಲ್ಲಿ ಒಬ್ಬ ಹಣ್ಣು ಹಣ್ಣು ಮುದುಕ ನಿಂತಿದ್ದ. ಅವನ ಕುತ್ತಿಗೆಯ ಹಿಂಭಾಗ ಸುಕ್ಕುಸುಕ್ಕಾಗಿತ್ತು.

"ಇದ್ದಿದ್ದೆಲ್ಲಾ ಹೊಡಕೊಂಡು ಹೋಗಿದಾನಂತಾ" ಎಂದು ಕೇಳಿದಳು.

"ಇನ್ನೂರು ಪೆಸೋ, ಬಿಲಿಯರ್ಡ್ಸ್ ಬಾಲುಗಳು ನಾಪತ್ತೆ." ಎಂದ ಮುದುಕ.ಅವನು ವಿಚಿತ್ರ ಕುತೂಹಲದಿಂದ ಅವಳನ್ನೇ ನೋಡಿದ. "ಇನ್ನು ಮೇಲೆ ನಾವೆಲ್ಲ ಕಣ್ಣು ತೆರಕೊಂಡೇ ನಿದ್ದೆ ಮಾಡ್ಬೇಕಷ್ಟೇ."

ಆನಾ ಬೇರೆ ಕಡೆ ಮುಖ ತಿರುಗಿಸಿದಳು. "ಸರಿಯಾಗಿ ಹೇಳಿದಿರಿ" ಎಂದು ಮತ್ತೆ ಅಂದಳು. ತಲೆಯ ಮೇಲೊಂದು ಬಟ್ಟೆ ಎಳೆದುಕೊಂಡು ಅಲ್ಲಿಂದ ಹೊರಟರೂ ಆ ಮುದುಕ ಇನ್ನೂ ತನ್ನನ್ನೇ ನೋಡುತ್ತಿದ್ದಾನೆಂಬ ಅನಿಸಿಕೆ ದೂರವಾಗಲಿಲ್ಲ.

ಸುಮಾರು ಕಾಲು ಗಂಟೆ ಹೊತ್ತು ಖಾಲಿ ಜಾಗದಲ್ಲಿ ಗಿಜಿಗುಟ್ಟುತ್ತಿದ್ದ ಜನರ ಗುಂಪು ಕ್ಲಬ್ಬಿನೊಳಗೆ ಒಬ್ಬನ ಹೆಣ ಇದೆಯೇನೋ ಎಂಬ ಹಾಗೆ ಸಭ್ಯತೆಯಿಂದಲೇ ವರ್ತಿಸಿತು. ಆಮೇಲೆ ಉದ್ವೇಗಗೊಂಡ ಜನ, ಹಿಂದಿರುಗಿ ಅಂಗಡಿ ಬೀದಿಯಲ್ಲಿ ಚೆಲ್ಲಾಪಿಲ್ಲಿಯಾದರು.

ಕ್ಲಬ್ಬಿನ ಮಾಲಿಕ ಮುಂಬಾಗಿಲಿನಲ್ಲಿ ನಿಂತಿದ್ದ. ಅವನ ಜೊತೆ ಮೇಯರೂ ಇಬ್ಬರು ಪೋಲಿಸರೂ ಇದ್ದರು. ಮಾಲಿಕ ಕುಳ್ಳಗೆ ಗುಂಡುಗುಂಡಾಗಿದ್ದ. ಅವನು ತೊಟ್ಟ ಪ್ಯಾಂಟು ಹೊಟ್ಟೆಯ ಒತ್ತಡದಿಂದಾಗಿ ಮಾತ್ರ ಕೆಳಗೆ ಜಾರದೆ ನಿಂತುಕೊಂಡಂತಿತ್ತು. ಆ ಕನ್ನಡಕವೂ ಮಕ್ಕಳು ಮಾಡಿ ಹಾಕಿಕೊಳ್ಳುತ್ತಾರಲ್ಲ. ಅದೇ ತರ ಇತ್ತು. ತುಂಬ ಗಂಭೀರವಾಗಿ ನಿಂತಿರುವಂತೆ ಕಾಣಿಸುತ್ತಿದ್ದ.

ಈಗ ಅವನ ಸುತ್ತ ಜನ ಗುಂಪುಗೂಡಿದರು. ಗೋಡೆಗೊರಗಿಕೊಂಡು ನಿಂತ ಆನಾ ಗುಂಪು ಚೆದುರುವವರೆಗೂ ಕಳ್ಳತನವಾದ ಬಗ್ಗೆ ಅವನು ಹೇಳುತ್ತಿದ್ದುದನ್ನು ಕೇಳಿಸಿಕೊಂಡಳು. ನಂತರ ಬಿಸಿಲಿನಿಂದಾಗಿ ಬೆವರು ಸುರಿಸುತ್ತಾ ಗದ್ದಲ ಮಾಡುತ್ತಿದ್ದ ನೆರೆಹೊರೆಯವರ ಮಧ್ಯದಿಂದ ಹೊರಗೆ ನುಸುಳಿ, ಮನೆಗೆ ಬಂದಳು.

ಹಾಸಿಗೆಯಲ್ಲಿ ಕಾಲು ಚಾಚಿಕೊಂಡು ಮಲಗಿದ್ದ ದಮಾಸೊ, ಸಿಗರೇಟೂ ಸೇದದೆ ಅದು ಹೇಗೆ ಆನಾ ಇಡೀ ರಾತ್ರಿ ತನಗಾಗಿ ಕಾದು ಕುಳಿತಿದ್ದಳೆಂದು ಹಲವಾರು ಬಾರಿ ತನ್ನನ್ನು ತಾನೇ ಕೇಳಿಕೊಂಡಿದ್ದ. ಮುಗುಳುನಗುತ್ತಾ, ಬೆವರಿನಿಂದಾಗಿ ಒದ್ದೆಯಾಗಿ

ಹೋದ ಬಟ್ಟೆಯನ್ನು ತಲೆಯ ಮೇಲಿಂದ ತೆಗೆಯುತ್ತಾ, ಒಳಗೆ ಬಂದವಳನ್ನು ಕಂಡವನೇ ತಕ್ಷಣ ಸೇದದೆ ಹಾಗೇ ಹಿಡಿದುಕೊಂಡಿದ್ದ ಸಿಗರೇಟನ್ನು ಕೆಳಗೆ ಎಸೆದು, ಹೊಸಕಿಹಾಕಿ, ಅತಿಯಾದ ಆತಂಕದಿಂದ ಕಾದು ನಿಂತ.

"ಏನು"?

ಆನಾ ಹಾಸಿಗೆಯ ಬದಿಯಲ್ಲಿ ಮಂಡಿಯೂರಿ ಕುಳಿತು,

"ನೀನು ಬರೀ ಕಳ್ಳನಲ್ಲ, ಸುಳ್ಳನೂ ಹೌದು" ಎಂದಳು.

"ಯಾಕೆ? "

"ಯಾಕೆ ಅಂದ್ರೆ ಡ್ರಾಯರಿನಲ್ಲಿ ಏನೂ ಇರಲಿಲ್ಲ ಅಂದಿದ್ದೆಯಲ್ಲ."

ದಮಾಸೋ ಹುಬ್ಬುಗಂಟಿಕ್ಕಿದ.

"ಹೌದು, ಏನೂ ಇರಲಿಲ್ಲ."

"ಅಲ್ಲಿ ಇನ್ನೂರು ಪೆಸೋ ಇತ್ತು."

"ಸುಳ್ಳು" ಎಂದು ಏರಿದ ಧ್ವನಿಯಲ್ಲಿ ಕೂಗಿದವನು ದಢಕ್ಕನೆ ಎದ್ದು ಕುಳಿತ ಮತ್ತೆ ಸಹಜ ಧ್ವನಿಯಲ್ಲಿ "ಅಲ್ಲಿದ್ದದ್ದು ಇಪ್ಪತ್ತೈದು ಪೆಸೋ ಮಾತ್ರ" ಎಂದ.

ಅವಳಿಗೆ ನಂಬಿಕೆ ಬಂತು. ದಮಾಸೊ ಮುಷ್ಟಿ ಬಿಗಿಹಿಡಿದುಕೊಂಡು "ಅವ ಹಳೆಕೇಡಿ, ಬಹುಶಃ ನಾನು ಹೋಗಿ ಅವನ ದವಡೆ ಉದುರಿಸಬೇಕೂಂತ ಕಾಯ್ತಿದಾನೇನೊ" ಎಂದ. ಆನಾ ಗಟ್ಟಿಯಾಗಿ ನಕ್ಕುಬಿಟ್ಟಳು.

"ಹುಚ್ಚುಚ್ಚಾಗಿ ಮಾತಾಡ್ಬೇಡ."

ದಮಾಸೊ ಕೂಡ ನಕ್ಕ. ಅವನು ಷೇವ್ ಮಾಡಿಕೊಳ್ಳುತ್ತಿದ್ದಾಗ ಅವಳು ತನಗೆ ತಿಳಿದು ಬಂದದ್ದನೆಲ್ಲ ಹೇಳಿದಳು. ಪೋಲೀಸರು ಹೊಸಬನೊಬ್ಬನಿಗಾಗಿ ಹುಡುಕಾಡುತ್ತಿದ್ದಾರೆ. "ಗುರುವಾರವೇ ಇಲ್ಲಿಗೆ ಬಂದ ಅವನನ್ನು ಜನ ನಿನ್ನೆ ರಾತ್ರಿ ಬಂದರಿನಲ್ಲಿ ನೋಡಿದ್ದರಂತೆ. ಈಗ ಅವನ ಪತ್ತೆಯೆ ಇಲ್ಲವಂತೆ" ದಮಾಸೋ ತಾನು ಎಂದೂ ನೋಡಿರದ ಆ ಅಪರಿಚಿತನ ಬಗ್ಗೆ ಯೋಚಿಸಿದ. ಒಂದು ಕ್ಷಣ ಅವನೇ ಈ ಕೆಲಸ ಮಾಡಿರಬಾರದೇಕೆ ಎಂದೂ ಅನಿಸಿತು.

"ಈಗಾಗ್ಲೆ ಅವನು ಕಂಬಿ ಕಿತ್ತಿರಬಹುದು" ಎಂದಳು ಆನಾ.

ಎಂದಿನಂತೆ ದಮಾಸೋಗೆ ಬಟ್ಟೆ ಹಾಕಿಕೊಳ್ಳಲು ಮೂರು ಗಂಟೆ ಬೇಕು.

ಮೀಸೆಯನ್ನು ನೀಟಾಗಿ ಟ್ರಿಮ್ ಮಾಡಿಕೊಳ್ಳುವುದು, ಮೊದಲ ಕೆಲಸ, ಆಮೇಲೆ ಅಂಗಳದ ನಲ್ಲಿಯ ಕೆಳಗೆ ಸ್ನಾನ. ಆನಾ ಅವನು ತುಂಬ ಮುತುವರ್ಜಿಯಿಂದ ತಲೆ ಬಾಚಿಕೊಳ್ಳುತ್ತಿರುವುದನ್ನೇ ಹಂತಹಂತವಾಗಿ ಗಮನಿಸುತ್ತಿದ್ದಳು. ಅವಳಿಗೆ ನಿನ್ನೆ ರಾತ್ರಿ ಮೊದಲು ನೋಡಿದಾಗಿನಿಂದ ಈ ಕ್ಷಣದವರೆಗೆ ಅವನ ಬಗ್ಗೆ ಒಂದಿಷ್ಟೂ ಕುತೂಹಲ ಕಡಿಮೆಯಾಗಿರಲಿಲ್ಲ. ಹೊರಗೆ ಹೋಗುವ ಮುಂಚೆ ಅವನು ಚೌಕುಲಿ ಷರ್ಟು ತೊಟ್ಟುಕೊಂಡು ಕೊನೆಯ ಬಾರಿ ಕನ್ನಡಿ ನೋಡುತ್ತಿದ್ದುದನ್ನು ಕಂಡವಳಿಗೆ ಯಾಕೊ, ತನಗೆ ವಯಸ್ಸಾಗಿಬಿಟ್ಟಿತು ಎನ್ನಿಸಿತು. ದಮಾಸೊ ತೀರ ಚುರುಕಾದ ಬಾಕ್ಸರ್‌ನಂತೆ ಅವಳನ್ನು ತಿವಿದ. ಅವನ ಮುಂಗೈಯನ್ನು ಹಿಡಿದುಕೊಂಡವಳು.

"ನಿನ್ನ ಹತ್ರ ದುಡ್ಡಿದೆಯಾ" ಎಂದು ಕೇಳಿದಳು.

"ಇಲ್ಲದೆ ನಾನು ಸಾಹುಕಾರ ಅಲ್ವಾ? ಇನ್ನೂರು ಪೆಸೋ ಇದೆ" ಎಂದು ನಗುನಗುತ್ತಾ ಹೇಳಿದ.

ಗೋಡೆಯ ಕಡೆ ತಿರುಗಿದ ಆನಾ ತನ್ನ ಜಾಕೆಟ್ಟಿನೊಳಗೆ ಕೈ ಹಾಕಿ, ನೋಟುಗಳ ಸುರುಳಿಯನ್ನು ಹೊರತೆಗೆದು,

"ವ್ಯಾಲೆಂತಿನೋ, ತೊಕೊ" ಎಂದು ಒಂದು ಪೆಸೋ ನೋಟನ್ನು ಗಂಡನ ಕೈಯಲ್ಲಿಟ್ಟಳು.

ಆ ರಾತ್ರಿ ದಮಾಸೊ ಕೆಲವು ಸ್ನೇಹಿತರ ಜೊತೆ ಅಂಗಡಿ ಬೀದಿಯಲ್ಲಿದ್ದ. ಫ್ರೆಂಚ್ ಫ್ರೈಸ್, ಲಾಟರಿ ಟಿಕೆಟ್ಟು ಮೊದಲಾದುವನ್ನು ಮಾರುವ ಅಂಗಡಿಗಳ ಮಧ್ಯೆ ಹಳ್ಳಿಗಳಿಂದ ಬಂದ ಜನ ತಮ್ಮ ಸಾಮಾನುಗಳನ್ನು ಮಾರುತ್ತಿದ್ದುದುಂಟು. ಭಾನುವಾರ ಸಂತೆಯಲ್ಲವೇ? ಈಗ ಅವರೆಲ್ಲ ಬಟ್ಟೆಯಿಂದ ಸೂರುಗಳನ್ನು ಕಟ್ಟುತ್ತಿದ್ದರು. ಮುಸ್ಸಂಜೆಯ ಹೊತ್ತಿನಿಂದಲೆ ಅವರು ಗೊರಕೆ ಹೊಡೆಯುವುದನ್ನು ಕೇಳಬಹುದು. ದಮಾಸೋನ ಸ್ನೇಹಿತರಿಗೆ ಕಳವಿನ ಬಗ್ಗೆ ಅಂಥ ಆಸಕ್ತಿ ಉಳಿದಿರಲಿಲ್ಲ. ಬೇಸ್‌ಬಾಲ್ ಚಾಂಪಿಯನ್‌ಷಿಪ್ಪಿನ ಬಗ್ಗೆ ರೇಡಿಯೋ ವರದಿಯನ್ನು ಕೇಳುವ ಆಸೆಯೇನೋ ಇತ್ತು. ಆದರೆ ಇವತ್ತು ರಾತ್ರಿ ಕ್ಲಬ್ಬು ಮುಚ್ಚಿರುವುದರಿಂದ ಅದನ್ನು ಕೇಳುವಂತಿಲ್ಲ. ಬೇಸ್‌ಬಾಲಿನ ಬಗೆಗೇ ಮಾತಾಡುತ್ತಾ ಅವರು ಸಿನಿಮಾಕ್ಕೆ ಹೊರಟರು. ಹಾಗೆ ಮೊದಲೇ ತೀರ್ಮಾನಿಸಿ ಹೋದದ್ದಲ್ಲ. ಅಷ್ಟೇಕೆ, ಯಾವ ಸಿನಿಮಾ ನಡೆಯುತ್ತಿದೆಯೆಂಬುದೂ ಅವರಿಗೆ ಗೊತ್ತಿರಲಿಲ್ಲ.

ಕ್ಯಾಂಟಿನ್‌ಫ್ಲಾಸಂ ನಟಿಸಿದ್ದ ಒಂದು ಚಿತ್ರ ನಡೆಯುತ್ತಿತ್ತು. ಬಾಲ್ಕನಿಯ ಮೊದಲ ಸ್ಥಾನದಲ್ಲಿ ಕುಳಿತ ದಮಾಸೊ ಯಾವ ಎಗ್ಗೂ ಇಲ್ಲದೆ ನಕ್ಕ. ತನ್ನನ್ನು ಕಾಡುತ್ತಿದ್ದ ವಿಚಿತ್ರ ಭಾವನೆಗಳಿಂದ ಚೇತರಿಸಿಕೊಳ್ಳುತ್ತಿರುವಂತೆ ಅನ್ನಿಸುತ್ತಿತ್ತು. ಜೂನ್ ತಿಂಗಳ ಹಿತವಾದ ರಾತ್ರಿ. ಪ್ರೊಜೆಕ್ಟರಿನ ಬೆಳಕಿನಲ್ಲಿ ಛಾವಣಿಯಿರದ ಥಿಯೇಟರಿನ ಮೇಲೆ ನಕ್ಷತ್ರಗಳ ಮೌನ.

ಇದ್ದಕ್ಕಿದ್ದಂತೆ ತೆರೆಯ ಮೇಲಿನ ಚಿತ್ರಗಳು ಮಂಜಾಗತೊಡಗಿದವು. ಆರ್ಕೆಸ್ಟ್ರಾದ ಹಿಂದೆ ದಡಬಡ ಸದ್ದಾಯಿತು. ಹಠಾತ್ತನೆ ಬೆಳಗಿದ ಬೆಳಕಿನಲ್ಲಿ ದಮಾಸೋಗೆ ತನ್ನನ್ನು ಪತ್ತೆ ಹಚ್ಚಿಬಿಟ್ಟಂತೆ. ತಾನು ಅಪಾದಿತನಾಗಿ ವಿಚಾರಣೆಗೆ ಗುರಿಯಾದಂತೆ....... ಓಡಿಹೋಗಲು ಪ್ರಯತ್ನಿಸಿದ. ತಕ್ಷಣ ಆರ್ಕೆಸ್ಟ್ರಾದವರು ಗಪ್‌ಚಿಪ್ಪಾಗಿಬಿಟ್ಟಂತೆ. ಮುಷ್ಟಿಯಲ್ಲಿ ಬೆಲ್ಟು ಸುತ್ತಿಕೊಂಡ ಪೋಲೀಸಿನವನೊಬ್ಬ ಅದರ ತೂಕದ ಬಕಲ್‌ನಿಂದಲೆ ತುಂಬ ಕ್ರೂರವಾಗಿ ಇನ್ನೊಬ್ಬನನ್ನು ಥಳಿಸುತ್ತಿದ್ದ. ಏಟು ತಿನ್ನುತ್ತಿದ್ದವನು ಒಳ್ಳೆ ಕಟ್ಟುಮಸ್ತಾಗಿದ್ದ ನೀಗ್ರೊ. ಹೆಂಗಸರು ಚೀರಿಕೊಳ್ಳತೊಡಗಿದರು. ನೀಗ್ರೋಗೆ ಬಾರಿಸುತ್ತಿದ್ದ ಪೋಲೀಸಿನವ ಕಳ್ಳ ಕಳ್ಳ ಎಂದು ಕೂಗಿದ. ನೀಗ್ರೋ ಕುರ್ಚಿಗಳ ಎರಡು ಸಾಲಿನ ನಡುವೆ ಉರುಳಿಬಿದ್ದ. ಅಟ್ಟಿಸಿಕೊಂಡು ಬಂದ ಇನ್ನೂ ಇಬ್ಬರು ಪೋಲಿಸರು ಹಿಂದಿನಿಂದ ಬಂದು ಹಿಡಿದುಕೊಳ್ಳುವವರೆಗೆ ಅವನ ಹೊಟ್ಟೆಗೆ ಒದೆಯುತ್ತಲೇ ಇದ್ದರು. ಆಮೇಲೆ ಮೊದಲು ಬಾರಿಸಿದ ಪೋಲಿಸಿನವನು ಹಿಂದುಗಡೆಯಿಂದ ನೀಗ್ರೋನ ಕೈಗಳನ್ನು ಕಟ್ಟಿಹಾಕಿದ. ಮತ್ತೆ ಮೂವರು ಅವನನ್ನು ಬಾಗಿಲಿನತ್ತ ತಳ್ಳಿಕೊಂಡೇ ಹೊರಟರು. ಎಲ್ಲ ಎಷ್ಟು ಬೇಗ ನಡೆದುಬಿಟ್ಟಿತೆಂದರೆ, ಹರಿದ ಅಂಗಿಯ, ಬೆವರು ದೂಳು ರಕ್ತ ಎಲ್ಲ ಮೆತ್ತಿಕೊಂಡ ಮುಖದ ಆ ನೀಗ್ರೋ "ಕೊಲೆಗಾರರು ಕೊಲೆಗಾರರು" ಎಂದು ಬಿಕ್ಕುತ್ತಾ ತನ್ನ ಪಕ್ಕದಲ್ಲೇ ಹಾದು ಹೋದ ಮೇಲೆ ಮಾತ್ರ ದಮಾಸೋಗೆ ಏನಾಯಿತೆಂದು ತಿಳಿದದ್ದು. ಮತ್ತೆ ಪ್ರೊಜೆಕ್ಟರು ಚಾಲೂ ಆಗಿ ಚಿತ್ರ ಮುಂದುವರಿಯಿತು.

ದಮಾಸೋ ಮತ್ತೆ ನಗಲಿಲ್ಲ. ಒಂದಾದ ಮೇಲೊಂದರಂತೆ ಸಿಗರೇಟು ಸೇದುತ್ತಾ ಕುಳಿತವನಿಗೆ ಸಿನಿಮಾದಲ್ಲಿ ಅಲ್ಲೊಂದು ಚೂರು ಇಲ್ಲೊಂದು ಚೂರು ಕತೆಯಷ್ಟೇ ಗೊತ್ತಾದದ್ದು. ದೀಪಗಳು ಹೊತ್ತಿಕೊಂಡಾಗ ಪ್ರೇಕ್ಷಕರೆಲ್ಲ ವಾಸ್ತವ ಜಗತ್ತನ್ನು ಕಂಡು ಹೆದರಿಕೊಂಡವರಂತೆ ಒಬ್ಬರ ಮುಖ ಒಬ್ಬರು ನೋಡಿದರು. ಪಕ್ಕದಲ್ಲಿದ್ದವನೊಬ್ಬ "ಚೆನ್ನಾಗಿತ್ತು ಸಿನಿಮಾ" ಎಂದ. ದಮಾಸೊ ಅವನ ಕಡೆ ನೋಡಲಿಲ್ಲ.

"ಕ್ಯಾಂಟಿನ್‌ಫ್ಲಾಸ್ ಎಷ್ಟು ಚೆನ್ನಾಗಿ ಆಕ್ಟ್ ಮಾಡ್ತ" ಎಂದ ಅವನು.

ಜನರ ನೂಕುನುಗ್ಗಲು ಅವನನ್ನು ಬಾಗಿಲಿನತ್ತ ತಳ್ಳಿಕೊಂಡು ಹೋಯಿತು. ಬುಟ್ಟಿಗಳಲ್ಲಿ ತಿಂಡಿಗಳನ್ನು ಇಟ್ಟುಕೊಂಡು ಮಾರುವವರೆಲ್ಲ ಮನೆಗಳಿಗೆ ಹೊರಟಿದ್ದರು. ಹನ್ನೊಂದು ಗಂಟೆಯ ಮೇಲಾಗಿತ್ತು. ಆದರೂ ರಸ್ತೆಯಲ್ಲಿ ಸಾಕಷ್ಟು ಜನ ಇದ್ದರು. ಅವರು ನೀಗ್ರೋನನ್ನು ಹಿಡಿದಿದ್ದರ ಬಗ್ಗೆ ಹೇಳಲೆಂದು ಸಿನಿಮಾ ಮುಗಿಸಿಕೊಂಡು ಹೊರಬರಲಿದ್ದವರಿಗಾಗಿ ಕಾಯುತ್ತಿದ್ದಂತಿತ್ತು.

ಆ ರಾತ್ರಿ ದಮಾಸೊ ಎಷ್ಟು ಎಚ್ಚರಿಕೆಯಿಂದ ರೂಮಿನೊಳಗೆ ಕಾಲಿಟ್ಟನೆಂದರೆ ಅರೆನಿದ್ದೆಯಲ್ಲಿದ್ದ ಆನಾಗೆ ಅವನು ಬಂದದ್ದೇ ಗೊತ್ತಾಗಲಿಲ್ಲ. ಅವಳು ಎಚ್ಚರಗೊಂಡು ನೋಡುವ ಹೊತ್ತಿಗೆ ಅವನು ಹಾಸಿಗೆಯ ಮೇಲೆ ಬಿದ್ದುಕೊಂಡು ಎರಡನೆಯ ಸಿಗರೇಟು ಸೇದುತ್ತಿದ್ದ.

"ನಿನ್ನ ಊಟ ಸ್ಟೋವ್ ಮೇಲಿದೆ"

"ನಂಗೆ ಹಸಿವಿಲ್ಲ" ಎಂದ ದಮಾಸೊ.

ಆನಾ ನಿಟ್ಟುಸಿರಿಟ್ಟಳು. "ನೋರಾ ಬೆಣ್ಣೇಲಿ ಸೂತ್ರದ ಬೊಂಬೆ ಮಾಡ್ತಿರೋ ಹಾಗೆ ಕನಸು ಬಿದ್ದಿತ್ತು" ಎಂದವಳು ಮೇಲೇಳಲಿಲ್ಲ. ಇದ್ದಕಿದ್ದಂತೆ ನಿದ್ದೆಮಾಡುವ ಉದ್ದೇಶವಿಲ್ಲದೆಯೇ ನಿದ್ದೆಮಾಡಿಬಿಟ್ಟೆ ಎನಿಸಿ, ಒಂದು ರೀತಿ ಕಂಗೆಟ್ಟವಳಂತೆ ಕಣ್ಣುಜ್ಜುತ್ತಾ ದಮಾಸೋನ ಕಡೆ ತಿರುಗಿದಳು.

"ಆ ಹೊಸಬನನ್ನು ಹಿಡಿದುಬಿಟ್ಟರು."

ದಮಾಸೊ ಸ್ವಲ್ಪ ಹೊತ್ತು ಸುಮ್ಮನಿದ್ದು ಮಾತಾಡಿದ:

"ಯಾರೂ ಹೇಳಿದ್ದು?"

"ಸಿನಿಮಾ ಥಿಯೇಟರಿನಲ್ಲಿ ಹಿಡಿದರಂತೆ. ಈಗ ಎಲ್ಲ ಅಲ್ಲೇ ಇದಾರೆ."

ಅವಳು ಆ ಘಟನೆಯ ಬಗ್ಗೆ ವಿರೂಪಗೊಂಡ ವಿವರಗಳನ್ನು ಕೇಳಿದಳು. ಆದರೂ ಅವನು ನಿಜವಾಗಿ ನಡೆದದ್ದನ್ನು ಹೇಳಲಿಲ್ಲ.

"ಪಾಪದವನು" ಎಂದು ಆನಾ ನಿಟ್ಟುಸಿರಿಟ್ಟಳು.

"ಯಾಕೆ ಪಾಪದವನು?" ನಾನೇ ಸಿಕ್ಕಿಹಾಕ್ಕೋಬೇಕಾಗಿತ್ತೇನೊ "ನಂಗೆ?" ದಮಾಸೊ ಉದ್ವೇಗದಿಂದ ಪ್ರತಿಭಟಿಸಿದ.

ಅದಕ್ಕೆ ಉತ್ತರಿಸುವ ಅಗತ್ಯವಿಲ್ಲವೆಂದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ಅವನು ಬೆಳಕು ಹರಿಯುವವರೆಗೂ ಅಸ್ವಮಾದಿಂದ ನರಳುವವನಂತೆ ಉಸಿರಾಡುತ್ತ ಮೇಲೆದ್ದದ್ದೂ ತಿಳಿಯಿತು. ಯಾವುದೋ ಅಗೋಚರ ವಸ್ತುವನ್ನು ಹುಡುಕುವವನಂತೆ ರೂಮನ್ನೆಲ್ಲ ಬುಡಮೇಲು ಮಾಡಿದ. ಬರೀ ನೋಡುವುದಕ್ಕಿಂತ ಮುಟ್ಟಿ ಅನುಭವಿಸುವುದರಲ್ಲೇ ಆ ಹುಡುಕಾಟದ ಗುರಿ ಇದ್ದಂತಿತ್ತು. ಆಮೇಲೆ ಮಂಚದ ಕೆಳಗಿನ ನೆಲವನ್ನು ಹದಿನೈದು ನಿಮಿಷಕ್ಕಿಂತ ಹೆಚ್ಚು ಹೊತ್ತು ಕೆರೆದ ಸದ್ದು. ಅದಾದ ಮೇಲೆ ಸದ್ದಾಗದಂತೆ ಕತ್ತಲಲ್ಲೆ ಬಟ್ಟೆ ಬಿಚ್ಚುತ್ತಿರುವುದೂ ತಿಳಿಯಿತು. ಆದರೆ ತಾನು ನಿದ್ದೆ ಮಾಡಿದ್ದೇನೆಂದೇ ಅವನು ತಿಳಿದುಕೊಳ್ಳುವಂತೆ ಮಾಡಲು ಪ್ರತಿ ಗಳಿಗೆಯೂ ಅವಳು ಪ್ರಯತ್ನಿಸುತ್ತಿದ್ದಳಲ್ಲ. ಅದಂತೂ ಅವನ ಅರಿವಿಗೆ ಬರಲಿಲ್ಲ. ಅವಳ ಮೂಲ ಪ್ರವೃತ್ತಿಯಲ್ಲೇನೋ ಅಲುಗಾಡಿದಂತಾಯಿತು. ಆಗ ದಮಾಸೊ ಸಿನಿಮಾ ಥಿಯೇಟರಿಗೆ ಹೋಗಿದ್ದನೆಂದು ಹೊಳೆಯಿತು. ಇದೀಗ ಮಂಚದಡಿಯಲ್ಲಿ ಆ ಬಿಲಿಯರ್ಡ್ ಬಾಲುಗಳನ್ನು ಯಾಕೆ ಹುಗಿದಿಟ್ಟನೆಂಬುದೂ ಅರ್ಥವಾಗಿಬಿಟ್ಟಿತು.

ಸೋಮವಾರ ಕ್ಲಬ್ಬನ್ನು ತೆರೆದಾಗ ಬಿಸಿತಲೆಯ ಗಿರಾಕಿಗಳೆಲ್ಲ ಅದಕ್ಕೆ ಮುತ್ತಿಗೆಯನ್ನೇ ಹಾಕಿದರೆನ್ನಬೇಕು. ಬಿಲಿಯರ್ಡ್ ಟೇಬಲಿನ ಮೇಲೆ ನೇರಿಳೆ ಬಣ್ಣದ ಬಟ್ಟೆ ಹೊದಿಸಿದ್ದರಿಂದ ಇಡೀ ಕ್ಲಬ್ಬಿನಲ್ಲೇ ಒಂದು ಬಗೆಯ ಸೂತಕದ ವಾತಾವರಣ. ಗೋಡೆಯ ಮೇಲೆ ಹಚ್ಚಿದ್ದ ಕಾಗದದಲ್ಲಿ "ಬಿಲಿಯರ್ಡ್ ಬಾಲುಗಳಿಲ್ಲ, ಆಟವೂ ಇಲ್ಲ" ಎಂದು ಬರೆಯಲಾಗಿತ್ತು. ಒಳಗೆ ಬಂದ ಜನ ಅದನ್ನು ಸುದ್ದಿಯೇ. ಏನೋ ಎಂಬ ಹಾಗೆ ಓದಿಕೊಂಡರು. ಕೆಲವರಂತೂ ಅದರ ಎದುರಿಗೇ ನಿಂತುಕೊಂಡು ಒಂದು ಬಗೆಯ ಅಚಲನಿಷ್ಠೆಯಿಂದ ಓದಿದ್ದನ್ನೇ ಓದುತ್ತಿದ್ದರು.

ಮೊದಲು ಬಂದ ಗಿರಾಕಿಗಳಲ್ಲಿ ದಮಾಸೋನೂ ಇದ್ದ. ಅಲ್ಲಿ ಪ್ರೇಕ್ಷಕರಿಗೆಂದೆ ಮಿಸಲಾಗಿದ್ದ ಬೆಂಚಿನ ಮೇಲೆ ಅವನು ತನ್ನ ಬದುಕಿನ ಒಂದು ಭಾಗವನ್ನೇ ಕಳೆದಿದ್ದವನು. ಮತ್ತೆ ಈಗ ಬಾಗಿಲು ತೆರೆದ ತಕ್ಷಣ ಅಲ್ಲಿ ಹಾಜರಾಗಿದ್ದ. ಅಂದರೆ ಜನ ಯಾರಾದರೂ ಸತ್ತರೆಂದರೆ ಮುಜುಗರವಾದರೂ ಯೋಚಿಸದೆ ಮನಸ್ಸಿಟ್ಟು ಬರುವಂತೆ ಅಲ್ಲಿಗೆ ಬಂದಿದ್ದ. ಈಗ ಕೌಂಟರಿನ ಮೇಲೆ ಬಾಗಿ ಆ ಕಡೆ ಇದ್ದ ಮಾಲಿಕನ ಬೆನ್ನು ತಟ್ಟಿದವನು.

"ಎಂಥ ನೋವಿನ ಸಮಾಚಾರ, ರೋಕೆ" ಎಂದ.

ಮಾಲಿಕ ನಿಟ್ಟುಸಿರುಬಿಡುತ್ತಾ, ನೋವು ತುಂಬಿಕೊಂಡಂತೆ ಮುಗುಳ್ನಗುತ್ತಾ ತಲೆ ಆಡಿಸಿ, "ಹೌದು" ಎಂದ. ದಮಾಸೊ ಕೌಂಟರಿನ ಸ್ಟೂಲೊಂದರ ಮೇಲೆ ಕುಳಿತವನು

ನೇರಿಳೆಬಣ್ಣದ ಬಟ್ಟೆ ಹೊದ್ದುಕೊಂಡು ದೆವ್ವದ ಹಾಗೆ ನಿಂತಿದ್ದ ಆ ಟೇಬಲನ್ನೇ ನೋಡಿದ. ಏನು ಅನ್ನಿಸಿತೋ "ಎಷ್ಟು ವಿಚಿತ್ರ" ಎಂದ.

ಪಕ್ಕದ ಸ್ಟೂಲಿನಲ್ಲಿ ಕುಳಿತವನೊಬ್ಬ "ಹೌದು, ಈ ಜಾಗ ನೋಡಿದರೆ ನಾವೆಲ್ಲ ಪವಿತ್ರ ವಾರ ಆಚರಿಸ್ತಿದೇವೇನೋ ಅನ್ಸುತ್ತೆ" ಎಂದ.

ಗಿರಾಕಿಗಳಲ್ಲಿ ಬಹಳಷ್ಟು ಜನ ಮಧ್ಯಾಹ್ನದ ಊಟಕ್ಕೆಂದು ಮನೆಗಳಿಗೆ ಹೋದಾಗ ದಮಾಸೊ ಜ್ಯೂಕ್ ಬಾಕ್ಸಿನೊಳಕ್ಕೆ ಒಂದು ನಾಣ್ಯ ತೂರಿಸಿ, ತನಗೆ ಚೆನ್ನಾಗಿ ಗೊತ್ತಿದ್ದ ಗುಂಡಿ ಒತ್ತಿ, ಮೆಕ್ಸಿಕನ್ ಲಾವಣಿಯೊಂದನ್ನು ಕೇಳತೊಡಗಿದ. ರೋಕೆ ಕುರ್ಚಿ ಟೇಬಲುಗಳನ್ನು ಹಾಲಿನ ಹಿಂಭಾಗಕ್ಕೆ ಸಾಗಿಸುತ್ತಿದ್ದ.

"ಏನು ಮಾಡ್ತಿದೀಯ?"

"ಟೇಬಲ್ ಜೋಡಿಸ್ತಾ ಇದೀನಿ, ಇಸ್ಪೀಟಾಟಕ್ಕೆ ಹೊಸ ಬಿಲಿಯರ್ಡ್ ಬಾಲುಗಳು ಬರುವವರೆಗೆ ಬೇರೇನಾದ್ರೂ ಮಾಡಬೇಕಲ್ಲ."

ಒಂದೊಂದು ಕೈಯಲ್ಲೂ ಒಂದೊಂದು ಕುರ್ಚಿ ಹಿಡಿದುಕೊಂಡು ಮನಸಿಲ್ಲದ ಮನಸ್ಸಿನಿಂದ ನಡೆಯುತ್ತಿದ್ದ ರೋಕೆ ಇತ್ತೀಚೆಗಷ್ಟೇ ಹೆಂಡತಿಯನ್ನು ಕಳೆದುಕೊಂಡವನಂತೆ ಕಾಣಿಸಿದ.

"ಯಾವಾಗ ಬರುತ್ತೆ, ಹೊಸ ಬಾಲು?"

"ತಿಂಗಳೊಳಗೇ ಬರಬಹುದು ಅಂದ್ಕೊಂಡಿದೀನಿ."

"ಅಷ್ಟು ಹೊತ್ತಿಗೆ ಕಳ್ಳತನ ಆಗಿರೋ ಬಾಲುಗಳೂ ಸಿಕ್ಕಿಬಿಡಬಹುದು" ಎಂದ.

ರೋಕೆ ತಾನು ಸಾಲಾಗಿ ಜೋಡಿಸಿದ ಚಿಕ್ಕ ಚಿಕ್ಕ ಟೇಬಲುಗಳನ್ನು ಒಂದು ಬಗೆಯ ತೃಪ್ತಿಯಿಂದ ನೋಡಿ, "ಉಹೂಂ, ಅವು ಸಿಕ್ಕೋಲ್ಲ" ಎಂದ. ಅಂಗಿಯ ತೋಳಿನಿಂದ ಹಣೆಯ ಬೆವರು ಒರೆಸಿಕೊಳ್ಳುತ್ತಾ, "ಆ ನೀಗ್ರೋನನ್ನ ಶನಿವಾರದಿಂದ್ಲೂ ಉಪವಾಸ ಕೆಡವಿದ್ದಾರೆ, ಆದ್ರೂ ಅವನು ಬಾಯಿಬಿಡ್ತಿಲ್ಲ" ಎಂದೂ ಹೇಳಿದ. ಆಮೇಲೆ ಬೆವರಿನಿಂದ ಮಸುಕಾದ ಕನ್ನಡಕದ ಮೂಲಕ ದಮಾಸೋನನ್ನೇ ನೋಡಿದ.

"ಅವನು ಖಂಡಿತವಾಗಿ ಬಾಲುಗಳನ್ನು ನದಿಗೇ ಎಸೆದಿರಬೇಕು."

ದಮಾಸೊ ತುಟಿ ಕಚ್ಚಿಕೊಂಡ.

"ಮತ್ತೆ ಆ ಇನ್ನೂರು ಪೆಸೊ?"

"ಅದನ್ನೂ ಎಸೆದಿರಬೇಕು. ಯಾಕಂದ್ರೆ ಅವನ ಹತ್ರ ಇದ್ದದ್ದು ಬರೇ ಮೂವತ್ತು ಪೆಸೊ" ಎಂದ ರೋಕೆ.

ಈಗ ಇಬ್ಬರೂ ಪರಸ್ಪರ ಕಣ್ಣಲ್ಲಿ ಕಣ್ಣಿಟ್ಟು ನೋಡಿದರು. ದಮಾಸೋಗೆ ಆ ನೋಟ ತನ್ನ ಮತ್ತು ರೋಕೆಯ ನಡುವೆ ಒಂದು ರೀತಿಯ ಸಂಚಿನ ಸಂಬಂಧ ರೂಪಿಸಿದೆ ಎನ್ನಿಸಿತು. ಯಾಕೆ ಹಾಗೆನ್ನಿಸಿತೋ ವಿವರಿಸಲಾಗಲಿಲ್ಲ. ಅಂದು ಮಧ್ಯಾಹ್ನ ಅವನು ಬಾಕ್ಸಿಂಗ್ ಮಾಡುವವನ ಹಾಗೆ ಕುಣಿಯುತ್ತ ಬರುತ್ತಿದ್ದುದನ್ನು ಕಕ್ಕಸಿನ ಕಿಟಕಿಯಿಂದಲೆ ಕಂಡ ಆನಾ ಅವನ ಹಿಂದೆಯೇ ರೂಮಿನೊಳಕ್ಕೆ ಬಂದಳು.

"ಎಲ್ಲ ಇತ್ಯರ್ಥ ಆಗಿಬಿಡ್ತು. ಮುದುಕ ರೋಕೆ ಈಗ ಆ ಬಾಲುಗಳ ಆಸೆ ಬಿಟ್ಟಿರೋದಷ್ಟೆ ಅಲ್ಲ, ಹೊಸ ಬಾಲುಗಳಿಗೆ ಆರ್ಡರ್ ಕೊಟ್ಟಿದಾನೆ. ಇನ್ನು ಎಲ್ಲರೂ ಆ ವಿಷಯ ಮರೆತುಬಿಡೋವರೆಗೆ ಕಾಯಬೇಕು, ಅಷ್ಟೆ" ಎಂದ ದಮಾಸೊ.

"ಆ ನೀಗ್ರೋ?"

"ಅದೇನು ದೊಡ್ಡ ವಿಷಯಾನೆ? ಬಾಲುಗಳು ಸಿಕ್ಕಲಿಲ್ಲ ಅಂದ್ಮೇಲೆ ಅವನನ್ನೂ ಬಿಟ್ಟು ಬಿಡಲೇಬೇಕು" ಎಂದು ಭುಜ ಕೊಡವಿದ.

ಊಟವಾದ ಮೇಲೆ ಇಬ್ಬರೂ ಹೊರಬಾಗಿಲ ಮುಂದೆ ಕೂತು ಸಿನಿಮಾ ಥಿಯೇಟರಿನ ಧ್ವನಿವರ್ಧಕ ಮೌನವಾಗುವವರೆಗೂ ಅಕ್ಕಪಕ್ಕದವರ ಜೊತೆ ಮಾತಾಡುತ್ತಿದ್ದರು. ಹಾಸಿಗೆ ಸೇರಿದಾಗ ದಮಾಸೊ ತುಂಬ ಉದ್ವೇಗದಿಂದಿದ್ದ.

"ಈಗ ತಾನೆ ನಂಗೊಂದು ವಿಚಾರ ಹೊಳೀತು."

ಮುಸ್ಸಂಜೆಯಿಂದಲೆ ಯಾವುದೋ ವಿಚಾರದ ಬಗ್ಗೆ ಅವನು ಯೋಚಿಸುತ್ತಿದ್ದನೆಂದು ಅವಳಿಗೆ ಅರಿವಾಯಿತು.

"ನಾನು ಊರಿಂದ ಊರಿಗೆ ಹೋಗ್ತೇನೆ. ಒಂದೂರಿನಲ್ಲಿ ಕದಿಯೋ ಬಿಲಿಯರ್ಡ್ ಬಾಲುಗಳನ್ನ ಇನ್ನೊಂದು ಊರ್ನಲ್ಲಿ ಮಾರ್ತೇನೆ. ಎಲ್ಲ ಊರ್ನಲ್ಲೂ ಕ್ಲಬ್ಬಂತೂ ಇದ್ದೇ ಇರುತ್ತಲ್ಲ."

"ಹೂಂ, ನಿಂಗೆ ಗುಂಡಿಟ್ಟು ಕೊಲ್ಲೋವರೆಗೆ."

"ಗುಂಡಿಟ್ಟು? ಯಾರನ್ನ ಗುಂಡಿಟ್ಟು ಕೊಲ್ಲೋದು? ಅದೆಲ್ಲ ಸಿನಿಮಾದಲ್ಲಿ ಮಾತ್ರ" ಎಂದ. ರೂಮಿನ ಮಧ್ಯೆ ನಿಂತಿದ್ದ ಅವನಿಗೆ ಈ ಹೊಸ ವಿಚಾರ ಹೊಳೆದ

ಉತ್ಸಾಹದಲ್ಲಿ ಉಸಿರು ಕಟ್ಟಿದಂತಾಗಿತ್ತು. ಆನಾ ಈ ಬಗ್ಗೆ ಏನೂ ಆಸಕ್ತಿ ಇಲ್ಲದವಳಂತೆ ಬಟ್ಟೆ ಬಿಚ್ಚತೊಡಗಿದಳು. ನಿಜ. ಆದರೆ ನಿಜಕ್ಕೂ ಆ ಮಾತುಗಳನ್ನು ಒಂದು ಬಗೆಯ ಸಹಾನುಭೂತಿಯಿಂದಲೇ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದಳು.

"ಬೇಕಾದಷ್ಟು ಸೂಟುಗಳನ್ನ ಕೊಂಡ್ಕೊಂಡು ಸಾಲಾಗಿ ಪೇರಿಸ್ತೇನೆ." ದಮಾಸೊ ಗೋಡೆಯ ಉದ್ದಕ್ಕೂ ಒಂದು ವಾರ್ಡ್‌ರೋಬ್ ಇದೆಯೆಂದು ಕಲ್ಪಿಸಿಕೊಂಡವನಂತೆ ಆ ಕಡೆ ಬೆರಳು ತೋರಿಸುತ್ತ ಹೇಳಿದ. "ಇಲ್ಲಿಂದ ಅಲ್ಲಿಯವರೆಗೆ. ಮತ್ತೆ ಐವತ್ತು ಜೊತೆ ಷೂಗಳು."

"ದೈವೇಚ್ಛೆ ಹಾಗಿದ್ದರೆ..." ಎಂದಳು ಆನಾ.

ಅವಳನ್ನೇ ಗಂಭೀರವಾಗಿ ದಿಟ್ಟಿಸಿದ ದಮಾಸೊ,

"ನನ್ನ ವ್ಯವಹಾರಗಳಲ್ಲಿ ನಿಂಗೆ ಏನೇನೂ ಆಸಕ್ತಿ ಇಲ್ಲ" ಎಂದ.

"ಹೌದು, ಅದಕ್ಕೂ ನಂಗೂ ಬಹಳ ದೂರ" ಎಂದ ಅವಳು ದೀಪ ಆರಿಸಿ ಗೋಡೆಯ ಪಕ್ಕ ಮಲಗಿಬಿಟ್ಟಳು. ಆಮೇಲೆ ಒಂದು ರೀತಿ ಕಹಿಯಾಗಿಯೇ "ನಿಂಗೆ ಮೂವತ್ತು ತುಂಬಿದಾಗ ನಂಗೆ ನಲವತ್ತೇಳಾಗಿರುತ್ತೆ" ಎಂದಳು.

"ಹುಚ್ಚುಚ್ಚಾಗಿ ಆಡ್ಬೇಡ."

ಕಡ್ಡಿಪೆಟ್ಟಿಗೆಗಾಗಿ ಜೇಬುಗಳಲ್ಲಿ ಹುಡುಕಾಡಿದವನು "ನೀನೂ ಅಷ್ಟೆ. ಬಟ್ಟೆ ಇಸ್ತ್ರಿ ಅಂತ ಹೆಣಗಾಡಬೇಕಾಗಿಲ್ಲ" ಎಂದ. ಆನಾ ಅವನ ಸಿಗರೇಟಿಗೆ ಬೆಂಕಿ ಹಚ್ಚಿದಳು, ಬೆಂಕಿಕಡ್ಡಿ ಪೂರ್ತಿ ಉರಿದುಹೋಗುವವರೆಗೆ ಅದರ ಜ್ವಾಲೆಯನ್ನೇ ನೋಡುತ್ತಿದ್ದು, ಆಮೇಲೆ ಕೆಳಗೆ ಎಸೆದಳು, ಹಾಸಿಗೆಯ ಮೇಲೆ ಕಾಲು ಚಾಚಿ ಮಲಗಿದ್ದ ಅವನು ಬಡಬಡಿಸುತ್ತಲೇ ಇದ್ದ.

"ಬಿಲಿಯರ್ಡ್ ಬಾಲುಗಳನ್ನು ಯಾವುದರಿಂದ ಮಾಡ್ತಾರೆ, ಗೊತ್ತಾ?"

ಆನಾ ಉತ್ತರ ಕೊಡಲಿಲ್ಲ.

"ಆನೆಯ ದಂತದಿಂದ, ದಂತ ಏನೂ ಸುಲಭವಾಗಿ ಸಿಕ್ಕೋಲ್ಲ. ತಿಂಗಳುಗಟ್ಲೆ ಬೇಕಾಗುತ್ತೆ. ಹಾಗಂತ ಎಂದಾದರೂ ಊಹಿಸಿದೀಯಾ?"

"ನಿದ್ದೆಮಾಡು. ನಾನು ಬೆಳಗ್ಗೆ ಐದು ಗಂಟೆಗೇ ಏಳ್ಬೇಕು" ಎಂದು ಹೇಳಿ ಅವನ ಮಾತಿಗೆ ತಡೆ ಹಾಕಿದಳು.

ದಮಾಸೊ ತನ್ನ ಮೊದಲಿನ ಸ್ವಭಾವಕ್ಕೇ ಹಿಂತಿರುಗಿದ್ದ. ಬೆಳಿಗ್ಗೆಯೆಲ್ಲ ಸಿಗರೇಟು ಸೇದುತ್ತಾ ಕಳೆದ. ಮಧ್ಯಾಹ್ನ ಊಟವಾದ ಮೇಲೆ ಸಣ್ಣ ನಿದ್ದೆ ಮಾಡಿ ಹೊರಗೆ ಹೋಗಲು ಸಿದ್ಧವಾಗತೊಡಗಿದ. ರಾತ್ರಿ ಕ್ಲಬ್ಬಿನಲ್ಲಿ ಬೇಸ್‌ಬಾಲ್ ಚಾಂಪಿಯನ್‌ಷಿಪ್ ಬಗ್ಗೆ ರೇಡಿಯೋ ವರದಿಯನ್ನು ಕೇಳಿದ. ಅವನಿಗೆ ಹೊಸ ಯೋಜನೆಗಳನ್ನು ರೂಪಿಸುವುದರಲ್ಲಿ ಎಷ್ಟು ಉತ್ಸಾಹವಿತ್ತೋ ಅಷ್ಟೇ ಉತ್ಸಾಹದಿಂದ ಅವುಗಳನ್ನು ಮರೆತುಬಿಡುವ ಸಾಮರ್ಥ್ಯವೂ ಇತ್ತು.

"ದುಡ್ಡೇನಾದರೂ ಇಟ್ಟಿದೀಯ ಎಂದು ಶನಿವಾರ ಕೇಳಿದ.?"

"ಹನ್ನೊಂದು ಪೆಸೊ ಇದೆ. ಬಾಡಿಗೆ ದುಡ್ಡು. ಅನಾ ಮೃದುವಾಗಿಯೇ ಹೇಳಿದಳು."

"ಹಾಗಾದರೆ ಒಂದು ಒಪ್ಪಂದ."

"ಏನು?"

"ಅದನ್ನ ನಂಗೆ ಸಾಲವಾಗಿ ಕೊಡು."

"ಉಹೂಂ ಬಾಡಿಗೆ ಕೊಡಬೇಕು."

"ಆಮೇಲೆ ಕೊಟ್ಟರಾಯಿತು."

ಅನಾ ಆಗದು ಎನ್ನುವಂತೆ ತಲೆ ಆಡಿಸಿದಳು. ದಮಾಸೊ ಅವಳ ಕೈ ಹಿಡಿದು ಆಗಷ್ಟೇ ಬೆಳಗಿನ ತಿಂಡಿ ತಿಂದಿದ್ದ ಆ ಟೇಬಲಿನಿಂದ ಎದ್ದು ಹೋಗದಂತೆ ತಡೆದ. ಒಂದು ಬಗೆಯ ವಿಚಿತ್ರ ಪ್ರೀತಿಯಿಂದ ಅವಳ ತೋಳು ತಟ್ಟುತ್ತಾ,

"ಒಂದೆರಡು ದಿನ ಅಷ್ಟೆ, ಕೊಟ್ಟಿರು. ಆ ಬಾಲುಗಳನ್ನ ಮಾರಿದ್ಮೇಲೆ ನಮಗೆ ಬೇಕಾದಷ್ಟು ದುಡ್ಡು ಸಿಕ್ಕುತ್ತೆ" ಎಂದ.

ಅನಾ ಜಪ್ಪಯ್ಯ ಎನ್ನಲಿಲ್ಲ.

ಆ ರಾತ್ರಿ ದಮಾಸೊ ಅವಳನ್ನು ಸಿನಿಮಾಕ್ಕೆ ಕರೆದುಕೊಂಡು ಹೋದ. ಮಧ್ಯಂತರ ಕಾಲದಲ್ಲಿ ಸ್ನೇಹಿತರ ಜೊತೆ ಮಾತಾಡುತ್ತಿರುವಾಗಲೂ ಅವಳ ಭುಜದ ಮೇಲಿಟ್ಟಿದ್ದ ಕೈಯನ್ನು ತೆಗೆಯಲಿಲ್ಲ. ಚೂರು ಪಾರು ನೋಡಿದ ಚಿತ್ರ. ಅದು ಮುಗಿದಾಗ ಅವನು ಸಹನೆ ಕಳೆದುಕೊಂಡಿದ್ದ.

"ನೀನು ದುಡ್ಡು ಕೊಡ್ಲೇ ಇದ್ದರೆ ನಾನು ಕದೀಬೇಕಷ್ಟೆ."

"ಅನಾ ಭುಜ ಕೊಡವಿದಳು. ಮೊದಲು ಯಾರು ಕೈಗೆ ಸಿಕ್ತಾರೋ ಅವರ ತಲೆ

ಒಡೀತೀನಿ" ಎಂದವನು ಹೊರಬರುತ್ತಿದ್ದ ಜನಜಂಗುಳಿಯ ಮಧ್ಯೆ ಅವಳನ್ನು ಮುಂದೆ ನೂಕುತ್ತಾ, "ಕೊಲೆ ಮಾಡ್ದೆ ಅಂತ ನನ್ನನ್ನ ಜೈಲಿಗೆ ಕಳಿಸ್ತಾರೆ" ಎಂದೂ ಹೇಳಿದ. ಅವಳು ಒಳಗೇ ನಕ್ಕಳು. ಆದರೆ ಮನಸ್ಸು ಮಾತ್ರ ಬದಲಾಯಿಸಲಿಲ್ಲ. ಅಬ್ಬರ, ಕೂಗಾಟಗಳ ನಡುವೆ ರಾತ್ರಿ ಕಳೆಯಿತು. ಮರುದಿನ ಬೆಳಗ್ಗೆ ಅವನು ಗಡಿಬಿಡಿಯಿಂದ ಬಟ್ಟೆ ಹಾಕಿಕೊಂಡು ಹೆಂಡತಿಯನ್ನು ದಾಟಿ ಹೋಗುತ್ತಿರುವಾಗ , ಗುರುಗುಟ್ಟಿದ.

"ಇನ್ನೆಂದೂ ವಾಪಸು ಬರೋಲ್ಲ ನಾನು."

ಆನಾ ಸಣ್ಣಗೆ ನಡುಗದೆ ಬೇರೆ ದಾರಿಯಿರಲಿಲ್ಲ.

"ಒಳ್ಳೇದಾಗಲಿ !" ಎಂದು ಅರಚಿದಳು.

ದಢಾರನೆ ಬಾಗಿಲೆಳೆದುಕೊಂಡು ಹೊರಬಂದ ಮೇಲೆ ದಮಾಸೋಗೆ ಖಾಲಿ ಖಾಲಿಯಾದ, ಕೊನೆಯಿಲ್ಲದ ಭಾನುವಾರ ತೆರೆದುಕೊಂಡಂತಾಯಿತು. ಮಾರುಕಟ್ಟೆಯಲ್ಲಿ ಫಳಫಳ ಹೊಳೆಯುವ ಪಿಂಗಾಣಿ ಪಾತ್ರೆಗಳು ಚರ್ಚಿನಲ್ಲಿ ಎಂಟುಗಂಟೆಯ ಮಾಸ್ ಮುಗಿಸಿಕೊಂಡು ಹಿಂತಿರುಗುತ್ತಿರುವ ಹೆಂಗಸರು. ಮಕ್ಕಳು, ಎಲ್ಲರದೂ ರಂಗುರಂಗಾದ ಬಟ್ಟೆಬರೆ. ಇಡೀ ಅಂಗಡಿಬೀದಿ ಸಂತೋಷದಿಂದ ಕುಣಿಯುತ್ತಿದ್ದಂತಿತ್ತು. ಆದರೆ ಗಾಳಿಯ ತುಂಬ ಧಗೆಯೆದ್ದು ಉಸಿರುಕಟ್ಟುವ ಸ್ಥಿತಿ.

ಅವನು ಇಡೀ ದಿನವನ್ನು ಕ್ಲಬ್ಬಿನಲ್ಲಿ ಕಳೆದ. ಬೆಳಿಗ್ಗೆ ಒಂದಷ್ಟು ಜನ ಇಸ್ಪೀಟಾಡಿದರು. ಮಧ್ಯಾಹ್ನ ಊಟದ ಹೊತ್ತಿಗೆ ಮುಂಚೆ ಸ್ವಲ್ಪ ಹೊತ್ತು ಗಿರಾಕಿಗಳ ನೂಕುನುಗ್ಗಲು. ಆದರೆ ಆ ಜಾಗ ತನ್ನ ಆಕರ್ಷಣೆ ಕಳೆದುಕೊಂಡಿದ್ದಂತೂ ಸ್ಪಷ್ಟ. ಮುಸ್ಸಂಜೆಯ ಹೊತ್ತಿಗೆ ಮಾತ್ರ ರೇಡಿಯೋದಲ್ಲಿ ಬೇಸ್‌ಬಾಲ್ ಕಾರ್ಯಕ್ರಮ ಪ್ರಸಾರವಾಗುತ್ತಿರುವಾಗ ಅಲ್ಲಿ ಮೊದಲಿನ ಲವಲವಿಕೆ ಇತ್ತು.

ಕ್ಲಬ್ಬಿನ ಬಾಗಿಲು ಮುಚ್ಚಿದ ಮೇಲೆ ಅವನಿಗೆ ಎಲ್ಲಿ ಹೋಗುವುದೆಂದು ತಿಳಿಯದಾಯಿತು. ಈಗ ಅಂಗಡಿ ಬೀದಿ ಖಾಲಿ ಖಾಲಿ. ಸುಖ ತುಳುಕಿಸುವಂತೆ ಕೇಳಿಸುತ್ತಿದ್ದ ಹಾಡಿನ ಜಾಡನ್ನೇ ಹಿಡಿದು ಬಂದರಿಗೆ ಸಮಾನಾಂತರವಾಗಿ ಸಾಗುತ್ತಿದ್ದ ರಸ್ತೆಯಲ್ಲಿ ನಡೆದ. ಆ ರಸ್ತೆಯ ಅಂಚಿನಲ್ಲಿ ಒಂದು ಡ್ಯಾನ್ಸ್ ಹಾಲು. ಭಾರೀ ಹಾಲೇ. ಬಣ್ಣ ಕಳೆದ ಕಾಗದದ ಹೂಹಾರಗಳಿಂದ ಅಲಂಕೃತವಾಗಿದ್ದ ಹಾಲು. ಹಿಂಭಾಗದಲ್ಲಿ ಮರದ ವೇದಿಕೆಯ ಮೇಲೆ ಒಂದು ಬ್ಯಾಂಡು. ಎಲ್ಲೆಲ್ಲೂ ಮೇಕಪ್ಪಿನ ಉಸಿರು ಕಟ್ಟಿಸುವಂಥ ವಾಸನೆ.

ದಮಾಸೊ ಕೌಂಟರಿನ ಬಳಿ ಕುಳಿತುಕೊಂಡ. ಒಂದು ಹಾಡು ಮುಗಿದ ತಕ್ಷಣ ಸಿಂಬಲ್‌ಗಳನ್ನು ಬಾರಿಸುತ್ತಿದ್ದ ಹುಡುಗ ಕುಣಿಯುತ್ತಿದ್ದವರ ನಡುವೆ ನುಸುಳಿ ಅವರು ಕೊಟ್ಟ ಕಾಸು ತೆಗೆದುಕೊಳ್ಳತೊಡಗಿದ. ಹಾಲಿನ ಮಧ್ಯಭಾಗದಲ್ಲಿದ್ದ ಹುಡುಗಿಯೊಬ್ಬಳು ತನ್ನ ಜೊತೆಗಾರನನ್ನು ಬಿಟ್ಟು ದಮಾಸೋನ ಬಳಿಗೆ ಬಂದಳು.

"ಏನು ಸಮಾಚಾರ, ವ್ಯಾಲೆಂತಿನೋ?"

ಅವನು ತನ್ನ ಪಕ್ಕದಲ್ಲಿದ್ದ ಸೀಟಿನ ಕಡೆ ಬೆರಳು ಮಾಡಿದ. ಮುಖಕ್ಕೆ ಪೌಡರ್ ಬಳಿದುಕೊಂಡು, ಕಿವಿಯಲ್ಲಿ ಕಾರ್ನೇಷನ್ ಇಟ್ಟುಕೊಂಡಿದ್ದ ಬಾರ್ಟೆಂಡರ್ ಕೀರಲು ಗಂಟಲಿನಲ್ಲಿ ಕೇಳಿದಳು.

"ಏನು ತೊಗೊತೀರಿ?"

ಹುಡುಗಿ ದಮಾಸೊ ಕಡೆ ತಿರುಗಿದಳು.

"ಏನು ಕುಡಿಯೋಣ?"

"ಏನೂ ಬೇಡ"

ಇವತ್ತು ನಾನು ಕೊಡಿಸ್ತೇನೆ.

"ಅದಕ್ಕಲ್ಲ. ನಂಗೆ ತುಂಬಾ ಹಸಿವಾಗ್ತಿದೆ."

ಇಬ್ಬರೂ ಹಾಲಿನ ಹಿಂಭಾಗದಲ್ಲಿದ್ದ ಊಟದ ವಿಭಾಗಕ್ಕೆ ಹೋದರು. ಹುಡುಗಿಯ ಮೈ ನೋಡಿದರೆ ಇನ್ನೂ ಸಣ್ಣವಳೇ ಎನ್ನಬೇಕು. ಆದರೆ ಆ ಪೌಡರು, ಲಿಪ್‌ಸ್ಟಿಕ್ ಎಲ್ಲ ನೋಡಿದ ಮೇಲೆ ಅವಳ ಸರಿಯಾದ ವಯಸ್ಸು ತಿಳಿಯುವುದು ಕಷ್ಟ. ಊಟವಾದ ಮೇಲೆ ದಮಾಸೊ ಅವಳ ಹಿಂದೆಯೇ ಕತ್ತಲು ತುಂಬಿದ ಅಂಗಳದ ಹಿಂಭಾಗಕ್ಕೆ ಹೋದ. ಅಲ್ಲಿ ಮಲಗಿದ ಜಾನುವಾರುಗಳ ಉಸಿರಾಟ ಕೇಳಿಸುವಂತಿತ್ತು. ಹಾಸಿಗೆಯ ಮೇಲೆ ಒಂದು ಸಣ್ಣ ಮಗು ಅದಕ್ಕೆ ಬಣ್ಣ ಬಣ್ಣದ ಚಿಂದಿ ಬಟ್ಟೆ ಹೊದಿಸಲಾಗಿತ್ತು. ಹುಡುಗಿ ಆ ಚಿಂದಿಯನ್ನು ಮರದ ಪೆಟ್ಟಿಗೆಯೊಂದರಲ್ಲಿ ಹಾಕಿ, ಅದರ ಮೇಲೆ ಮಗುವನ್ನು ಮಲಗಿಸಿದಳು. ಆಮೇಲೆ ಆ ಪೆಟ್ಟಿಗೆಯನ್ನು ನೆಲದ ಮೇಲಿಟ್ಟಳು.

"ಅದನ್ನ ಇಲಿ ತಿಂದು ಹಾಕುತ್ತೆ, ಅಷ್ಟೆ" ಎಂದ ದಮಾಸೊ.

"ಇಲ್ಲ ತಿನ್ನೋಲ್ಲ."

ಅವಳು ತನ್ನ ಕೆಂಪು ಬಟ್ಟೆ ಬಿಚ್ಚಿ ಹಾಕಿ, ದೊಡ್ಡ ದೊಡ್ಡ ಹಳದಿ ಹೂಗಳಿದ್ದ ಇನ್ನೊಂದು ಬಟ್ಟೆ ಹಾಕಿಕೊಂಡಳು.

"ಯಾರು, ಈ ಮಗುವಿನ ಅಪ್ಪ?" ಎಂದು ಕೇಳಿದ ದಮಾಸೊ.

"ಯಾರೋ, ನಂಗಂತೂ ಒಂದು ಚೂರೂ ಸುಳಿವು ಸಿಕ್ಕಿಲ್ಲ" ಎಂದವಳು ಬಾಗಿಲ ಬಳಿ ನಿಂತು "ಬಂದ್ಬಿಟ್ಟೆ" ಎಂದು ಮಾಯವಾದಳು.

ಅವಳು ಬಾಗಿಲಿಗೆ ಬೀಗ ಹಾಕುತ್ತಿರುವ ಸದ್ದು ಕೇಳಿಸಿತು. ಅವನು ಬಟ್ಟೆ ಕಳಚದೆ ಹಾಗೇ ಹಾಸಿಗೆಯ ಮೇಲೆ ಉರುಳಿಕೊಂಡು ಹಲವಾರು ಸಿಗರೇಟು ಸೇದಿದ. ಕೇಳಿಬರುತ್ತಿದ್ದ ಬೇಸ್ ಡ್ರಮ್ಮಿನ ತಾಳಕ್ಕೆ ಹಾಸಿಕೆಯ ಸ್ಪ್ರಿಂಗು ಕಂಪಿಸುತ್ತಿತ್ತು. ಯಾವಾಗ ನಿದ್ದೆ ಬಂತೋ ಅವನಿಗೇ ತಿಳಿಯಲಿಲ್ಲ. ಎಚ್ಚರವಾದಾಗ ಸಂಗೀತ ನಿಂತುಹೋಗಿದ್ದರಿಂದಲೋ ಏನೊ ರೂಮು ಸಾಕಷ್ಟು ವಿಶಾಲವಾಗಿರುವಂತೆ ಅನಿಸಿತು.

ಆ ಹುಡುಗಿ ಹಾಸಿಗೆಯ ಪಕ್ಕದಲ್ಲೆ ಬಟ್ಟೆ ಕಳಚುತ್ತಿದ್ದಳು.

"ಎಷ್ಟು ಗಂಟೆ?"

"ನಾಲ್ಕು ಗಂಟೆ ಇರಬೇಕು. ಮಗು ಏನಾದರೂ ಅತ್ತಿತಾ?"

"ಇಲ್ಲ ಅನ್ಸುತ್ತೆ."

ಅವಳು ಅವನಿಗೆ ಒತ್ತಿಕೊಂಡೇ ಮಲಗಿದಳು. ಎವೆಯಿಕ್ಕದೆ ಅವನ ಕಣ್ಣುಗಳನ್ನೇ ನೋಡುತ್ತಿದ್ದವಳು. ಅವನ ಷರ್ಟಿನ ಗುಂಡಿ ಬಿಚ್ಚುತ್ತಿರುವಾಗ ಮುಖವನ್ನು ಸ್ವಲ್ಪ ಬೇರೆ ಕಡೆ ತಿರುಗಿಸಿದಳು. ದಮಾಸೋಗೆ ಇವಳು ತುಂಬ ಕುಡಿದಿದಾಳೆ ಎನ್ನಿಸಿತು. ದೀಪ ಆರಿಸಲು ಮುಂದಾದ.

"ಇರಲಿ ಬಿಡು. ನಿನ್ನ ಕಣ್ಣೇ ನೋಡ್ತಾ ಇರಬೇಕು ಅನ್ಸುತ್ತೆ" ಎಂದಳು.

ಬೆಳಕು ಹರಿದಂತೆ ರೂಮಿನಲ್ಲಿ ಹಳ್ಳಿಗರ ಮಾತುಗಳು ತುಂಬಿಕೊಂಡುವು. ಮಗು ಅತ್ತಿತು. ಹುಡುಗಿ ಅದನ್ನು ಹಾಸಿಗೆಗೆ ಕರೆದೊಯ್ದು, ಮೊಲೆ ಕೊಟ್ಟು, ಒಂದು ಹಾಡು ಹೇಳಿ ಸಮಾಧಾನ ಮಾಡಿದಳು. ಮತ್ತೆ ಅವರಿಗೆ ನಿದ್ದೆ, ದಮಾಸೋಗೆ ಹುಡುಗಿ ಸುಮಾರು ಏಳುಗಂಟೆಯ ಹೊತ್ತಿಗೆ ಎಚ್ಚರಾಗಿ, ಹೊರಗೆ ಹೋದದ್ದೂ ತಿಳಿಯಲಿಲ್ಲ. ಅವಳು ಮತ್ತೆ ಬಂದಾಗ ಕೈಯಲ್ಲಿ ಮಗು ಇರಲಿಲ್ಲ.

"ಎಲ್ರೂ ಬಂದರು ಕಡೆ ಹೋಗ್ತಿದಾರೆ ಎಂದಳು."

ಅವನಿಗೆ ಇಡೀ ರಾತ್ರಿ ತಾನು ಒಂದು ಗಂಟೆ ಕೂಡ ಸರಿಯಾಗಿ ನಿದ್ದೆ ಮಾಡಿಲ್ಲ ಎನಿಸಿತು.

"ಯಾಕೆ?"

"ಅದೇ, ಆ ಬಾಲುಗಳನ್ನ ಕದ್ದಂತಲ್ಲ ಆ ನೀಗ್ರೊ, ಅವನನ್ನ ನೋಡೋಕೆ. ಇವತ್ತು ಅವನನ್ನ ಕರಕೊಂಡು ಹೋಗ್ತಿದಾರೆ."

ದಮಾಸೊ ಒಂದು ಸಿಗರೇಟು ಹಚ್ಚಿಕೊಂಡ.

"ಪಾಪದವನು" ಎಂದ ಹುಡುಗಿ ನಿಟ್ಟುಸಿರಿಟ್ಟಳು.

"ಯಾಕೆ ಪಾಪದವನು? ಕಳ್ತನ ಮಾಡು ಅಂತ ಯಾರು ಹೇಳಿದ್ರೂ ಅವನಿಗೆ?"

ಹುಡುಗಿ ಅವನ ಎದೆಯ ಮೇಲೆ ತಲೆಯಿಟ್ಟುಕೊಂಡು ಒಂದು ಕ್ಷಣ ಏನೋ ಯೋಚಿಸಿ, ನಂತರ ಮೆಲ್ಲಗೆ ಹೇಳಿದಳು.

"ಕದ್ದೋನು ಅವನಲ್ಲ."

"ಯಾರು ಹೇಳಿದ್ರು?"

"ನಂಗೊತ್ತು.ಕಳ್ತನ ಆದ ರಾತ್ರಿ ಅವನು ಗ್ಲೋರಿಯಾ ಜೊತೆ ಇದ್ದ. ಮಾರನೇ ದಿನ ಪೂರಾ ರಾತ್ರಿಯವರೆಗೆ ಅವಳ ರೂಮಲ್ಲೇ ಇದ್ದ. ಆಮೇಲೆ ಅವನ್ನ ಥಿಯೇಟರಿನಲ್ಲಿ ಅರೆಸ್ಟ್ ಮಾಡಿದ್ರು ಅಂತ ಹೇಳಿದರಪ್ಪ."

"ಗ್ಲೋರಿಯಾ ಹಾಗಂತ ಪೋಲೀಸ್ನೋರಿಗೆ ಹೇಳ್ಬೇಕಾಗಿತ್ತು."

"ನೀಗ್ರೋ ಹಾಗಂತ ಹೇಳಿದ್ನಂತೆ. ಮೇಯರ್ ಗ್ಲೋರಿಯಾಗಳ ರೂಮಿಗೆ ಹೋಗಿ, ಅಲ್ಲಿದ್ದದ್ದನ್ನೆಲ್ಲ ಎಳೆದು ಹಾಕಿ, ನೀಗ್ರೋ ಜೊತೆ ಶಾಮೀಲಾಗಿರೋದ್ರಿಂದ ನಿನ್ನನ್ನ ಜೈಲಿಗೆ ಕಳಿಸ್ತೀನಿ ಅಂತ ಹೆದರಿಸಿದನಂತೆ. ಇಪ್ಪತ್ತು ಪೆಸೊ ಕೊಟ್ಟಮೇಲೆ ಎಲ್ಲ ತಣ್ಣಗಾಯ್ತು."

ದಮಾಸೊ ಎಂಟು ಗಂಟೆಗೆ ಸ್ವಲ್ಪ ಮುಂಚೆ ಹಾಸಿಗೆ ಬಿಟ್ಟೆದ್ದ.

"ಇಲ್ಲೇ ಇರು, ಊಟಕ್ಕೆ ಚಿಕನ್ ಮಾಡ್ತೀನಿ" ಎಂದಳು ಹುಡುಗಿ.

ಅವನು ಬಾಚಣಿಗೆಯನ್ನು ಪ್ಯಾಂಟಿನ ಹಿಂಬದಿಯ ಜೇಬಿಗೆ ಸೇರಿಸುವ ಮುಂಚೆ ಕೈಯಲ್ಲಿ ಅದನ್ನು ಆಡಿಸಿದ. "ಸಾಧ್ಯವಿಲ್ಲ" ಎಂದವನು ಅವಳ ಕೈಹಿಡಿದು ಹತ್ತಿರ ಎಳೆದುಕೊಂಡ. ಹುಡುಗಿ ಆಗಲೇ ಮುಖ ತೊಳೆದಿದ್ದರಿಂದ ಗೊತ್ತಾಯಿತು. ಇನ್ನೂ

ಸಣ್ಣವಳೇ. ಅವಳ ದೊಡ್ಡದಾದ ಕಪ್ಪು ಕಣ್ಣುಗಳಲ್ಲಿ ಒಂದು ರೀತಿಯ ಅಸಹಾಯಕತೆ ಇಣುಕುತ್ತಿತ್ತು. ಅವನ ಸೊಂಟ ಬಳಸಿ ,

"ಇಲ್ಲೇ ಇರು", ಎಂದು ಒತ್ತಾಯ ಮಾಡಿದಳು.

"ಎಂದೆಂದಿಗೂನಾ?"

ಸ್ವಲ್ಪ ನಾಚಿಕೊಂಡು ದೂರ ಸರಿದವಳು "ನಿಂಗೆ ತಮಾಷೆ" ಎಂದಳು.

❄ ❄ ❄

ಆನಾಗೆ ಆವೊತ್ತು ಬೆಳಿಗ್ಗೆ ಸುಸ್ತೋ ಸುಸ್ತು. ಆದರೆ ಊರಿನ ತುಂಬ ಹಬ್ಬುತ್ತಿದ್ದ ಉತ್ಸಾಹ ಅಂಟುಜಾಡ್ಯವಾಗಿಬಿಟ್ಟಿತ್ತು. ಎಂದಿಗಿಂತ ಮುಂಚೆಯೇ ಆ ವಾರ ಒಗೆಯಬೇಕಾಗಿದ್ದ ಬಟ್ಟೆಗಳನ್ನು ಕಲೆ ಹಾಕಿಕೊಂಡು, ನೀಗ್ರೋನನ್ನು ನೋಡುವುದಕ್ಕಾಗಿ ಬಂದರಿಗೆ ಹೋದಳು. ಹೊರಡಲು ಸಿದ್ಧವಾಗಿ ನಿಂತ ಲಾಂಚುಗಳ ಪಕ್ಕದಲ್ಲಿ ಜನ ಗುಂಪು ಗುಂಪಾಗಿ ಸಹನೆಯಿಲ್ಲದೆ ಕಾಯುತ್ತಿದ್ದರು. ದಮಾಸೊ ಕೂಡ ಅಲ್ಲೇ ಇದ್ದ.

ಆನಾ ತೋರು ಬೆರಳಿನಿಂದ ಅವನ ಪಕ್ಕೆ ತಿವಿದಳು.

ಬೆಚ್ಚಿಬಿದ್ದ ಅವನು "ನೀನೇನ್ಮಾಡ್ತಿದೀಯ ಇಲ್ಲಿ?" ಎಂದು ಕೇಳಿದ.

"ನಿನ್ನನ್ನ ಬೀಳ್ಕೊಡೋಕೆ ಬಂದೆ."

ದಮಾಸೊ ಬೀದಿ ದೀಪದ ಕಂಭದ ಮೇಲೆ ಗೆಣ್ಣುಗಳಿಂದ ಬಡಿದು,

"ನಿನ್ನ ಮನೆ ಹಾಳಾಗ" ಎಂದ.

ಸಿಗರೇಟೊಂದನ್ನು ಹಚ್ಚಿಕೊಂಡ ಮೇಲೆ ಖಾಲಿ ಪ್ಯಾಕನ್ನು ನೀರಿಗೆ ಎಸೆದ. ಆನಾ ತನ್ನ ಚೆಮೀಸ್‌ನಿಂದ ಇನ್ನೊಂದು ಪ್ಯಾಕ್ ತೆಗೆದು ಅವನ ಷರ್ಟಿನ ಜೇಬಿನಲ್ಲಿಟ್ಟಳು. ದಮಾಸೊ ಮೊಟ್ಟಮೊದಲ ಬಾರಿಗೆ ನಕ್ಕು, "ನಿಂಗೆಂದೂ ಬುದ್ದಿ ಬರೋಲ್ಲ" ಎಂದ.

ಆನಾ "ಹಾಹಾಹಾ" ಎಂದು ನಕ್ಕಳು.

ಸ್ವಲ್ಪ ಹೊತ್ತಾದ ಮೆಲೆ ನೀಗ್ರೋವನ್ನು ಲಾಂಚಿನ ಮೇಲೆ ಹತ್ತಿಸಿದರು. ಬೆನ್ನ ಹಿಂದೆ ಅವನ ಕೈ ಕಟ್ಟಿ ಹಾಕಿ, ಅಂಗಡಿಬೀದಿಯ ಉದ್ದಕ್ಕೂ ಅವನನ್ನು ಮೆರವಣಿಗೆ ಮಾಡಿದ್ದರು. ಕೈಗಳನ್ನು ಕಟ್ಟಿದ ಹಗ್ಗದ ಇನ್ನೊಂದು ತುದಿಯನ್ನು ಪೋಲೀಸಿನವನೊಬ್ಬ ಹಿಡಿದುಕೊಂಡಿದ್ದ. ರೈಫಲ್‌ಗಳನ್ನು ಹಿಡಿದುಕೊಂಡಿದ್ದ ಇನ್ನಿಬ್ಬರು ಪೋಲೀಸರು ಅವನ

ಪಕ್ಕದಲ್ಲಿಯೇ ನಡೆಯುತ್ತಾ ಬಂದಿದ್ದರು. ನೀಗ್ರೋನ ಮೈಮೇಲೆ ಷರ್ಟೇ ಇರಲಿಲ್ಲ. ಕೆಳತುಟಿ ಹರಿದು ಹೋಗಿತ್ತು. ಮುಷ್ಟಿಯುದ್ಧದಲ್ಲಿ ಭಾಗವಹಿಸಿದ್ದನೇನೋ ಎನಿಸುವಂತೆ ಒಂದು ಕಣ್ಣಿನ ಹುಬ್ಬು ಊದಿಕೊಂಡಿತ್ತು. ಅವನು ಒಂದು ರೀತಿ ಅನಾಸಕ್ತಿಯ ಗಾಂಭೀರ್ಯದಿಂದ ಜನರ ಗುಂಪನ್ನು ನೋಡದೆ ನಡೆಯುತ್ತಿದ್ದ. ಕ್ಲಬ್ಬಿನ ಬಾಗಿಲಿನಲ್ಲಿ ಬಹಳಷ್ಟು ಜನ ನೆರೆದಿದ್ದರು. ನೀಗ್ರೋನನ್ನು ಕರೆದು ತರುತ್ತಿದ್ದಾಗ ಮಾಲಿಕ ತಲೆ ಆಡಿಸುತ್ತಾ ಮೌನವಾಗಿ ಸಾಗುತ್ತಿದ್ದ ಅವನನ್ನೇ ನೋಡಿದ. ನೆರೆದವರು ಒಂದು ಬಗೆಯ ಆತಂಕದಿಂದ ಮಾಲಿಕನನ್ನೇ ನೋಡಿದರು.

ತಕ್ಷಣ ಲಾಂಚು ಹೊರಟಿತು. ಡೆಕ್ಕಿನ ಮೇಲಿದ್ದ ಒಂದು ಎಣ್ಣೆಯ ಡ್ರಮ್ಮಿಗೆ ನದಿಯ ನಡುಭಾಗದಲ್ಲಿ ತಿರುಗಿ, ಕೊನೆಯ ಬಾರಿಗೆ ಶಿಳ್ಳು ಹಾಕಿದಾಗ ನೀಗ್ರೋನ ಬೆನ್ನು ಫಳ ಫಳ ಮಿಂಚಿತು.

"ಪಾಪದವನು" ಎಂದು ಪಿಸುಗುಟ್ಟಿದಳು ಆನಾ.

ಹತ್ತಿರದಲ್ಲಿ ಇದ್ದವರು ಯಾರೋ, "ಕಳ್ಳ ಸೂಳೆಮಕ್ಕಳು. ಅವನು ಕಳ್ಳನಾಗಿಲ್ದೇ ಇದ್ದಿದ್ರೆ ಇಷ್ಟೆಲ್ಲ ಬಿಸಿಲು ತಡೆಯೋಕಾಗ್ತಿತ್ತಾ?" ಎಂದರು.

ಆ ಮಾತು ಆಡಿದವಳು ಅಸಾಧ್ಯವಾಗಿ ಮೈ ಬೆಳೆಸಿಕೊಂಡ ಒಬ್ಬ ಧಡೂತಿ ಹೆಂಗಸೆಂದು ತಿಳಿದಾಗ ದಮಾಸೊ ಅಂಗಡಿ ಬೀದಿಯ ಕಡೆ ಹೆಜ್ಜೆಹಾಕತೊಡಗಿದ. ನೀನು ತುಂಬ ಮಾತಾಡ್ತೀಯ ಎಂದು ಆನಾಳ ಕಿವಿಯಲ್ಲಿ ಭುಸುಗುಟ್ಟಿದ. "ಇನ್ನು ಏನೇನು ನಡೀತು ಅಂತ ಜೋರಾಗಿ ಒದರೋದೊಂದು ಬಾಕಿ ಇದೆ ಅಷ್ಟೆ." ಆನಾ ಕ್ಲಬ್ಬಿನವರೆಗೂ ಅವನ ಜೊತೆಯಲ್ಲೇ ಹೋದಳು. ಅಲ್ಲಿಂದ ಒಬ್ಬಳೇ ಹೊರಡುವ ಮುನ್ನ. "ಹೋಗಲಿ ಮನೆಗೆ ಹೋಗಿ ಬಟ್ಟೇನಾದ್ರೂ ಬದಲಾಯಿಸು. ಒಳ್ಳೆ ತಿರುಪೆ ಎತ್ತೋನ ಥರ ಕಾಣಿಸ್ತಿದೀಯ" ಎಂದಳು.

ನೀಗ್ರೋನನ್ನು ಕರೆದೊಯ್ದ ಘಟನೆಯಿಂದ ಪುಲಕಗೊಂಡ ಅನೇಕರು ಕ್ಲಬ್ಬಿಗೆ ಹೋದರು. ಅನೇಕ ಟೇಬಲುಗಳ ಬಳಿ ಕುಳಿತವರಿಗೆ ರೋಕೆ ಒಬ್ಬನೇ ತಿಂಡಿ ತೀರ್ಥ ಸರಬರಾಜು ಮಾಡಬೇಕಾಯಿತು. ದಮಾಸೊ, ಅವನು ತನ್ನ ಹತ್ತಿರದಿಂದ ಹಾದು ಹೋಗುವುದನ್ನೆ ಕಾಯುತ್ತಿದ್ದ.

"ಏನಾದರೂ ಸಹಾಯ ಮಾಡಲಾ?"

ರೋಕೆ ಅರ್ಧ ಡಜನ್ ಬಿಯರು ಬಾಟಲುಗಳನ್ನೂ, ಗ್ಲಾಸುಗಳನ್ನೂ ಅವನ ಮುಂದಿಟ್ಟು "ಥ್ಯಾಂಕ್ಸ್ ಮರಿ" ಎಂದ.

ದಮಾಸೊ ಬಾಟಲುಗಳನ್ನು ಟೇಬಲುಗಳಿಗೆ ತೆಗೆದುಕೊಂಡು ಹೋದ. ಅನೇಕ ಆರ್ಡರುಗಳನ್ನು ತೆಗೆದುಕೊಂಡು, ಅವರೆಲ್ಲ ಮಧ್ಯಾಹ್ನ ಊಟಕ್ಕೆ ಮನೆಗಳಿಗೆ ಹೋಗುವವರೆಗೂ ಬಿಯರನ್ನು ಸರಬರಾಜು ಮಾಡಿದ. ಬೆಳಗಿನ ಜಾವ ರೂಮಿಗೆ ಹಿಂತಿರುಗಿ ಬಂದಾಗ ಇವನು ರಾತ್ರಿಯೆಲ್ಲ ಕುಡಿದಿದ್ದಾನೆ ಎಂದುಕೊಂಡ ಆನಾ. ಅವನ ಕೈಯನ್ನು ತನ್ನ ಹೊಟ್ಟೆಯ ಮೇಲಿಟ್ಟುಕೊಂಡು,

"ನೋಡು, ಏನಾದ್ರೂ ಅನ್ಸುತ್ತಾ?" ಎಂದಳು.

ದಮಾಸೊ ಯಾವುದೇ ಉತ್ಸಾಹ ತೋರಿಸಲಿಲ್ಲ.

"ನೋಡು, ಈಗ ಅದು ಒದೀತಾ ಇದೆ. ರಾತ್ರಿಯೆಲ್ಲ ಸಣ್ಣಕ್ಕೆ ಒದೀತಾನೇ ಇರುತ್ತೆ" ಎಂದಳು.

ಆಗಲೂ ಅವನ ಪ್ರತಿಕ್ರಿಯೆ ಸೊನ್ನೆ. ತನ್ನ ಬಗೆಗೇ ಏನೋ ಯೋಚಿಸುತ್ತಿದ್ದವನಂತೆ ಮರುದಿನ ಮನೆಬಿಟ್ಟು ಹೋದವನು ಮಧ್ಯರಾತ್ರಿಯವರೆಗೂ ಬರಲಿಲ್ಲ. ಇದೇ ರೀತಿ ಒಂದು ವಾರ ಕಳೆಯಿತು. ಅಪ್ಪಿತಪ್ಪಿ ಕೆಲವು ಗಳಿಗೆ ಮನೆಯಲ್ಲಿದ್ದಾಗಲೂ ಅವನಿಗೆ ಹಾಸಿಗೆಯ ಮೇಲೆ ಮಲಗಿ ಸಿಗರೇಟು ಸೇದುವುದೇ ಕೆಲಸ. ಮುಖಕೊಟ್ಟು ಮಾತಾಡುತ್ತಿರಲಿಲ್ಲ. ಆನಾ ಗಂಡನನ್ನೇ ಇನ್ನಷ್ಟು ಹೆಚ್ಚು ಗಮನಿಸತೊಡಗಿದಳು. ಇಬ್ಬರೂ ಒಟ್ಟಿಗೆ ಇರತೊಡಗಿದ ಮೇಲೆ ಒಂದು ದಿನ ದಮಾಸೋ ಹೀಗೇ ಇದ್ದ. ಆಗ ಅವಳಿಗೆ ಇಂಥ ಸಂದರ್ಭಗಳಲ್ಲಿ ಅವನನ್ನು ಅವನ ಪಾಡಿಗೇ ಬಿಟ್ಟುಬಿಡಬೇಕೆಂದು ಗೊತ್ತಿರಲಿಲ್ಲ. ದಮಾಸೊ ಅಂದು ಅವಳನ್ನು ಹಾಸಿಗೆಯ ಮೇಲೆ ಕೆಡವಿಕೊಂಡು ರಕ್ತ ಬರುವ ಹಾಗೆ ಮುಖ ಮೂತಿ ನೋಡದೆ ಗುದ್ದಿಬಿಟ್ಟಿದ್ದ.

ಈಗ ಅವಳು ಸುಮ್ಮನೆ ಕಾಯುತ್ತಾ ಕುಳಿತಳು. ರಾತ್ರಿಯಾದಾಗ ದೀಪದ ಪಕ್ಕದಲ್ಲಿ ಒಂದು ಸಿಗರೇಟು ಪ್ಯಾಕು ಇಟ್ಟಳು. ಯಾಕೆಂದರೆ, ಅವನು ಹಸಿವು, ನೀರಡಿಕೆಗಳನ್ನಾದರೂ ಮರೆತಾನು. ಸಿಗರೇಟು ಸೇದುವುದನ್ನು ಮಾತ್ರ ಹತ್ತಿಕ್ಕಲಾರ ಎಂದು ಅವಳಿಗೆ ಗೊತ್ತಾಗಿತ್ತು. ಕೊನೆಗೆ, ಜುಲೈ ತಿಂಗಳ ಮಧ್ಯದ ಒಂದು ದಿನ ದಮಾಸೊ ಮುಸ್ಸಂಜೆಯ ಹೊತ್ತಿಗೇ ಮನೆಗೆ ಬಂದ. ಈ ಹೊತ್ತಿನಲ್ಲಿ ತನಗಾಗಿ ಹುಡುಕಿಕೊಂಡು ಬರಬೇಕಾದರೆ ಇವನೇನೋ ಗೊಂದಲದಲ್ಲಿ ಸಿಕ್ಕಿ ಹಾಕಿಕೊಂಡಿರಬೇಕು

ಎಂದು ಹೆದರಿಕೊಂಡಳು ಆನಾ. ಇಬ್ಬರೂ ಮಾತಿಲ್ಲದೆ ಉಂಡರು. ಹಾಸಿಗೆ ಸೇರುವುದಕ್ಕೆ ಸ್ವಲ್ಪ ಮುಂಚೆ ಅವನು ಯಾವುದೋ ದಿಗ್ಭ್ರಮೆಗೆ ಗುರಿಯಾದವನಂತೆ ಬಡಬಡಿಸಿದ.

"ನಾನು ನಿನ್ನ ಬಿಟ್ಟು ಹೋಗ್ಬೇಕು ಅಂತಿದೇನೆ."

"ಎಲ್ಲಿಗೆ?"

"ಎಲ್ಲಿಗಾದರೂ."

ಆನಾ ರೂಮಿನ ಸುತ್ತ ಕಣ್ಣಾಡಿಸಿದಳು. ಗೋಡೆಯ ತುಂಬ ಸಿನಿಮಾ ತಾರೆಯರೇ ರಾರಾಜಿಸುವ ಹಾಗೆ ಅವಳೇ ಪತ್ರಿಕೆಯ ಮುಖಪುಟಗಳನ್ನು ಕತ್ತರಿಸಿ ಅಂಟಿಸುತ್ತಿದ್ದಳು. ಈಗ ಆ ಚಿತ್ರಗಳೆಲ್ಲ ಬಣ್ಣ ಕಳೆದುಕೊಂಡು ಮಂಕಾಗಿದ್ದುವು. ಆ ಹಾಸಿಗೆಯಲ್ಲಿ ಮಲಗಿ ಹೋದವರ ಲೆಕ್ಕವೂ ತಪ್ಪಿಹೋಗಿತ್ತು. ಹಾಗೆ ಒಬ್ಬೊಬ್ಬರಾಗಿ ಹೊರಟು ಹೋದವರು ತಮ್ಮ ಜೊತೆ ಆ ಚಿತ್ರಗಳ ಬಣ್ಣವನ್ನೂ ಕೊಂಡು ಹೋದಂತಿತ್ತು.

"ನನ್ನ ಸಹವಾಸ ಸಾಕು ಅನ್ನಿಸ್ತಿದೆಯಾ" ಎಂದು ಕೇಳಿದಳು.

"ಇಲ್ಲ. ನಂಗೆ ಈ ಊರೇ ಬೇಜಾರಾಗಿ ಹೋಗಿದೆ."

"ಎಲ್ಲ ಊರುಗಳೂ ಹೀಗೇನೆ."

"ಇಲ್ಲಿ ಆ ಬಾಲುಗಳನ್ನು ಮಾರೋ ಹಾಗಿಲ್ಲ."

"ಆ ಬಾಲುಗಳ ಸುದ್ದಿ ಬಿಟ್ಟುಬಿಡು. ದೇವರು ನಂಗೆ ಎಷ್ಟು ದಿನ ಈ ಲಾಂಡ್ರಿ ನಡೆಸೋ ಶಕ್ತಿ ಕೊಡ್ತಾನೋ ಅಷ್ಟು ದಿನ ನೀನೇನೂ ಸಾಹಸ ಮಾಡ್ಬೆ ಇರಬಹುದು." ಸ್ವಲ್ಪ ತಡೆದು ಮತ್ತೆ ಮೃದುವಾಗಿ ಹೇಳಿದಳು.

"ಆ ಬಾಲು ತರೋ ವಿಚಾರ ನಿಂಗೆ ಹೇಗೆ ಹೊಳೀತೋ ನಂಗೆ ಗೊತ್ತಾಗ್ತಾ ಇಲ್ಲ."

ದಮಾಸೊ ಮಾತಾಡುವ ಮುಂಚೆ ಸಿಗರೇಟು ಸೇದಿ ಮುಗಿಸಿದ.

"ತುಂಬ ಸುಲಭವಾಗಿತ್ತು. ಅದು ಯಾಕೆ ಬೇರೆ ಯಾರಿಗೂ ಹೊಳೆಯಲಿಲ್ಲವೋ ನಂಗೆ ತಿಳೀತಿಲ್ಲ."

"ದುಡ್ಡಿಗಾದರೆ, ಸರಿ. ಆದರೆ ಬರೀ ಬಾಲುಗಳನ್ನು ಕದಿಯೋ ಮೂರ್ಖ ಕೆಲಸ ಬೇರೆ ಯಾರೂ ಮಾಡೋಲ್ಲ."

"ಏನೂ ಯೋಚಿಸದೆ ಮಾಡಿದ ಕೆಲಸ ಅದು. ಅಲ್ಲಿಂದ ಹೊರಡಬೇಕು ಅಂದ್ಕೋತಿದ್ದಾಗ ಕೌಂಟರಿನ ಹಿಂದೆ ಒಂದು ಚಿಕ್ಕ ಪೆಟ್ಟಿಗೇಲಿ ಆ ಬಾಲುಗಳಿದ್ದುವು. ಬರೀ ಕೈಲಿ ವಾಪಸು ಬರೋಕೆ ಮನಸ್ಸಾಗಲಿಲ್ಲ."

"ಅದು ನಿನ್ನ ತಪ್ಪು."

ದಮಾಸೋ ಮನಸ್ಸು ಹಗುರವಾದಂತೆ ಅನಿಸಿತು. ಈ ಮಧ್ಯೆ ಹೊಸ ಬಾಲುಗಳು ಇನ್ನೂ ಬರಲಿಲ್ಲ. ಅವು ತುಂಬ ದುಬಾರಿ ಅಂತ ಗೊತ್ತಾಯ್ತಂತೆ. ಅದ್ರಿಂದ ಆರ್ಡರ್ ಕ್ಯಾನ್ಸಲ್ ಮಾಡಿಬಿಟ್ಟೆ ಅಂದ ರೋಕೆ. ಅವನು ಇನ್ನೊಂದು ಸಿಗರೇಟು ಹಚ್ಚಿದ. ಈ ಮಾತು ಆಡುತ್ತಿರುವಾಗ ಹೃದಯದಿಂದ ಕರಾಳ ಯೋಚನೆಯೊಂದು ಬಿಡುಗಡೆಗೊಂಡಂತೆ ಅನ್ನಿಸಿತು.

ಮಾಲಿಕ ಬಿಲಿಯರ್ಡ್ ಬೋರ್ಡನ್ನು ಮಾರಿಬಿಡುವ ತೀರ್ಮಾನ ಮಾಡಿದ್ದಾನೆಂದು ಆನಾಗೆ ಹೇಳಿದ. ಅದಕ್ಕೇನೂ ಅಂಥ ಬೆಲೆ ಇಲ್ಲ. ಆಟ ಕಲಿಯುವವರು ಒರಟಾಗಿ ಉಪಯೋಗಿಸಿದ್ದರಿಂದ ಅಲ್ಲಲ್ಲಿ ಅದರ ಬಟ್ಟೆ ಹರಿದು ಹೋಗಿದೆ. ಅದಕ್ಕೆ ಬೇರೆ ಬೇರೆ ಬಣ್ಣಗಳ ಬಟ್ಟೆ ಹಚ್ಚಿ, ತೇಪೆ ಬೇರೆ ಹಾಕಲಾಗಿದೆ. ಈಗ ಆ ಬಟ್ಟೆಗೆ ಬದಲಾಗಿ ಹೊಸಧಾದ ಇನ್ನೊಂದು ಬಟ್ಟೆಯನ್ನೇ ತರಬೇಕಷ್ಟೆ. ಮತ್ತೆ ಬಿಲಿಯರ್ಡ್ ಬೋರ್ಡಿನ ಜೊತೆಜೊತೆಗೆ ಬೆಳೆದು ವಯಸ್ಸಾದ ಜನಕ್ಕೆ ಈಗ ಬೇಸ್‌ಬಾಲ್ ಚಾಂಪಿಯನ್‌ಷಿಪ್ಪಿನ ರೇಡಿಯೋ ವರದಿ ಬಿಟ್ಟರೆ ಬೇರೆ ಮನರಂಜನೆಯೂ ಇಲ್ಲದಂತಾಗಿದೆ.

"ಆದ್ದರಿಂದ ನಾವು ಉದ್ದೇಶವೇ ಇಲ್ಲದೆ ಊರಿಗೆ ಊರನ್ನೇ ನೋಯಿಸಿದಂತಾಗಿದೆ" ಎಂದು ಮಾತು ಮುಗಿಸಿದ ದಮಾಸೊ.

"ಅದೂ, ಯೂವುದೇ ಫಾಯಿದೆ ಇಲ್ಲದೆ." ಎಂದಳು ಆನಾ.

"ಮುಂದಿನವಾರ ಚಾಂಪಿಯನ್‌ಷಿಪ್ ಮುಗಿದು ಹೋಗತ್ತೆ."

"ಮತ್ತೆ ಆ ಪಾಪದ ನೀಗ್ರೋಗೆ ಎಂಥ ಗತಿ."

ಹಿಂದಿನ ದಿನಗಳಂತೆ ಈಗಲೂ ಅವನ ಭುಜಕ್ಕೆ ತಲೆಕೊಟ್ಟು ಮಲಗಿದ ಆನಾಗೆ ಗಂಡ ಏನು ಯೋಚಿಸುತ್ತಿದ್ದಾನೆಂದು ತಿಳಿದಿತ್ತು. ಅವನು ಸಿಗರೇಟು ಮುಗಿಸುವವರೆಗೂ ಸುಮ್ಮನಿದ್ದು, ತುಂಬ ಹುಶಾರಾದ ಧ್ವನಿಯಲ್ಲಿ,

"ದಮಾಸೊ" ಎಂದು ಕರೆದಳು.

"ಏನು?"

"ಆ ಬಾಲುಗಳನ್ನ ವಾಪಸು ಕೊಟ್ಬಿಡು."

ಅವನು ಇನ್ನೊಂದು ಸಿಗರೇಟು ಹಚ್ಚಿದ.

"ಎಷ್ಟೋ ದಿನದಿಂದ ನಾನೂ ಅದನ್ನೇ ಯೋಚ್ನೆ ಮಾಡ್ತಿದೀನಿ. ಆದರೆ ಹ್ಯಾಗೆ ಅನ್ನೋದು ಮಾತ್ರ ಗೊತ್ತಾಗ್ತಾ ಇಲ್ಲ."

ಸರಿ, ಇಬ್ಬರೂ ಆ ಬಾಲುಗಳನ್ನು ಸಾರ್ವಜನಿಕ ಸ್ಥಳವೊಂದರಲ್ಲಿ ಇಟ್ಟುಬಿಡುವುದೆಂದು ತೀರ್ಮಾನಿಸಿದರು. ಹಾಗೆ ಮಾಡಿದರೆ ಕ್ಲಬ್ಬಿನ ಸಮಸ್ಯೆ ಬಗೆಹರಿಯುತ್ತದೆಯೆನ್ನಿಸಿತು ಆನಾಗೆ. ಆದರೆ ಆ ನೀಗ್ರೋನ ಸಮಸ್ಯೆ ಹಾಗೇ ಉಳಿಯುತ್ತಲ್ಲ. ಬಾಲುಗಳು ಹೇಗೆ ಸಿಕ್ಕಿದುವು ಎಂಬ ಬಗ್ಗೆ ಪೋಲೀಸರು ಏನು ಬೇಕಾದರೂ ಕತೆ ಕಟ್ಟಿ ಹೇಳಬಹುದು. ಆದರೆ ನೀಗ್ರೋನನ್ನು ನಿರಪರಾಧಿ ಎಂದು ಬಿಟ್ಟು ಬಿಡುತ್ತಾರೆಯೇ ಅಥವಾ ಈ ಬಾಲುಗಳನ್ನು ನೋಡಿದ ಯಾರಾದರೂ ಅವನ್ನು ಪೋಲಿಸರಿಗೋ, ಕ್ಲಬ್ಬಿಗೋ ಕೊಟ್ಟುಬಿಡದೆ ತಾವೇ ಇಟ್ಟುಕೊಳ್ಳುವುದಿಲ್ಲ ಅಂತ ಹೇಗೆ ಹೇಳುವುದು?

ಕೊನೆಗೆ ಆನಾ "ಏನು ಮಾಡ್ಬೇಕು ಅಂತಿದ್ದೇವೋ ಅದನ್ನ ಸರಿಯಾಗಿ ಮಾಡುವುದೊಳ್ಳೆಯದು" ಎಂದಳು.

ಅವರು ನೆಲದಿಂದ ಬಾಲುಗಳನ್ನು ಅಗೆದು ತೆಗೆದರು. ಅವು ಬಾಲುಗಳು ಅಂತ ಹೊರಗೆ ಗೊತ್ತಾಗದ ಹಾಗೆ ಆನಾ ಪೇಪರಿನಲ್ಲಿ ಸುತ್ತಿ, ಟ್ರಂಕಿನಲ್ಲಿಟ್ಟು,

ಸರಿಯಾದ ಸಮಯಕ್ಕಾಗಿ ಅವರು ವಾರಗಟ್ಟಲೆ ಕಾದು ಕುಳಿತರು. ಆಗಸ್ಟ್ ೨೦ ರಂದು ರಾತ್ರಿ ಕಳ್ಳತನವಾದ ಮೇಲೆ ಸರಿಯಾಗಿ ಎರಡು ತಿಂಗಳ ನಂತರ ಕೌಂಟರಿನ ಹಿಂದೆ ಕುಳಿತ ರೋಕೆ ಬೀಸಣಿಗೆ ಬೀಸಿ ಸೊಳ್ಳೆ ಓಡಿಸುತ್ತಿದ್ದ. ರೇಡಿಯೋ ಕೂಡ ಸದ್ದಿಲ್ಲದೆ ಇದ್ದುದರಿಂದ ದಮಾಸೋಗೆ ಅವನ ಒಂಟಿತನ ಇನ್ನಷ್ಟು ತೀವ್ರವಾಗಿರುವಂತೆ ಅನಿಸಿತು.

"ನಾನು ಹೇಳಿದ ಹಾಗೇ ಆಯ್ತಲ್ಲ. ವ್ಯಾಪಾರ ಪೂರ್ಣ ಹಾಳಾಯ್ತು" ಎಂದ ರೋಕೆ. ಆ ಮಾತಿನಲ್ಲಿ ತಾನು ಹೇಳಿದಂತೆಯೇ ಆಯಿತಲ್ಲ ಎಂದು ಒಂದು ಬಗೆಯ ಸಂತೋಷ ತುಳುಕಿದಂತಿತ್ತು.

ದವಾಸೊ ಜ್ಯೂಕ್ ಬಾಕ್ಸಿಗೆ ಒಂದು ನಾಣ್ಯ ಹಾಕಿದ. ಆ ಸಂಗೀತದ ವ್ಯಾಲ್ಯೂಮೂ, ಬಣ್ಣಬಣ್ಣಗಳನ್ನು ಕುಣಿಸುತ್ತಿದ್ದ ಆ ಯಂತ್ರವೂ ತನ್ನ ನಿಷ್ಠೆಯ, ಗದ್ದಲದ ಪ್ರತೀಕ ಎನಿಸಿತು. ಆದರೆ ರೋಕೆ ಅದನ್ನು ಗಮನಿಸಿದಂತೆ ಕಾಣಲಿಲ್ಲ. ಆಮೇಲೆ ಒಂದು ಕುರ್ಚಿ ಎಳೆದುಕೊಂಡು ಕುಳಿತು, ಮಾಲಿಕನನ್ನು ಸಮಾಧಾನಪಡಿಸುವ ಹಾಗೆ ವಿಚಿತ್ರ ವಾದಗಳನ್ನು ಮಂಡಿಸಿದ. ಮಾಲಿಕ ಅದನ್ನೆಲ್ಲ ತಳ್ಳಿ ಹಾಕಿ, ಬೀಸಣಿಗೆಯನ್ನು ಬೇಕಾಬಿಟ್ಟಿ ಬೀಸಿಕೊಳ್ಳತೊಡಗಿದ.

"ಏನೂ ಮಾಡೋಕಾಗೋಲ್ಲ. ಮತ್ತೆ ಬೇಸ್‌ಬಾಲ್ ಚಾಂಪಿಯನ್‌ಷಿಪ್ಪೇನೂ ಯಾವಾಗಲೂ ನಡೆಯೋಲ್ವಲ್ಲ."

"ಬಾಲುಗಳು ಸಿಕ್ಕಿದರೂ ಸಿಕ್ಕಬಹುದು."

"ಇಲ್ಲ, ಸಿಕ್ಕೋಲ್ಲ."

"ಅವನ್ನೇನು, ಆ ನೀಗ್ರೋ ತಿಂದುಹಾಕಿರೋಕೆ ಸಾಧ್ಯ ಇಲ್ಲ."

"ಪೋಲೀಸರು ಎಲ್ಲಾ ಕಡೆ ಹುಡುಕಾಡಿದಾರೆ. ಸಿಕ್ಕಲಿಲ್ಲ. ಅವನು ಬಾಲುಗಳನ್ನ ನದೀಗೆಸೆದಿದಾನೆ." ರೋಕೆ ಒಂದು ಬಗೆಯ ಹತಾಶೆ ತುಂಬಿದ ಧ್ವನಿಯಲ್ಲಿ ಅಸಮಾಧಾನದಿಂದ ಹೇಳಿದ.

"ಒಂದು ವೇಳೆ ಪವಾಡನೇ ಜರುಗಿಬಿಟ್ರೆ?"

"ಹುಡುಗಾ, ನಿಂಗೆ ಬರೀ ಭ್ರಮೆ ಅಷ್ಟೆ. ದುರದೃಷ್ಟ, ಅನ್ನೋದು ಒಂದು ಬಸವನ ಹುಳು ಥರ. ನೀನು ಪವಾಡಗಳನ್ನು ನಂಬ್ತೀಯಾ?"

"ಒಂದೊಂದ್ಸಲ."

ದವಾಸೊ ಅಲ್ಲಿಂದ ಹೊರಟಾಗ ಸಿನಿಮಾ ಇನ್ನೂ ಬಿಟ್ಟಿರಲಿಲ್ಲ. ಧ್ವನಿವರ್ಧಕದಿಂದ ಹೊರಟ ಚಿತ್ರದ ಉದ್ದುದ್ದ, ಸಣ್ಣ ಸಣ್ಣ ಸಂಭಾಷಣೆಗಳು ಕತ್ತಲು ಕವಿದ ಊರಿನಲ್ಲಿ ಪ್ರತಿಧ್ವನಿಸುತ್ತಿದ್ದುವು. ಥಿಯೇಟರಿನ ದಿಕ್ಕಿನಲ್ಲಿ ಹೋಗುವುದೇ ಎಂದು ಒಂದು ಕ್ಷಣ ಯೋಚಿಸಿದ. ಆಮೇಲೆ ಡ್ಯಾನ್ಸ್ ಹಾಲಿನ ಕಡೆ ಹೆಜ್ಜೆ ಇಟ್ಟ.

ಅಲ್ಲಿ ಒಬ್ಬನೇ ಒಬ್ಬ ಗಿರಾಕಿ ಇಬ್ಬರು ಹೆಂಗಸರ ಜೊತೆ ಏಕಕಾಲದಲ್ಲಿ ಕುಣಿಯುತ್ತಿದ್ದ. ಅವನಿಗಾಗಿ ಬ್ಯಾಂಡು ಮೊಳಗುತ್ತಿತ್ತು. ಶಿಸ್ತಾಗಿ ಗೋಡೆಗೊರಗಿಕೊಂಡು

ಕೂತಿದ್ದ ಇತರರು ಟಪಾಲಿಗಾಗಿ ಕಾಯುತ್ತಿರುವವರಂತೆ ಕಾಣುತ್ತಿದ್ದರು. ದಮಾಸೊ ಒಂದು ಟೇಬಲಿನ ಬಳಿ ಕುಳಿತು ಬಾಟಂಡರಿಗೆ ಬಿಯರು ತರುವಂತೆ ಹೇಳಿದ. ಅದು ಬಂದ ಮೇಲೆ ಬಾಟಲನ್ನೇ ಎತ್ತಿ ಕುಡಿಯತೊಡಗಿದ. ಆಗಾಗ ಕುಡಿಯುವುದನ್ನು ನಿಲ್ಲಿಸಿ ಆ ಬಾಟಲಿನ ಮೂಲಕವೇ ಇಬ್ಬರು ಹೆಂಗಸರ ಜೊತೆ ಕುಣಿಯುತ್ತಿದ್ದವನನ್ನು ಪರೀಕ್ಷಿಸುವಂತೆ ನೋಡುತ್ತಿದ್ದುದೂ ಉಂಟು. ಕುಣಿಯುತ್ತಿದ್ದವನು ಆ ಹೆಂಗಸರಿಗಿಂತ ಕುಳ್ಳ.

ಮಧ್ಯರಾತ್ರಿಯ ಹೊತ್ತಿಗೆ ಸಿನಿಮಾಕ್ಕೆ ಹೋಗಿದ್ದ ಹೆಂಗಸರು ಒಳಗೆ ಬಂದರು. ಅವರ ಹಿಂದೆಯೇ ಗಂಡಸರ ಒಂದು ಗುಂಪೂ ಬಂತು. ಅವರ ಜೊತೆಯಲ್ಲಿದ್ದ ದಮಾಸೋನ ಗೆಳತಿ, ಎಲ್ಲರನ್ನೂ ಬಿಟ್ಟು ಅವನ ಟೇಬಲಿಗೇ ಬಂದು ಕುಳಿತಳು.

ದಮಾಸೊ ಅವಳ ಕಡೆ ನೋಡಲಿಲ್ಲ. ಆಗಲೇ ಅರ್ಧ ಡಜನ್ ಬಿಯರು ಬಾಟಲುಗಳನ್ನು ಖಾಲಿ ಮಾಡಿದ್ದವನು ಈಗ ಮೂರು ಹೆಂಗಸರ ಜೊತೆ ಕುಣಿಯುತ್ತಿದ್ದ ಆ ಕುಳ್ಳನನ್ನೇ ದಿಟ್ಟಿಸಿ ನೋಡುತ್ತಿದ್ದ. ಆ ಕುಳ್ಳನೋ, ಹೆಂಗಸರ ಕಡೆ ಅಷ್ಟಾಗಿ ಗಮನ ಕೊಡದೆ ಸೂಕ್ಷ್ಮ ವಿನ್ಯಾಸಗಳಲ್ಲಿ ಪಾದಗಳನ್ನು ಎತ್ತಿಡುವುದರಲ್ಲೇ ಮುಳುಗಿ ಹೋಗಿದ್ದ. ಹೌದು, ಅವನು ಸಂತೋಷದಿಂದ ಇದ್ದಂತಿತ್ತು. ಮತ್ತೆ ಕಾಲು, ಕೈಗಳ ಜೊತೆಗೆ ಅವನಿಗೊಂದು ಬಾಲವೂ ಇದ್ದಿದ್ದರೆ ಇನ್ನೂ ಸಂತೋಷಪಡುತ್ತಿದ್ದನೋ ಏನೊ.

"ಅಲ್ಲಿ ಕುಣೀತಿದಾನಲ್ಲಾ, ಅವನ್ನ ನೋಡಿದ್ರೆ ನಂಗೆ ಮೈಯೆಲ್ಲ ಉರಿಯುತ್ತೆ" ಎಂದ ದಮಾಸೊ.

"ಹಾಗಾದ್ರೆ, ಆ ಕಡೆ ನೋಡಬೇಡಾ" ಎಂದಳು ಗೆಳತಿ.

ಅವಳು ಬಾರ್ಟೆಂಡರಿಗೆ ಒಂದು ಡ್ರಿಂಕ್ ತರುವಂತೆ ಹೇಳಿದಳು. ಡ್ಯಾನ್ಸ್ ಹಾಲು ಮತ್ತೆ ಹೆಣ್ಣು ಗಂಡುಗಳಿಂದ ತುಂಬತೊಡಗಿತು. ಮೂರು ಹೆಂಗಸರ ಜೊತೆಗಿದ್ದವನು ಮಾತ್ರ ಇಡೀ ಹಾಲಿಗೆ ತಾನೊಬ್ಬನೇ ಎಂಬಂತೆ ಕುಣಿಯುತ್ತಲೇ ಇದ್ದ. ಒಂದು ಬಾರಿ ಹಾಗೇ ಸುತ್ತುತ್ತಾ ಕುಣಿಯುತ್ತಿರುವಾಗ ಅವನ ಕಣ್ಣು ದಮಾಸೋನ ಕಣ್ಣನ್ನು ಸಂಧಿಸಿತು. ಆಗ ಅವನು ಇನ್ನೂ ಹುಮ್ಮಸಿನಿಂದ ಕುಣಿಯುತ್ತಾ, ತನ್ನ ಮೊಲದಂಥ ಹಲ್ಲುಗಳನ್ನು ಕಿರಿದ. ದಮಾಸೊ ಅವನನ್ನೇ ಎವೆಯಿಕ್ಕದೆ ನೋಡುತ್ತಿದ್ದ. ಅದನ್ನು ಕಂಡ ಮೇಲೆ ಅವನು ಮತ್ತೆ ಗಂಭೀರವಾಗಿ ಕುಣಿತ ಮುಂದುವರಿಸಿದ.

"ಮಹಾ ಖುಷಿಯಾಗಿದೇನೆ ಅಂತ ಅಂದ್ಕೊಡಿದಾನೆ ಅವ್ನ."

"ಹೌದು, ಅವನು ತುಂಬ ಖುಷಿಯಾಗಿದಾನೆ. ಈ ಊರಿಗೆ ಬಂದಾಗ್ಲೆಲ್ಲ ಅವನು ಎಲ್ಲರ ಬಿಲ್ಲನ್ನೂ ತಾನೇ ಕೊಡ್ತಾನೆ ತಿರುಗಾಡುವ ಸೇಲ್ಸ್‌ಮಾನ್ಸ್‌ಗಳ ತರ" ಎಂದಳು ಹುಡುಗಿ.

ದಮಾಸೊ ದೃಷ್ಟಿ ಬದಲಿಸಿ, ಅವಳ ಕಡೆ ತಿರುಗಿದ.

"ಹಾಗಿದ್ರೆ ಅವನ ಹತ್ರಾನೇ ಹೋಗು. ಮೂವರಿಗೆ ಸಾಕಾಗೋದು ನಾಲ್ಕು ಜನಕ್ಕೂ ಸಾಕಾಗುತ್ತೆ."

ಅವಳು ಅದಕ್ಕೆ ಉತ್ತರ ಕೊಡದೆ, ಡ್ಯಾನ್ಸ್ ಹಾಲಿನತ್ತ ಮುಖ ತಿರುಗಿಸಿ ಗುಟುಕರಿಸತೊಡಗಿದಳು. ತೊಟ್ಟುಕೊಂಡ ಮಂಕು ಹಳದಿ ಬಟ್ಟೆಯಲ್ಲಿ ಅವಳ ಸಂಕೋಚ ಇನ್ನಷ್ಟು ಹೆಚ್ಚಿದಂತೆ ತೋರಿತು.

ಅವರು ಇನ್ನೊಂದು ಹಾಡಿಗೂ ಕುಣಿದರು. ಅದು ಮುಗಿಯುವ ಹೊತ್ತಿಗೆ ಒಳಗೇ ಕುದಿಯುತ್ತಿದ್ದ ದಮಾಸೊ "ಹಸಿವಿನಿಂದ ಸಾಯ್ತಾ ಇದೀನಿ" ಎಂದ. ಹುಡುಗಿ ಅವನ ತೋಳು ಹಿಡಿದು ಕೌಂಟರಿನತ್ತ ಕರೆದೊಯ್ದಳು. "ನೀನೂ ತಿನ್ನಬೇಕು" ಎಂದು ಅವಳು ಹೇಳಿದಾಗ ಕುಣಿಯುತ್ತಿದ್ದವನು ಮೂವರು ಹೆಂಗಸರ ಜೊತೆ ಎದುರು ದಿಕ್ಕಿನಲ್ಲೇ ಬರುತ್ತಿದ್ದ. ಅವನಿಗೆ ದಮಾಸೊ,

"ನೋಡು, ಒಂದು ಮಾತು" ಎಂದ.

ಅವನು ನಿಲ್ಲದೆ ಮುಗುಳುನಕ್ಕ. ದಮಾಸೊ ಜೊತೆಗಾತಿಯ ಹಿಡಿತದಿಂದ ಬಿಡಿಸಿಕೊಂಡು ಅವನ ದಾರಿಗೆ ಅಡ್ಡವಾಗಿ ನಿಂತು,

"ನಿನ್ನ ಹಲ್ಲು ಕಂಡರೆ ನಂಗಾಗೋಲ್ಲ" ಎಂದ.

ಅವನು ಕೂಡಲೇ ಬಿಳಿಚಿಕೊಂಡರೂ ಮುಗುಳ್ನಗುವನ್ನು ನಿಲ್ಲಿಸಲಿಲ್ಲ.

"ನಂಗೂ ಅಷ್ಟೆ."

ಹುಡುಗಿ ತಡೆಯುವುದಕ್ಕೂ ಮೊದಲೇ ದಮಾಸೊ ಅವನ ಮುಖಕ್ಕೆ ಒಂದು ಗುದ್ದು ಗುದ್ದಿಬಿಟ್ಟ. ಅವನು ಡ್ಯಾನ್ಸ್ ಹಾಲಿನ ನಡುವೆ ಕುಕ್ಕರಿಸಿದ. ಗಿರಾಕಿಗಳು ಯಾರೂ ಮಧ್ಯೆ ತಲೆ ಹಾಕಲಿಲ್ಲ. ಆ ಮೂವರು ಹೆಂಗಸರೂ ದಮಾಸೋನ ಸೊಂಟ ಬಳಸಿ ಏನೇನೋ ಕಿರಿಚಿದರು. ಆದೇ ಸಮಯಕ್ಕೆ ದಮಾಸೋನ ಗೆಳತಿ ಬಂದು ಅವನನ್ನು

ಹಾಲಿನ ಹಿಂಭಾಗಕ್ಕೆ ತಳ್ಳಿಕೊಂಡು ಹೋದಳು. ಆ ಕುಳ್ಳ ಮೇಲೆದ್ದ. ಅವನ ಮುಖ ದಮಾಸೋನ ಹೊಡೆತದಿಂದ ಕಪ್ಪಿಟ್ಟು ಹೋಗಿತ್ತು. ಆದರೆ ಕೋತಿಯ ಹಾಗೆ ಹಾಲಿನ ಮಧ್ಯಕ್ಕೆ ಜಿಗಿದು ಬಂದು,

"ಸಂಗೀತ ಶುರುವಾಗಲಿ" ಎಂದ ಕಿರಿಚಿದ.

ಎರಡು ಗಂಟೆಯ ಹೊತ್ತಿಗೆ ಹಾಲು ಬಹುಮಟ್ಟಿಗೆ ಖಾಲಿಯಾಯಿತು. ಇನ್ನು ಗಿರಾಕಿಗಳಿಲ್ಲ ಎನ್ನಿಸಿದಾಗ ಹೆಂಗಸರೆಲ್ಲ ಊಟ ಮಾಡತೊಡಗಿದರು. ಒಳಗೆ ಸೆಖೆ. ಬೀನ್ಸ್ ಬೆರೆಸಿದ ಪಲಾವನ್ನೂ ಹುರಿದ ಮಾಂಸವನ್ನೂ ಟೇಬಲಿಗೆ ತಂದುಕೊಂಡ ಹುಡುಗಿ, ಅದನ್ನು ಸ್ಪೂನಿನಿಂದ ತಿನ್ನತೊಡಗಿದಳು. ದಮಾಸೋ ಮಂಪರು ಕವಿಯುತ್ತಿರುವವನ ಹಾಗೆ ಅವಳನ್ನೇ ನೋಡುತ್ತಿದ್ದ. ಅವಳು ಒಂದು ಸ್ಪೂನು ಅನ್ನ ಎತ್ತಿಕೊಂಡು ಅವನ ಎದುರಿಗೆ ಹಿಡಿದಳು.

"ತೆಗಿ ಬಾಯಿ."

ದಮಾಸೋ ಗಲ್ಲವನ್ನು ಎದೆಗೆ ತಾಕುವಷ್ಟು ಹತ್ತಿರ ಬಾಗಿಸಿ, ತಲೆ ಆಡಿಸುತ್ತಾ, "ಅದೆಲ್ಲ ಹೆಂಗಸರಿಗೆ, ನಾವು ಗಂಡಸರು ತಿನ್ನೋಲ್ಲ" ಎಂದ.

ಅವನು ಟೇಬಲಿನ ಮೇಲೆ ಕೈಯೂರಿಕೊಂಡೆ ಮೇಲೇಳಬೇಕಾಯಿತು. ಸ್ವಾಧೀನಕ್ಕೆ ಬರುವ ಹೊತ್ತಿಗೆ ಬಾರ್ಟೆಂಡರ್ ಕೈಕಟ್ಟಿಕೊಂಡು ಎದುರಿಗೇ ನಿಂತಿದ್ದ.

"ತೊಂಬತ್ತೆಂಟಾಯಿತು. ಇದೇನು ನಾವು ಕೊಡ್ತಿರೋ ಪಾರ್ಟಿ ಅಲ್ಲ."

ದಮಾಸೊ ಅವನನ್ನು ಪಕ್ಕಕ್ಕೆ ತಳ್ಳಿ, "ವಕ್ರ ಮನುಷ್ಯರನ್ನ ಕಂಡರೆ ನಂಗಾಗೋಲ್ಲ" ಎಂದ.

ಬಾರ್ಟೆಂಡರ್ ಅವನ ತೋಳಿಗೆ ಕೈ ಹಾಕಿ ಜಗ್ಗಿದವನು, ಹುಡುಗಿ ಸನ್ನೆ ಮಾಡಿದ್ದರಿಂದ ಸಡಿಲ ಬಿಟ್ಟು,

"ಇವತ್ತು ಸುಮ್ನೆ ಬಿಟ್ಟಿದೀನಿ ಅಂತ ನಿಂಗೆ ಗೊತ್ತಿಲ್ಲ" ಎಂದ.

ದಮಾಸೊ ಜೋಲಿ ಹೊಡೆಯುತ್ತ, ಹೆಜ್ಜೆಹೆಜ್ಜೆಗೂ ತತ್ತರಿಸುತ್ತ ಹೊರಗೆ ಹೋದ. ಬೆಳುದಿಂಗಳಿನಲ್ಲಿ ನಿಗೂಢ ಕಾಂತಿಯನ್ನು ಮಿಂಚಿಸಿದ ನದಿ ಮಿದುಳಿನಲ್ಲಿ ಒಂದು ಬಗೆಯ ತಿಳಿವನ್ನು ಹರಿಸಿತು. ಒಂದೇ ಕ್ಷಣ ಅಷ್ಟೆ. ಆಮೇಲೆ ಊರಿನ ಇನ್ನೊಂದು

ಬದಿಯಲ್ಲಿದ್ದ ತನ್ನ ರೂಮನ್ನು ಮುಟ್ಟಿದಾಗ ಅವನಿಗೆ ತಾನು ನಿದ್ದೆಯಲ್ಲೇ ನಡೆದು ಬಂದಿದ್ದೇನೆಂದು ಖಚಿತವಾಯಿತು. ಈ ಕ್ಷಣದಿಂದ ತನ್ನ ಪ್ರತಿಯೊಂದು ಚಲನವಲನವನ್ನೂ ತಾನೇ ಗಮನವಿಟ್ಟು ನೋಡಬೇಕು ಎನಿಸಿತು.

ಅದೊಂದು ರೀತಿಯ ಗೊಂದಲದ ಅರಿವು, ತುರ್ತಾದ ಅರಿವು. ಬಾಗಿಲು ಕಿರುಗುಟ್ಟದಂತೆ ಹುಶಾರಾಗಿ ತಳ್ಳಿದ.

ಆನಾಗೆ ಗಂಡ ಟ್ರಂಕಿನಲ್ಲಿ ಹುಡುಕಾಡುತ್ತಿದ್ದಾನೆ ಎಂದು ಅನ್ನಿಸಿತು. ಆದರೆ ಕಣ್ಣಿಗೆ ದೀಪ ಬೀಳದಿರಲಿ ಎಂದು ಗೋಡೆಯ ಕಡೆ ಮುಖ ಮಾಡಿಕೊಂಡು ಮಲಗಿದವಳಿಗೆ ದಮಾಸೊ ಬಟ್ಟೆ ಕಳಚುತ್ತಿಲ್ಲವೆಂದು ಅರಿವಾಯಿತು. ಒಳಗೇ ಏನೋ ಹೊಳೆದಂತಾಗಿ ತಕ್ಷಣ ಎದ್ದು ಕುಳಿತಳು. ದಮಾಸೊ ಕೈಯಲ್ಲಿ ಬಾಲುಗಳಿದ್ದ ಪ್ಯಾಕೆಟ್ಟನ್ನೂ, ಟಾರ್ಚನ್ನೂ ಹಿಡಿದುಕೊಂಡು ಟ್ರಂಕಿನ ಪಕ್ಕದಲ್ಲೇನಿಂತಿದ್ದ.

ಅವನು ತನ್ನ ತೋರುಬೆರಳನ್ನು ತುಟಿಯ ಮೇಲೆ ಇಟ್ಟುಕೊಂಡ.

ಆನಾ ಹಾಸಿಗೆಯಿಂದ ಹೊರಗೆ ಜಿಗಿದಳು. "ನಿನಗೆ ಹುಚ್ಚು" ಎಂದು ಗೊಣಗುತ್ತಾ ಬಾಗಿಲಿನ ಕಡೆ ಓಡಿ, ತಕ್ಷಣ ಚಿಲಕ ಹಾಕಿದಳು. ಅವನು ಟಾರ್ಚು, ಒಂದು ಸಣ್ಣ ಚೂರಿ, ಹರಿತವಾಗಿದ್ದ ಕೆಲವು ಅರಗಳನ್ನು ಪ್ಯಾಂಟು ಜೇಬಿನಲ್ಲಿಟ್ಟುಕೊಂಡು, ಬಗಲಲ್ಲಿ ಆ ಪೊಟ್ಟಣವನ್ನು ಇರುಕಿಕೊಂಡು ಅವಳ ಕಡೆ ಹೆಜ್ಜೆ ಇಟ್ಟ. ಅವಳು ಬಾಗಿಲಿಗೆ ಅಡ್ಡವಾಗಿ ನಿಂತು.

"ನಾನು ಬದುಕಿರೋವರ್ಗೂ ನೀನಿಲ್ಲಿಂದ ಹೊಗಲಾರೆ" ಎಂದಳು ಮೆಲ್ಲನೆ.

ದಮಾಸೊ ಪಕ್ಕಕ್ಕೆ ಸರಿ ಎಂದು ಅವಳನ್ನು ಬದಿಗೆ ನೂಕಿದ. ಅವಳು ಎರಡೂ ಕೈಗಳಿಂದ ಬಾಗಿಲ ಹಿಡಿಯನ್ನು ಭದ್ರವಾಗಿ ಹಿಡಿದುಕೊಂಡಳು. ಇಬ್ಬರೂ ಎವೆಯಿಕ್ಕದೆ ಒಬ್ಬರನ್ನೊಬ್ಬರು ನೋಡಿದರು. "ನೀನು ಕತ್ತೆ" ಎಂದು ಪಿಸುಗುಟ್ಟಿದಳು ಆನಾ. "ಯಾವ ದೇವ್ರು ನಿಂಗೆ ಈ ರೂಪ ಕೊಟ್ನೋ ಅವನೇ ನಿನ್ನ ಬುದ್ದಿನೂ ತಿರುಚಿದ." ನೋವಿನಿಂದ ಅವಳು ತಲೆ ತಗ್ಗಿಸುವಂತಾಯಿತು. ಹಲ್ಲು ಕಚ್ಚಿಕೊಂಡು "ಪಕ್ಕಕ್ಕೆ ಸರಿ ಅಂದೆ" ಎಂದು ಕೂಗಿದ. ಆನಾ ನೊಗ ಹತ್ತುಕೊಂಡ ಎತ್ತಿನಂತೆ ಕಣ್ಣಚಿನಿಂದ ಅವನನ್ನು ನೋಡಿದಳು. ಒಂದು ಕ್ಷಣ ನೋವು ನನ್ನನ್ನೇನೂ ಮಾಡಲಾರದು, ನಾನು ಗಂಡನಿಗಿಂತ ಬಲಶಾಲಿ

ಎನ್ನಿಸಿತು. ಆದರೆ ಅವನು ಕಣ್ಣೀರು ಸರಿಸುತ್ತಾ ಅವಳು ಬಿಕ್ಕಿಬಿಕ್ಕಿ ಅಳುವವರೆಗೂ ಕೂದಲನ್ನು ಜಗ್ಗುತ್ತಲೆ ಇದ್ದ.

"ಹೊಟ್ಟೇಲಿರೋ ಮಗೂನ ಕೊಲ್ತಿದೀಯ ನೀನು" ಎಂದಳು.

ದಮಾಸೊ ಹೆಚ್ಚು ಕಡಿಮೆ ಅವಳನ್ನು ಎತ್ತಿಕೊಂಡೇ ಹೋಗಿ ಹಾಸಿಗೆಯ ಮೇಲೆ ಹಾಕಿದ. ಅವಳು ತಕ್ಷಣ ಅವನ ಬೆನ್ನ ಮೇಲೆ ಹಾರಿ, ಕೈಕಾಲುಗಳಿಂದ ಅವನನ್ನು ಬಳಸಿ ಬಿಗಿಯಾಗಿ ಹಿಡಿದುಕೊಂಡಾಗ ಇಬ್ಬರೂ ಹಾಸಿಗೆಯ ಮೇಲೆ ಬಿದ್ದರು. ಅವಳು "ನಾನು ಕಿರಿಚಿಕೋತೇನೆ." ನೀನು ಒಂದು ಹೆಜ್ಜೆ ಇಟ್ಟರೆ ಸಾಕು. ಕಿರಿಚಿಕೊಂಡ್ಬಿಡ್ತೇನೆ" ಎಂದು ಅವನ ಕಿವಿಯಲ್ಲಿ ಪಿಸುಗುಟ್ಟಿದಳು. ದಮಾಸೊ ರೊಚ್ಚಿನಿಂದ ಭುಸುಗುಟ್ಟುತ್ತಾ, ಆ ಪೊಟ್ಟಣದಿಂದಲೇ ಅವಳ ಮೊಳಕಾಲುಗಳ ಮೇಲೆ ಬಾರಿಸತೊಡಗಿದ. ಅಸಾಧ್ಯ ನೋವಾಗಿ ಕಾಲುಗಳನ್ನು ಸಡಿಲಿಸಿದ ಆನಾ ಗಂಡನ ಸೊಂಟ ಬಿಡದೆ ಇನ್ನಷ್ಟು ಗಟ್ಟಿಯಾಗಿ ಹಿಡಿದುಕೊಂಡು ಅವನು ಬಾಗಿಲಿಗೆ ಹೋಗದಂತೆ ಮಾಡಲು ಪ್ರಯತ್ನಿಸಿದಳು. ಆಮೇಲೆ ಬೆಡಾಟ "ನೋಡು, ನಿಂಗೆ ಮಾತು ಕೊಡ್ತಿದೇನೆ. ನಾಳೆ ನಾನೇ ಅವುಗಳನ್ನು ತೊಗೊಂಡು ಹೋಗ್ತೇನೆ. ಯಾರಿಗೂ ಕಾಣದ ಹಾಗೆ ಬಾಲುಗಳನ್ನ ಅದರ ಜಾಗದಲ್ಲಿ ಇಟ್ಟು ಬರ್ತೇನೆ." ದಮಾಸೋ ಬಾಗಿಲಿನ ಹತ್ತಿರ ಹತ್ತಿರ ಸರಿಯುತ್ತಾ, ಪೊಟ್ಟಣದಿಂದ ಅವಳ ಕೈಗಳಿಗೆ ಬಾರಿಸುತ್ತಲೆ ಇದ್ದ. ಅವಳು ನೋವು ಎಂದು ಒಂದು ಕ್ಷಣ ಅವನನ್ನು ಬಿಟ್ಟರೆ ಮರುಕ್ಷಣ ಮತ್ತೆ ಹಿಡಿದುಕೊಳ್ಳುತ್ತಿದ್ದಳು.

"ಅದನ್ನ ಕದ್ದವಳು ನಾನೇ ಅಂತ ಹೇಳ್ತೀನಿ. ಈ ಸ್ಥಿತೀಲಿ ನನ್ನನ್ನ ಅವರು ಜೇಲಿಗೆ ಕಳಿಸಲಾರ್ರು."

ದಮಾಸೊ ಅವಳನ್ನು ದೂರ ತಳ್ಳಿದ. "ಊರಿಗೆ ಊರೆ ನಿನ್ನನ್ನ ನೋಡುತ್ತೆ. ಅಬ್ಬ ಎಷ್ಟು ದಡ್ಡ! ಇವತ್ತು ಪೂರ್ಣಿಮೆ ಅಂತಲೂ ನಿಂಗೆ ತಿಳೀತಾ ಇಲ್ವಲ್ಲ" ಎಂದಳು. ಅವನು ಬೋಲ್ಬಿಗೆ ಕೈಹಾಕುವ ಮುಂಚೆ ಮತ್ತೊಮ್ಮೆ ಎಳೆದಾಡಿದಳು. ಆಮೇಲೆ ಕಣ್ಣು ಮುಚ್ಚಿಕೊಂಡು, ದನ, ಮೃಗ ಎಂದು ಕೂಗಿಕೊಳ್ಳುತ್ತಲೇ ಅವನ ಕುತ್ತಿಗೆ, ಮುಖ ಎಲ್ಲ ತಿವಿದುಹಾಕಿದಳು. ದಮಾಸೊ ತಪ್ಪಿಸಿಕೊಳ್ಳಲು ನೋಡಿದ. ಅವಳು ಬೋಲ್ಬನ್ನು ಭದ್ರವಾಗಿ ಹಿಡಿದುಕೊಂಡು, ಅವನ ಕೈಯನ್ನು ಅದರಿಂದ ಬಿಡಿಸಿ, ತಲೆಗೇ ಗುದ್ದತೊಡಗಿದಳು. ದಮಾಸೊ ಮತ್ತೆ ಬೋಲ್ಬಿಗೆ ಕೈ ಹಾಕಿದಾಗ ಅದು ಭುಜದ ಎಲುಬಿನ ಮೇಲೆ ಬಿದ್ದು ಟಣ್ಣೆಂದು ಸದ್ದು ಮಾಡಿತು.

"ಹೆಣ್ಣು ನಾಯಿ" ಎಂದು ಅರಚಿದ.

ಗಲಾಟೆ ಮಾಡಬಾರದೆಂಬುದರ ಬಗ್ಗೆ ಆ ಕ್ಷಣ ಅವನ ಗಮನವಿದ್ದಂತಿರಲಿಲ್ಲ. ಮುಷ್ಟಿಯ ಹಿಂಬದಿಯಿಂದ ಅವಳ ಕಿವಿಯ ಮೇಲೆ ಗುದ್ದಿದ. ಅವಳು ಕಿರಿಚುತ್ತಾ ಹೋಗಿ ಗೋಡೆಗೆ ಅಪ್ಪಳಿಸಿ ಬಿದ್ದಂತೆ ಕೇಳಿಸಿತು. ಆದರೆ ಆ ಕಡೆ ನೋಡಲಿಲ್ಲ. ಬಾಗಿಲನ್ನೂ ಎಳೆದುಕೊಳ್ಳದೆ ರೂಮಿನಿಂದ ಹೊರಗೆ ಹೋಗಿಬಿಟ್ಟ.

ನೋವಿನಿಂದ ದಿಗ್ಭ್ರಮೆಗೊಂಡಿದ್ದ ಆನಾ ನೆಲದ ಮೇಲೆ ಹಾಗೇ ಬಿದ್ದಿದ್ದಳು. ಹೊಟ್ಟೆಯೊಳಗೆ ಏನಾದರೂ ಆಗಿಬಿಡಬಹುದೇ ಎಂದು ಕಾದಳು. ಗೋಡೆಯ ಆ ಕಡೆಯಿಂದ ನೆರೆಯ ಜನ ಅವಳ ಹೆಸರು ಹಿಡಿದು ಕೂಗಿದರು. ಆ ಕೂಗು ಗೋರಿಯಿಂದ ಬರುತ್ತಿರುವಂತೆ ಕೇಳಿಸಿತು. ಅಳಬಾರದೆಂದು ತುಟಿ ಕಚ್ಚಿದಳು. ಆಮೇಲೆ ಮೇಲೆದ್ದು ಬಟ್ಟೆ ಹಾಕಿಕೊಂಡಳು. ದಮಾಸೊ ಹೊರಗೇ ಇರಬಹುದು, ತನ್ನ ಯೋಜನೆ ನಿಷ್ಫಲವಾಯಿತೆಂದು ಯೋಚಿಸುತ್ತ ಹೆಂಡತಿ ಹೊರಗೆ ಬಂದು ಅಬ್ಬರಿಸುವುದಕ್ಕಾಗಿಯೇ ಕಾಯುತ್ತಿರಬಹುದು ಎಂದು ಮಾತ್ರ ಅವಳಿಗೆ ಹೊಳೆಯಲಿಲ್ಲ. ಹೇಗೆ ಹೊಳೆದೀತು? ಅದೇನೂ ಮೊದಲ ಸಲ ಅಲ್ಲವಲ್ಲ. ಸರಿ, ಎರಡನೆ ಬಾರಿಯೂ ಅವಳು ಅದೇ ತಪ್ಪು ಮಾಡಿದಳು. ಗಂಡನ ಬೆನ್ನಟ್ಟಿ ಹೋಗುವ ಬದಲು ಷೂಗಳನ್ನು ಹಾಕಿಕೊಂಡು, ಬಾಗಿಲು ಮುಚ್ಚಿ, ಕಾಯುವುದಕ್ಕೆಂದೇ ಹಾಸಿಗೆಯ ಮೇಲೆ ಕುಳಿತಳು.

ದಮಾಸೋಗೆ ಆ ಬಾಗಿಲು ಮುಚ್ಚಿಕೊಂಡಾಗಷ್ಟೇ ತಾನಿನ್ನು ವಾಪಸು ಹೋಗುವುದು ಸಾಧ್ಯವಿಲ್ಲ ಎಂದು ತಿಳಿಯಿತು. ರಸ್ತೆಯುದ್ದಕ್ಕೂ ಅಟ್ಟಿಸಿಕೊಂಡು ಬಂದ ನಾಯಿಗಳ ಬೊಗಳು. ಅದು ಬಿಟ್ಟರೆ ಎಲ್ಲೆಲ್ಲೂ ಹೆದರಿಕೆ ಹುಟ್ಟಿಸುವಂಥ ಮೌನ. ಪಕ್ಕದ ಕಾಲುದಾರಿಗೆ ಹೋಗದೆ ನಡು ರಸ್ತೆಯಲ್ಲೇ ನಡೆಯತೊಡಗಿದ. ನಿದ್ರಿಸುತ್ತಿದ್ದ ಊರಿನಲ್ಲಿ ತೀರ ಭಾರವಾಗಿ, ಪರಕೀಯ ಅನಿಸುವಂತೆ ಕೇಳಿಸುತ್ತಿದ್ದ ಹೆಜ್ಜೆ ಸದ್ದಿನಿಂದ ಹೇಗೆ ತಪ್ಪಿಸಿಕೊಳ್ಳುವುದು ಎಂದು ಯೋಚಿಸಿದ. ಕ್ಲಬ್ಬಿನ ಹಿಂಬಾಗಿಲ ಬಳಿ ಇದ್ದ ಖಾಲಿ ಜಾಗವನ್ನು ಮುಟ್ಟುವವರೆಗೂ ಅವನು ಯಾವುದೇ ಎಚ್ಚರಿಕೆ ತೆಗೆದುಕೊಳ್ಳಲಿಲ್ಲ. ಈಗ ಟಾರ್ಚ್ ಹೊತ್ತಿಸಬೇಕಾದ ಅಗತ್ಯ ಕಾಣಲಿಲ್ಲ. ಚಿಲಕವನ್ನಷ್ಟೇ ಸರಿಮಾಡಿ ಬಾಗಿಲನ್ನು ಭದ್ರಪಡಿಸಲಾಗಿತ್ತು. ಬಾಗಿಲಿನಲ್ಲಿ ಇಟ್ಟಿಗೆಯಷ್ಟು ದಪ್ಪವಿದ್ದ ಹಲಗೆಯನ್ನು ಕಿತ್ತು, ಅಲ್ಲಿ ಇನ್ನೊಂದು ಹೊಸ ಹಲಗೆಯನ್ನು ಜೋಡಿಸಿ, ಅದೇ ಚಿಲಕ ಅಳವಡಿಸಿದ್ದರು. ಉಳಿದದ್ದೆಲ್ಲ ಮೊದಲಿದ್ದ ಹಾಗೇ ಇತ್ತು. ದಮಾಸೊ ಎಡಗೈಯಿಂದ

ಬೀಗ ಎಳೆದು ಹಿಡಿದುಕೊಂಡು, ಚಿಲಕದ ನಡುವೆ ಒಂದು ಅರ ತೂರಿಸಿ, ಬಲವನ್ನೆಲ್ಲ ಬಿಟ್ಟು ಹಿಂದೆ ಮುಂದೆ ಆಡಿಸಿದ. ಸ್ವಲ್ಪ ಹೊತ್ತಾದ ಮೇಲೆ ಚಿಲಕ ಧಡ್ ಎಂದು ಸದ್ದು ಮಾಡಿ ಕೆಳಗೆ ಬಿತ್ತು. ಬಾಗಿಲನ್ನು ಹಾಗೇ ನೂಕಿದರೆ ಕರಕರ ಸದ್ದಾಗಬಹುದೆನ್ನಿಸತು. ಆದ್ದರಿಂದ ಎರಡೂ ಕೈಯಲ್ಲಿ ಬಾಗಿಲನ್ನು ಹಿಡಿದೆತ್ತಿಕೊಂಡು ಅರ್ಧ ತೆರೆದುಕೊಳ್ಳುವವರೆಗೆ ಅದನ್ನು ನೂಕಿದ. ಕೊನೆಗೆ ಶೂಗಳನ್ನು ಬಿಚ್ಚಿದ. ಆಮೇಲೆ ಬಾಲುಗಳಿದ್ದ ಪೊಟ್ಟಣವನ್ನು, ಷೂಗಳನ್ನು ಒಳಗೆ ನೂಕಿ, ಬಾಗಿಲು ದಾಟಿ, ಬೆಳುದಿಂಗಳು ತುಂಬಿದ್ದ ಹಾಲನ್ನು ಪ್ರವೇಶಿಸಿದ.

ಎದುರಿಗೇ ಬಾಟಲುಗಳು, ಖಾಲಿ ಪೆಟ್ಟಿಗೆಗಳು ತುಂಬಿಕೊಂಡ ಕತ್ತಲು ಕತ್ತಲಾದ ದಾರಿ ಇತ್ತು. ಅದರ ಆಚೆಗೆ ಗಾಜಿನ ದೀಪದ ಝುಗಮುಗಿಸುವ ಬೆಳಕಿನಲ್ಲಿ ಬಿಲಿಯರ್ಡ್ ಟೇಬಲ್. ಆಮೇಲೆ ಕಪಾಟುಗಳ ಹಿಂಭಾಗ. ಕೊನೆಯಲ್ಲಿ ಮುಂಬಾಗಿಲಿಗೆ ಅಡ್ಡವಾಗಿಟ್ಟ ಟೇಬಲುಗಳು, ಕುರ್ಚಿಗಳು ಎಲ್ಲೆಲ್ಲೂ ಬೆಳುದಿಂಗಳು, ವಿಚಿತ್ರ ಮೌನ. ಅಷ್ಟು ಬಿಟ್ಟರೆ ಉಳಿದದ್ದೆಲ್ಲ ಮೊದಲು ಬಂದಿದ್ದಾಗ ಇದ್ದಂತೆಯೇ ಇದ್ದುವು. ಆ ಕ್ಷಣದವರೆಗೂ ಭಯವನ್ನು ಹತ್ತಿಕ್ಕಲು ಪ್ರಯತ್ನಿಸಿಸುತ್ತಿದ್ದ ದಮಾಸೋಗೆ ಈಗ ಇದ್ದಕ್ಕಿದ್ದಂತೆ ಏನೋ ಮೋಹಕವೆನಿಸತೊಡಗಿತು.

ಈ ಸಾರಿ ಅವನು ಸಡಿಲವಾಗಿದ್ದ ಇಟ್ಟಿಗೆಗಳ ಬಗ್ಗೆ ಎಚ್ಚರಿಕೆ ವಹಿಸಿರಲಿಲ್ಲ. ಷೂಗಳನ್ನು ಬಾಗಿಲಿಗೆ ಅಡ್ಡವಾಗಿಟ್ಟು, ಝುಗಮುಗಿಸುವ ಬೆಳಕು ಬಿದ್ದ ಜಾಗವನ್ನು ದಾಟಿ, ಟಾರ್ಚ್ ಹೊತ್ತಿಸಿ, ಕೌಂಟರಿನ ಹಿಂದೆ ಬಿಲಿಯರ್ಡ್ ಬಾಲುಗಳಿಡುವ ಪೆಟ್ಟಿಗೆಗಾಗಿ ಹುಡುಕಾಡತೊಡಗಿದ. ಯಾವ ಎಚ್ಚರಿಕೆಯನ್ನೂ ತೆಗೆದುಕೊಳ್ಳದೆ ಟಾರ್ಚಿನ ಬೆಳಕನ್ನು ಎಡಗಡೆಯಿಂದ ಬಲಗಡೆಗೆ ಹಾಯಿಸಿ ನೋಡಿದ. ದೂಳು ತುಂಬಿಕೊಂಡ ಜಾರುಗಳು, ಕುದುರೆಯೇರುವುದಕ್ಕಾಗಿ ಬಳಸುವ ರಿಕಾಪಿನ ಒಂದು ಜೊತೆ ಬಳೆ, ಮೋಟಾರ್ ಎಣ್ಣೆ ಮೆತ್ತಿಕೊಂಡ, ತೋಳು ಮಡಿಚಿದ ಒಂದು ಷರ್ಟು, ಆಮೇಲೆ ಆವೊತ್ತು ತಾನು ಬಿಟ್ಟುಹೋಗಿದ್ದ ಜಾಗದಲ್ಲೇ ಇದ್ದ ಆ ಸಣ್ಣ ಪೆಟ್ಟಿಗೆ. ಅವನು ಕೌಂಟರಿನ ಅಂಚಿನವರೆಗೂ ಟಾರ್ಚ್ ಬಿಟ್ಟು ನೋಡಿದ. ಅಲ್ಲೊಂದು ಬೆಕ್ಕು.

ಬೆಳಕಿಗೆ ಎದುರಾಗಿ ಕುಳಿತ ಅದು ಯಾವ ರಹಸ್ಯವೂ ಇಲ್ಲದಂತೆ ಅವನನ್ನು ನೋಡಿತು. ಹಗಲ ಹೊತ್ತಿನಲ್ಲಿ ತಾನು ಇದನ್ನೆಂದೂ ಈ ಜಾಗದಲ್ಲಿ ನೋಡಿಲ್ಲ ಎಂದು ನೆನಪಾಗಿ ನಡುಕ ಹುಟ್ಟುವವರೆಗೂ ಅವನು ಆ ಬೆಕ್ಕಿನ ಮೇಲೆಯೇ ಬೆಳಕು ಬಿಟ್ಟ.

ಆಮೇಲೆ ಟಾರ್ಚನ್ನು ಆಡಿಸಿ 'ಶ್' ಎಂದ. ಅದು ಒಂದಿಷ್ಟೂ ಕದಲಲಿಲ್ಲ. ನಂತರ ತಲೆಯೊಳಗೆ ಸದ್ದಿಲ್ಲದೆ ಏನೋ ಸಿಡಿದಂತಾಯಿತು. ಈಗ ಆ ಬೆಕ್ಕು ಸಂಪೂರ್ಣವಾಗಿ ಅವನ ನೆನಪಿನಿಂದ ಮಾಯವಾಗಿ ಹೋಗಿತ್ತು. ತನಗೆ ಏನಾಗುತ್ತಿದೆ ಎಂದು ಅರಿವಾಗುವ ಹೊತ್ತಿಗೆ ಅವನು ಟಾರ್ಚ್‌ನ್ನು ಕೆಳಗೆ ಎಸೆದು, ಬಾಲುಗಳಿದ್ದ ಪೊಟ್ಟಣವನ್ನು ಎದೆಗೆ ಅವಚಿಕೊಂಡುಬಿಟ್ಟಿದ್ದ. ಬೆಳಕೋ ಬೆಳಕು.

"ಓಹೋ"

ಅವನಿಗೆ ರೋಕೆಯ ಧ್ವನಿಯ ಗುರುತು ಸಿಕ್ಕಿತು. ಮೆಲ್ಲನೆ ಮೇಲೆದ್ದ. ಮೂತ್ರಪಿಂಡದಲ್ಲಿ ಏನೋ ಭಯಂಕರ ಆಯಾಸವಾದಂತೆ. ಬರೀ ಡ್ರಾಯರಿನಲ್ಲೇ ಇದ್ದ ರೋಕೆ ಕೈಯಲ್ಲೊಂದು ಕಬ್ಬಿಣದ ಸಲಾಕಿ ಹಿಡಿದುಕೊಂಡು ಹಾಲಿನ ಹಿಂಬದಿಯಿಂದ ಬಂದುಬಿಟ್ಟಿದ್ದ. ದಮಾಸೋ ಹಾದು ಬಂದಿದ್ದ ಬಾಟಲುಗಳ, ಖಾಲಿಪೆಟ್ಟಿಗೆಗಳ ಹಿಂದೆಯೇ ಒಂದು ಜೋಲಿ ತೂಗುತ್ತಿತ್ತು. ಆವೊತ್ತು ಬಂದಿದ್ದಾಗ ಅದೂ ಇರಲಿಲ್ಲ.

ದವಾಸೊ ಸುಮಾರು ಮೂವತ್ತು ಅಡಿ ದೂರದಲ್ಲಿದ್ದಾಗ ರೋಕೆ ಜೋಲಿಯಿಂದ ಕೆಳಗೆ ಧುಮುಕಿ, ಸಲಾಕಿ ಎತ್ತಿಕೊಂಡು ನಿಂತಿದ್ದ. ದಮಾಸೊ ಪೊಟ್ಟಣ ಹಿಡಿದಿದ್ದ ಕೈಯನ್ನು ಹಿಂದೆ ಅಡಗಿಸಿಟ್ಟುಕೊಂಡ. ಕನ್ನಡಕ ಹಾಕಿಕೊಂಡಿರದ ರೋಕೆ ಮೂಗು ತಿರುಚಿ, ಬಂದವನನ್ನು ಗುರುತಿಸುವುದಕ್ಕಾಗಿ ತಲೆಯನ್ನು ಸ್ವಲ್ಪ ಮುಂದೆ ಚಾಚಿದ. ಅವನ ಬಾಯಿಂದ.

"ನೀನಾ!" ಎಂಬ ಉದ್ಗಾರ ಹೊರಟಿತು.

ದಮಾಸೋಗೆ ಕೊನೆಗೂ ಅನಂತವಾದದ್ದೇನೋ ಕೊನೆಗೊಂಡಂತೆ ಅನಿಸಿತು. ರೋಕೆ ಆ ಎಂದು ಬಾಯಿಬಿಟ್ಟುಕೊಂಡೆ ಹತ್ತಿರ ಬಂದ. ಕನ್ನಡಕವಿಲ್ಲದೆ, ನಕಲಿ ಹಲ್ಲುಗಳೂ ಇಲ್ಲದೆ ಅವನು ಥೇಟ್ ಹೆಂಗಸಿನ ಹಾಗೆ ಕಾಣಿಸಿದ.

"ಏನು ಮಾಡ್ತದೀಯ ಇಲ್ಲಿ?"

"ಏನೂ ಇಲ್ಲ" ಎಂದ ದಮಾಸೊ ಮೈಯನ್ನು ಸೂಕ್ಮವಾಗಿ ಆಡಿಸಿ ಮತ್ತೊಂದು ಕಾಲಿನ ಮೇಲೆ ಭಾರಬಿಟ್ಟು ನಿಂತ.

"ಅಲ್ಲೇನು ಇಟ್ಕೊಂಡಿದೀಯ?"

ಒಂದು ಹೆಜ್ಜೆ ಹಿಂದೆ ಇಟ್ಟ ದಮಾಸೊ "ಏನೂ ಇಲ್ಲ" ಎಂದ. ರೋಕೆಯ

ಮುಖ ಕೆಂಪಾಗಿ, ಇಡೀ ಮೈ ನಡುಗತೊಡಗಿತು. "ಹಿಂದ್ಗಡೆ ಕೈಯಲ್ಲಿ ಏನು ಇಟ್ಕೊಂಡಿದೀಯ?" ಎಂದು ಅಬ್ಬರಿಸಿದ. ದಮಾಸೋ ಅವನ ಕೈಗೆ ಪೊಟ್ಟಣಕೊಟ್ಟ. ರೋಕೆ ಎಚ್ಚರ ತಪ್ಪದೆ ಎಡಗೈಯಲ್ಲಿ ಆ ಪೊಟ್ಟಣ ತೆಗೆದುಕೊಂಡು, ಬೆರಳುಗಳಲ್ಲೇ ಅದೇನೆಂದು ಮುಟ್ಟಿನೋಡಿದ. ಎಲ್ಲ ಅರ್ಥವಾಗಿ ಬಿಟ್ಟಿತು.

"ಸಾಧ್ಯವಿಲ್ಲ" ಎಂದ.

ಅವನು ಎಷ್ಟೆಲ್ಲ ದಂಗುಬಡಿದು ಹೋಗಿದ್ದನೆಂದರೆ, ಕೌಂಟರಿನ ಮೇಲೆ ಸಲಾಕೆಯನ್ನು ಇಟ್ಟು ದಮಾಸೋನ ಇರವನ್ನೂ ಮರೆತುಬಿಟ್ಟವನಂತೆ ಪೊಟ್ಟಣವನ್ನು ಬಿಚ್ಚಿ, ಬಾಲುಗಳನ್ನೇ ನೋಡುತ್ತ ಏನೋ ಯೋಚಿಸತೊಡಗಿದ.

"ಅವನ್ನ ವಾಪಸು ತಂದಿಡೋಣ ಅಂತ ಬಂದೆ" ಎಂದ ದಮಾಸೊ.

"ಹೌದು ಹೌದು" ಎಂದ ರೋಕೆ.

ದಮಾಸ್ಕೋಗೆ ಕಾಲು ಕುಸಿಯುತ್ತಿದೆ ಅನ್ನಿಸಿತು. ಏರಿದ್ದ ಅಮಲು ಈಗ ಸಂಪೂರ್ಣ ಇಳಿದು ಹೋಗಿತ್ತು. ನಾಲಗೆಯ ಮೇಲೆ ಏನೋ ಮರಳು ಮರಳು. ಒಂದು ಬಗೆಯ ಗೊಂದಲಮಯ ಏಕಾಕಿತನ. ಪೊಟ್ಟಣವನ್ನು ಮತ್ತೆ ಕಟ್ಟಿಡುತ್ತಾ ರೋಕೆ, "ಇದಪ್ಪ ಪವಾಡ! ನೀನು ಇಷ್ಟೆಲ್ಲ ದಡ್ಡ ಅಂತ್ಲೇ ನಂಗೆ ನಂಬೋಕಾಗ್ತಿಲ್ಲ" ಎಂದ. ಅವನು ತಲೆಯೆತ್ತಿದಾಗ ಮುಖದಲ್ಲಿ ಬೇರೆಯದೇ ಆದ ಭಾವನೆ ಇತ್ತು.

"ಮತ್ತೆ ಇನ್ನೂರು ಪೆಸೊ?"

"ಅಲ್ಲಿ ಏನೂ ಇರಲಿಲ್ಲ" ಎಂದ ದಮಾಸೊ.

ರೋಕೆ ಏನನ್ನೋ ಯೋಚಿಸುತ್ತಿರುವಂತೆ ಅವನ ಕಡೆ ನೋಡಿದ. ಏನನ್ನೋ ಅಗಿಯುತ್ತಿರುವಂತೆ ಬಾಯಾಡಿಸಿದ. ನಂತರ ಮುಖದ ತುಂಬ ಮುಗುಳುನಗು ತುಂಬಿ ಕೊಂಡಿತ್ತು. "ಅಲ್ಲೇನೂ ಇರಲಿಲ್ಲ" ಎಂದು ನಾಲ್ಕಾರು ಬಾರಿ ಹೇಳಿಕೊಂಡು, ಮತ್ತೆ ಸಲಾಕಿಯನ್ನು ಕೈಗೆತ್ತಿಕೊಂಡ.

"ಸರಿ, ನಾವು ಈಗಲೇ ಹೋಗಿ ಮೇಯರ್‌ಗೆ ಈ ಕತೆ ಹೇಳೋಣ."

ದಮಾಸೊ ಬೆವರುತ್ತಿದ್ದ ಕೈಯನ್ನು ಪ್ಯಾಂಟಿಗೆ ಒರೆಸುತ್ತಾ,

"ಅಲ್ಲೇನೂ ಇರಲಿಲ್ಲ ಅಂತ ನಿಮಗೂ ಗೊತ್ತು" ಎಂದ.

ರೋಕೆ ನಗುತ್ತಲೇ ಇದ್ದ.

"ಅಲ್ಲಿ ಇನ್ನೂರು ಪೆಸೋ ಇತ್ತು. ಅದನ್ನ ಈಗ ನಿನ್ನ ಚಮ್ಡಾ ಸುಲಿದು ವಸೂಲು ಮಾಡ್ತಾರೆ. ಯಾಕೆ ಗೊತ್ತಾ? ನೀನು ಬರೇ ಕಳ್ಳ ಅಂತ ಅಲ್ಲ, ಅದಕ್ಕಿಂತ ಹೆಚ್ಚಾಗಿ ಒಬ್ಬ ಪೆದ್ದ ಅಂತ."

ಕನ್ನಡಕ್ಕೆ : ಎಸ್. ದಿವಾಕರ್

ಮಕಾಂಡೋದಲ್ಲಿ ಮಳೆ ಸುರಿಯುವುದನ್ನೇ ನೋಡುತ್ತಿರುವ ಇಸಾಬೆಲ್ಲಾಳ ಸ್ವಗತ

ಚಳಿಗಾಲ ಹಿಡಿದದ್ದು ಜನರು ಚರ್ಚಿನಿಂದ ಹೊರಬರುತ್ತಿದ್ದ ಒಂದು ಭಾನುವಾರ. ಶನಿವಾರದ ರಾತ್ರಿಯಿಡೀ ಉಸಿರು ಕಟ್ಟಿಸುವಂತಿತ್ತು. ಭಾನುವಾರದ ಬೆಳಿಗ್ಗೆ ಕೂಡ ಮಳೆ ಬರಬಹುದೆಂದು ಬಹುಶಃ ಯಾರಿಗೂ ಅನ್ನಿಸಿರಲಿಲ್ಲ. ಚರ್ಚಿನ ಪೂಜೆಯ ನಂತರ. ನಾವು ಹೆಂಗಸರು ನಮ್ಮ ಛತ್ರಿಗಳನ್ನು ಬಿಚ್ಚಿ ತೆರೆಯುವುದರೊಳಗೇ ಕಪ್ಪಗಿನ ದಟ್ಟ ಗಾಳಿಯೊಂದು ಬೀಸಿ ಒಂದೇ ಏಟಿಗೇ ಮೇ ತಿಂಗಳ ದೂಳನ್ನು ಒಣಗಿದ ಕಸಕಡ್ಡಿ ತರಗೆಲೆಗಳನ್ನು ಮೇಲೆತ್ತಿ ಗರಗರ ತಿರುಗಿಸಿತ್ತು. ನನ್ನ ಪಕ್ಕ ಇದ್ದ ಯಾರೋ. "ಇದು ಮಳೆಗಾಳಿ!" ಅಂದರು. ಅದಕ್ಕೂ ಮುಂಚೆಯೇ ನನಗೂ ಇದು ಹೊಳೆದಿತ್ತು. ಚರ್ಚಿನಿಂದ ಹೊರಬಂದು ಮೆಟ್ಟಲಿಗಿಳಿಯುತ್ತಿದ್ದ ಕ್ಷಣದಲ್ಲೇ ಹೊಟ್ಟೆ ತೊಳೆಸಿದಂತಾಗಿ ನಾನು ಕಂಗಾಲಾಗಿದ್ದೆ. ಗಂಡಸರು ಒಂದು ಕೈಯಲ್ಲಿ ತಮ್ಮ ತಲೆಯ ಮೇಲಿನ ಟೋಪಿಯನ್ನು, ಮತ್ತೊಂದರಲ್ಲಿ ಕರವಸ್ತ್ರವನ್ನೂ ಹಿಡಿದು ಬೀಸುವ ಗಾಳಿಯಿಂದ ದೂಳಿನ ಮಳೆಯಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾ ಹತ್ತಿರದ ಮನೆಗಳಿಗೆ ಓಡಿದರು ಅದಾಗ ಮಳೆ ಸುರಿಯಿತು. ನಮ್ಮ ತಲೆಯ ಮೇಲೆ ಕೈಗೆಟುಕುವಷ್ಟು ಅಂತರದಲ್ಲೇ ಲೋಳೆಯಾಗಿ ಜಾರುತ್ತಾ ರೆಕ್ಕೆಬಿಚ್ಚಿ ಹಾರುತ್ತಿದ್ದ ಬೂದುಬಣ್ಣದ ಆಕಾಶ.

ದಿನದ ಉಳಿದ ಹೊತ್ತು ನಾನು ನನ್ನ ಚಿಕ್ಕಮ್ಮ ಏಳು ತಿಂಗಳು ಪೂರ್ತಿ ಉರಿಬಿಸಿಲಿನ ತೀಕ್ಷ್ಣಕ್ಕೆ ಕಾದು ಕರಟಾದ ಬಿಸಿನೆಲದ ಶಾಖಕ್ಕೆ ಒಣಗಿ ಬಾಯಾರಿದ

ಕುಂಡದೊಳಗಿನ ರೋಸಮರಿ. ತಪಸ್ವಿನೀ ಗಿಡಗಳಿಗೆ ಮಳೆ ನೀರುಣಿಸುತ್ತಿದ್ದುದನ್ನೇ ಖುಷಿಯಿಂದ ನೋಡುತ್ತಾ, ಕಟಕಟೆಯ ಹತ್ತಿರ ಕುಳಿತಿದ್ದೆವು. ಮಧ್ಯಾಹ್ನದ ವೇಳೆಗೆ ಭೂಮಿಯ ಸದ್ದಡಗಿ, ಮಣ್ಣಿನ ಹಸಿವಾಸನೆ, ಅರಳಿ ಚಿಗುರಿದ ಸಸ್ಯಗಳ ತಾಜಾತನ, ಮಳೆಗೆ ನೆನೆದು ಕಂಗೊಳಿಸುತ್ತಿದ್ದ ರೋಸಮರಿ ಗಿಡಗಳ ತಂಪಾದ ಕಂಪಿನೊಂದಿಗೆ ಬೆರೆತುಕೊಳ್ಳುತ್ತಿತ್ತು. ಮೇ ತಿಂಗಳಲ್ಲಿ ಮಳೆಯೆಂದರೆ ಶುಭ ಸೂಚನೆ-" ಊಟದ ಸಮಯದಲ್ಲಿ ಅಪ್ಪ ಅಂದಾಗ, ಹೊಸಋತುವಿನ ಪ್ರಭಾವಕ್ಕೆ ತೆಕ್ಕೆ ಹಾಕಿಕೊಂಡಿದ್ದ ಚಿಕ್ಕಮ್ಮ, ಮುಗುಳು ನಗುತ್ತಾ " - ಧರ್ಮೋಪದೇಶದಲ್ಲೂ ಇದನ್ನೇ ನಾನು ಕೇಳಿದ್ದು" ಎಂದು ನನ್ನಲ್ಲಿ ಅಂದರು. ಅಪ್ಪ ಮುಗುಳುನಕ್ಕರಷ್ಟೇ. ನಂತರ ಸಾಕಷ್ಟು ಹಸಿದವರಂತೆ ಸಡಗರದಿಂದ ಊಟ ಮಾಡಿ ಮುಗಿಸಿ, ತಿಂದಿದ್ದನ್ನು ಆರಾಮವಾಗಿ ಜೀರ್ಣಿಸಿಕೊಳ್ಳುತ್ತಿ ರುವವರಂತೆ ಕಟಕಟೆಗೆ ಒರಗಿ, ನಿದ್ದೆ ಮಾಡದಿದ್ದರೂ ಎಚ್ಚರದಲ್ಲೇ ಕನಸು ಕಾಣುತ್ತಿರುವವರೇನೋ ಎನ್ನಿಸುವ ಹಾಗೆ ಕಣ್ಣು ಮುಚ್ಚಿ, ಮೌನವಾಗಿ ಕುಳಿತರು.

ಮಧ್ಯಾಹ್ನವೆಲ್ಲಾ ಒಂದೇ ಧಾರೆಯಾಗಿ ಸುರಿಯುತ್ತಲೇ ಇತ್ತು ಮಳೆ. ಏಕತಾನದಿಂದ, ಶಾಂತವಾಗಿ ಧೋಗುಟ್ಟುತ್ತಾ ಇಡೀ ಮಧ್ಯಾಹ್ನ ರೈಲಿನಲ್ಲಿ ಪ್ರಯಾಣಿಸುತ್ತಿರುವ ಹಾಗೆ ಕೇಳಿಸುತ್ತಿದ್ದ ಕೆಳಗೆ ಬೀಳುವ ಅದರ ಸದ್ದು ನಮಗೇ ಗೊತ್ತಿಲ್ಲದ ಹಾಗೆ ಒಳಗೆಲ್ಲೋ ವ್ಯಾಪಿಸಿ ಕ್ರಮೇಣ ನಮ್ಮನ್ನು ಆಕ್ರಮಿಸಿಕೊಳ್ಳುತ್ತಿತ್ತು. ಅಂಗಳದಿಂದ ಬೀಸುವ ಅದರ ತಣ್ಣಗಿನ ಕೊರೆಯುವ ಇರಿಚಲ ಸಿಡಿತದಿಂದ ತಪ್ಪಿಸಿಕೊಳ್ಳಲು ಸೋಮವಾರ ನಸುಕಿನಲ್ಲೇ ಬಾಗಿಲು ಮುಚ್ಚುವ ಹೊತ್ತಿಗೆ ನಮ್ಮನ್ನು ಸಂಪೂರ್ಣ ಆವರಿಸಿಕೊಂಡಿದ್ದು ಈ ಮಳೆ ಮಾತ್ರ ನಸುಕು ಸರಿದು ಬೆಳಗಾಗುವ ಹೊತ್ತಿಗೆ. ಬರೀ ಮಳೆಯೇ ತುಂಬಿ ಹರಿಯುತ್ತಿತ್ತು. ನಾನೂ, ನನ್ನ ಚಿಕ್ಕಮ್ಮ ಮನೆಯ ಹಿಂದಿನ ಹಿತ್ತಲು ಕಾಣಲು ಹೋದೆವು. ಮೇ ತಿಂಗಳ ಸುಡುಬಿಸಿಲಿನ ಬೂದುಬಣ್ಣದ ಉರಿನೆಲ ರಾತ್ರಿ ಬೆಳಗಾಗುವುದರೊಳಗೇ ಯಾವುದೋ ಅಗ್ಗದ ಸೋಪಿನ ಹಾಗೆ ಕಪ್ಪು ಲೋಳೆಯಾಗಿ ಬದಲುಗೊಂಡು ನಿಂತಿತ್ತು. ಹೂವಿನಕುಂಡಗಳಿಂದ ಝರಿಯಂತೆ ಕೆಳಗುರುಳುತ್ತಿದ್ದ ನೀರು. "-ಗಿಡಗಳಿಗೆ ಬೇಕಾದ್ದಕ್ಕಿಂತಾ ಹೆಚ್ಚು ನೀರು ರಾತ್ರಿಯೇ ಬಿದ್ದಂತಿದೆ" ಚಿಕ್ಕಮ್ಮ ಮುಗುಳು ನಗುವುದನ್ನು ನಿಲ್ಲಿಸಿ ನುಡಿದಾಗ, ಹಿಂದಿನ ದಿನದ ಅವರ ಸಂತೋಷ. ರಾತ್ರಿ ಕಳೆಯುವುದರೊಳಗೇ ಯಾವುದೋ ಚಿಂತೆ, ಅನಿರ್ದಿಷ್ಟ ಕಳವಳಕ್ಕೆ ತಿರುಗಿದ್ದು ನನ್ನ ಗಮನಕ್ಕೂ ಬಂದಿತು. "ನನಗೂ ಹಾಗೇ ಅನ್ನಿಸುತ್ತಿದೆ.

ಯಾರಾದರೂ ಕೆಲಸದವರನ್ನು ಕರೆದು ಮಳೆ ನಿಲ್ಲುವವರೆಗೆ ವರಾಂಡದಲ್ಲಿಟ್ಟಿದ್ದರೆ ಆಗುತ್ತಿತ್ತು-" ಮರಗಳ ಮೇಲೆ ಬೀಳುತ್ತಿದ್ದ ಮಳೆ ಬೃಹದಾಕಾರದ ಮರವಾಗಿ ಬೆಳೆಯುತ್ತಿರುವಾಗ ಕಡೆಗೆ ಅವರು ಮಾಡಿದ್ದೂ ಅಷ್ಟೇ. ಭಾನುವಾರ ಬೆಳಿಗ್ಗೆ ಕುಳಿತಿದ್ದ ಜಾಗದಲ್ಲೇ ಅಪ್ಪ ಕುಳಿತಿದ್ದರೂ ಮಳೆಯ ಬಗ್ಗೆ ಅವರೇನೂ ಹೇಳಲಿಲ್ಲ. " - ಬಹುಶಃ ನಿನ್ನೆ ರಾತ್ರಿ ನಿದ್ದೆ ಸರಿಯಾಗಿ ಮಾಡಿರಲಿಕ್ಕಿಲ್ಲ. ಎದ್ದಾಗ ಬೆನ್ನು ಸೆಟೆದುಕೊಂಡಿತ್ತು -" ಅಂದದ್ದಷ್ಟೇ. ನಂತರ ಕಟಕಟೆಗೆ ಒರಗಿ, ಕುರ್ಚಿಗೆ ಕಾಲು ನೀಡಿ. ಖಾಲಿ ತೋಟದ ಕಡೆ ತಲೆ ಹೊರಳಿಸಿ, ಕುಳಿತೇ ಇದ್ದರು. ಮುಸ್ಸಂಜೆಯ ಹೊತ್ತಿಗೆ ಮಧ್ಯಾಹ್ನದ ಊಟವೂ ಮಾಡದೇ, "ಇದು ನೋಡಿದರೆ ಮುಗಿಯುವ ಹಾಗೇ ಕಾಣಿಸುವುದಿಲ್ಲ-" ಎಂದು ಸೇರಿಸಿದರಷ್ಟೇ. ಫಕ್ಕನೇ ನನಗೆ ಬೇಸಿಗೆಯ ಉರಿದಿನಗಳು ನೆನಪಾದವು. ಹೊರಗೆಲ್ಲೋ ಚಲಿಸದ ಘಂಟೆಯ ನಿರಂತರ, ನಿಸ್ತೇಜ ಗುಂಯೀ ಸದ್ದಿಗೇ ಕಿವಿಹಚ್ಚಿ, ಮೈಗೆ ಮುದ್ದೆಯಾಗಿ ಅಂಟಿಕೊಳ್ಳುವ ನಮ್ಮ ಬಟ್ಟೆಯಡಿ - ಜಗ್ಗುತ್ತಿರುವ ಘಂಟೆಯ ಭಾರಕ್ಕೆ ಕುಸಿಯುತ್ತಾ ಮಲಗುವ ಹವಣಿಕೆಯಲ್ಲಿ ಸೆಣಸಾಡುವ ಆಗಸ್ಟ್ ತಿಂಗಳ ಆ ಸುದೀರ್ಘ, ನೀರಸ ಮಧ್ಯಾಹ್ನಗಳು, ನೆನಪಿಗೆ ಬಂದಿತು. ಮಳೆಗೆ ತೊಯ್ದ ಗೋಡೆಗಳನ್ನೇ, ನೀರಿಗೆ ಉಬ್ಬಿದಂತೆ ಕಾಣುತ್ತಿದ್ದ ಅದರ ನೆನೆದ ತೊಲೆಗಳನ್ನೇ ನೋಡುತ್ತಿದ್ದೆ. ಎದುರಿನ ಕೈ ತೋಟ ಮೊದಲ ಬಾರಿಗೆ ಬೋಳಾಗಿ, ಗೋಡೆಯ ಪಕ್ಕದ ಮಲ್ಲಿಗೆ ಬಳ್ಳಿ ಸತ್ತ ನನ್ನಮ್ಮನ ನೆನಪಿಗೆ ನಿಷ್ಠೆಯಾಗಿ ನಿಂತಿತ್ತು. ನನ್ನ ತಂದೆ ತೂಗುಕುರ್ಚಿಯಲ್ಲಿ ಕುಳಿತು, ತಮ್ಮ ನೋವಿನ ಬೆನ್ನು ಹುರಿಯನ್ನು ದಿಂಬಿನ ಮೇಲೆ ಆನಿಸಿಟ್ಟು, ಅವರ ಅದೇ ವಿಷಾದ ಕಣ್ಣುಗಳು ಮಳೆಯ ನಿಗೂಢದೊಳಗೆಲ್ಲೋ ಮುಳುಗಿ ಹೋದದ್ದೂ - ನನ್ನ ಕಣ್ಣಿಗೆ ಕಾಣಿಸುತ್ತಿತ್ತು. ಆಗ ಆಗಸ್ಟ್ ತಿಂಗಳ ಕತ್ತಲ ನೀರವದಲ್ಲಿ ಯಾವ ಸದ್ದೂ ಮೂಡದ ನಿಶಬ್ದ ಮೌನದಲ್ಲಿ - ಓಬೀರಾಯನ ಕಾಲದಿಂದಲೂ ತನ್ನ ಕಿಲುಬುಗಟ್ಟಿದ ಅಕ್ಷದ ಸುತ್ತಾಸುತ್ತಿ ಬರುತ್ತಿರುವ ಭೂಮಿ ಸಹಸ್ರ ಸದ್ದಾಗಿ ತಟ್ಟುತ್ತಿದ್ದದ್ದು ನೆನಪಾಯಿತು. ಸಟ್ಟನೇ ಯಾವುದೋ ದುಃಖ ನನ್ನನ್ನು ಆವರಿಸಿಕೊಂಡಿತು.

ಭಾನುವಾರದಂತೆ ಸೋಮವಾರವೂ ಇಡೀ ದಿನ ಮಳೆ ಸುರಿಯಿತು. ಆದರೆ ಹೃದಯದೊಳಗೆ ಏನೋ ಬದಲಾಗುತ್ತಾ ಹಿಂಡಿದಂತೆ ಅನ್ನಿಸಿ - ಮಳೆಯೀಗ ಮತ್ತೊಂದೇ ಗತಿಯಲ್ಲಿ ಸುರಿಯುತ್ತಿದ್ದಂತೆ ತೋರುತ್ತಿತ್ತು. ಮುಸ್ಸಂಜೆ ಹೊತ್ತಿಗೆ ನನ್ನ ಕುರ್ಚಿಯ ಪಕ್ಕದ ಒಂದು ಧ್ವನಿ ನುಡಿಯಿತು-" ಈ ಮಳೆಯೊಂದು ಬರೀ ಬೇಜಾರು"

ಕುಳಿತಲ್ಲಿಂದ ತಿರುಗದೇ ಮಾರ್ಟಿನ್‌ರ ಆ ಧ್ವನಿಯನ್ನು ಗುರುತಿಸಿದೆ. ಒಂದು ಡಿಸೆಂಬರ್ ತಿಂಗಳ ಮ್ಲಾನ ಬೆಳಿಗ್ಗೆ ನನ್ನ ಗಂಡನಾಗಿ ಬಂದ ನಂತರವೂ ಬದಲಾಗಿರದ ಎಂದಿನ ಅದೇ ನೀರಸ. ಬೇಸರದ ನಿರ್ಲಿಪ್ತ ಭಾವ ಹೊರಗೆಡವಿ, ನನ್ನ ಪಕ್ಕದ ಕುರ್ಚಿಯಲ್ಲೇ ಕುಳಿತು ಅವರು ಮಾತಾಡುತ್ತಿದ್ದರೆಂದೂ ಗೊತ್ತಿತ್ತು. ಆಗಲೇ ಮದುವೆಯಾಗಿ ಐದು ತಿಂಗಳೂ ಕಳೆದು, ಹೊಟ್ಟೆಯಲ್ಲೀಗ ಮಗುವಿಟ್ಟುಕೊಂಡವಳು, ನಾನು. ಇವರೋ. ನನ್ನ ಪಕ್ಕ ಕುಳಿತು ಮಳೆ - ಬೇಜಾರು ಅನ್ನುತ್ತಿದ್ದಾರೆ . "ಬೇಜಾರೇ" ಕೇಳಿದೆ ನಾನು. "ಈ ಬೋಳು ತೋಟ, ಮುಂದೆ ಬರಲಾರದೇ ಅಂಗಳದಲ್ಲಿ ನೆನೆಯುತ್ತಿರುವ ಆ ಪಾಪದ ಮರಗಳು ಎಲ್ಲಾ ಯಾವುದೋ ಗೋಳಿನಂತೆ ಅನ್ನಿಸುತ್ತಿದೆ. ನನಗೆ-" ನಂತರ ತಿರುಗಿ ಇವರನ್ನು ಅರಸಿದಾಗ ಅಲ್ಲಿ ಯಾರೂ ಇರಲಿಲ್ಲ. ಒಂದು ಧ್ವನಿ ಮಾತ್ರ ಇದು ಎಂದಿಗೂ ನಿಲ್ಲುವ ಹಾಗೆ ಕಾಣಿಸುವುದಿಲ್ಲ ಎಂದು ನನಗೆ ಹೇಳುತ್ತಿದ್ದಂತೆ ಅನ್ನಿಸಿತು. ಮತ್ತೆ ಧ್ವನಿ ಬಂದತ್ತ ತಿರುಗಿದಾಗ ಕಂಡದ್ದು ಖಾಲಿ ಕುರ್ಚಿ.

ಮಂಗಳವಾರ ಬೆಳಿಗ್ಗೆ ಹಿತ್ತಲಲ್ಲಿ ಒಂದು ದನವಿದ್ದದ್ದು ಕಾಣಿಸಿತು. ಅದರ ಗೊರಸು ಮಣ್ಣಿನೊಳಗೆ ಹೂತು ಹೋಗಿ, ತಲೆ ತಗ್ಗಿಸಿ ತನ್ನ ಪ್ರಕೃತಿಗೆ ವಿರುದ್ಧವಾಗಿ ಅಲುಗಾಡದೇ ಅಚಲವಾಗಿ ನಿಂತಿದ್ದ ಅದು ಮಣ್ಣಿನಿಂದ ನಿರ್ಮಿಸಿದ ಗೊಂಬೆಯಂತೆ ಎದ್ದು ಕಾಣುತ್ತಿತ್ತು. ಬೆಳಿಗ್ಗೆ ಎಲ್ಲಾ ಕೆಲಸದವರು ಕೋಲಿನಿಂದ, ಕಲ್ಲಿನಿಂದ ಅದನ್ನು ಹೊರಗಟ್ಟಲು ಪ್ರಯತ್ನಿಸುತ್ತಿದ್ದರು. ಆದರೂ ಅದು ಕದಲದೇ, ಯಾವ ಸೊಡ್ಡಿಗೂ ಬಗ್ಗದೇ ಪಟ್ಟು ಹಿಡಿದು ಗೊರಸನ್ನು ಹಾಗೇ ಕೆಸರಿನೊಳಗೆ ಇಳಿಬಿಟ್ಟು ತನ್ನ ಭಾರೀ ತಲೆಯನ್ನು ಮಳೆಗೆ ತೋಯಿಸಿಕೊಳ್ಳುತ್ತಾ ತೋಟದಲ್ಲಿ ಸಿಂತೇ ಇತ್ತು. ಕಡೆಗೆ ನನ್ನ ತಂದೆಯ ಸಹನೆಯೂ ಮೀರಿ ಅದರ ರಕ್ಷಣೆಗೆ ಬರುವಷ್ಟು ಕೆಲಸದವರ ಕಿರುಕುಳ ಸಾಗಿತು. "ಅದನ್ನು ಬಿಟ್ಟು ಬಿಡಿ" ಅವರು ಕೇಳಿಕೊಂಡರು. "ಬಂದಂತೇ ಅದು ಹೊರಟು ಹೋಗುತ್ತದೆ..."

ಅಂದು - ಹೊತ್ತು ಕಂತುವ ಹೊತ್ತಿಗೆ, ನೀರು ಹೃದಯದ ಒಳಗೆಲ್ಲೋ ಎಳೆದ ಬರೆಯಂತೆ ಒತ್ತಿ, ಸೀಳುತ್ತಾ ಒಳಗಿಳಿಯುತ್ತಿತ್ತು. ಮೊದಲ ದಿನದ ತಂಪು ಯಾವುದೋ ಬಿಸಿಗೆ ಕರಗಿ ಅಂಟಿಕೊಳ್ಳುತ್ತಾ ಆರ್ದ್ರಗೊಳ್ಳುತ್ತಿದ್ದಂತೆ, ಹವಾಮಾನ ಬಿಸಿಯೂ ಅಲ್ಲದ, ತಂಪೂ ಆಗಿರದ ಎಲ್ಲೋ ಚಳಿ ಜ್ವರಕ್ಕೆ ಬಿದ್ದ ಹಾಗೆ. ಬೂಟಿನ ಒಳಗೆ ಕಾಲುಗಳು ಒದ್ದೆಯಾಗುತ್ತಿದ್ದುವು. ಕಿರಿಕಿರಿಗೆ ಕಾರಣವಾಗುತ್ತಿದ್ದದ್ದು ಬರೀ ಕಾಲೋ ಅಥವಾ ಮೈ

ಮೇಲಿದ್ದ ಬಟ್ಟೆಯ ಸಂಪರ್ಕವೋ - ಹೇಳುವುದು ಕಷ್ಟವಾಗುತ್ತಿತ್ತು. ಮನೆಯ ಎಲ್ಲಾ ಕೆಲಸಗಳೂ ಸ್ತಬ್ಧಗೊಂಡಿದ್ದವು. ನಾವು ವೆರಾಂಡದಲ್ಲೇ ಕುಳಿತಿದ್ದರೂ ಮೊದಲ ದಿನದಂತೆ ಮಳೆಗೇ ಕಣ್ಣು ನೆಟ್ಟಿರಲಿಲ್ಲ. ಮಳೆ ಸುರಿಯುತ್ತಿದ್ದಂತೆಯೂ ಅನ್ನಿಸುತ್ತಿರಲಿಲ್ಲ. ಮುಸ್ಸಂಜೆಯ ಮಂಕು ಕವಿದ ವಿಷಣ್ಣ ಹೊತ್ತಿನಲ್ಲಿ, ನಮ್ಮ ಕಣ್ಣಿಗೆ ಬೇರೆ ಏನೂ ಗೋಚರಿಸದೇ ಯಾವನೋ ಅಪರಿಚಿತ ಆಗಂತುಕನೊಬ್ಬ ಕನಸಿನಲ್ಲಿ ಮೂಡಿ, ಬೆಚ್ಚಿ ಬೀಳಿಸಿ ಎಬ್ಬಿಸಿದ ನಂತರ ತುಟಿಯಲ್ಲಿ ಉಳಿಸಿ ಹೋಗುವ ಯಾವುದೋ ಹುಳಿವಾಸನೆಯಂತೆ ಅರೆಕೊರೆಯಾಗಿ. ಅಸ್ಪಷ್ಟವಾಗುತ್ತಾ ಕಾಣಿಸುತ್ತಿದ್ದದ್ದು ಮುಸುಕಿನ ಮರೆಯಲೆಲ್ಲೋ ಉಳಿದ ಮರಗಳು ರೂಪುರೇಷೆಗಳಷ್ಟೇ. ಅಂದು ಮಂಗಳವಾರ ಎಂದು ಸ್ಪಷ್ಟವಾಗಿ ಹೊಳೆಯುತ್ತಿದ್ದಂತೇ ಪ್ರತಿ ವಾರವೂ ಮನೆಗೆ ಬಂದು ತಮ್ಮ ನೋವಿನ ಭಾರಧ್ವನಿಯಲ್ಲಿ ಸಾಮಾನ್ಯ ಹಾಡುಗಳನ್ನು ಹಾಡುವಾಗಲೂ ತಪ್ಪಿಸಿಕೊಳ್ಳಲು ಅಸಾಧ್ಯವಾದ ತಮ್ಮ ಅಸಾಧಾರಣ ಪ್ರತಿಭೆಯನ್ನು ಸ್ವರದಲ್ಲಿ ಮೂಡಿಸುತ್ತಿದ್ದ ಸ್ಟೇಂಟ್ ಜೆರೋಮ್ ಅವಳಿ - ಜವಳಿ ಕುರುಡಿಯರ ನೆನಪಾಯಿತು. ಮಳೆಯ ಆಚೆಯೂ ಆ ಕುರುಡಿಯರ ಮೊಟಕು ಹಾಡುಗಳು ಕಿವಿಗೆ ತಟ್ಟಿದಂತೆ ಅನ್ನಿಸಿ, ಇದೀಗ ಮನೆಯಲ್ಲಿ ಮುದುರಿ ಕುಳಿತ ಅವರು ನಿಲ್ಲುವ ಮಳೆಗಾಗಿಯೇ ಎದುರು ನೋಡುತ್ತಾ ಕಡೆಗಾದರೂ ಹೊರಬಂದು ಹಾಡಲಿಕ್ಕಾಗಿಯೇ ಕಾಯುತ್ತಿರುವಂತೆ ಭಾಸವಾಯಿತು. ಇಂದು ಸ್ಟೇಂಟ್ ಜೆರೋಮ್ ಅವಳಿಗಳು ಬರುವುದಿಲ್ಲ ಎಂದು ಕ್ಷಣ ಅನ್ನಿಸುತ್ತಿದ್ದಂತೇ ಅನ್ನಿಸಿದ್ದು ಪ್ರಾಯಶಃ ಮಧ್ಯಾಹ್ನದ ನಿದ್ದೆಯ ನಂತರ. ಪ್ರತಿ ಮಂಗಳವಾರ ಔಷಧಿಗಾಗಿ ನಿಂಬೆಕುಡಿಯ ಒಂದಿಡೀ ರೆಂಬೆಯನ್ನೇ ಕೇಳಿಕೊಂಡು ವೆರಾಂಡಕ್ಕೆ ಬರುತ್ತಿದ್ದ ಆ ಭಿಕ್ಷುಕಿ ಕೂಡ.

ಅಂದು ನಾವು ನಮ್ಮ ಊಟದ ಪರಿವೆಯನ್ನು ಕಳೆದುಕೊಂಡೆವು. ಮಧ್ಯಾಹ್ನದ ನಿದ್ದೆಯ ಹೊತ್ತಿಗೆ. ನನ್ನ ಚಿಕ್ಕಮ್ಮ ರುಚಿಯಿಲ್ಲದ ಸೂಪ್, ತಣ್ಣಗಿನ ಬ್ರೆಡ್ ಬಡಿಸಿದರು. ವಾಸ್ತವವಾಗಿ ಸೋಮವಾರದ ಸಂಜೆಯಿಂದಲೂ ನಾವೇನೂ ತಿಂದಿರಲಿಲ್ಲ. ಅಲ್ಲದೇ, ಪ್ರಾಯಶಃ ನಮ್ಮ ಯೋಚನಾಶಕ್ತಿ ಕುಂದುತ್ತಾ ಬಂದಿದ್ದು ಆಗಿನಿಂದಲೇ. ಮಳೆಯ ಮೋಡಿಗೆ ಸಿಲುಕಿ, ಕಳೆದುಹೋದ ನಮ್ಮ ಸಂವೇದನಾಶಕ್ತಿಯಿಡಿ ಅಸ್ಪಷ್ಟರಾಗುತ್ತಾ ನಾಲಿಗೆ ಚಾಚಿ ಕಬಳಿಸುತ್ತಿರುವ ಪ್ರಕೃತಿ ಎದುರು ನಿರ್ಲಿಪ್ತರಾಗಿ ನಮ್ಮನ್ನು ನಾವೇ ಅರ್ಪಿಸಿಕೊಳ್ಳುತ್ತಿದ್ದೆವು. ಮಧ್ಯಾಹ್ನದ ವೇಳೆಗೆ ಸ್ವಲ್ಪ ಅಲುಗಾಡಿದ್ದು

ದನ ಮಾತ್ರ. ಅಷ್ಟರಲ್ಲೇ ಯಾವುದೋ ಸದ್ದು ಅದರ ಇಡೀ ಮೈ ಅಲುಗಿಸಿ, ತನ್ನ ಗೊರಸನ್ನು ಕೆಸರಿನೊಳಗೆ ಬಲವಾಗಿ ಊರುವಂತೆ ಮಾಡಿತು. ನಂತರ ಅರ್ಧ ಗಂಟೆಯವರೆಗೂ ಅದು ಅಲುಗಾಡದೇ ಹಾಗೇ ನಿಂತಿತ್ತು. ನಿಂತಿದ್ದು ನಿಂತ ಹಾಗೇ ಸತ್ತಂತೆ. ಆದರೆ ಇಷ್ಟು ವರುಷ ಬದುಕಿದ್ದರ ಸಾಕ್ಷಿಯಾಗಿ ಇನ್ನೂ ಬೀಳದೇ ಉಳಿದಂತೆ: ಮಿಸುಕಾಡದೇ ಮಳೆಯಲ್ಲಿ ನೆನೆಯುತ್ತಾ ವರುಷದಿಂದಲೂ ರೂಢಿ ಮಾಡಿಕೊಂಡಿದ್ದಂತೆ. ದೇಹದ ಶಕ್ತಿಯ ಎದುರು ತನ್ನೀ ರೂಢಿಸಿಕೊಂಡಿದ್ದು ಕುಂದುವವರೆಗೂ ನಿಂತೇ ತೀರುವಂತೆ - ಆನಂತರ ಮುಂದಿನ ಎರಡೂ ಕಾಲುಗಳನ್ನು ಬಗ್ಗಿಸಿ, ತನ್ನ ಮುಂಚಾಚಿದ ಮೂತಿಯನ್ನು ಕೆಸರಿನೊಳಗೆ ಇಳಿಸುತ್ತಾ ಕೊನೆಗೆ ತನ್ನಿಂದಲೇ ಕದಡಿಹೋದ ಸುತ್ತಲ ಮೌನದ ಭಾರಕ್ಕೆ ಕ್ರಮೇಣ ತಾನೂ ಮುಳುಗುತ್ತಾ ಸುರಿಯುತ್ತಿದ್ದ ನಿರಂತರ ಮಳೆಯ ಕಾರ್ಯವನ್ನು ಸರಾಗವಾಗುವಂತೆ ಮಾಡಿತು -" ಇದು ಇಲ್ಲಿಗೆ ಬಂತಾ?" ನನ್ನ ಹಿಂದೆ ಯಾರೋ ಅಂದರು. ಯಾರು ಎಂದು ತಿರುಗಿದಾಗ. ಹೊಸ್ತಿಲಲ್ಲಿ ಮಂಗಳವಾರದ ಭಿಕ್ಷುಕಿ. ಔಷಧಿಗಾಗಿ ನಿಂಬೆಕುಡಿ ತೆಗೆದುಕೊಂಡು ಹೋಗಲು ಕೇಳಿಕೊಂಡು ಮಳೆಯಲ್ಲೇ ಬಂದಿದ್ದು ಕಾಣಿಸಿತು.

ಬುಧವಾರ, ನಡುಮನೆಗೆ ಹೋಗುತ್ತಿದ್ದಾಗ ಗೋಡೆಗೆ ದೂಡಿಟ್ಟ ಮೇಜು, ಅದರ ಮೇಲೆ ಪೇರಿಸಿಟ್ಟ ಸಾಮಾನು. ಮತ್ತೊಂದು ಬದಿಯಲ್ಲಿ ರಾತ್ರಿ ಕಳೆಯುವುದರೊಳಗೇ ಎದ್ದು ನಿಂತ ಕೈಸಾಲೆಯ ಮೇಲಿನ ಮನೆಯ ಪಾತ್ರೆ ಪರಡಿ ತುಂಬಿದ ಡಬ್ಬಗಳು. ಟ್ರಂಕ್‌ಗಳು ಇವೆಲ್ಲ ಕಣ್ಣಿಗೆ ಬೀಳದೇ ಇದ್ದಿದ್ದರೆ, ಅತಿಕ್ರಮಿಸುತ್ತಾ ಬಂದಿದ್ದ ಸದ್ಯದ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಪ್ರಾಯಶಃ ನನಗೂ ಸಾಧ್ಯವಾಗುತ್ತಿತ್ತೋ. ಏನೋ! ಎದುರಿನ ದೃಶ್ಯ ವಿವರಿಸಲಾಗದ ಎಂತದೋ ಖಾಲಿ ಖಾಲಿಯಾದಂತಹ ಅನುಭವವೊಂದನ್ನು ಮನಸ್ಸಿನಲ್ಲಿ ಮೂಡಿಸುತ್ತಿತ್ತು. ರಾತ್ರಿಯೇ ಏನೋ ನಡೆದುಹೋಗಿರಬೇಕು. ಅಸ್ತವ್ಯಸ್ತಗೊಂಡ ಮನೆ. ಕೆಲಸದವರು ಅಂಗಿ ಕಳಚಿ, ಹಾಕಿಕೊಂಡ ಪ್ಯಾಂಟನ್ನು ಮೊಳಕಾಲಿನವರೆಗೆ ಮಡಿಚಿ, ಬರಿಗಾಲಲ್ಲಿ ಸಾಮಾನುಗಳನ್ನು ಊಟದ ಕೋಣೆಗೆ ಸಾಗಿಸುತ್ತಿದ್ದರು. ಅವರ ಮುಖಭಾವದಲ್ಲಿ, ವಿಧೇಯರಾಗಿ ಮಾಡುತ್ತಿದ್ದ ಅವರ ಕೆಲಸಗಳಲ್ಲಿ, ನುಂಗಿಕೊಂಡ ತಮ್ಮ ಅಪಮಾನದ ನಿಷ್ಠುರವನ್ನು, ಹೀನಸ್ಥಿತಿ ಅವರಲ್ಲಿ ಮೂಡಿಸಿದ ಅನಿವಾರ್ಯ ದೈನತೆಯನ್ನ ಮಳೆಯಲ್ಲಿ ಯಾರು ಬೇಕಾದರೂ ಕಾಣಲು ಸಾಧ್ಯವಿತ್ತು. ಮನಸ್ಸಿಗೆ ಒಂದೂ ಹೊಳೆಯದೇ ದಿಕ್ಕೇ

ತೋಚದಂತಾಗಿತ್ತು. ಅದಾಗ ಥಕ್ಕನೇ ಮನಸ್ಸಿನೊಳಗೆ ಆಕಾರ ಪಡೆದದ್ದು - ಎಲ್ಲೋ ಹಾಳುಬಿದ್ದ ತಣ್ಣಗಿನ ಜೌಗುನೆಲವೊಂದು ಎಂದೂ ಚಿಗುರಲು ಅಸಾಧ್ಯವಾದ ಕೊಳೆತ. ನಿಸ್ತೇಜ ಗಿಡಗಳಿಂದ ಫಲವತ್ತುಗೊಳ್ಳುತ್ತಾ ಸ್ವಲ್ಪ ಕಾಲ ಮಾತ್ರ ಬದುಕಿರಬಹುದಾದ. ಕೈಗೆ ಹಸಿ ಹಸಿಯಾಗಿ ಅಂಟಿಕೊಳ್ಳುವ ಲೋಳೆ ಲೋಳೆಯಂತಹ ಪಾಚಿಯನ್ನೋ, ನಾಯಿಕೊಡೆಯನ್ನೋ ಹುಟ್ಟಿಸಿ, ಬದಲುಗೊಳ್ಳುತ್ತಿದ್ದಂತೆ - ಸಾಮಾನು ಸರಂಜಾಮಿನಿಂದ ತುಂಬಿಹೋದ ಎದುರಿನ ವಿಲಕ್ಷಣ ದೃಶ್ಯಕ್ಕೆ ಹೊಂದಿಕೊಳ್ಳಲಾಗದೇ ನಾನಿನ್ನೂ ನಡುಮನೆಯಲ್ಲಿ ನಿಂತೇ ಇದ್ದಾಗ, ನಂಗೆ ನ್ಯೂಮೋನಿಯಾ ಬರಬಹುದೆಂದು ಚಿಕ್ಕಮ್ಮ ತಮ್ಮ ಕೋಣೆಯಿಂದಲೇ ಎಚ್ಚರಿಸುತ್ತಿದ್ದ ಧ್ವನಿ ಕೇಳಿಸಿತು. ಆಗಲೇ ನನ್ನ ಮನಸ್ಸಿಗೆ ಹೊಕ್ಕಿದ್ದು - ನೀರಾಗಲೇ ನನ್ನ ಹಿಮ್ಮಡಿಯವರೆಗೂ ಬಂದು, ನೀರಿನಿಂದಲೇ ಆವೃತಗೊಂಡ ಮನೆಯೊಳಗೆ ನೆಲವೆಲ್ಲಾ ಹಾಸಿಟ್ಟ ಕೊಚ್ಚೆಯಾಗಿ, ನೀರೂ ಜಡ್ಡುಗಟ್ಟಿ ಹೋಗಿತ್ತು ಎಂದು.

ಬುಧವಾರ ನಡುಹಗಲಿನವರೆಗೂ ಬೆಳಗಿನ ಮಬ್ಬು ಸರಿದಿರಲಿಲ್ಲ. ಮಧ್ಯಾಹ್ನ ಮೂರು ಗಂಟೆಯ ಒಳಗೇ, ಹೊತ್ತಿಗೆ ಮುಂಚಿತವಾಗಿಯೇ ಬೆಳಕು ಕ್ಷೀಣಿಸಿ, ಎಂದಿನ ಅದೇ ಮಂದ ಗೋಳಿನ ಏಕತಾನದ ಭೋರ್ಗರೆತದೊಂದಿಗೆ ಮಳೆ ಅಂಗಳಕ್ಕೆ ಇಳಿಯುತ್ತಿರುವಾಗಲೇ ಸಂಪೂರ್ಣ ಕವುಚಿಗೊಂಡ ಕತ್ತಲು; ಅನಿರೀಕ್ಷಿತವಾಗಿ ಎರಗಿ ಬಂದ ಇದು ಕವಿದ ಮಂಕಿನಲ್ಲಿ ಪಿಸುಗುಟ್ಟುತ್ತಾ, ಕ್ಷೋಭೆಗೊಂಡ ಪ್ರಕೃತಿಯ ಎದುರು ಎದುರಿಸುವ ಶಕ್ತಿಯೇ ಕುಂದಿ ನಿಷ್ಫಲರಾಗಿ ಗೋಡೆಯ ಪಕ್ಕದ ಕುರ್ಚಿಯಲ್ಲಿ ಮುದುರುತ್ತಾ ಕುಳಿತಿದ್ದ ಕೆಲಸದವರ ಮೌನದ ನಡುವೆ ಬೆಳೆಯುತ್ತಾ ಹೋಗುತಿತ್ತು. ಅದಾಗಲೇ ಹೊರಗಿನಿಂದ ಸುದ್ದಿಗಳು ಬರಲು ಶುರುವಾದದ್ದು; ಯಾರೂ ಅದನ್ನು ಮನೆಗೆ ತರುತ್ತಿರಲಿಲ್ಲ, ಅದು ತನ್ನಷ್ಟಕ್ಕೆ ತಾನೇ ಯಾವುದೋ ಅತ್ಯಮೂಲ್ಯ, ಅತೀ ವಿಶಿಷ್ಟವೆನ್ನುವ ಹಾಗೆ, ಬೀದಿಯ ಕದಡಿಹೊದ ಮಣ್ಣು ನೀರಿನ ಮೂಲಕ. ಆಚೆ ಬಂದ ಮನೆಯ ಎಷ್ಟೋ ಎಷ್ಟೋ ವಸ್ತುಗಳ ಜೊತೆಗೇ - ಬೇಕಾದ್ದು, ಬೇಡಾದ್ದು, ಸತ್ತವರು, ಹೀಗೆ ಪ್ರಕೃತಿಯ ವಿಕೋಪದೊಳಗೆಲ್ಲೋ ಹಳಸಿ ಉಳಿದಿದ್ದನ್ನೆಲ್ಲಾ ಹೊರ ಎಳೆದು ತರುತಿತ್ತು. ಭಾನುವಾರ, ಮಳೆಯನ್ನೂ, ಮುಂದೆ ಸಂಭವಿಸಲಿರುವ ಋತುವಿನ ಸಾರುವಿಕೆಯಲ್ಲಿದ್ದಾಗಲೇ ಘಟಿಸಿದಂತಹ ಘಟನೆಗಳೂ ನಮ್ಮ ಮನೆಗೆ ಗೊತ್ತಾಗಲಿಕ್ಕೆ ಎರಡು ದಿನವಾದರೂ ಹಿಡಿಯುತಿತ್ತು. ಆದ್ದರಿಂದ ಬುಧವಾರದ ದಿನ. ಸುರಿಯುತ್ತಿದ್ದ

ಬಿರುಮಳೆಯ ತೀವ್ರ ಅಂತರಂಗದ ಪ್ರೇರಣಶಕ್ತಿಯೊಂದು ಬಲವಂತದಿಂದ ದಬ್ಬಿದ ಹಾಗೆ ಸುದ್ದಿಗಳು ಬರತೊಡಗಿದವು. ಅದಾಗ ಗೊತ್ತಾಗಿದ್ದು - ಚರ್ಚ್ ಪ್ರವಾಹದೊಳಗೆ ಮುಳುಗಿ, ಬೀಳುವ ನಿರೀಕ್ಷೆಯಲ್ಲಿದೆಯೆಂದು. ಮತ್ಯಾರೋ ಯಾವ ಉದ್ದೇಶವೂ ಇರದೇ ಆ ರಾತ್ರಿ ತಿಳಿಸಿದರು. "ಸೋಮವಾರದಿಂದಲೂ ರೈಲು ಸೇತುವೆಯನ್ನು ದಾಟಲೇ ಆಗುತ್ತಿಲ್ಲ. ಅದರ ಕಂಬಿಗಳನ್ನು ಹೊಳೆ ನೀರು ಕೊಚ್ಚಿಕೊಂಡು ಹೋದ ಹಾಗೆ ಕಾಣಿಸುತ್ತಿದೆ". ಮತ್ತೊಂದು ಸುದ್ದಿಯ ಪ್ರಕಾರ ಹಾಸಿಗೆಯಲ್ಲಿ ಮಲಗಿದ್ದ ರೋಗಿಯೊಬ್ಬಳು ಕಾಣೆಯಾಗಿ, ಅದೇ ಮಧ್ಯಾಹ್ನ ಅಂಗಳದಲ್ಲಿ ತೇಲುತ್ತಿದ್ದದ್ದು ಕಾಣಿಸಿತ್ತು ...

ದಿಗಿಲುಬಿದ್ದು, ಅತೀವ ಹೆದರಿಕೆಯಿಂದ ವಿಪ್ಲವಗೊಂಡ ಮನಸ್ಥಿತಿಯಲ್ಲಿ, ತೂಗುಕುರ್ಚಿಯಲ್ಲಿ ನನ್ನ ಕಾಲುಗಳನ್ನು ಮಡಿಚಿ, ಬಹುದೂರದವರೆಗೂ ಅಸ್ಪಷ್ಟವಾಗಿ ಕಾಣುತ್ತಿದ್ದ ಎದುರಿನ ಮ್ಲಾನ ಕತ್ತಲಿಗೇ ಕಣ್ಣುನೆಟ್ಟು ಕುಳಿತಿದ್ದೆ ನಾನು. ತಲೆ ಮೇಲೆತ್ತಿ ಕಂದೀಲನ್ನು ಎತ್ತಿ ಹಿಡಿದಿದ್ದ ನನ್ನ ಚಿಕ್ಕಮ್ಮ ಬಾಗಿಲಲ್ಲಿ ಕಾಣಿಸಿಕೊಂಡರು. ನಮ್ಮ ಮನೆತನದ ಪ್ರೇತದಂತೆ ಕಾಣಿಸುತ್ತಿದ್ದ ಅವರನ್ನು ಕಂಡು ನನಗೆ ಯಾವ ರೀತಿಯ ಹೆದರಿಕೆಯೂ ಆಗಲಿಲ್ಲ; ಏಕೆಂದರೆ ಅವರಂತೆ ಎಲ್ಲಾ ಅಲೌಕಿಕ ಸ್ಥಿತಿಯನ್ನೂ ಕಂಡವಳು, ನಾನು. ನಾನು ಇದ್ದಲ್ಲಿಗೇ ಅವರೂ ಬಂದರು -- ತಲೆಯನ್ನೂ ಮೇಲೇ ಎತ್ತಿಕೊಂಡು ಕಂದೀಲನ್ನು ಗಾಳಿಗೆ ಹಿಡಿದು, ವೆರಾಂಡದ ನೀರನ್ನು ಸಪ್ಪಳ ಮಾಡುತ್ತಾ, "ನಾವಿನ್ನು ದೇವರ ಪ್ರಾರ್ಥನೆ ಮಾಡಬೇಕು!" ಅನ್ನುತ್ತಾ - ಅವರ ಒಣಗಿದ ಸುಕ್ಕುಗಟ್ಟಿದ ಮುಖ ಗಮನಿಸುತ್ತಲೇ - ಇದೀಗಷ್ಟೇ ಗೋರಿಯಿಂದ ಎದ್ದು ಬಂದವರಂತೆ ಅಥವಾ ಮನುಷ್ಯರಿಗೆ ಅಸಂಬದ್ಧವಾದ ಯಾವುದೋ ವಸ್ತುವಿನಿಂದ ಅವರನ್ನು ತಯಾರಿಸಲ್ಪಟ್ಟಿವ ರಂತೆ ಕಾಣಿಸುತ್ತಿದ್ದರು. ಕೈಯಲ್ಲಿ ಜಪಸರ ಹಿಡಿದು, ನನ್ನನ್ನು ದಾಟಿ ಹೋದ ಅವರು ಹೇಳುತ್ತಿದ್ದರು - "ನಾವೀಗ ಪ್ರಾರ್ಥಿಸಲೇಬೇಕು. ನೀರು ಗೋರಿಯೊಳಗೆ ಇಳಿದು ಸತ್ತ ನಿರ್ಗತಿಕರೆಲ್ಲಾ ಸ್ಮಶಾನದೊಳಗೆ ತೇಲುತ್ತಿದ್ದಾರೆ -"

ಆ ರಾತ್ರಿ ಎಲ್ಲೋ ಸ್ವಲ್ಪ ನಿದ್ದೆ ಮಾಡಿರಬೇಕು ನಾನು. ಅಷ್ಟು ಹೊತ್ತಿಗೆ ಮೂಗೊಳಗೆ ಇರಿಯುವಂತಹ ಕೊಳೆತ ದೇಹದ ಹುಳಿ ವಾಸನೆಯೊಂದು ಸಟ್ಟನೆ ತಟ್ಟಿ ನನ್ನನ್ನು ಎಬ್ಬಿಸಿಬಿಟ್ಟಿತು. ನನ್ನ ಪಕ್ಕದಲ್ಲಿ ಮಲಗಿ, ಗೊರಕೆ ಹೊಡೆಯುತ್ತಿದ್ದ ಮಾರ್ಟಿನ್‌ರನ್ನು ಬಲವಾಗಿ ಅಲ್ಲಾಡಿಸಿ. "ನಿಮಗೂ ಬರುತ್ತಿದೆಯೇ?" ಎಂದು

ಕೇಳಿದೆ ನಾನು, "ಏನು?" ಅವರು ಕೇಳಿದರು. "ವಾಸನೆ! ಬಹಶಃ ಸತ್ತ ಜನರು ಬೀದಿಗಳಲ್ಲಿ ತೇಲುತ್ತಿರುವುದಿರಬೇಕು!" ಆದರೆ ಮಾರ್ಟಿನ್‌ರು ಗೋಡೆ ಕಡೆ ಹೊರಳುತ್ತಾ, ನಿದ್ದೆಯಿಂದ ಭಾರವಾದ ಗೊಗ್ಗರು ಧ್ವನಿಯಲ್ಲಿ ಅಂದರು. "ಅದು ನಿನ್ನ ಭ್ರಮೆಯಷ್ಟೆ. ಈ ಗರ್ಭಿಣಿ ಹೆಂಗಸರು ಯಾವಾಗಲೂ ಏನಾದರೂ ಕಲ್ಪಿಸಿಕೊಳ್ಳುತ್ತಲೇ ಇರುತ್ತಾರೆ ... "

ಗುರುವಾರ - ಬೆಳಿಗ್ಗೆ ವಾಸನೆ ನಿಂತಿತು; ಹಾಗೆ ವಿವೇಚನಾ ಶಕ್ತಿಯೂ, ಕಾಲದ ಪರಿಜ್ಞಾನ ಹಿಂದಿನ ದಿನದಿಂದ ತೊಡಕಾಗುತ್ತಿದ್ದದ್ದು ಸಂಪೂರ್ಣ ಮರೆಮಾಚಿ ನಿಂತಿತು. ಅಲ್ಲಿ ಗುರುವಾರವೇ ಇರಲಿಲ್ಲ. ಯಾವುದನ್ನು ಗುರುವಾರ ಎನ್ನುತ್ತೇವೆಯೋ ಅದೊಂದು ಕಣ್ಣಿಗೆ ಗೋಚರಿಸುವ, ಜಾರುವ ವಸ್ತುವಾಗಿ ಕೈಯಲ್ಲಿ ಹಿಡಿದು ಎರಡು ಹೋಳು ಮಾಡಿದರೆ - ಶುಕ್ರವಾರವನ್ನು ಹಣಕಿ ಕಾಣಲು ಸಾಧ್ಯವೆನ್ನಿಸುತಿತ್ತು. ಅಲ್ಲಿ ಗಂಡಸರಾಗಲೀ ಹೆಂಗಸರಾಗಲೀ ಯಾರೂ ಇರಲಿಲ್ಲ. ನನ್ನ ಚಿಕ್ಕಮ್ಮ, ನನ್ನ ತಂದೆ, ಮನೆಯ ಕೆಲಸದವರು - ಎಲ್ಲರೂ ಬೃಹದಾಕಾರವಾಗಿ ಬೆಳೆಯುತ್ತಿದ್ದು, ತಮ್ಮದಲ್ಲದ ಮೈ ಹೊತ್ತು ನೀರಿನಿಂದ ಆವೃತಗೊಂಡ ಜೌಗಿನ ಶೀತಲದಲ್ಲಿ ನಡೆದಾಡುತ್ತಿದ್ದಂತೆ - ನನ್ನ ತಂದೆ ಹೇಳಿದರು ಆಗ -"ಇಲ್ಲಿಂದ ಕದಲಬೇಡ! ಏನು ಮಾಡಬೇಕೆಂದು ನಿನಗೆ ಹೇಳುವವರೆಗೂ-" ಎಲ್ಲೋ ದೂರದಿಂದ, ಬಳಕುತ್ತಾ ಬಂದ ಅವರ ಆ ಧ್ವನಿ ಕಿವಿ ಗ್ರಹಿಸಿದಂತೆ ಅನಿಸದೇ ಇದ್ದರೂ ತಟ್ಟಿದಂತಾಗಲು ಪ್ರಾಯಶಃ ಇನ್ನೂ ಚುರುಕಾಗಿ ಉಳಿದಿದ್ದು ಅದೊಂದೇ ಸಂವೇದನಾಶಕ್ತಿ ಆಗಿರಬೇಕು.

ಆದರೆ ನನ್ನ ತಂದೆ ನಾನಿದ್ದಲ್ಲಿಗೆ ಬರಲೇ ಇಲ್ಲ; ಮಳೆಯೊಳಗೆಲ್ಲೋ ಮುಳುಗಿ ಹೋಗಿದ್ದರು. ರಾತ್ರಿಯಾಗುತ್ತಿದ್ದಂತೇ ಮಲಗುವ ಕೋಣೆಗೆ ನನ್ನನ್ನು ಕರೆದುಕೊಂಡು ಹೋಗಲು ಚಿಕ್ಕಮ್ಮನಿಗೆ ಹೇಳಿದೆ. ಆ ರಾತ್ರಿಯೆಲ್ಲಾ ಪ್ರಶಾಂತವಾದ ಒಂದು ಸುಖ ನಿದ್ದೆಯಲ್ಲಿ ಕಳೆಯಿತು. ಅದರ ಮಾರನೇ ದಿನವೂ ಮತ್ತೇ ಅದೇ ಪೇಲವಗೊಂಡ ಹೇಳಿಕೊಳ್ಳುವಂತಹ ಬದಲಾವಣೆಯೊಂದು ಇರದ ಅಂತಹದೇ ನಿಸ್ಸಾರ ವಾತಾವರಣ. ಕಣ್ಣು ಬಿಡುತ್ತಿದ್ದಂತೇ ಸಟ್ಟನೆ ಕುರ್ಚಿಗೆ ಹಾರಿ ಅಲ್ಲಾಡದೇ ಹಾಗೇ ಕುಳಿತುಬಿಟ್ಟೆ.- ಏಕೆಂದರೆ ನನ್ನ ಪ್ರಜ್ಞೆಯ ಆಳದಲ್ಲೆಲ್ಲೋ ಒಂದು ಭಾಗ ಇನ್ನೂ ಸಂಪೂರ್ಣ ಎಚ್ಚರಗೊಂಡೇ ಇರಲಿಲ್ಲವೆಂದು ನನ್ನೊಳಗಿನ ಏನೋ ಒಂದು ನುಡಿಯುತಿತ್ತು. ಅದಾಗ ಕೇಳಿಸಿದ್ದು ರೈಲಿನ ಸಿಳ್ಳು; ಸುದೀರ್ಘವಾಗುತ್ತಾ ಕ್ರಮೇಣ ಕ್ಷೀಣಿಸುತ್ತಿದ್ದ ರೈಲಿನ ಆ

ಸಿಳ್ಳು ಸುರಿಯುತ್ತಿದ್ದ ನಿರಂತರ ಮಳೆಯೊಳಗೆಲ್ಲೋ ಸರಿದುಹೋಗುತ್ತಿತ್ತು. "ಪ್ರಾಯಶಃ ಎಲ್ಲೋ ಹಳುವಾಗಿರಬೇಕು" ನಾನು ಅಂದುಕೊಳ್ಳುತ್ತಿದ್ದ ಹಾಗೇ ನನ್ನ ಹಿಂದೆ ಇದ್ದ ಒಂದು ಧ್ವನಿ ನನ್ನ ಅನುಮಾನಕ್ಕೆ ಉತ್ತರಿಸುವಂತೆ ಕೇಳಿತು- "ಎಲ್ಲಿ? ಯಾರಿದ್ದೀರಿ ಅಲ್ಲಿ?" ಹುಡುಕುತ್ತಾ ಕೇಳಿದೆ. ಆಗ ತನ್ನ ಮಾರುದ್ದದ ಸಣಕಲು ಕೈಯನ್ನು ಗೋಡೆಯತ್ತ ಚಾಚಿದ ನನ್ನ ಚಿಕ್ಕಮ್ಮ ಕಾಣಿಸಿ, "ನಾನು" ಅಂದದ್ದು ಕೇಳಿಸಿತು. "ಕೇಳಿಸಿತೆ?" ಅವರನ್ನೂ ಕೇಳಿದೆ ನಾನು. ಹೂಂಗುಟ್ಟಿದ ಅವರು ಪ್ರಾಯಶಃ ಊರಾಚೆ ಎಲ್ಲೋ ತಿಳಿಯಾಗಿ ಆಗಲೇ ರೈಲುಹಳಿಯನ್ನು ಜೋಡಿಸಿಯಾಗಿರಬೇಕು ಅಂದರು. ನಂತರ ಹಬೆಯಾಡುತ್ತಿದ್ದ ಬೆಳಗಿನ ಉಪಾಹಾರವನ್ನು ನನ್ನ ಮುಂದಿಟ್ಟರು. ಬೆಳ್ಳುಳ್ಳಿಯ ಸಾಸ್, ಬಿಸಿ ಬೆಣ್ಣೆಯ ವಾಸನೆಯಿದ್ದ ಸೂಪ್ ಅದು. ಕ್ಷಣ ಏನು ಕೇಳಬೇಕೆಂದು ತಿಳಿಯದೇ ಗಂಟೆ ಎಷ್ಟಾಯಿತು ಎಂದು ವಿಚಾರಿಸಿದೆ. ಯಾವುದೋ ಅನಿವಾರ್ಯತೆಗೆ ಹೊಂದಿಕೊಂಡಂತಹ ಸೋತ ನಿರುದ್ವಿಗ್ನ ಸ್ವರ ಹೊರಡಿಸಿ ಅವರು ಅಂದರು; "ಬಹುಶಃ ಹತ್ತಿರ - ಹತ್ತಿರ ಎರಡೂವರೆ ಇರಬೇಕು. ಏನಾದರೂ ರೈಲು ತಡವಾಗಿ ಹೋಗಲಿಕ್ಕಿಲ್ಲವಲ್ಲ-" "ಎರಡೂ-ವರೆ! ಅಷ್ಟು ಹೊತ್ತು ಮಲಗಿಬಿಟ್ಟೆನೇ?" ದಂಗಾಗಿ ಕೇಳಿದೆ. "...ತುಂಬಾ ಹೊತ್ತೇನೂ ಮಲಗಲಿಲ್ಲವಲ್ಲ! ಏನು ಮೂರು ಗಂಟೆ ಆಗಿರಬಹುದು!" ಫಕ್ಕನೆ ಸಣ್ಣಗೆ ಹುಟ್ಟಿಕೊಂಡ ನಡುಕದಲ್ಲಿ, ಕೈಯಲ್ಲಿದ್ದ ತಟ್ಟೆ ಜಾರುತ್ತಿದ್ದಂತೆ ಅನ್ನಿಸಿ, "ಎರಡೂ-ವರೆ" ಎರಡೂ-ವರೆ ಗಂಟೆ. ಶುಕ್ರವಾರ. ಅಲ್ಲವಾ?" ಕೇಳಿದೆ. "ಗುರುವಾರ. ಮಗಳೇ! ಇದಿನ್ನೂ ಗುರುವಾರ ಮಧ್ಯಾಹ್ನ ಎರಡೂ - ವರೆ ಗಂಟೆ..." ಇನ್ನಿಲ್ಲದಷ್ಟು ಶಾಂತವಾಗಿ ಅವರು ಹೇಳಿದರು.

ಅದೆಷ್ಟು ಹೊತ್ತು ಹಾಗೆ ಅರೆನಿದ್ರಾವಸ್ಥೆಯಲ್ಲಿ ಮುಳುಗಿ, ನನ್ನ ಮನಸ್ಸು ತನ್ನ ಸ್ಥಿಮಿತ ಕಳೆದುಕೊಂಡಿತ್ತೋ ನಾನರಿಯೆ. ನನಗೆ ಗೊತ್ತಾಗಿದ್ದು ಇಷ್ಟೇ- ಎಣಿಸಲು ಸಾಧ್ಯವಾಗದ ಅದೆಷ್ಟೋ ಅಸಂಖ್ಯ ಗಂಟೆಗಳ ನಂತರ ಒಂದು ಧ್ವನಿ ಪಕ್ಕದ ಕೋಣೆಯಲ್ಲಿ ಮೂಡಿ ಕೇಳಿಸಿತ್ತು ಅಷ್ಟೇ. ಆ ಧ್ವನಿ ಹೇಳುತಿತ್ತು: "ಈಗ ಹಾಸಿಗೆಯನ್ನು ಈ ಕಡೆ ಬಿಚ್ಚೀ" ಅದೇ ಕಳೆಗುಂದಿದ ಸ್ವರ. ಹಾಗಂತ ಹುಷಾರಿರದೇ ಕಾಯಿಲೆ ಬಿದ್ದವರದಂತೆಯೂ ಕೇಳುತ್ತಿರಲಿಲ್ಲ. ಇದೀಗ ಚೇತರಿಸಿಕೊಳ್ಳುತ್ತಿದ್ದಂತಹ ಧ್ವನಿ. ಅನಂತರ ಕೇಳಿಸಿದ್ದು ನೀರಿನಲ್ಲಿನ ಇಟ್ಟಿಗೆಯ ಸದ್ದು ಯಾವುದನ್ನೂ ಗುರುತಿಸುವ ಸ್ಥಿತಿಯಲ್ಲಿ ನಾಸಿಲ್ಲ ಎಂದು ಅರಿವು ಮೂಡುವವರೆಗೂ ಹಾಗೆ ಸ್ಥಿರವಾಗಿ ಮಲಗಿದ್ದಲ್ಲೇ

ಅಂಟಿಕೊಂಡಿದ್ದ ನಾನು. ಆನಂತರ ಮನಸ್ಸನ್ನು ಸಂಪೂರ್ಣ ಆವರಿಸಿಕೊಂಡದ್ದು ಏನೋ ಖಾಲಿಯಾದಂತಹ ಶೂನ್ಯ ಅರಿವು. ಮನೆಯಲ್ಲಿ ಅದರಾಡುತ್ತಿದ್ದ ಬಲವಂತದ ಮೌನವೊಂದು ಕ್ರಮೇಣ ಬೆಳೆದು, ಹೆಮ್ಮರವಾಗುತ್ತಾ ಅಲ್ಲಾಡಿಸಲು ಅಸಾಧ್ಯವಾಗಿ ಮನೆಯ ಪ್ರತಿಯೊಂದನ್ನೂ ಘಾಸಿಗೊಳಿಸುತ್ತಾ ಹೋಗುತ್ತಿದ್ದಂತೆ: ಆಗ ಆವಾಗಷ್ಟೇ ಅನ್ನಿಸಿಬಿಟ್ಟದ್ದು - ನನ್ನ ಹೃದಯ ಇದ್ದಕ್ಕಿದ್ದಂತೆ ತಣ್ಣಗಾಗುತ್ತಾ ಗಟ್ಟಿಯಾಗುತ್ತಿದೆ ಎಂದು. "ನಾನು ಸಾಯುತ್ತಿದ್ದೇನೆ" ಎಂದು ಫಕ್ಕನೇ ಅನ್ನಿಸಿಬಿಟ್ಟಿತು. "ದೇವರೇ! ನಾನು ಸಾಯುತ್ತಿದೀನಿ..." ಹಾಸಿಗೆಯಲ್ಲಿ ಸಟ್ಟನೇ ಎದ್ದು ಕುಳಿತೇಬಿಟ್ಟಿದ್ದೇ ನಂತರ ಕಿರಿಚಿಕೊಂಡಿದ್ದೆ. "ಆಡಾ! ಆಡಾ! ಮಾರ್ಟಿನ್‌ರ ಅಸಮಾಧಾನದ ಧ್ವನಿ. ಮತ್ತೊಂದು ಮಗ್ಗುಲಿನಿಂದ ಉತ್ತರಿಸಿತ್ತು.... "ಅವರ್ಯಾರಿಗೂ ಕೇಳುವುದಿಲ್ಲ... ಈಗಾಗಲೇ ಎಲ್ಲರೂ ಹೊರಗೆ ಹೋಗಿಯಾಗಿದೆ..." ಅದಾಗ ನನ್ನ ಅರಿವಿಗೆ ಬಂದದ್ದು ಮಳೆಯಾಗಲೇ ಸಂಪೂರ್ಣ ನಿಂತು, ಸುತ್ತಲೂ ಕವಿದ ಮೌನ ಹಬ್ಬಿಕೊಳ್ಳುತ್ತಾ ಯಾವುದೋ ಪ್ರಶಾಂತ, ನಿಗೂಢ, ಅಲೌಕಿಕ ರೂಪ ತಾಳಿ ಸಾವಿಗೆ ಸಮೀಪದ ಒಂದು ಪರಿಪೂರ್ಣ ಸ್ಥಿತಿ ಅಲ್ಲಿ ನೆಲೆಸಿತ್ತು ಎಂದು. ನಂತರ ವೆರಾಂಡದಲ್ಲಿ ಓಡಿಯಾಡುತ್ತಿದ್ದವರ ಕಾಲಿನ ಸಪ್ಪಳ ಕೇಳಿಸಿತ್ತು. ಉತ್ಸಾಹ ತುಂಬಿದ ಗೆಲುವಿನ, ತುಂಬು ಲವಲವಿಕೆಯ ಧ್ವನಿ ಅದು. ಅನಂತರ ಕೊರೆಯುವ ಶುಭ್ರ ಗಾಳಿಯೊಂದು ಬಾಗಿಲ ಪಟ್ಟಿಯನ್ನು ಬಲವಾಗಿ ಅಲುಗಿಸಿ, ಅಗುಳಿ ಕಿರುಗುಟ್ಟುತ್ತಾ ತೆರೆದುಕೊಂಡಾಗ ಬೃಹದಾಕಾರದ ಆ ಭಾರೀ ಆಕೃತಿ ಕಳಿತ ಹಣ್ಣಿನಂತೆ ಅಂಗಳದಲ್ಲಿ ನಿಂತ ನೀರಿನ ಮೇಲೆ ದೊಪ್ಪನೆ ಬಿದ್ದು ಬಿಟ್ಟಿತು. ಕತ್ತಲಲ್ಲಿ ಅಡಿಗಿ ಮುಗುಳು ನಗುತ್ತಿರುವ ಯಾರೋ ಅಗೋಚರ ಮನುಷ್ಯನನ್ನು ಗಾಳಿಯೊಳಗಿನ ಏನೋ ಒಂದು ಬಿಚ್ಚಿ ತೋರಿಸುತ್ತಿತ್ತು. "ಓಹ್ ದೇವರೇ!" ಹೊತ್ತಿನ ಅರಿವು ತಪ್ಪಿ ಎಲ್ಲವೂ ಗೋಜಲಾಗಿ, ಗಲಿಬಿಲಿಯಾಗುತ್ತಿದ್ದಂತೆ. ಆದಾಗ ಅಂದುಕೊಂಡೆ. "ಇದೀಗ ಕಳೆದ ಭಾನುವಾರದ ಚರ್ಚಿನ ಪೂಜೆಗೆ ಕರೆಯಲು ಅವರು ಬಂದರೂ ನಂಗೆ ಆಶ್ಚರ್ಯವಾಗುವುದಿಲ್ಲ".

ಕನ್ನಡಕ್ಕೆ : ಜಯಶ್ರೀ ದಿವಾಕರ್

ಮಂಗಳವಾರ ಮಧ್ಯಾಹ್ನದ ಲಘು ನಿದ್ರೆ

ಕಂಪಿಸುವ ಮರಳುಗಲ್ಲಿಗಳ ಸುರಂಗದಿಂದ ನುಗ್ಗಿ ಹೊರಬಂದ ಟ್ರೈನ್ ಕೊನೆ ಇಲ್ಲದ, ಒಂದೇ ಥರ ಕಾಣುವ ಬಾಳೆಯ ತೋಳೆಗಳನ್ನು ಹಾಯ್ದು ಮುಂದೋಡ ತೊಡಗಿತು. ಗಾಳಿ ತೇವಭರಿತವಾಯಿತು. ಸಮುದ್ರ ತಡಿಯ ಮಂದಾನಿಲ ದೂರವಾಯಿತು. ಕಂಪಾರ್ಟ್‌ಮೆಂಟಿನ ಕಿಟಕಿಯ ಮೂಲಕ ಉಸಿರುಕಟ್ಟಿಸುವಂಥ ಹೊಗೆಯ ರಾಶಿಯೊಂದು ಭಗ್ಗನೆ ಒಳಗೆ ನುಗ್ಗಿತು. ರೈಲುದಾರಿಗೆ ಸಮಾನಾಂತರವಾಗಿದ್ದ ಸಣ್ಣ ಬಂಡಿಜಾಡಿನಲ್ಲಿ ಬಾಳೆಯ ಗೊನೆಗಳನ್ನು ಹೇರಿದ್ದ ಎತ್ತಿನ ಗಾಡಿಗಳಿದ್ದವು. ರಸ್ತೆಯಿಂದಾಚೆಗೆ ಕೃಷಿ ಮಾಡದ ಭಾಗಗಳಲ್ಲಿ ಅಲ್ಲೊಂದು ಇಲ್ಲೊಂದರಂತೆ, ವಿದ್ಯುತ್ ಪಂಖಗಳಿದ್ದ ಕಛೇರಿಗಳಿದ್ದವು. ಕೆಂಪು ಇಟ್ಟಿಗೆಯ ಕಟ್ಟಡಗಳಿದ್ದವು. ಧೂಳು ತುಂಬಿದ ತಾಳೆಯ ಮರಗಳ ಮತ್ತು ಗುಲಾಬಿ ಪೊದೆಗಳ ನಡುವೆ ಮನೆಗಳಿದ್ದವು. ಅವುಗಳ ಬಿಸಿಲುಮಚ್ಚಿನಲ್ಲಿ ಕುರ್ಚಿಗಳು ಹಾಗೂ ಬಿಳಿ ಬಣ್ಣದ ಚಿಕ್ಕ ಮೇಜುಗಳೂ ಇದ್ದುವು. ಆಗ ಬೆಳಗಿನ ಹನ್ನೊಂದು ಗಂಟೆ. ಸೆಖೆ ಇನ್ನೂ ಆರಂಭವಾಗಿರಲಿಲ್ಲ.

"ಕಿಟಕಿ ಮುಚ್ಚು. ಇಲ್ಲದಿದ್ದರೆ ನಿನ್ನ ತಲೆ ತುಂಬ ಹೊಗೆಮಸಿ ತುಂಬುತ್ತೆ" ಎಂದಳು ಹೆಂಗಸು.

ಹುಡುಗಿ ಪ್ರಯತ್ನಿಸಿದಳು. ಆದರೆ ಚೌಕಟ್ಟಿಗೆ ತುಕ್ಕು ಹಿಡಿದಿದ್ದರಿಂದ ಕಿಟಕಿಯ ಗಾಜನ್ನು ಮುಚ್ಚಲಾಗಲಿಲ್ಲ.

ಮೂರನೆಯ ದರ್ಜೆಯ ಒಂಟಿ ಬೋಗಿಯಲ್ಲಿ ಅವರಿಬ್ಬರೇ ಪ್ರಯಾಣಿಕರು. ಟ್ರೈನಿನ ಹೊಗೆ ಕಿಟಕಿಯ ಮೂಲಕ ಬರಲಾರಂಭಿಸಿದ್ದರಿಂದ ಹುಡುಗಿ ಕಿಟಕಿ ಬಿಟ್ಟು ಎದ್ದಳು. ತಿನಿಸುಗಳಿಂದ ಕೂಡಿದ್ದ ಒಂದು ಪ್ಲಾಸ್ಟಿಕ್ ಚೀಲ ಮತ್ತು ವೃತ್ತಪತ್ರಿಕೆಯಲ್ಲಿ ಸುತ್ತಿದ್ದ ಒಂದು ಹೂವಿನ ಗುಚ್ಛ ಇವಿಷ್ಟೇ ಅವರ ವಸ್ತುಗಳು. ಹುಡುಗಿ ಅವನ್ನು ಬೇರೆಡೆ ಇಟ್ಟಳು. ಅವಳು ಕಿಟಕಿಯಿಂದ ದೂರವಾಗಿ ಎದುರು ಜಾಗದಲ್ಲಿ ಚಾಯಿಯ ಕಡೆಗೆ ಮುಖ ಮಾಡಿ ಕುಳಿತಳು. ಅವರಿಬ್ಬರೂ ಜೀರ್ಣವಾದ ದುಃಖ ಸೂಚಕ ಬಟ್ಟೆಗಳನ್ನು ತೊಟ್ಟಿದ್ದರು.

ಹುಡುಗಿಗೆ ಹನ್ನೆರಡು ವರ್ಷ ವಯಸ್ಸು. ಅದೇ ಅವಳ ಮೊದಲ ಟ್ರೈನ್ ಪ್ರಯಾಣ. ಕಣ್ಣುರೆಪ್ಪೆಗಳಲ್ಲಿನ ನೀಲಿನಾಳಗಳು, ಕುಳ್ಳದ ಮೃದುವಾದ ತೊಪ್ಪೆ ದೇಹ ಮತ್ತು ಗುತ್ತನಾದ ನಿಲುವಂಗಿಯಂತಿದ್ದ ಉಡುಪಿನಿಂದಾಗಿ ಆ ಹೆಂಗಸು, ಹುಡುಗಿಯ ತಾಯಿ ಅನ್ನಿಸಿಕೊಳ್ಳುವುದಕ್ಕಿಂತ ಹೆಚ್ಚು ಮುಪ್ಪಾಗಿದ್ದಳು. ಅವಳು ಸೀಟಿನ ಹಿಂಭಾಗಕ್ಕೆ ನೆಟ್ಟಗೆ ಒರಗಿಕೊಂಡು ಕೂತಿದ್ದಳು. ಅವಳ ತೊಡೆಯ ಮೇಲಿದ್ದ ಚರ್ಮದ ಕೈ ಚೀಲ ಅಲ್ಲಲ್ಲಿ ಕಿತ್ತುಹೋಗಲಾರಂಭಿಸಿತ್ತು. ಅದನ್ನು ಎರಡೂ ಕೈಗಳಿಂದ ಅವಳು ಹಿಡಿದುಕೊಂಡಿದ್ದಳು. ಬಡತನಕ್ಕೆ ಹೊಂದಿಕೊಂಡಿದ್ದ ಹೆಣ್ಣಿನ ಪ್ರಾಮಾಣಿಕ ಪ್ರಶಾಂತಿ ಅವಳ ಮುಖದಲ್ಲಿ ನೆಲಸಿತ್ತು.

ಹನ್ನೆರಡು ಗಂಟೆಯ ಹೊತ್ತಿಗೆ ಧಗೆ ಪ್ರಾರಂಭವಾಯಿತು. ನೆರೆಯಲ್ಲಿ ಪಟ್ಟಣವಿಲ್ಲದ ನಿಲ್ದಾಣವೊಂದರ ಬಳಿ ನೀರು ಸಂಗ್ರಹಿಸಿಲು ಟ್ರೈನು ಹತ್ತು ನಿಮಿಷ ನಿಂತಿತು. ಹೊರಗೆ ತೋಟಗಳ ರಹಸ್ಯಮಯ ಮೌನದಲ್ಲಿ ನೆರಳುಗಳು ಗೆರೆ ಕೊರೆದಂತೆ ಕಾಣುತ್ತಿದ್ದವು. ಆದರೆ ಬೋಗಿಯೊಳಗೆ ತುಂಬಿಕೊಂಡಿದ್ದ ಸ್ತಬ್ಧ ಗಾಳಿ ಹದಮಾಡದ ಚರ್ಮದ ವಾಸನೆ ಬೀರುತ್ತಿತ್ತು. ಟ್ರೈನ್ ಮತ್ತೆ ವೇಗವಾಗಿ ಓಡಲಿಲ್ಲ. ಒಂದೆ ಥರ ಇದ್ದ ಎರಡು ಪಟ್ಟಣಗಳಲ್ಲಿ ಅದು ನಿಂತಿತು. ಅಲ್ಲಿನ ಮರದ ಮನೆಗಳಿಗೆ ಉಜ್ವಲ ವರ್ಣಗಳನ್ನು ತೊಡೆದಿದ್ದರು. ಹೆಂಗಸು ತೂಕಡಿಸುತ್ತಾ ನಿದ್ದೆ ಮಾಡಿಬಿಟ್ಟಳು. ಹುಡುಗಿ ತನ್ನ ಬೂಟುಗಳನ್ನು ಕಳಚಿದಳು. ಅನಂತರ ಶೌಚಕೋಣೆಗೆ ಹೋಗಿ ಹೂಗುಚ್ಛವನ್ನು ನೀರಿನಲ್ಲಿಟ್ಟಳು.

ಅವಳು ತನ್ನ ಜಾಗಕ್ಕೆ ಹಿಂತಿರುಗಿದಾಗ ತಾಯಿ ಊಟ ಮಾಡಲು ಕಾದಿದ್ದಳು. ಅವಳು ಮಗಳಿಗೆ ಒಂದಿಷ್ಟು ಚೀಸ್, ಅರ್ಧ ತುಂಡು ರೊಟ್ಟಿ ಹಾಗೂ ಒಂದು

ಸೀರೊಟ್ಟಿಯನ್ನು ಕೊಟ್ಟಳು. ತಾನು ಕೂಡ ಪ್ಲಾಸ್ಟಿಕ್ ಚೀಲದಿಂದ ಅಷ್ಟೇ ಆಹಾರವನ್ನು ತೆಗೆದುಕೊಂಡಳು. ಅವರು ತಿನ್ನುತ್ತಿರುವಾಗ ಟ್ರೈನ್ ಒಂದು ಕಬ್ಬಿಣದ ಸೇತುವೆಯ ಮೇಲೆ ನಿಧಾನವಾಗಿ ಸಾಗಿ ಹೋಗಿ, ಹಿಂದೆ ಕಂಡಂಥ ಪಟ್ಟಣವೊಂದನ್ನು ದಾಟಿತು. ಒಂದೆ ವ್ಯತ್ಯಾಸವೆಂದರೆ ಈ ಪಟ್ಟಣದ ಚೌಕದಲ್ಲಿ ಜನಗಳ ಗುಂಪೊಂದಿತ್ತು. ಪ್ರಖರ ಸೂರ್ಯನ ಬಿಸಿಲಲ್ಲಿ ವಾದ್ಯಮೇಳವೊಂದು ಲವಲವಿಕೆಯ ರಾಗವೊಂದನ್ನು ನುಡಿಸುತ್ತಿತ್ತು. ಪಟ್ಟಣದ ಇನ್ನೊಂದು ಪಕ್ಕದಲ್ಲಿ ಬಾಳೆಯ ತೋಟಗಳಿದ್ದವು. ಆಚೆ ಬಯಲು. ಅನಾವೃಷ್ಟಿಯಿಂದಾಗಿ ಬಯಲಿನ ನೆಲ ಒಣಗಿ ಒಡೆದುಹೋಗಿತ್ತು.

ಹೆಂಗಸು ತಿನ್ನುವುದನ್ನು ನಿಲ್ಲಿಸಿದಳು.

"ಷೂಸ್ ಹಾಕ್ಕೋ," ಎಂದಳು.

ಹುಡುಗಿ ಹೊರಗೆ ನೋಡಿದಳು. ನಿರ್ಜನವಾದ ಬಯಲಿನ ವಿನಾ ಬೇರೇನೂ ಕಾಣಿಸಿಲಿಲ್ಲ. ಟ್ರೈನ್‌ಮತ್ತೆ ವೇಗವನ್ನು ರೂಢಿಸಿಕೊಳ್ಳುತ್ತಿತ್ತು. ಆದರೂ ಅವಳು ಸೀ ರೊಟ್ಟಿಯ ಕೊನೆಯ ತುಂಡನ್ನು ಚೀಲದೊಳಕ್ಕೆ ಹಾಕಿ, ಬೇಗ ಬೇಗ ಬೂಟುಗಳನ್ನು ಹಾಕಿಕೊಂಡಳು. ಹೆಂಗಸು ಅವಳಿಗೊಂದು ಬಾಚಣಿಗೆ ಕೊಟ್ಟು,

"ತಲೆ ಬಾಚಿಕೊ" ಎಂದಳು.

ಹುಡುಗಿ ತಲೆ ಬಾಚಿಕೊಳ್ಳುತ್ತಿರುವಾಗ ಟ್ರೈನ್ ಶಿಳ್ಳೆ ಹಾಕಲಾರಂಭಿಸಿತು. ಹೆಂಗಸು ತನ್ನ ಕೊರಳಿನ ಬೆವರನ್ನು ಒರೆಸಿಕೊಂಡಳು. ಮುಖದ ಮೇಲೆ ಜಿನುಗಿದ್ದ ಜಿಡ್ಡನ್ನೂ ಬೆರಳುಗಳಿಂದ ಒರೆಸಿದಳು. ಹುಡುಗಿ ಬಾಚಿಕೊಳ್ಳುವುದನ್ನು ನಿಲ್ಲಿಸುವ ಹೊತ್ತಿಗೆ ಟ್ರೈನು ಪಟ್ಟಣವೊಂದರ ಹೊರವಲಯದ ಮನೆಗಳನ್ನು ದಾಟಿಕೊಂಡು ಹೋಗುತ್ತಿತ್ತು. ಈ ಪಟ್ಟಣ ಹಿಂದಿನ ಪಟ್ಟಣಗಳಿಗಿಂತ ದೊಡ್ಡದಾಗಿದ್ದರೂ ಅವುಗಳಿಗಿಂತ ಹೆಚ್ಚು ಮಂಕಾಗಿದ್ದಂತೆ ಕಂಡಿತು.

"ಏನಾದ್ರೂ ಮಾಡೋದಾದ್ರೆ ಈಗ್ಲೇ ಮಾಡಿಬಿಡು. ಮುಂದೆ ಬಾಯಾರಿಕೆಯಿಂದ ಸಾಯೋ ಹಾಗಾದ್ರೂ ಏನೂ ಕುಡೀಬೇಡ. ಎಲ್ಲದಕ್ಕಿಂತ ಮುಖ್ಯವಾಗಿ ಅಳೋ ಹಾಗಿಲ್ಲ." ಎಂದಳು ಹೆಂಗಸು.

ಹುಡುಗಿ ತಲೆ ತೂಗಿದಳು. ಟ್ರೈನಿನ ಶಿಳ್ಳೆ ಮತ್ತು ಹಳೆಯ ಬೋಗಿಗಳ ಗಡಗಡ ಸದ್ದಿನೊಡನೆ ಬಿಸಿಗಾಳಿ ಒಳನುಗ್ಗಿತು. ಹೆಂಗಸು ಉಳಿದ ಆಹಾರವನ್ನು ಪ್ಲಾಸ್ಟಿಕ್

ಚೀಲದೊಳಗೆ ಹಾಕಿ ಅದನ್ನು ಮಡಿಸಿ ಕೈ ಚೀಲದೊಳಗೆ ಇಟ್ಟಳು. ಒಂದು ಕ್ಷಣ ಆಗಸ್ಟ್ ತಿಂಗಳ ಆ ಮಂಗಳವಾರದ ಉಜ್ವಲ ಹಗಲಿನಲ್ಲಿ ನಗರದ ಪೂರ್ಣ ಚಿತ್ರ ಕಿಟಕಿಯಲ್ಲಿ ಕಂಡಿತು. ಹುಡುಗಿ ನೀರಿಳಿಯುತ್ತಿದ್ದ ನೆನೆದ ವೃತ್ತಪತ್ರಿಕೆಯಿಂದ ಹೂವನ್ನು ಸುತ್ತಿ ಕಿಟಕಿಯಿಂದ ಸ್ವಲ್ಪ ದೂರ ಸರಿದು ತಾಯಿಯನ್ನು ದಿಟ್ಟಿಸಿದಳು. ಪ್ರತಿಯಾಗಿ ತಾಯಿ ಅವಳನ್ನು ಹಿತವಾಗಿ ನೋಡಿದಳು. ಟ್ರೈನ್ ಶಿಳ್ಳೆ ಹಾಕುತ್ತಾ ತನ್ನ ವೇಗವನ್ನು ಕಡಿಮೆ ಮಾಡಿಕೊಳ್ಳಲಾರಂಭಿಸಿತು. ಮುಂದಿನ ಕ್ಷಣದಲ್ಲಿ ಅದು ನಿಂತಿತು.

ನಿಲ್ದಾಣದಲ್ಲಿ ಯಾರೂ ಇರಲಿಲ್ಲ. ಬಾದಾಮಿ ಮರಗಳ ನೆರಳಿನಲ್ಲಿ ಮುಳುಗಿದ್ದ ಆಚೆಕಡೆಯ ಕಿರುದಾರಿಯಲ್ಲಿ ದಳ್ಳಾಳಿಗಳ ಅಂಗಡಿ ಮಾತ್ರ ತೆರೆದಿತ್ತು. ಪಟ್ಟಣ ಧಗೆಯಲ್ಲಿ ತೇಲುತ್ತಿತ್ತು. ಹೆಂಗಸು ಮತ್ತು ಹುಡುಗಿ ಟ್ರೈನಿನಿಂದ ಇಳಿದು ನಿಲ್ದಾಣವನ್ನು ದಾಟಿದರು. ನೆಲಕ್ಕೆ ಹಾಸಿದ್ದ ಹಂಚುಗಳ ನಡುವೆ ಹುಲ್ಲು ಬೆಳೆದು ಅವನು ಮಗುಚಿಹಾಕಿದ್ದವು. ಅದನ್ನು ದಾಟಿಕೊಂಡು ಅವರು ರಸ್ತೆಯ ನೆರಳಿಗೆ ಹೋದರು.

ಆಗಲೆ ಎರಡು ಗಂಟೆಯ ಸುಮಾರು. ಆ ಸಮಯದಲ್ಲಿ ತೂಕಡಿಕೆಯ ಭಾರದಲ್ಲಿ ಇಡೀ ಊರೇ ಮಧ್ಯಾಹ್ನದ ಲಘು ನಿದ್ರೆಯಲಿತ್ತು. ಅಂಗಡಿಗಳು, ಕಛೇರಿಗಳು, ಸಾರ್ವಜನಿಕ ಶಾಲೆಗಳು, ಎಲ್ಲ ಹನ್ನೊಂದು ಗಂಟೆಗೆ ಮುಚ್ಚಿದ್ದವು. ನಾಲ್ಕು ಗಂಟೆಗೆ ಸ್ವಲ್ಪ ಮೊದಲು, ಟ್ರೈನು ಮರಳಿ ಬರುವ ಸಮಯಕ್ಕೆ ಅವುಗಳನ್ನು ಮತ್ತೆ ತೆರೆಯುತ್ತಿದ್ದರು. ನಿಲ್ದಾಣದ ಆಚೆಕಡೆ ಇದ್ದ ಹೋಟೆಲ್, ಅದರ ಬಾರ್ ಮತ್ತು ದಲ್ಲಾಳಿ ಅಂಗಡಿ ಚೌಕದ ಒಂದು ಪಾರ್ಶ್ವದಲ್ಲಿದ್ದ ತಂತಿ ಕಚೇರಿ ಮಾತ್ರ ತೆರೆದಿದ್ದವು. ಮನೆಗಳಲ್ಲಿ ಹೆಚ್ಚಿನವು ಬಾಳೆ ಕಂಪೆನಿ ರೂಢಿಗೆ ತಂದ ಮಾದರಿಯವು. ಬಾಗಿಲುಗಳನ್ನು ಒಳಗಿಂದ ಬೀಗ ಹಾಕಿ ಮುಚ್ಚಿದ್ದರು. ಕಿಟಕಿಯ ಪರದೆಗಳನ್ನು ಇಳಿಬಿಟ್ಟಿದ್ದರು. ಕೆಲವು ಮನೆಗಳೊಳಗೆ ಎಂಥ ಧಗೆ ಇತ್ತೆಂದರೆ ನಿವಾಸಿಗಳು ಹೊರಗೆ ಅಂಗಳದಲ್ಲಿ ಕುಳಿತುಕೊಂಡು ಊಟ ಮಾಡುತ್ತಿದ್ದರು. ಉಳಿದವರು ಬಾದಾಮಿ ಮರಗಳ ನೆರಳಿನಲ್ಲಿ ಕುರ್ಚಿಗಳನ್ನು ಗೋಡೆಗೆ ಅನಿಸಿ ಬೀದಿಯಲ್ಲೇ ಮಧ್ಯಾಹ್ನದ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು.

ಬಾದಾಮಿ ಮರಗಳ ನೆರಳಿನ ಆಶ್ರಯದಲ್ಲೇ ನಡೆಯುತ್ತಾ ಹೆಂಗಸು ಮತ್ತು ಹುಡುಗಿ ಮಧ್ಯಾಹ್ನದ ಲಘು ನಿದ್ರೆಗೆ ಆಡಚಣೆ ಉಂಟು ಮಾಡದೆ ಪಟ್ಟಣವನ್ನು ಪ್ರವೇಶಿಸಿದರು. ಅವರು ನೇರವಾಗಿ ಪಾದ್ರಿಯ ಮನೆಗೆ ಹೋದರು. ಹೆಂಗಸು

ಬಾಗಿಲಿನಲ್ಲಿದ್ದ ಲೋಹದ ತೂತು ಕಿಂಡಿಯನ್ನ ಉಗುರಿನಿಂದ ಕೆರೆದು ಒಂದು ಕ್ಷಣ ಕಾದು ಮತ್ತೆ ಕೆರೆದಳು. ಒಳಗೆ ವಿದ್ಯುತ್ ಪಂಖವೊಂದು ಗೊಂಯ್ ಎನ್ನುತ್ತಿತ್ತು. ಒಳಗಿನ ಹೆಜ್ಜೆಯ ಸದ್ದು ಅವರಿಗೆ ಕೇಳಿಸಲಿಲ್ಲ. ಬಾಗಿಲು ಮೆಲ್ಲನೆ ಕಿರುಗುಟ್ಟಿದ್ದು ಅವರಿಗೆ ಮಂದವಾಗಿ ಕೇಳಿಸಿತು. ಹಿಂದೆಯೇ ತೂತುಕಿಂಡಿಯ ಪಕ್ಕದಿಂದ ಒಂದು ಜಾಗರೂಕ ಧ್ವನಿ ಕೇಳಿಸಿತು: "ಯಾರದು?" ಹೆಂಗಸು ತೂತುಕಿಂಡಿಯ ಮೂಲಕ ನೋಡಲು ಪ್ರಯತ್ನಿಸುತ್ತಾ, ಎಂದಳು:

"ಪಾದ್ರಿಗಳನ್ನು ಕಾಣಬೇಕಾಗಿತ್ತು."

"ಅವರು ನಿದ್ದೆ ಮಾಡ್ತಿದಾರೆ."

"ತುರ್ತಾಗಿ ನೋಡಬೇಕಾಗಿತ್ತು." ಎಂದು ಹೆಂಗಸು ಆಗ್ರಹಪಡಿಸಿದಳು.

ಅವಳ ಧ್ವನಿಯಲ್ಲಿ ದೃಢ ನಿರ್ಧಾರವಿತ್ತು.

ಬಾಗಿಲು ಸದ್ದಿಲ್ಲದಂತೆ ಇನ್ನಷ್ಟು ತೆರೆಯಿತು. ಧಡೂತಿಯಾದ. ವಯಸ್ಸಾದ ಮಹಿಳೆಯೊಬ್ಬಳು ಕಾಣಿಸಿಕೊಂಡಳು. ಅವಳ ಮೈ ಬಿಳಿಚಿಕೊಂಡಿತ್ತು. ಕೂದಲ ಬಣ್ಣ ಕಬ್ಬಿಣದಂತಿತ್ತು. ಅವಳು ಹಾಕಿಕೊಂಡಿದ್ದ ದಪ್ಪಗಾಜಿನ ಕನ್ನಡಕದಲ್ಲಿ ಅವಳ ಕಣ್ಣುಗಳು ತೀರಾ ಚಿಕ್ಕವಾಗಿ ಕಾಣುತ್ತಿದ್ದುವು.

"ಒಳಗೆ ಬನ್ನಿ" ಎನ್ನುತ್ತಾ ಅವಳು ಬಾಗಿಲನ್ನು ಪೂರ್ತಿ ತೆರೆದಳು.

ಹೂಗಳ ಹಳೆಯ ಕಂಪಿನಿಂದ ತುಂಬಿದ್ದ ಕೊಠಡಿಯೊಂದನ್ನು ಅವರು ಪ್ರವೇಶಿಸಿದರು. ಮನೆಯಾಕೆ ಅವರನ್ನು ಒಂದು ಮರದ ಬೆಂಚಿನ ಬಳಿಗೆ ಕರೆದುಕೊಂಡು ಹೋಗಿ ಕುಳಿತುಕೊಳ್ಳುವಂತೆ ಸನ್ನೆ ಮಾಡಿದಳು. ಹುಡುಗಿ ಕುಳಿತಳು. ಆದರೆ ತಾಯಿ ಎರಡೂ ಕೈಗಳಿಂದ ಕೈಚೀಲವನ್ನು ಅವಚಿಕೊಂಡು ಯಾವುದೋ ಧ್ಯಾನದಲ್ಲಿ ನಿಂತೇ ಇದ್ದಳು. ವಿದ್ಯುತ್ ಪಂಖದ ವಿನಾ ಬೇರಾವ ಸದ್ದೂ ಕೇಳಿಸುತ್ತಿರಲಿಲ್ಲ. ಮನೆಯಾಕೆ ಕೊಠಡಿಯ ಆಚೆ ತುದಿಯ ಬಾಗಿಲಲ್ಲಿ ಕಾಣಿಸಿಕೊಂಡು ಅತಿ ಮೆಲ್ಲಗೆ ಹೇಳಿದಳು: ಮೂರು ಗಂಟೆಯಾದ ಮೇಲೆ ಬರಬೇಕಂತೆ. ಐದು ನಿಮಿಷದ ಹಿಂದಷ್ಟೇ ಅವರು ಮಲಗಿದರು."

"ಟ್ರೈನು ಮೂರೂವರೆಗೆ ಬಿಡ್ತದೆ," ಎಂದಳು ಹೆಂಗಸು.

ಅದು ಸಂಕ್ಷಿಪ್ತವಾದ, ಆತ್ಮವಿಶ್ವಾಸದಿಂದ ಕೂಡಿದ ಉತ್ತರವಾಗಿತ್ತು. ಆದರೆ

ಅವಳ ಧ್ವನಿ ಮೆಲುವಾಗಿ ಮೃದುವಾಗಿತ್ತು. ಮನೆಯಾಕೆ ಮೊದಲ ಬಾರಿಗೆ ನಕ್ಕು,

"ಸರಿ" ಎಂದಳು.

ಆಚೆಯ ಬಾಗಿಲು ಮತ್ತೆ ಮುಚ್ಚಿಕೊಂಡಮೇಲೆ ಹೆಂಗಸು ತನ್ನ ಮಗಳ ಪಕ್ಕದಲ್ಲಿ ಕುಳಿತುಕೊಂಡಳು. ಆ ಚಿಕ್ಕ ನಿರೀಕ್ಷಣಾ ಕೋಣೆ ಬಡವಾಗಿದ್ದರೂ ಲಕ್ಷಣವಾಗಿ ಸ್ವಚ್ಛವಾಗಿತ್ತು. ಕೋಣೆಯನ್ನು ವಿಭಾಗಿಸಿದ ಮರದ ಕಟಾಂಜನದ ಆ ಕಡೆ ಸಾದಾ ರೀತಿಯ ಒಂದು ಬರೆಯುವ ಮೇಜಿತ್ತು. ಅದರ ಮೇಲೆ ಒಂದು ಮೇಣಗಪಟವನ್ನು ಹಾಸಿ ಒಂದು ಹೂದಾನಿಯನ್ನಿಟ್ಟಿದ್ದರು. ಹೂದಾನಿಯ ಪಕ್ಕದಲ್ಲಿ ಒಂದು ಪುರಾತನ ಬೆರಳಚ್ಚಿನ ಯಂತ್ರವಿತ್ತು. ಆಚೆ ಕಡೆ ಪ್ಯಾರಿಷ್‌ನ ದಸ್ತಾವೇಜುಗಳಿದ್ದವು. ಅವಿವಾಹಿತ ಹೆಂಗಸೊಬ್ಬಳು ಆ ಕಚೇರಿಯನ್ನು ವ್ಯವಸ್ಥಿತವಾಗಿಟ್ಟಿದ್ದಳು ಎಂದು ನೋಡಿದ ಕೂಡಲೇ ತಿಳಿಯುತ್ತಿತ್ತು.

ಆಚೆ ಕೊನೆಯ ಬಾಗಿಲು ತೆರೆದುಕೊಂಡಿತು. ಈ ಸಲ ತಮ್ಮ ಕನ್ನಡಕದ ಗಾಜನ್ನು ಕರವಸ್ತ್ರದಿಂದ ಒರೆಸುತ್ತಾ ಪಾದ್ರಿಯೇ ಬಂದ. ಕನ್ನಡಕವನ್ನು ಆತ ಹಾಕಿಕೊಂಡ ಮೇಲೆ ಮಾತ್ರವೇ ಅವನು ಬಾಗಿಲು ತೆರೆದಾಕೆಯ ಸೋದರ ಎಂದು ಅವರಿಗೆ ಗೊತ್ತಾಯಿತು.

"ನಿಮಗೆ ಏನು ಸಹಾಯ ಮಾಡಲಿ?" ಎಂದ ಆತ.

"ಸ್ಮಶಾನದ ಬೀಗದ ಕೈ" ಎಂದಳು ಹೆಂಗಸು.

ಹುಡುಗಿ ಹೂವನ್ನು ತೊಡೆಯ ಮೇಲೆ ಇಟ್ಟುಕೊಂಡಿದ್ದಳು. ಬೆಂಚಿನ ಕೆಳಗೆ ಅವಳ ಪಾದಗಳು ಒಂದರ ಮೇಲೊಂದಿದ್ದವು. ಪಾದ್ರಿ ಅವಳ ಕಡೆ ನೋಡಿದ, ಅನಂತರ ಹೆಂಗಸನ್ನು ದಿಟ್ಟಿಸಿದ. ಆಮೇಲೆ ಕಿಟಕಿಯ ತಂತಿ ಬಲೆಯ ಮೂಲಕ ಮೋಡವಿಲ್ಲದ ಥಳಥಳಿಸುವ ಆಕಾಶವನ್ನು ನೋಡಿ ಹೇಳಿದ :

"ಈ ಉರಿಬಿಸಿಲಲ್ಲೇ! ಸ್ವಲ್ಪ ಬಿಸಿಲು ಇಳಿಯೋವರೆಗೆ ಕಾಯಬಹುದಾಗಿತ್ತಲ್ಲ."

ಹೆಂಗಸು ಮೌನವಾಗಿ ತಲೆ ಅಲ್ಲಾಡಿಸಿದಳು. ಪಾದ್ರಿ ಕಟಾಂಜನದ ಆ ಕಡೆ ಪಕ್ಕಕ್ಕೆ ಹೋಗಿ, ಮೇಣಗಪಟದಿಂದ ಸುತ್ತಿದ ಒಂದು ಟಿಪ್ಪಣಿ ಪುಸ್ತಕವನ್ನೂ ಒಂದು ಮರದ ಲೇಖನಿಯನ್ನೂ ಮಸಿದೌತಿಯನ್ನೂ ಬೀರುವಿನಿಂದ ತೆಗೆದುಕೊಂಡು ಮೇಜಿನ ಮುಂದೆ ಕುಳಿತ. ಅವನ ತಲೆಯಲ್ಲಿ ಕೂದಲು ಇಲ್ಲದ್ದಕ್ಕೆ ಪರಿಹಾರವೋ ಎನ್ನುವಂತೆ ಕೈಮೇಲೆ ಸಮೃದ್ಧ ಕೂದಲಿತ್ತು.

"ಯಾವ ಗೋರಿಗೆ ನೀವು ಭೇಟಿ ಕೊಡ್ತೀರಿ?" ಎಂದ ಪಾದ್ರಿ.

"ಕಾರ್ಲೋಸ್ ಸೇಂತೇನೊ ಗೋರಿಗೆ" ಎಂದಳು ಹೆಂಗಸು.

"ಯಾರು?"

"ಕಾರ್ಲೋಸ್ ಸೇಂತೇನೊ" ಪುನರುಚ್ಚರಿಸಿದಳು ಆಕೆ.

ಆದರೂ ಪಾದ್ರಿಗೆ ಇನ್ನೂ ಅರ್ಥವಾಗಲಿಲ್ಲ.

"ಕಳೆದ ವಾರ ಇಲ್ಲಿ ಕೊಲೆಯಾದ ಕಳ್ಳ ಅವನು. ನಾನು ಅವನ ತಾಯಿ," ಎಂದಳು ಹೆಂಗಸು, ಹಿಂದಿನ ಧ್ವನಿಯಲ್ಲೇ.

ಪಾದ್ರಿ ಪರೀಕ್ಷಕ ನೋಟದಿಂದ ಅವಳನ್ನು ನೋಡಿದ. ಅವಳು ಆತ್ಮ ಸಂಯಮದಿಂದ ಅವನನ್ನು ದಿಟ್ಟಿಸಿದಳು. ಪಾದ್ರಿ ನಾಚಿಕೊಂಡ. ಆತ ತಲೆತಗ್ಗಿಸಿ ಬರೆಯಲಾರಂಭಿಸಿದ. ಹಾಳೆಯಲ್ಲಿ ಬರೆಯುತ್ತಾ ಪಾದ್ರಿ ಅವಳ ಗುರುತನ್ನು ಕೇಳಿದ. ಅದಕ್ಕೆ ಅವಳು ಸ್ವಲ್ಪವೂ ಹಿಂತೆಗೆಯದೆ, ಓದುತ್ತಿರುವಳೋ ಎನ್ನುವಂತೆ ಕರಾರುವಕ್ಕಾಗಿ ಎಲ್ಲ ವಿವರಗಳಿಂದಲೂ ಕೂಡಿದ ಉತ್ತರ ಕೊಟ್ಟಳು. ಪಾದ್ರಿ ಬೆವರಲಾರಂಭಿಸಿದ. ಹುಡುಗಿ ಎಡಗಾಲಿನ ಬೂಟಿನ ಕೊಂಡಿಯನ್ನು ಕಳಚಿ ಹಿಮ್ಮಡಿಯನ್ನು ಹೊರಗೆಳೆದು ಬೆಂಚಿನ ಪಟ್ಟಿಯ ಮೇಲಿಟ್ಟಳು ಬಲಗಡೆಯದನ್ನೂ ಹಾಗೆ ಮಾಡಿದಳು.

ಅದೆಲ್ಲ ಪ್ರಾರಂಭವಾದದ್ದು ಕಳೆದ ಸೋಮವಾರ ಬೆಳಗಿನ ಝಾವ ಮೂರುಗಂಟೆಯಲ್ಲಿ, ಈ ಸ್ಥಳದಿಂದ ಕೆಲವೇ ಮನೆಗಳ ಆಚೆ. ಎಲ್ಲಿ ರೆಬೆಕ್ಕಾ ಎಂಬ ವಿಧವೆ ಎಲ್ಲ ಬಗೆಯ ಚೂರು ಪಾರುಗಳಿಂದ ತುಂಬಿಕೊಂಡಿದ್ದ ಒಂದು ಮನೆಯಲ್ಲಿ ಒಂಟಿಯಾಗಿ ವಾಸ ಮಾಡುತ್ತಿದ್ದಳು. ತುಂತುರು ಮಳೆಯ ಶಬ್ದವನ್ನೂ ಮೀರಿ, ಯಾರೋ ಮುಂಬಾಗಿಲನ್ನು ಹೊರಗಡೆಯಿಂದ ಬಲಪ್ರಯೋಗ ಮಾಡಿ ತೆರೆಯಲು ಪ್ರಯತ್ನಿಸುತ್ತಿರುವ ಸದ್ದು ಆ ಹೊತ್ತಿನಲ್ಲಿ ಅವಳಿಗೆ ಕೇಳಿಸಿತು. ಅವಳು ಮೇಲೆದ್ದು ಗೋಡೆ ಬೀರುವಿನಲ್ಲಿದ್ದ ಒಂದು ಪುರಾತನ ರಿವಾಲ್ವರ್‌ಗಾಗಿ ತಡಕಾಡಿದಳು. ಅದನ್ನು ಕರ್ನಲ್ ಆವ್ರೇಲಿಯಾನೋ ಬ್ವೇಂದಿಯಾನ ಕಾಲದಿಂದ ಯಾರೂ ಉಪಯೋಗಿಸಿರಲಿಲ್ಲ. ಅದನ್ನು ತೆಗೆದುಕೊಂಡವಳೇ ಆಕೆ ದೀಪಗಳನ್ನು ಹಾಕದೆ ಪಡಸಾಲೆಗೆ ಹೋದಳು. ಬೀಗದ ಬಳಿಯಿಂದ ಬರುತ್ತಿದ್ದ ಶಬ್ದಕ್ಕಿಂತ ಹೆಚ್ಚಾಗಿ ಇಪ್ಪತ್ತೆಂಟು ವರ್ಷದ ಏಕಾಂಗಿತನ ತನ್ನಲ್ಲಿ ತುಂಬಿದ್ದ ಭಯವೇ ಅವಳಿಗೆ ಬಾಗಿಲಿನತ್ತ

ದಾರಿ ತೋರಿಸಿತು. ಬಾಗಿಲು ಯಾವ ಕಡೆಗಿದೆ ಎಂದಷ್ಟೇ ಅಲ್ಲ. ಬೀಗ ಎಷ್ಟು ಎತ್ತರದಲ್ಲಿದೆ ಎಂದೂ ಊಹೆಯಿಂದಲೇ ಅವಳು ತೀರ್ಮಾನಿಸಿದಳು. ಅನಂತರ ಗುರಿ ಇಟ್ಟು ರಿವಾಲ್ವರನ್ನು ಎರಡೂ ಕೈಗಳಿಂದ ಭದ್ರವಾಗಿ ಹಿಡಿದುಕೊಂಡು, ಕಣ್ಣುಮುಚ್ಚಿ ಕುದುರೆ ಎಳೆದಳು. ಅದೇ ತನ್ನ ಜೀವಮಾನದಲ್ಲಿ ಅವಳು ಹಾರಿಸಿದ ಮೊದಲ ಗುಂಡು, ಸ್ಫೋಟವಾದ ಬಳಿಕ ಒಂದೆರಡು ಕ್ಷಣಗಳವರೆಗೆ ತಗಡಿನ ಛಾವಣಿಯ ಮೇಲೆ ಬೀಳುತ್ತಿದ್ದ ಸೋನೆ ಮಳೆಯ ಸದ್ದಲ್ಲದೆ ಬೇರೇನೂ ಅವಳಿಗೆ ಕೇಳಿಸಲಿಲ್ಲ. ಆಮೇಲೆ ಸಿಮೆಂಟ್ ನೆಲದ ಮೇಲೆ ಲೋಹದ ವಸ್ತುವೇನೋ ಬಿದ್ದ ಸದ್ದು, ಅನಂತರ ಹಿತವಾದ ಆದರೆ ತೀರಾ ಬಳಲಿದ ಮೆಲುಧ್ವನಿಯಲ್ಲಿ "ಅಯ್ಯೋ, ಅಮ್ಮಾ................ "ಎಂಬ ಶಬ್ದ ಕೇಳಿಸಿತು. ಬೆಳಗ್ಗೆ ಮನೆಯ ಮುಂದೆ ಅವನು ಸತ್ತು ಬಿದ್ದಿದ್ದು ಕಂಡಿತು. ಅವನ ಮೂಗು ಛಿದ್ರ ಛಿದ್ರವಾಗಿತ್ತು. ಆತ ಬಣ್ಣ ಬಣ್ಣದ ಪಟ್ಟೆಯ ಫ್ಲಾನೆಲ್ ಅಂಗಿ, ಸಾಧಾರಣ ಪ್ಯಾಂಟ್ಸ್ ತೊಟ್ಟಿದ್ದ. ಬೆಲ್ಟ್ ಬದಲು ಒಂದು ಹಗ್ಗವನ್ನು ಕಟ್ಟಿದ್ದ. ಬರಿಗಾಲು, ಪಟ್ಟಣದಲ್ಲಿ ಯಾರಿಗೂ ಅವನು ಯಾರೆಂದು ಗೊತ್ತಿರಲಿಲ್ಲ.

"ಹಾಗಾದ್ರೆ ಅವನ ಹೆಸರು ಕಾರ್ಲೋಸ್ ಸೇಂತೇನೋ" ಎಂದು ಗುಣುಗುಣಿಸಿದ ಪಾದ್ರಿ, ಬರೆಯುವುದನ್ನು ಮುಗಿಸುತ್ತಾ.

"ಸಂತೇನೋ ಆಯಾಲ" ಎಂದಳು ಹೆಂಗಸು. "ಅವನು ನನ್ನ ಒಬ್ಬನೇ ಮಗ."

ಪಾದ್ರಿ ಮತ್ತೆ ಬೀರುವಿನ ಬಳಿಗೆ ಹೋದ. ಅದರ ಬಾಗಿಲ ಒಳ ಭಾಗದಲ್ಲಿ ತುಕ್ಕು ಹಿಡಿದ ಎರಡು ಬೀಗದ ಕೈಗಳನ್ನು ನೇತು ಹಾಕಿದ್ದರು. ಅವು ಸಂತ ಪೀಟರನ ಬೀಗದ ಕೈಗಳಾಗಿರಬೇಕೆಂದು * ಹುಡುಗಿ ಭಾವಿಸಿದಳು. ಹುಡುಗಿಯಾಗಿದ್ದಾಗ ಅವಳ ತಾಯಿಯೂ ಹಾಗೆ ಯೋಚಿಸಿದ್ದಳು. ಯಾಕೆ, ಸ್ವತಃ ಪಾದ್ರಿಯೇ ಒಂದು ಕಾಲದಲ್ಲಿ ಹಾಗೆ ಊಹಿಸಿದ್ದಿರಬೇಕು. ಪಾದ್ರಿ ಅವನ್ನು ತೆಗೆದುಕೊಂಡು, ಕಟಾಂಜನದ ಮೇಲೆ ಇರಿಸಿದ್ದ ತೆರೆದ ಟಿಪ್ಪಣಿ ಪುಸ್ತಕದ ಮೇಲಿಟ್ಟು, ತಾನು ಆಗಷ್ಟೇ ಬರೆದಿದ್ದ ಸ್ಥಳದಲ್ಲಿ ತೋರುಬೆರಳು ಇಡುತ್ತಾ ಹೆಂಗಸಿನ ಕಡೆ ನೋಡಿ ಹೇಳಿದ:

"ಇಲ್ಲಿ ಸಹಿ ಮಾಡು."

ಕೈ ಚೀಲವನ್ನು ಕಂಕುಳಲ್ಲಿಟ್ಟುಕೊಂಡು ಹೆಂಗಸು ತನ್ನ ಹೆಸರನ್ನು ಗೀಚಿದಳು.

---

* ಸ್ವರ್ಗದ್ವಾರದ ಬೀಗದ ಕೈಗಳು ಸಂತ ಪೀಟರನ ವಶದಲ್ಲಿವೆ ಎಂಬುದು ಕ್ರೈಸ್ತರ ನಂಬಿಕೆ.

ಹುಡುಗಿ ಹೂವುಗಳನ್ನು ಎತ್ತಿಕೊಂಡು ಕಾಲೆಳೆಯುತ್ತಾ ಕಟಾಂಜನದ ಬಳಿಗೆ ಬಂದು ತನ್ನ ತಾಯಿಯನ್ನೇ ತದೇಕ ಚಿತ್ತದಿಂದ ನೋಡಿದಳು. ಪಾದ್ರಿ ನಿಟ್ಟುಸಿರಿಟ್ಟ.

"ಅವನನ್ನು ಸರಿಯಾದ ದಾರಿಯಲ್ಲಿ ತರೋದಕ್ಕೆ ನೀನೆಂದೂ ಪ್ರಯತ್ನ ಮಾಡಲಿಲ್ಲವೇ?"

ಸಹಿ ಹಾಕಿದ್ದು ಮುಗಿಸಿದ ಮೇಲೆ ಹೆಂಗಸು ಉತ್ತರಿಸಿದಳು:

"ಅವನು ಬಹಳ ಒಳ್ಳೆ ಮನುಷ್ಯನಾಗಿದ್ದ."

ಪಾದ್ರಿ ಮೊದಲು ಹೆಂಗಸನ್ನೂ ಅನಂತರ ಹುಡುಗಿಯನ್ನೂ ನಿಟ್ಟಿಸಿದ. ಅವರು ಅಳಲು ಪ್ರಾರಂಭಿಸಿಲ್ಲವೆಂದು ಮನವರಿಕೆಯಾಗಿ ಪಾದ್ರಿಯಲ್ಲಿ ಒಂದು ಬಗೆಯ ಸಾತ್ವಿಕ ಆಶ್ಚರ್ಯ ತುಂಬಿತು. ಹೆಂಗಸು ಅದೇ ಧ್ವನಿಯಲ್ಲಿ ಮುಂದುವರಿಸಿದಳು:

"ತಿನ್ನಲು ಗತಿಯಿಲ್ಲದವರಿಂದ ಯಾವಾಗಲೂ ಏನನ್ನೂ ಕದಿಯಬೇಡ ಅಂತ ಅವನಿಗೆ ನಾನು ಹೇಳಿದ್ದೆ, ಅವನು ನನ್ನ ಮಾತನ್ನು ಮನ್ನಿಸಿದ್ದ. ಬೇರೆ ವಿಷಯ ಹೇಳಬೇಕು ಅಂದರೆ, ಅವನು ಹಿಂದೆ ಬಾಕ್ಸಿಂಗ್ ಆಡುತ್ತಿದ್ದ ಕಾಲದಲ್ಲಿ ಚೆನ್ನಾಗಿ ಹೊಡೆಸಿಕೊಂಡು ಬಂದು ಸುಸ್ತಾಗಿ ಮೂರು ದಿನ ಹಾಸಿಗೆ ಹಿಡೀತಿದ್ದ."

"ಅವನ ಹಲ್ಲುಗಳನ್ನೆಲ್ಲಾ ಕೀಳಿಸಬೇಕಾಯ್ತು" ಎಂದು ನಡುವೆ ಬಾಯಿ ಹಾಕಿದಳು ಹುಡುಗಿ.

ಅದನ್ನು ಅನುಮೋದಿಸುತ್ತಾ ಹೆಂಗಸೆಂದಳು:

"ಹೌದು ಹಾಗಾಯ್ತು. ಆ ದಿನಗಳಲ್ಲಿ ನಾನು ಬಾಯಲ್ಲಿಟ್ಟುಕೊಳ್ಳುತ್ತಿದ್ದ ಪ್ರತಿ ತುತ್ತೂ ನನ್ನ ಮಗ ಶನಿವಾರ ರಾತ್ರಿಗಳಲ್ಲಿ ತಿನ್ನುತ್ತಿದ್ದ ಹೊಡೆತಗಳ ರುಚಿಯನ್ನು ನೆನಪಿಗೆ ತರುತ್ತಿತ್ತು.

"ದೈವಚಿತ್ತ ಊಹೆಗೆ ನಿಲುಕದ್ದು." ಎಂದ ಪಾದ್ರಿ.

ಆದರೆ ಆ ಮಾತನ್ನು ಆತ ದೃಢ ವಿಶ್ವಾಸದಿಂದ ಹೇಳಲಿಲ್ಲ. ಅದಕ್ಕೆ ಒಂದು ಕಾರಣವೆಂದರೆ ಅನುಭವ ಅವನನ್ನು ಸಂದೇಹವಾದಿಯಾಗಿಸಿತ್ತು. ಇನ್ನೊಂದು ಕಾರಣ ಸೆಖೆ. ಸೂರ್ಯಾಘಾತದಿಂದ ತಪ್ಪಿಸಿಕೊಳ್ಳಲು ತಲೆಯ ಮೇಲೆ ಏನಾದರೂ ಹಾಕಿಕೊಂಡು ಹೋಗಬೇಕೆಂದು ಅವರಿಗೆ ಅವನು ಸಲಹೆ ಕೊಟ್ಟ. ಬಳಿಕ ಆಕಳಿಸುತ್ತಾ, ಸಂಪೂರ್ಣವಾಗಿ

ನಿದ್ದೆಯ ಭಾರದಿಂದ ತೂಗುತ್ತಿದ್ದ ಆತ, ಕಾರ್ಲೋಸ್ ಸೇಂತೇನೋ ಗೋರಿಯನ್ನು ಹುಡುಕುವುದು ಹೇಗೆಂದು ಸೂಚನೆ ನೀಡಿದ. ಅಲ್ಲದೆ, ಅವರು ಮರಳಿ ಬಂದಾಗ ಬಾಗಿಲು ತಟ್ಟಬೇಕಾಗಿಲ್ಲ; ಬೀಗದ ಕೈಯನ್ನು ಬಾಗಿಲ ಕೆಳಗೆ ತೂರಿಸಬೇಕು; ಅವರಿಗೆ ಸಾಧ್ಯವಾದರೆ ಇಗರ್ಜಿಗೆ ಕಾಣಿಕೆ ಸಲ್ಲಿಸಬಹುದು ಎಂದೂ ತಿಳಿಸಿದ. ಹೆಂಗಸು ಅವನ ಸೂಚನೆಗಳನ್ನೆಲ್ಲ ತದೇಕಚಿತ್ತಳಾಗಿ ಕೇಳಿದಳು. ಆದರೆ ನಸುನಗದೆ ಅವನಿಗೆ ಧನ್ಯವಾದ ಅರ್ಪಿಸಿದಳು.

ಅವರು ಹೊರ ಹೋಗುವಂತೆ ಪಾದ್ರಿ ಮುಂಬಾಗಿಲನ್ನು ತೆರೆಯುವುದಕ್ಕೆ ಮೊದಲೇ, ಅವರ ತೂತುಕಿಂಡಿಯ ಮೇಲೆ ಮೂಗನ್ನು ಒತ್ತಿ ಯಾರೋ ಒಳಗಡೆ ನೋಡುತ್ತಿರುವುದು ಅವನ ಗಮನಕ್ಕೆ ಬಂತು. ಹೊರಗಡೆ ಮಕ್ಕಳ ಗುಂಪೊಂದು ಇತ್ತು. ಬಾಗಿಲನ್ನು ಪೂರ್ತಿ ತೆರೆದಾಗ ಮಕ್ಕಳು ಚದರಿದರು. ಸಾಮಾನ್ಯವಾಗಿ ಅಷ್ಟು ಹೊತ್ತಿನಲ್ಲಿ ರಸ್ತೆಯಲ್ಲಿ ಯಾರೂ ಇರುತ್ತಿರಲಿಲ್ಲ. ಈಗ ಮಕ್ಕಳಷ್ಟೇ ಅಲ್ಲ ಬಾದಾಮಿ ಮರಗಳ ಕೆಳಗೆ ಗುಂಪು ಗುಂಪಾಗಿ ಜನ ಜಮಾಯಿಸಿದ್ದರು. ಧಗೆಯಲ್ಲಿ ದುಮುದುಮಿಸುತ್ತಿದ್ದ ರಸ್ತೆಯನ್ನು ಉದ್ದಕ್ಕೂ ನೋಡಿ ಪಾದ್ರಿ ಅರ್ಥಮಾಡಿಕೊಂಡ. ಆತ ಮತ್ತೆ ಮೆಲ್ಲನೆ ಬಾಗಿಲು ಮುಚ್ಚಿದ.

"ಒಂದು ನಿಮಿಷ ತಾಳಿ" ಎಂದು ಹೆಂಗಸಿನ ಕಡೆ ನೋಡದೆಯೇ ಅವನೆಂದ.

ಅವನ ಸೋದರಿ ಒಳಬಾಗಿಲ ಬಳಿ ಕಾಣಿಸಿಕೊಂಡಳು. ಆಕೆ ತನ್ನ ರಾತ್ರಿಯ ನಿಲುವಂಗಿಯ ಮೇಲೆ ಕಪ್ಪು ಮೇಲಂಗಿಯನ್ನು ತೊಟ್ಟಿದ್ದಳು. ಅವಳ ತಲೆಗೂದಲು ಭುಜದ ಮೇಲೆ ಇಳಿದಿತ್ತು. ಅವಳು ಮೌನವಾಗಿ ಪಾದ್ರಿಯನ್ನು ನೋಡಿದಳು.

"ಏನದು?" ಪಾದ್ರಿ ಕೇಳಿದ.

"ಜನಗಳು ನೋಡಿಬಿಟ್ಟಿದ್ದಾರೆ," ಎಂದು ಗೊಣಗಿದಳು ಅವನ ಸೋದರಿ.

"ನೀವು ಹಿಂದಿನ ಬಾಗಿಲ ಮುಖಾಂತರ ಹೊರಗೆ ಹೋಗೋದು ವಾಸಿ," ಎಂದ ಪಾದ್ರಿ.

"ಅಲ್ಲೂ ಅದೇ ಕಥೆ : ಎಲ್ಲರೂ ಕಿಟಕಿಗಳ ಬಳಿ ನಿಂತು ಇಣುಕಿ ನೋಡ್ತಿದಾರೆ" ಎಂದಳು ಸೋದರಿ.

ಹೆಂಗಸಿಗೆ ಅಲ್ಲಿಯವರೆಗೂ ಅದು ಅರ್ಥವಾಗಿರಲಿಲ್ಲ ಎನ್ನುವಂತೆ ತೋರಿತು.

ತೂತುಕಿಂಡಿಯ ಮೂಲಕ ಅವಳು ರಸ್ತೆಯನ್ನು ನೋಡಲು ಪ್ರಯತ್ನಿಸಿದಳು. ಅನಂತರ ಅವಳು ಹುಡುಗಿಯಿಂದ ಹೂವಿನ ಗುಚ್ಛವನ್ನು ಇಸಿದುಕೊಂಡು ಬಾಗಿಲ ಕಡೆಗೆ ಹೊರಟಳು. ಹುಡುಗಿ ಅವಳನ್ನು ಅನುಸರಿಸಿದಳು.

"ಬಿಸಿಲು ಇಳಿಯುವವರೆಗೂ ತಡೀರಿ" ಎಂದ ಪಾದ್ರಿ.

"ಬಿಸಿಲಲ್ಲಿ ನೀವು ಕರಗಿ ಹೋಗ್ತೀರಿ: ನಿಲ್ಲಿ ಛತ್ರಿ ಕೊಡ್ತೇನೆ" ಎಂದಳು ಪಾದ್ರಿಯ ಸೋದರಿ, ತನ್ನ ಜಾಗದಿಂದ ಕದಲದೆ,

"ಉಪಕಾರವಾಯ್ತು : ಪರವಾಗಿಲ್ಲ ಹೀಗೇ ಹೋಗ್ತೇವೆ" ಎಂದು ಉತ್ತರಿಸಿದಳು ಹೆಂಗಸು.

ಅವಳು ಹುಡುಗಿಯ ಕೈ ಹಿಡಿದುಕೊಂಡು ಬೀದಿಗೆ ಇಳಿದಳು.

ಕನ್ನಡಕ್ಕೆ : ಈಶ್ವರಚಂದ್ರ

ಉದ್ದುದ್ದ ರೆಕ್ಕೆಗಳ ಮುದುಕಜ್ಜನೊಬ್ಬ

ಮಳೆಯ ಮೂರನೆಯ ದಿನದ ಹೊತ್ತಿಗೆ ಅವರು ಎಷ್ಟೊಂದು ಏಡಿಗಳನ್ನು ಕೊಂದಿದ್ದರೆಂದರೆ ಪಿಲಾಯೋ ತನ್ನ ನೀರು ತುಂಬಿದ ಅಂಗಳವನ್ನು ದಾಟಿ ಸಮುದ್ರದಲ್ಲಿ ಅವನ್ನು ಎಸೆಯಬೇಕಾಯಿತು. ಏಕೆಂದರೆ ಆ ಹಸುಗೂಸಿಗೆ ರಾತ್ರಿಯಿಡೀ ಜ್ವರವೇರಿದ್ದು ದುರ್ನಾತದಿಂದಾಗಿ ಎಂದವರು ಆಲೋಚಿಸಿದ್ದರು. ಪ್ರಪಂಚವೇ ಮಂಗಳವಾರದಿಂದ ದುಃಖಿಯಾಗಿತ್ತು. ಸಮುದ್ರ ಮತ್ತು ಆಗಸವು ಬೆರೆತು ಒಂದೇ ಬೂದುಬಣ್ಣದ ವಸ್ತುವಾಗಿ, ಮಾರ್ಚ್ ರಾತ್ರಿಗಳಲ್ಲಿ ಬೆಳಕಿನ ಕಿರಣಗಳಂತೆ ಹೊಳೆಯುತ್ತಿದ್ದ ಮರಳಿನ ಕಣಗಳು ಮಣ್ಣಿನ ಮುದ್ದೆ ಹಾಗೂ ಕೊಳೆತ ಚಿಪ್ಪು ಮೀನಿನಂತಾಗಿತ್ತು. ಮಧ್ಯಾಹ್ನದ ಬಿಸಿಲು ಎಷ್ಟು ಮಂದವಾಗಿತ್ತೆಂದರೆ ಪಿಲಾಯೋ ಏಡಿಗಳನ್ನು ಎಸೆದು ವಾಪಸು ಬರುತ್ತಿರುವಾಗ ಆತನಿಗೆ ಅಂಗಳದ ಹಿಂಭಾಗದಲ್ಲಿ ಗುರುಗುಡುತ್ತಾ ಚಲಿಸುತ್ತಿರುವುದೇನೆಂದೇ ಸರಿಯಾಗಿ ಕಾಣಿಸಲಿಲ್ಲ. ಅವನು ತೀರಾ ಸಮೀಪಕ್ಕೆ ಹೋದ ನಂತರವೇ ತಿಳಿದದ್ದು ಅದೊಂದು ಮುದುಕ, ತುಂಬಾ ಮುದುಕ, ಮುಖ ಅಡಿಯಾಗಿ ಮಣ್ಣಿನಲ್ಲಿ ಬಿದ್ದವನಾಗಿದ್ದ. ತನ್ನೆಲ್ಲಾ ಪ್ರಯತ್ನಗಳ ನಂತರವೂ ಏಳಲಾಗದೇ ಒದ್ದಾಡುತ್ತಿದ್ದ ಬೃಹತ್ ಆದ ರೆಕ್ಕೆಗಳಂತಾ ಮುದುಕ.

ಈ ದುಃಸ್ವಪ್ನದಿಂದ ಹೆದರಿದ ಪಿಲಾಯೋ ಹುಶಾರಿಲ್ಲದ ಮಗುವಿಗೆ ಸೇವೆ ಮಾಡುತ್ತಿದ್ದ ಅವನ ಹೆಂಡತಿ ಎಲಿಸೆಂಡಾಳನ್ನು ಅಂಗಳದ ಹಿಂಭಾಗಕ್ಕೆ ಓಡಿಹೋಗಿ

ಕರೆತಂದನು. ಅವರಿಬ್ಬರೂ ಆ ಬಿದ್ದ ದೇಹವನ್ನು ಮೂಕವಿಸ್ಮಿತರಾಗಿ ನೋಡಿದರು. ಅವನೊಂದು ಚಿಂದಿ ಚಿಂದಿಯಾದ ಬಟ್ಟೆ ಧರಿಸಿದ್ದ. ಅವನ ಬೊಕ್ಕತಲೆಯಲ್ಲಿ ಕೆಲವೇ ಕೂದಲುಗಳು ಉಳಿದುಕೊಂಡಿದ್ದವು. ಕೆಲವೇ ಕೆಲವು ಹಲ್ಲುಗಳು ಅವನ ಬಾಯಲ್ಲಿದ್ದವು. ಮತ್ತವನ ಈ ನೆನೆದ ಮುತ್ತಜ್ಜನಂಥಾ ಕರುಣಾಜನಕ ಸ್ಥಿತಿ ಸ್ವಲ್ಪಮಟ್ಟಿಗೇನಾದರೂ ಬಹುಶಃ ಆತನಲ್ಲಿ ಗಾಂಭೀರ್ಯ ಎನ್ನುವುದು ಇದ್ದಿದ್ದರೂ ತೆಗೆದುಹಾಕಿತ್ತು. ಅವನ ಕೊಳೆಯಾದ ಮತ್ತು ಅಲ್ಲಲ್ಲಿ ಕಿತ್ತುಹೋದ ದೈತ್ಯ ಮೊರೆಯುವ ರೆಕ್ಕೆಗಳು ಎಂದೆಂದಿಗೂ ಎಂಬಂತೆ ಮಣ್ಣಿನಲ್ಲಿ ಹುಗಿದುಹೋಗಿದ್ದವು. ಅವನನ್ನು ಅಷ್ಟು ಹತ್ತಿರದಿಂದ ಮತ್ತು ಅಷ್ಟು ಹೊತ್ತಿನವರೆಗೆ ನೋಡಿದ್ದರಿಂದ ಎಲಿಸೆಂಡಾ ಮತ್ತು ಪಿಲಾಯೋರು ತಮ್ಮ ಆಶ್ಚರ್ಯವನ್ನು ಬಲುಬೇಗ ಹತ್ತಿಕ್ಕಿದರು. ಹಾಗೂ ಕೊನೆಯಲ್ಲಿ ಆತ ಚಿರಪರಿಚಿತನಾದ... ನಂತರ ಅವರು ಅವನೊಂದಿಗೆ ಮಾತನಾಡುವ ಧೈರ್ಯ ಮಾಡಿದರು. ಅದಕ್ಕೆ ಅವನು ಗ್ರಹಣಾತೀತನಾದ ಭಾಷೆಯಲ್ಲಿ ನಾವಿಕರ ಗಟ್ಟಿಸ್ವರದಲ್ಲಿ ಉತ್ತರಿಸಿದನು. ಈ ರೀತಿಯಲ್ಲಿ ಅವರು ಆ ರೆಕ್ಕೆಯ ಮುಜುಗರವನ್ನು ದಾಟಿದರು ಮತ್ತು ಅವರು ಬಿರುಗಾಳಿಯಿಂದ ಅಪಘಾತಕ್ಕೊಳಗಾದ ಯಾವುದೋ ವಿದೇಶಿ ಹಡಗಿಂದ ಬೇರ್ಪಟ್ಟವನೆಂದು ತೀರ್ಮಾನಿಸಿದರು. ಆದರೂ ಅವರು ಸಾವು ಮತ್ತು ಬದುಕಿನ ಬಗ್ಗೆ ಎಲ್ಲವನ್ನೂ ಬಲ್ಲಂತ ನೆರೆಮನೆಯ ಹೆಂಗಸೊಬ್ಬಳನ್ನು ಅವನನ್ನು ನೋಡಲು ಕರೆದರು ಮತ್ತು ಅವರ ತಪ್ಪನ್ನು ತೋರಿಸಲು ಆಕೆಗೆ ಒಂದು ನೋಟ ಮಾತ್ರಾ ಸಾಕಾಗಿತ್ತು.

"ಅವನೊಬ್ಬ ಕಿನ್ನರ" ಅವಳು ನುಡಿದಳು "ಅವನು ಮಕ್ಕಳಿಗಾಗಿ ಬರುತ್ತಿದ್ದಿರ ಬಹುದು. ಆದರೆ ಬಡಪಾಯಿ ಪಾಪ, ಮುದುಕನಾದ್ದರಿಂದ ಮಳೆ ಅವನನ್ನು ನೆಲಕಚ್ಚಿಸಿತು."

ಮರುದಿನ ರಕ್ತಮಾಂಸಗಳ ಜೀವಂತ ಕಿನ್ನರ ಪಿಲಾಯೋನ ಮನೆಯಲ್ಲಿ ಬಂಧಿಯಾಗಿದ್ದಾನೆ ಎಂದು ಎಲ್ಲರಿಗೂ ತಿಳಿಯಿತು. ಆ ನೆರೆಮನೆಯ ಹೆಂಗಸಿನ ತೀರ್ಮಾನಕ್ಕೆ ಬದಲಾಗಿ ಕಿನ್ನರರೆಂದರೆ ಸ್ವರ್ಗದ ಪಿತೂರಿಯಿಂದ ಓಡಿಬಂದ ನಿರ್ಗತಿಕರೆಂದು ಭಾವಿಸಿದ ಇತರರು ಆತನನ್ನು ಬಡಿದು ಸಾಯಿಸಲು ಒಪ್ಪಲಿಲ್ಲ. ತನ್ನ ಬೇಲಿಯ ದೊಣ್ಣೆಯೊಂದನ್ನು ಕೈಯಲ್ಲಿ ಹಿಡಿದು ಪಿಲಾಯೋನು ಮಧ್ಯಾಹ್ನದ ನಂತರವಿಡೀ ತನ್ನ ಅಡಿಗೆಕೋಣೆಯಿಂದ ಅವನನ್ನೇ ನೋಡಿಕೊಂಡಿದ್ದನು ಮತ್ತು ರಾತ್ರಿ

ಮಲಗುವುದಕ್ಕೆ ಮೊದಲು ಆತನನ್ನು ಮಣ್ಣಿನಿಂದ ಎಳೆದು ವೈರುಗಳಿಂದ ಸುತ್ತಿದ ಕೋಳಿಗೂಡಿನೊಳಕ್ಕೆ ಹಾಕಿ ಬೀಗ ಹಾಕಿದನು. ಮಳೆ ನಿಂತ ನಂತರವೂ ರಾತ್ರಿ ಎಷ್ಟೋ ಹೊತ್ತಿನವರೆಗೆ ಪಿಲಾಯೋ ಮತ್ತು ಎಲಿಸೆಂಡರು ಏಡಿಗಳನ್ನು ಕೊಲ್ಲುತ್ತಲೇ ಇದ್ದರು. ಸ್ವಲ್ಪ ಸಮಯದ ನಂತರ ಮಗುವು ಜ್ವರ ಬಿಟ್ಟು ಎದ್ದಿತು ಮತ್ತು ಹಸಿವೆಯನ್ನು ವ್ಯಕ್ತಪಡಿಸಿತು. ಆಗವರು ಉದಾರರಾದರು ಮತ್ತು ಕಿನ್ನರರನ್ನು ಸ್ವಚ್ಛ ನೀರು ಹಾಗೂ ಮೂರು ದಿನಗಳಿಗೆ ಸಾಕಾಗುವಷ್ಟು ಧಾನ್ಯಗಳೊಂದಿಗೆ ಅವನನ್ನೊಂದು ತೆಪ್ಪದ ಮೇಲೆ ಕೂರಿಸಿ ಅವನನ್ನು ಅವನ ವಿಧಿಗೆ ಬಿಟ್ಟು ಸಮುದ್ರದಲ್ಲಿ ತೇಲಿಬಿಟ್ಟರು. ಆದರೆ ಬೆಳಗಿನ ಮೊದಲ ಕಿರಣ ತಾಕಿದಾಗ ಅವರು ಎದ್ದು ತಮ್ಮ ಮನೆ ಅಂಗಳಕ್ಕೆ ಬಂದಾಗ ಇಡೀ ನೆರೆಹೊರೆಯೇ ಆ ಕೋಳಿಯ ಗೂಡಿನೆದುರು ನೆರೆದು, ಆ ಕಿನ್ನರನೊಂದಿಗೆ ಸ್ವಲ್ಪವೂ ಭಯವಿಲ್ಲದೇ, ಅವನೊಂದು ಅತಿಮಾನುಷ ಜೀವಿಯೇ ಅಲ್ಲವೆನ್ನುವಂತೆ, ತೆರೆದಿರುವ ಆ ವೈರಿನ ನಡುವಿನಲ್ಲಿ ತಿಂಡಿ ತಿನಿಸುಗಳನ್ನು ಅವನತ್ತ ಎಸೆಯುತ್ತಾ. ಅವನೊಂದು ಸರ್ಕಸ್‌ನ ಪ್ರಾಣಿಯೋ ಎಂಬಂತೆ ಆಡಿಕೊಂಡಿದ್ದರು.

ಏಳು ಗಂಟೆಗೆ ಬಂದ ಫಾದರ್ ಗೊನ್‌ಜಾಗನು ವಿಚಿತ್ರ ಸುದ್ದಿಯನ್ನು ಕೇಳಿ ಭಯಗೊಂಡನು. ಅಷ್ಟುಹೊತ್ತಿಗೆ ಬೆಳಿಗ್ಗೆ ಬಂದಿದ್ದ ವೀಕ್ಷಕರು ಆಟವನ್ನು ಕಡಿಮೆ ಮಾಡಿ ಆ ಬಂದಿಯ ಭವಿಷ್ಯದ ಬಗ್ಗೆ ಎಲ್ಲಾ ರೀತಿಯ ಊಹೆಗಳನ್ನೂ ಮಾಡಿಕೊಂಡಿದ್ದರು. ಅವರಲ್ಲಿ ಅತ್ಯಂತ ಸರಳನಾದವನು ಆತನನ್ನು ವಿಶ್ವದ ಮೇಯರನೆಂದು ಕರೆಯಬೇಕೆಂದು ಕೊಂಡನು. ಕಠಿಣ ಹೃದಯದ ಉಳಿದವರು ಆತನನ್ನು ಐದು ನಕ್ಷತ್ರಗಳುಳ್ಳ ಜನರಲ್ಲನ ಹುದ್ದೆಗೇರಿಸಿ ಎಲ್ಲಾ ಯುದ್ಧಗಳನ್ನೂ ಗೆಲ್ಲಲು ಬಯಸಿದರು. ಅದರಲ್ಲಿ ಕೆಲವು ದಾರ್ಶನಿಕರು ಇಡೀ ವಿಶ್ವದ ಮೇಲ್ವಿಚಾರಣೆ ಮಾಡಬಲ್ಲಂತ, ರೆಕ್ಕೆಗಳುಳ್ಳಂತ ಬುದ್ಧಿವಂತ ಜನರನ್ನು ಹುಟ್ಟಿಸಲು ಈತನನ್ನು ಬೀಜಮನುಷ್ಯನಾಗಿ ಬಳಸಬಹುದೆಂದು ಬಯಸಿದರು. ಪೂಜಾರಿಯಾಗುವ ಮೊದಲು ಒಬ್ಬ ಶಕ್ತಿವಂತ ಮರಕಡಿಯುವವರಾಗಿದ್ದ ಪಾದ್ರಿ ಗೊನ್‌ಜಾಗರವರು ತಾವು ಕೊಡಬೇಕೆಂದಿದ್ದ ಬೋಧನೆಯನ್ನು ಮನಸ್ಸಿನಲ್ಲಿಯೇ ತಕ್ಷಣ ಒಮ್ಮೆ ಪರಿಶೀಲಿಸಿ ಕೊಂಡು, ಆ ಕೋಳಿಮರಿಗಳ ನಡುವೆ ದೊಡ್ಡ, ಬೇರೆಯೇ ಆದ ಕೋಳಿಯಂತೆ ಕಂಡ ಆ ಕರುಣಾಜನಕ ಮನುಷ್ಯನನ್ನು ಹತ್ತಿರದಿಂದ ನೋಡಲು ಬಾಗಿಲನ್ನು ತೆಗೆಯಲು ಹೇಳಿದರು. ಬೇಗನೆ ಎದ್ದ ಜನರು ಅವನತ್ತ ತಿಂದೆಸೆದ ತಿಂಡಿತಿನಿಸು ಮತ್ತು ಹಣ್ಣಿನ

ಸಿಪ್ಪೆಗಳ ಮಧ್ಯೆ ಆತನು ಬಿದ್ದುಕೊಂಡು ಮೂಲೆಯಲ್ಲಿ ತನ್ನ ಬಿಚ್ಚಿದ ರೆಕ್ಕೆಗಳನ್ನು ಸೂರ್ಯನ ಬಿಸಿಲಲ್ಲಿ ಒಣಗಿಸಿಕೊಂಡಿದ್ದನು. ಈ ಪ್ರಪಂಚದ ತಲೆಹರಟೆಗೆ ಅಪರಿಚಿತನಾಗಿದ್ದ ಆತನು ಪಾದ್ರಿಗೊನ್‌ಜಾಗರವರು ಕೋಳಿಯ ಗೂಡಿನೊಳಗೆ ಹೊಕ್ಕು ಲ್ಯಾಟಿನ್‌ನಲ್ಲಿ ನಮಸ್ತೆ ಎಂದಾಗ ತನ್ನ ಪುರಾತನ ಕಣ್ಣುಗಳನ್ನು ಎತ್ತಿ ತನ್ನ ಭಾಷೆಯಲ್ಲಿ ಏನನ್ನೋ ಗೊಣಗುಟ್ಟಿದನು. ಪಾದ್ರಿಯ ಅಧಿಕಾರ ಪ್ರದೇಶದಲ್ಲಿದ್ದ ಪೂಜಾರಿಗೆ ದೇವರ ಭಾಷೆಯನ್ನು ಅರಿಯಲಾಗದ, ದೇವರ ಮಂತ್ರಿಯನ್ನು ಅಭಿನಂದಿಸಲಾಗದ ಆತನು ವಂಚಕನೆಂಬ ಅನುಮಾನ ಮೂಡಿತು. ಅವನನ್ನು ಅತ್ಯಂತ ಹತ್ತಿರದಿಂದ ಗಮನಿಸಿದಾಗ ಆತನು ತೀರಾ ಮನುಷ್ಯನಂತೇ ಕಾಣುತ್ತಿದ್ದನು. ಸಹಿಸಲಸಾಧ್ಯವಾದ ಹೊರಗಿನ ವಾಸನೆ ಅವನಲ್ಲಿತ್ತು. ಅವನ ರೆಕ್ಕೆಯ ಹಿಂಭಾಗವು ಪರಾವಲಂಬಿ ಜೀವಿಗಳಿಂದ ಮುಚ್ಚಿಕೊಂಡಿತ್ತು. ಮತ್ತವನ ರೆಕ್ಕೆಯ ಮುಖ್ಯ ಪುಕ್ಕಗಳು ಈ ಲೋಕದ ಗಾಳಿಯ ದಾಳಿಗೊಳಗಾಗಿತ್ತಲ್ಲದೇ ಘನಕಿನ್ನರರ ಯಾವುದೇ ಚಿಹ್ನೆಗಳು ಆತನಲ್ಲಿರಲಿಲ್ಲ. ಪಾದ್ರಿಯು ಕೋಳಿಗೂಡಿನಿಂದ ಹೊರಗೆ ಬಂದು ನಿಷ್ಕಪಟರಾಗಿರುವುದು ಕಷ್ಟವನ್ನು ಬರಮಾಡಿಕೊಂಡಂತೆ ಎಂದು ಚಿಕ್ಕಭಾಷಣದಿಂದ ಅವರನ್ನು ಎಚ್ಚರಿಸಿದರು. ಭೂತಗಳು ಸಂಭಾವಿತರಂತೆ ವೇಷ ಹಾಕಿಕೊಂಡು ಲೋಕದ ಜನರನ್ನು ಗಲಿಬಿಲಿಗೊಳಿಸುವ ಆಟವನ್ನು ಆಡುತ್ತವೆ ಎಂದು ಅವರು ನೆನಪಿಸಿದರು. ಗಿಡುಗ ಮತ್ತು ವಿಮಾನದ ಮಧ್ಯೆ ವ್ಯತ್ಯಾಸವನ್ನು ಗುರುತಿಸಲು ರೆಕ್ಕೆಗಳು ಆಧಾರವಲ್ಲವೆಂದಾದರೆ ಕಿನ್ನರರನ್ನು ಗುರುತಿಸಲು ಮತ್ತಷ್ಟು ಕಡಿಮೆ ಆಧಾರವೆಂದು ಅವರು ವಾದಿಸಿದರು. ಅಲ್ಲದೇ ತಾನು ಬಿಷಪ್‌ಗೆ ಪತ್ರ ಬರೆವೆನೆಂದೂ, ಆದರಿಂದ ಅವರು ಆತನ ಮೇಲಿನವರಿಗೆ ಪತ್ರ ಬರೆದು ಮತ್ತು ಅವರು ತಮ್ಮ ಮೇಲಿನವರಾದ ಸುಪ್ರೀಂ ಪಾಂಟಿಫ್‌ಗೆ ಪತ್ರಿಸಿ, ಅವರು ಘನ ನ್ಯಾಯಕಟ್ಟೆಯಿಂದ ಇದರ ಬಗ್ಗೆ ಕೊನೆಯ ತೀರ್ಮಾನ ಕೊಡುವರೆಂದು ತಿಳಿಸಿದರು.

ಅವರ ದೂರದೃಷ್ಟಿ ಶುಭ್ರ ಹೃದಯಗಳಿಗೆ ನಾಟಿತು. ಬಂಧಿ ಕಿನ್ನರನ ಸುದ್ದಿ ಎಷ್ಟು ಬೇಗ ಸುತ್ತಮುತ್ತ ಹರಡಿತೆಂದರೆ ಕೆಲವೇ ಗಂಟೆಗಳಲ್ಲಿ ಅವರ ಮನೆ ಅಂಗಳ ಸಂತೆ ಮಾರ್ಕೆಟ್ಟಿನಂತೆ ಗಲಾಟೆ, ಗಜಿಬಿಜಿಯಿಂದ ಕೂಡಿ, ಮನೆಯನ್ನು ಬೀಳಿಸುವಂತಿದ್ದ ಆ ಗುಂಪನ್ನು ಚದುರಿಸಲು ಶಾಂತಿಪಾಲಕರನ್ನು ಕರೆಸಿ ಲಾಠಿಚಾರ್ಜು ಮಾಡಿಸಬೇಕಾಯಿತು. ಆ ಸಂತೆ ಮಾರ್ಕೆಟಿನಂತಾದ ಅಂಗಳವನ್ನು ಗುಡಿಸಿ. ಗುಡಿಸಿ,

ಸೊಂಟ ತಿರುಪಿಹೋದಂತಿದ್ದ ಎಲಿಸೆಂಡಾ ಕಡೆಗೆ ಅಂಗಳದ ಅಷ್ಟು ಭಾಗಕ್ಕೆ ಬೇಲಿಯನ್ನು ಕಟ್ಟಿ, ಪ್ರತಿ ವೀಕ್ಷಕರಿಗೆ ಐದುಸೆಂಟು ಪ್ರವೇಶ ದರವನ್ನಿಟ್ಟಳು.

ಕುತೂಹಲಿಗಳು ದೂರದೂರದಿಂದ ಬಂದರು. ಹಾರಬಲ್ಲಂತ ಡೊಂಬರಾಟಗಾರನನ್ನು ಹೊಂದಿದ್ದ ಒಂದು ಸಂಚಾರಿ ಉತ್ಸವ ತಂಡವೊಂದು ಗುಂಪನ್ನು ಸೆಳೆಯಲು ಹಲವು ಬಾರಿ ಯತ್ನಿಸಿದರೂ ಕಿನ್ನರನ ರೆಕ್ಕೆಯಂತಿರದೇ, ಬಾವಲಿಯ ರೆಕ್ಕೆಯಂತಿದ್ದ ಆತನಿಗೆ ಯಾರೂ ಸ್ವಲ್ಪವೂ ಗಮನಹರಿಸಲಿಲ್ಲ. ಪ್ರಪಂಚದ ಅತ್ಯಂತ ದುರದೃಷ್ಟವಂತರೂ ಕೂಡಾ ಆರೋಗ್ಯವನ್ನರಸುತ್ತಾ ಬಂದರು. ಬಾಲ್ಯಕಾಲದಿಂದಲೂ ತನ್ನ ಹೃದಯಬಡಿತ ಲೆಕ್ಕಹಾಕುತ್ತಿದ್ದು ಅಂಕೆಗಳೆಲ್ಲಾ ಮುಗಿದುಹೋದಂತಾ ಆ ಬಡಮಹಿಳೆ, ಆಕಾಶದ ನಕ್ಷತ್ರಗಳ ಶಬ್ದದಿಂದ ತೊಂದರೆಗೊಳಗಾಗಿ ನಿದ್ರಿಸಲಾರನಾಗಿದ್ದ ಪೋರ್ಚುಗೀಸ್ ಮನುಷ್ಯ ಹಗಲಿನಲ್ಲಿ ತಾನು ಮಾಡಿದ ಕೆಲಸಗಳನ್ನು ಮತ್ತೆ ರಾತ್ರಿಯಲ್ಲಿ ಎದ್ದು ನಿರ್ನಾಮ ಮಾಡುತ್ತಿದ್ದ ಕನಸಿನಲ್ಲಿ ನಡೆಯುತ್ತಿದ್ದವ, ಅಲ್ಲದೇ ಹೆಚ್ಚು ಗಂಭೀರವಲ್ಲದ ರೋಗಗಳಿಂದ ನರಳುತ್ತಿದ್ದ ಇನ್ನೂ ಎಷ್ಟೆಷ್ಟೋ ಮಂದಿ. ಆ ಭೂಮಿಯನ್ನೇ ನಡುಗಿಸಿದ ಹಡಗಿನ ದುರಂತದ ಮಧ್ಯೆಯೂ ಪಿಲಾಯೋ ಮತ್ತು ಎಲಿಸೆಂಡಾರು ಖುಷಿಯಿಂದಿದ್ದರು. ಯಾಕೆಂದರೆ ವಾರದೊಳಗೇ ಅವರ ಕೋಣೆಯು ಹಣದಿಂದ ತುಂಬಿಹೋಗಿತ್ತು ಮತ್ತು ಇನ್ನೂ ದಿಗಂತದಾಚೆಗೂ ಯಾತ್ರಿಗಳ ಸಾಲು ಚಾಚಿಕೊಂಡಿತ್ತು.

ಕಿನ್ನರ ಒಬ್ಬ ಮಾತ್ರ ತನ್ನ ನಾಟಕದಲ್ಲಿ ತಾನೇ ಭಾಗವಹಿಸದವನಾಗಿದ್ದ. ಅವನು ಸಾಲವಾಗಿ ಪಡೆದ ಆ ಗೂಡಿನಲ್ಲಿ ಆರಾಮವಾಗಿ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದ. ಅಲ್ಲದೇ ಧಾರ್ಮಿಕ ನಂಬುಗೆಯಿಂದ ಸುತ್ತಲೂ ಹತ್ತಿಸಿ ಇಟ್ಟಿದ್ದ ಮೊಂಬತ್ತಿ ಮತ್ತು ಎಣ್ಣೆಯ ದೀಪಗಳಿಂದ ಉಂಟಾದ ಭಯಂಕರ ಸೆಖೆಯಿಂದ ಒದ್ದಾಡುತ್ತಿದ್ದ. ಮೊದಲಿಗೆ ಪಕ್ಕದ ಮನೆಯ ಬುದ್ಧಿವಂತ ಹೆಂಗಸಿನ ಸಲಹೆಯಂತೆ ಕಿನ್ನರರ ಆಹಾರವೆಂದು ಆತನಿಗೆ ಹಾತೆಗಳನ್ನು ತಿನ್ನಿಸಲು ಯತ್ನಿಸಿದರೂ, ಆತನು ಅದನ್ನು ಕೂಡಾ ಪ್ರಾಯಶ್ಚಿತ್ತ ಬಯಸಿಬಂದ ಒಬ್ಬಾತ ತಂದ ಪೋಪನ ಆಹಾರವನ್ನು ತಿರಸ್ಕರಿಸಿದಂತೇ, ಇವನ್ನೂ ತಿರಸ್ಕರಿಸಿಬಿಟ್ಟ. ಆದರೆ ಅವರಲ್ಲಿ ಯಾರೂ ಅದಕ್ಕೆ ಕಾರಣ ಆತ ಕಿನ್ನರನಾಗಿರುವುದೇ ಅಥವಾ ಮುದುಕನಾಗಿರುವುದರಿಂದ ಮೆತ್ತಗಿರುವುದನ್ನು ಮಾತ್ರಾ ತಿನ್ನುತ್ತಿರುವನೇ ಎಂದು ಹುಡುಕಲಿಲ್ಲ. ಅವನ ಒಂದೇ ಒಂದು ಅತಿಮಾನವೀಯ ಗುಣವೆಂದರೆ ತಾಳ್ಮೆ

ಇರಬಹುದೆನಿಸಿತು. ಅದರಲ್ಲೂ ವಿಶೇಷವಾಗಿ ಮೊದಲ ದಿನಗಳಲ್ಲಿ, ಕೋಳಿಗಳು ಅವನ ರೆಕ್ಕೆಗಳಲ್ಲಿ ಹುದುಗಿದ ಪರಾವಲಂಬಿ ಕ್ರಿಮಿಗಳಿಗಾಗಿ ಆತನನ್ನು ಕುಕ್ಕಿದಾಗ, ಅಂಗಹೀನರು ತಮ್ಮ ಊನಾಂಗಗಳಿಗೆ ಮುಟ್ಟಿಸಿಕೊಳ್ಳಲು ಆತನ ಪುಕ್ಕಗಳನ್ನು ಎಳೆದಾಗಲೂ, ಆತನು ಎದ್ದರೆ ಪೂರ್ತಿ ನೋಡಬಹುದೆಂದು ಬಯಸುವವರು ಆತನತ್ತ ಕಲ್ಲುಗಳನ್ನು ಎಸೆದಾಗಲೂ ಆತ ಸುಮ್ಮನಿದ್ದ. ಒಂದೇ ಒಂದು ಬಾರಿ ಆತನನ್ನು ಎಬ್ಬಿಸಲು ಅವರು ಜಯಶೀಲರಾಗಿದ್ದು ಯಾವಾಗೆಂದರೆ ಆತ ತುಂಬಾ ಹೊತ್ತಿನವರೆಗೆ ಅಲುಗಾಡದೇ ಸುಮ್ಮನೇ ಕೂತುಕೊಂಡಿದ್ದಾಗ ಆತ ಸತ್ತಿರಬಹುದೆಂದುಕೊಂಡು ಇವರೆಲ್ಲಾ ಕೆಂಪಗೆ ಕಾದ ದಪ್ಪ ಕಬ್ಬಿಣದ ಕೋಲಿನಿಂದ ಆತನ ಪುಕ್ಕಗಳನ್ನು ಸುಟ್ಟಿದ್ದರು. ಅವನು ತನ್ನ ಆ ಮಜಬೂತಾದ ರೆಕ್ಕೆಗಳನ್ನು ದೊಡ್ಡದಾಗಿ ಬಡಿಯುತ್ತಾ ತನ್ನ ಋಷಿಯ ಭಾಷೆಯಲ್ಲಿ ಏನೋ ಗೊಣಗುತ್ತಾ ಎದ್ದು ನಿಂತಾಗ ಕಣ್ಣುಗಳಲ್ಲಿ ನೀರು ತುಂಬಿ ಕೊಂಡಿತ್ತು. ಆತ ರೆಕ್ಕೆ ಬಡಿದಾಗ ಎದ್ದ ಕೋಳಿಹಿಕ್ಕೆಗಳ ಸುಂಟರಗಾಳಿ, ಧೂಳು, ದಿಗಲಿನ ವಾತಾವರಣ ಎಲ್ಲವೂ ಈ ಪ್ರಪಂಚದ್ದೇ ಅಲ್ಲವೇನೋ ಅನ್ನುವಂತಿತ್ತು. ಹೆಚ್ಚಿನವರಿಗೆ ಆತನ ಪ್ರತಿಕ್ರಿಯೆ ಸಿಟ್ಟಿನಿಂದಾಗಿರದೇ, ನೋವಿನಿಂದಾಗಿದ್ದು ಎಂದು ಗೊತ್ತಾದರೂ ಆತನಿಗೆ ಸಿಟ್ಟು ಬರುವಂತಾ ಏನನ್ನೂ ಮಾಡದಂತೆ ತುಂಬಾ ಎಚ್ಚರದಿಂದಿದ್ದರು. ಯಾಕೆಂದರೆ ಹೆಚ್ಚಿನವರಿಗೆ ಆತನ ಮೌನವೊಂದು ಧೀರೋದಾತ್ತ ನಾಯಕನೊಬ್ಬ ಸುಮ್ಮನೆ ಕೂತಂತೆ ಕಾಣುವುದಕ್ಕಿಂತ ಪ್ರಳಯವೊಂದು ವಿಶ್ರಾಂತಿಯಲ್ಲಿರುವಂತೆ ಕಂಡುಬಂದಿತು.

ಅಂತಿಮ ತೀರ್ಮಾನಕ್ಕೆ ಕಾಯುತ್ತಿದ್ದ ಪಾದ್ರಿ ಗೊನ್‌ಜಾಗರು ಹುಡುಗಾಟಿಕೆ ಆಡುತ್ತಿದ್ದ ಗುಂಪನ್ನು ತತ್ವಬೋಧನೆಗಳ ಮೂಲಕ ಹಿಂದಕ್ಕೆಳೆಯಲು ಯತ್ನಿಸಿದರು. ಆದರೆ ರೋಮಿನಿಂದ ಬರಬೇಕಾದ ಸಂದೇಶಕ್ಕೆ ಯಾವುದೇ ಅವಸರವಿದ್ದಂತೆ ಕಂಡುಬರಲಿಲ್ಲ. ಅವರು ತಮ್ಮ ಸಮಯವನ್ನು, ಆ ಬಂದಿಗೆ ಹೊಕ್ಕುಳಿರುವುದೇ, ಆತನ ಭಾಷೆಗೂ ಅರಾಮಿಕ್‌ಗೂ ಏನಾದರೂ ಸಂಬಂಧವಿದೆಯೇ, ಆತನ ಉದ್ದಗಲಗಳೆಷ್ಟಿರಬಹುದು ಅಥವಾ ಆತ ರೆಕ್ಕೆಗಳಿರುವ ಬರಿಯ ನಾರ್ವೆಯ ವಾಸಿ ಇರಬಹುದೇ ಎಂದು ಹುಡುಕುವುದರಲ್ಲಿ ಕಳೆದರು. ಆ ಪತ್ರಗಳೆಲ್ಲಾ ತಮ್ಮಷ್ಟಕ್ಕೇ ಬಂದು ಹೋಗಿಬಿಡುತ್ತಿದ್ದವೇನೋ ಆದರೆ ಕಾಕತಾಳೀಯ ಘಟನೆಯೊಂದು ನಡೆದು ಪಾದ್ರಿಯ ದುಃಖಕ್ಕೆ ವಿರಾಮವನ್ನಿತ್ತಿತ್ತು.

ಅದು ಹೇಗಾಯಿತೆಂರೆ, ಉತ್ಸವದ ಇತರೆ ಹಲವು ಪ್ರದರ್ಶನಗಳಲ್ಲಿ ಒಬ್ಬ ಮಹಿಳೆ ತನ್ನ ತಂದೆ ತಾಯಿಗಳ ಮಾತು ಕೇಳದಿದ್ದಕ್ಕಾಗಿ ಜೇಡವಾಗಿ ಪರಿವರ್ತಿತಳಾದವಳು ಆ ಪಟ್ಟಣಕ್ಕೆ ಸಂಚರಿಸುತ್ತಾ ಬಂದಳು. ಅವಳನ್ನು ನೋಡಲು ಪ್ರವೇಶದರ ಇಲ್ಲಿಗಿಂತ ಕಡಿಮೆ ಇತ್ತಲ್ಲದೇ, ವೀಕ್ಷಕರು ಆಕೆಯನ್ನು ಏನೆಲ್ಲಾ ಪ್ರಶ್ನೆಗಳನ್ನು ಕೇಳಿ ಆಕೆಯಿಂದ ಉತ್ತರ ಪಡೆಯಬಹುದಿತ್ತಲ್ಲದೇ, ಆಕೆಯನ್ನು ಮೇಲಿಂದ, ಕೆಳಗಿನವರೆಗೆ ಪೂರ್ಣವಾಗಿ ಪರೀಕ್ಷಿಸಿ ಆಕೆಯ ಆ ಭಯಾನಕ ಸ್ಥಿತಿಯ ಬಗ್ಗಿನ ಎಲ್ಲಾ ಸಂಶಯಗಳನ್ನೂ ನಿವಾರಿಸಿಕೊಳ್ಳಬಹುದಿತ್ತು. ಅವಳ ದೇಹವು ಒಂದು ಕೊಬ್ಬಿದ ಕುರಿಯಷ್ಟು ದೊಡ್ಡದಿತ್ತಲ್ಲದೇ ಮುಖವೊಂದು ದುಃಖದ ಹೆಣ್ಣಿನದಾಗಿತ್ತು. ಅತ್ಯಂತ ಹೃದಯವಿದ್ರಾವಕವಾಗಿ ತೋರುತ್ತಿದ್ದುದು ಆಕೆಯ ಆ ವಿದ್ರೂಪಗೊಂಡ ದೇಹವಾಗಿರದೇ, ತನ್ನ ದುರ್ಗತಿಯ ಬಗ್ಗೆ ಆಕೆ ಬಗೆಬಗೆಯಾಗಿ ಹೇಳಿಕೊಳ್ಳುವ ಪರಿ. ತಂದೆತಾಯಿಯ ಮಾತನ್ನು ಕೇಳದೇ, ಇನ್ನೂ ಸಣ್ಣಮಗುವಾಗಿದ್ದಾಗ ಆಕೆ ನರ್ತಿಸಲೆಂದು ಮನೆಯಿಂದ ಓಡಿ ಹೋಗಿ, ಒಪ್ಪಿಗೆ ಇಲ್ಲದೇ ಇಡೀರಾತ್ರಿ ನರ್ತಿಸಿ ಕಾಡುಹಾದಿಯಲ್ಲಿ ವಾಪಾಸು ಬರುತ್ತಿರುವಾಗ ಗುಡುಗೊಂದು ಗುಡುಗಿ, ಆಕಾಶ ಸಿಗಿದು, ಅದರ ಬಿರುಕಿಂದ ಮಿಂಚಿನ ಸೆಳಕೊದು ಆಕೆಗೆ ಬಡಿದು ಆಕೆಯನ್ನು ಜೇಡನನ್ನಾಗಿ ಬದಲಾಯಿಸಿತ್ತು. ಆಕೆಯ ಬಾಯಿಗೆ ಎಸೆಯುತ್ತಿದ್ದು ಮಾಂಸದ ತುಂಡುಗಳು ಅಷ್ಟೆ. ಇಂಥಾ ಒಂದು ಮನುಷ್ಯ ಸತ್ಯಗಳನ್ನು ಹಾಗೂ ಹೆದರಿಕೆ ಹುಟ್ಟಿಸುವ ಪಾಠಗಳುಳ್ಳಂಥಾ ಈ ದೃಶ್ಯವು ಉದಾರತೆಯಿಂದ ಆ ಮಂದಿಯತ್ತ ತಿರುಗಿಯೂ ನೋಡದ ಆ ಸೊಕ್ಕಿನ ಕಿನ್ನರನನ್ನು ಸೋಲಿಸುವಲ್ಲಿ ಅಪ್ರಯತ್ನವಾಗಿ ಯಶಸ್ವಿಯಾಯಿತು. ಅಲ್ಲದೇ ಆತನು ತೋರಿದ ಪ್ರಶಂಸೆಗೆ ಪಾತ್ರವಾದ ಕೆಲವು ಚಮತ್ಕಾರಗಳು ಯದ್ವಾತದ್ವಾ ಆಗಿರುವಂತೆ ಕಂಡುಬಂದಿತು. ಆದರೆ ಕುರುಡ ಮನುಷ್ಯನೊಬ್ಬನಿಗೆ ದೃಷ್ಟಿಸಿಗುವ ಬದಲಾಗಿ ಮೂರು ಹೊಸ ಹಲ್ಲುಗಳು ಬೆಳೆದದ್ದು, ಲಕ್ವದಿಂದ ನಡೆಯಲಾರದಂತಾಗಿದ್ದ ಒಬ್ಬನಿಗೆ ಲಾಟರಿ ಸಿಕ್ಕೇಬಿಟ್ಟಿದ್ದು, ಕುಷ್ಟರೋಗಿ ಒಬ್ಬನ ಹುಣ್ಣುಗಳಲ್ಲಿ ಸೂರ್ಯಕಾಂತಿ ಹೂಗಳು ಚಿಗುರಿದ್ದು ಇತ್ಯಾದಿ. ಈ ಬಗೆಯ ಅಣಕಿಸುವ ತಮಾಷೆಗಳಂತೆ ಕಾಣುತ್ತಿದ್ದ ಸಮಾಧಾನಕರ ಚಮತ್ಕಾರಗಳು ಕಿನ್ನರನ ಹೆಸರನ್ನು ಅಷ್ಟರಲ್ಲೇ ಹಾಳುಮಾಡುತ್ತಿದ್ದರೂ, ಈ ಜೇಡರ ಹುಡುಗಿಯತೂ ಅದನ್ನು ಪೂರ್ಣವಾಗಿ ತುಳಿದುಬಿಟ್ಟಳು. ಈ ರೀತಿಯಾಗಿ ಪಾದ್ರಿ ಗೊನ್‌ಜಾಗರ ನಿದ್ರಾಹೀನತೆ ಎಂದೆಂದಿಗೂ ಗುಣಮುಖವಾಯಿತಲ್ಲದೇ

ಪಿಲಾಯೋನ ಅಂಗಳವು ಹಿಂದೆ ಆ ಮೂರುದಿನದ ಮಳೆಯ ಕಾಲದಲ್ಲಿದ್ದಂತೆ ಖಾಲಿಯಾಯಿತಲ್ಲದೇ ಏಡಿಗಳೂ ಮಲಗುವ ಕೋಣೆಯತ್ತ ಗಮನಹರಿಸಿದವು.

ಮನೆಯ ಮಾಲಿಕರು ದುಃಖಿತಪ್ತರೇನೂ ಆಗಬೇಕಿರಲಿಲ್ಲ. ಅವರು ಉಳಿಸಿದ ಹಣದಿಂದ ಎರಡುಪ್ಪರಿಗೆಯ ಬಾಲ್ಕನಿ, ಹೂತೋಟಗಳಿರುವಂಥ ಮನೆಯನ್ನು ಕಟ್ಟಿಸಿದರಲ್ಲದೇ, ಚಳಿಗಾಲದಲ್ಲಿ ಏಡಿಗಳು ಒಳಬಾರದಂತೆ ಎತ್ತರೆತ್ತರಕ್ಕೆ ಬಲೆಗಳನ್ನು ಹೊಡಿಸಿದರು ಮತ್ತು ಕಿನ್ನರರು ಇನ್ನು ಮುಂದೆ ಬಾರದಂತೆ ಕಿಟಕಿಗಳಿಗೆ ಕಬ್ಬಿಣದ ಕಂಬಿಗಳನ್ನು ಇಡಿಸಿದರು. ಪಿಲಾಯೋನು ಪೇಟೆಯ ಹತ್ತಿರದಲ್ಲೇ ಮೊಲದ ಸಾಕಣೆಯನ್ನು ಸುರುಮಾಡಿದನಲ್ಲದೇ ತಾನು ಮೊದಲು ಮಾಡುತ್ತಿದ್ದ ಮೇಲ್ವಿಚಾರಕ ಕೆಲಸವನ್ನು ಪೂರ್ತಿಯಾಗಿ ಬಿಟ್ಟನು. ಅಲ್ಲದೇ ಅಲಿಸೆಂಡಾಳು ಆಗಿನ ಕಾಲದಲ್ಲಿ ಕುಲೀನ ಸ್ತ್ರೀಯರು ಭಾನುವಾರಗಳಲ್ಲಿ ಧರಿಸುತ್ತಿದ್ದಂಥಾ ರೇಷ್ಮೆಯ ವಸ್ತ್ರಗಳು ಹಾಗೂ ಎತ್ತರ ಹಿಮ್ಮಡಿಯ ಶೂಸುಗಳನ್ನು ಕೊಂಡಳು. ಆ ಕೋಳಿಗೂಡು ಮಾತ್ರ ಹಾಗೇ ಇತ್ತು. ಅವರು ಆಗಾಗ್ಗೆ ಆ ಕೋಳಿಗೂಡಿನೊಳಕ್ಕೆ ಹೋಗಿ ಅದನ್ನು ಕ್ರಿಮಿನಾಶಕಗಳಿಂದ ತೊಳೆಯುತ್ತಾ ಕಣ್ಣಿಂದ ನೀರು ಸುರಿಸುತ್ತಿದ್ದರೆ ಅದು ಈ ಕಿನ್ನರನಿಗಾಗಿ ಆಗಿರದೇ, ಅಂಥ ತಮ್ಮ ಹೊಸಮನೆಯನ್ನು ಹಳೆಯದರಂತೆ ಮಾಡುತ್ತಾ ದುರ್ನಾತ ಬಡಿಯುತ್ತಿದ್ದ ಗುಪ್ಪೆ ಗುಪ್ಪೆ ಸಗಣಿಯಿಂದ ಬಿಡುಗಡೆ ಪಡೆಯಲು ಮಾಡುತ್ತಿದ್ದ ಕಾಯಕವಾಗಿತ್ತು. ಮೊದಮೊದಲಿಗೆ ಅವರ ಮಗು ನಡೆಯುವುದನ್ನು ಕಲಿತಾಗ ಕೋಳಿಗೂಡಿನ ತೀರಾ ಹತ್ತಿರಕ್ಕೆ ಅವನು ಹೋಗದಂತೆ ಜಾಗ್ರತೆ ವಹಿಸುತ್ತಿದ್ದರು. ಆದರೆ ಅವರು ನಿಧಾನಕ್ಕೆ ಹೆದರಿಕೆಯಿಂದ ಮುಕ್ತರಾದರಲ್ಲದೇ ಆ ವಾಸನೆಗೆ ಹೊಂದಿಕೊಂಡರು ಮತ್ತು ಮಗುವು ಎರಡನೇ ಹಲ್ಲು ಬರುವುದಕ್ಕೆ ಮೊದಲೇ, ಹರುಕುಮುರುಕಾಗತೊಡಗಿದ್ದ ಆ ಕೋಳಿಗೂಡಿನೊಳಕ್ಕೆ ಹೋಗಿ ಆಡಲು ತೊಡಗಿತ್ತು. ಆ ಕಿನ್ನರನು ಮಗುವಿನೊಂದಿಗೂ ಉಳಿದ ಮಂದಿಯೊಂದಿಗಿದ್ದಂತೇ ನಿರ್ಲಿಪ್ತನಾಗಿದ್ದನು. ಆದರೆ ಆತನ ಜಾಣ ಅಪಕೀರ್ತಿಗಳನ್ನು ನಾಯಿಯ ತರ ಯಾವುದೇ ಭ್ರಮೆಗಳಿಲ್ಲದೆ ತಾಳ್ಮೆಯಿಂದ ಸಹಿಸಿಕೊಂಡನು. ಅವರಿಬ್ಬರಿಗೂ ಒಟ್ಟಿಗೆ ಮಾರಿಬೇನೆ ಆಯಿತು. ಮಗುವನ್ನು ನೋಡಲು ಬಂದ ವೈದ್ಯರಿಗೆ ಆ ಕಿನ್ನರನನ್ನು ನೋಡದೇ ಇರಲು ಅಸಾಧ್ಯವಾಗಿ ಆತನ ಹೃದಯಕ್ಕೆ ಕಿವಿಕೊಟ್ಟಾಗ ಕೇಳಿದ ಸೀಟಿಗಳು ಹಾಗೂ ಹಲವಾರು ಶಬ್ದಗಳಿಂದ ಆತ ಬದುಕಿರಲು ಅಸಾಧ್ಯವೆನಿಸಿತು. ಅವರನ್ನು ಅತ್ಯಂತ ಆಶ್ಚರ್ಯಚಕಿತರನ್ನಾಗಿ ಮಾಡಿದ್ದು

ಆತನ ರೆಕ್ಕೆಗಳ ಬಗೆಗಿನ ತರ್ಕ. ಅವು ಎಷ್ಟರಮಟ್ಟಿಗೆ ಆತನ ದೇಹದ ಇತರೇ ಭಾಗಗಳಂತೆ ಸಹಜವಾಗಿತ್ತೆಂದರೆ ಉಳಿದ ಮಂದಿಗೂ ಅಂಥಾ ರೆಕ್ಕೆಗಳೇಕಿಲ್ಲವೆಂದು ಅವರಿಗೆ ಅರ್ಥವಾಗಲಿಲ್ಲ.

ಮಗು ಶಾಲೆಗೆ ಹೋಗುವಂತಾಗುವುದಕ್ಕೆ ಮೊದಲೇ ಶಿಥಿಲವಾಗಿದ್ದ ಕೋಳಿಗೂಡು ಮಳೆಗಾಳಿಗಳಿಗೆ ಮುರಿದುಬಿತ್ತು. ಕಿನ್ನರನೂ ಸಾಯುತ್ತಿರುವ ಬಿಕನಾಸಿ ಮನುಷ್ಯನಂತೆ ತನ್ನನ್ನು ಎಳೆದುಕೊಳ್ಳುತ್ತಾ ಆಚೆಈಚೆ ಹೋಗತೊಡಗಿದನು. ಆತನನ್ನು ಅವರು ಹಿಡಿಸುಡಿ ಹಿಡಿದು ಮಲಗುವ ಕೋಣೆಯಿಂದ ಓಡಿಸುವ ಹೊತ್ತಿಗೆ ಆತ ಅಡಿಗೆ ಮನೆಯಲ್ಲಿ ಪ್ರತ್ಯಕ್ಷನಾಗುತ್ತಿದ್ದ. ಅವನು ಎಷ್ಟೊಂದು ಜಾಗಗಳಲ್ಲಿ ಒಂದೇ ಬಾರಿಗೆ ಕಂಡಂತಾಗಿ, ಆತನು ದ್ವಿಗುಣಗೊಂಡನೋ ಎಂದು ಯೋಚಿಸಿ, ಮನೆ ತುಂಬಾ ಆತ ಹುಟ್ಟಿ ಹುಟ್ಟಿ ಬರುತ್ತಿದ್ದಾನೋ ಎಂದುಕೊಂಡು ಉದ್ರೇಕಗೊಂಡು, ರೋಸಿಹೋದ ಎಲಿಸೆಂಡಾ ಕಿನ್ನರರಿಂದ ತುಂಬಿಹೋದ ನರಕದಲ್ಲಿ ಬದುಕುವುದು ಅಸಾಧ್ಯ ಅಸಹ್ಯ ಎಂದು ಕೂಗಾಡಹತ್ತಿದ್ದಳು. ಆತ ಅಪರೂಪಕ್ಕೊಮ್ಮೆ ತಿನ್ನುತ್ತಿದ್ದನಲ್ಲದೇ, ಮಂಜು ಮಂಜಾದ ಆತನ ಪುರಾತನ ಕಣ್ಣುಗಳಿಂದಾಗಿ ಅಲ್ಲಿ ಇಲ್ಲಿ ಎಡತಾಕುತ್ತಾ ನಡೆಯುತ್ತಿದ್ದ. ಆತ ಬಿಟ್ಟಿದ್ದು ಎಂದರೆ ಆತನ ಕೊನೆಯ ಪುಕ್ಕಗಳ ಗರಿಗಳನ್ನು ಮಾತ್ರ. ಪಿಲಾಯೋನು ಅವನ ಮೇಲೊಂದು ಚಾದರವನ್ನು ಎಸೆದು, ಅವರ ಶೆಡ್ಡಿನಲ್ಲಿ ಮಲಗಲು ಅನುವಾಗಿಸುವಷ್ಟು ಕರುಣಾಳುವಾದನು. ಆಗಲೇ ಅವರಿಗೆ ಆತನಿಗೆ ಜ್ವರ ಬಂದಿದೆ ಎಂದು ಅರಿವಾದದ್ದು ಮತ್ತು ಬುದ್ಧಿಭ್ರಮೆಯಿಂದ ಆತ ಏನೇನೋ ಮುದಿ ನಾರ್ವೆಯನ್ನಿನ ಥರ ಕ್ಲಿಷ್ಟವಾದ ನುಡಿಯಲ್ಲಿ ವಟಗುಡಹತ್ತಿದನು. ಅವರು ಹೆದರಿದಂಥಾ ಕೆಲವೇ ಸಂದರ್ಭಗಳಲ್ಲಿ ಇದೂ ಒಂದು. ಏಕೆಂದರೆ ಆತ ಸತ್ತುಹೋಗಬಹುದೆಂದು ಅವರು ಎಣಿಸಿದರಲ್ಲದೇ ಸತ್ತ ಕಿನ್ನರನನ್ನು ಏನು ಮಾಡಬೇಕೆಂದು ಪಕ್ಕದಮನೆಯ ಬುದ್ಧಿವಂತ ಹೆಂಗಸೂ ಹೇಳಲಾರದವಳಾಗಿದ್ದಳು.

ಆದರೆ ಆತನು ಆ ಕೆಟ್ಟ ಚಳಿಗಾಲದಲ್ಲೂ ಬದುಕುಳಿದ ಮಾತ್ರವಲ್ಲ ಬೇಸಿಗೆಯ ಮೊದಲ ಕಿರಣಗಳಿಂದ ಚೇತರಿಸಿಕೊಂಡಂತೆ ಕಂಡು ಬಂದ. ಆತನು ಅಂಗಳದ ಮೂಲೆಯಲ್ಲಿ ಯಾರಿಗೂ ಕಾಣದಂತೆ ಮೌನವಾಗಿ ಅಲುಗಾಡದೇ ಕುಳಿತುಕೊಂಡ ಮತ್ತು ಡಿಸೆಂಬರಿನ ಶುರುವಿನಲ್ಲಿ ಆತನಿಗೆ ಸಣ್ಣಗೆ ರೆಕ್ಕೆಗಳು ಮೊಳೆಯುಲಾರಂಭಿಸಿದವು. ಆದರೆ ಕಾಗೆಯಂಥಾ ರೆಕ್ಕೆಗಳು ನೋಡಲು ಅಶುಭ ಸೂಚಕಗಳಂತೆ ಕಂಡುಬಂದವು.

ಆದರೆ ಆತನಿಗೆ ಆ ಬದಲಾವಣೆಗಳು ಬಹುಶಃ ತಿಳಿದಿತ್ತು. ಅದರಿಂದ ಯಾರೂ ಅದನ್ನು ಗಮನಿಸದಂತೆ ಆತ ಜಾಗ್ರತೆ ವಹಿಸುತ್ತಿದ್ದ. ಅಲ್ಲದೇ ನಕ್ಷತ್ರಗಳಡಿಯಲ್ಲಿ ಸಮುದ್ರ ಮಂತ್ರಗಳನ್ನು ಯಾರಿಗೂ ಕೇಳಿಸದಂತೆ ಕೆಲವೊಮ್ಮೆ ತನ್ನಷ್ಟಕ್ಕೇ ಹಾಡಿಕೊಳ್ಳುತ್ತಿದ್ದ. ಒಂದು ದಿನ ಎಲಿಸೆಂಡಾ ಮಧ್ಯಾಹ್ನದ ಊಟಕ್ಕಾಗಿ ನೀರುಳ್ಳಿ ಕೊಚ್ಚುತ್ತಿದ್ದಾಗ ಸಮುದ್ರಬದಿಯಿಂದ ಒಂದು ದೊಡ್ಡ ಗಾಳಿ ಆಕೆಯ ಅಡಿಗೆ ಮನೆಯೊಳಕ್ಕೆ ತೂರಿದಂತೆ ಅನಿಸಿತು. ಆಗ ಅವಳು ಕಿಟಕಿ ಹತ್ತಿರಬಂದು ನೋಡಿದಾಗ ಕಿನ್ನರನು ಹಾರಲು ನಡೆಸಿದ ಮೊದಲ ಪ್ರಯತ್ನಗಳು ಕಣ್ಣಿಗೆ ಬಿತ್ತು. ಅದು ಎಷ್ಟು ಒಡ್ಡೊಡ್ಡಾಗಿತ್ತೆಂದರೆ ಆತನ ಕೈ ಉಗುರುಗಳು ತರಕಾರಿ ಸಾಲಿನಲ್ಲಿ ಊರಿ ಓಳಿ ಮಾಡಿತ್ತು. ಒಂದು ಕಡೆಯಲ್ಲಿ ಆತನ ಅಸಡ್ಡಾಳ ರೆಕ್ಕೆ ಬಡಿತದಿಂದಾಗಿ ಶೆಡ್ಡು ಬೀಳುವಂತಾಗಿ, ಗಾಳಿಯಲ್ಲಿ ಪಟ್ಟುಸಿಗದೇ ದೀಪದ ಮೇಲೆ ಬಿದ್ದಿದ್ದ. ಆದರೆ ಆತ ಎತ್ತರಕ್ಕೇರುವುದರಲ್ಲಿ ಯಶಸ್ವಿಯಾದ. ಆತ ಆ ಕೊನೆಯ ಮನೆ ಮೇಲುಗಡೆಯಿಂದ ಹೇಗೋ ತನ್ನನ್ನು ಹೊತ್ತುಕೊಂಡು ಹದ್ದಿನಂತೆ ರೆಕ್ಕೆ ಬಡಿಯುತ್ತಾ ಹಾರಿಹೋಗುತ್ತಿರುವಾಗ ಎಲಿಸೆಂಡಾಳು ತನಗಾಗಿ ಹಾಗೂ ಆತನಿಗಾಗಿ ಒಂದು ನಿರಳಾತೆಯ ನಿಟ್ಟುಸಿರನ್ನು ಬಿಟ್ಟಳು. ಆಕೆ ನೀರುಳ್ಳಿ ಕೊಚ್ಚುವುದು ಮುಗಿದರೂ, ಆತ ಕಾಣದಂತಾಗುವವರೆಗೂ ಅತ್ತಲೇ ನೋಡುತ್ತಿದ್ದಳು. ಯಾಕೆಂದರೆ ಈಗ ಆತ ಆಕೆಯ ಬದುಕಿನಲ್ಲಿ ಒಂದು ಕಿರುಕುಳವಾಗಿದೇ ಸಮುದ್ರದಾಚೆಯ ದಿಗಂತದಲ್ಲಿನ ಬಿಂದು ಕಲ್ಪನೆಯ ಚುಕ್ಕಿ ಮಾತ್ರವಾಗಿದ್ದ.

ಕನ್ನಡಕ್ಕೆ : ಹಾ.ಮ.ಕನಕ

ಪ್ರಪಂಚದಲ್ಲೇ ಮುಳುಗಿ ಹೋದ ಮಹಾಚೆಲುವ

ಮೊದಲ ನೋಟಕೆ ನೋಡಿದ ಮಕ್ಕಳು ಕಪ್ಪಗೆ, ನಯವಾಗಿ, ಊದಿಕೊಂಡಿರುವಂತೆ ಸಮುದ್ರದಲ್ಲಿ ಕಾಣುವುದನ್ನ ಖಾಲಿ ಹಡಗೆಂದು ತಮ್ಮೊಳಗೆ ಯೋಚಿಸಹತ್ತಿದರು. ಆದರೆ ಯಾವುದೇ ಹಾಯಿಗಂಭ ಅಥವಾ ಪಟ ಇರದನ್ನ ಕಂಡು ಬಹುಶಃ ಇದು ತಿಮಿಂಗಿಲವಿರಬೇಕು ಅಂದುಕೊಂಡರು. ಸಮುದ್ರದಂಡೆಯಲ್ಲಿ ಅದು ತೊಳೆಯಲ್ಪಟ್ಟಾಗ. ಮಕ್ಕಳು ಅದಕ್ಕಂಟಿರುವ ಪಾಚಿ, ಪೊದೆಗಳನ್ನ, ಅದರೊಳಗೆ ಅವಿತಿರುವ ಮೀನಿನ ಅವಶೇಷಗಳನ್ನ ತೆಗೆದಾಗ ಇದು ನೀರಲ್ಲಿ ಮುಳುಗಿಹೋದ ವ್ಯಕ್ತಿ ಎಂದು ಭಾಸವಾಯಿತು.

ನಡು ಮಧ್ಯಾಹ್ನದವರೆಗೆ ಮಕ್ಕಳ ಆಟ ಈ ಮುಳುಗಿ ಹೋದ ಚೆಲುವನೊಡನೆ ನಡೆದೇ ಇತ್ತು. ಮರಳಲ್ಲಿ ಹೊಂಡ ತೋಡಿ ಸಮಾಧಿ ಮಾಡೋದು, ಹಾಗೇನೇ ಹೊರ ತೆಗೆಯೋದು.... ಹೀಗೆ ಸಾಗುತ್ತಿರುವಾಗ ದಾರಿಹೋಕರ ಕಣ್ಣಿಗೆ ಬಿದ್ದು ಊರೆಲ್ಲಾ ಗಂಟೆ ಬಾರಿಸಿದರು. ಈ ಚೆಲುವ ಸತ್ತ ಇತರರಿಗಿಂತ ಹೆಚ್ಚು ತೂಗುತ್ತಿದ್ದ. ಎಷ್ಟೆಂದರೆ ಕುದುರೆಯಷ್ಟು. ಮುಳುಗಿ ಸಾಕಷ್ಟು ದಿನವಾಗಿರಬೇಕು. ನರನಾಡಿಗಳೆಲ್ಲಾ ನೀರು ಕುಡಿದು ಇಷ್ಟೊಂದು ಹೆಣಭಾರ ಮನೆಯ ಯಾವ ಕೊಠಡಿಯೂ ಸಾಲದಷ್ಟು ಉದ್ದ ಮುಳುಗಿದ ಮನುಷ್ಯರು ಸತ್ತಮೇಲೂ ನೀರಲ್ಲಿ ಉದ್ದವಾಗುತ್ತಾರೋ ಏನೋ! ನೀರ ಪ್ರಕೃತಿ

ಇರಬಹುದು. ಉಪ್ಪು ನೀರನ ಘಾಟು ಹೊಡೆಯುವ ಈ ಚೆಲುವ ದಳವಾಯಿಯೇ ಇರಬೇಕು. ಅಬ್ಬ! ಚರ್ಮವೆಲ್ಲಾ ಮೀನಿನ ಸಿಪ್ಪೆ, ಚಿಪ್ಪುಗಳಿಂದ ಆವೃತಗೊಂಡಿದೆಯಲ್ಲ!

ಈ ವಿಚಿತ್ರ ಚೆಲುವನ ಮುಖ ಪರಿಚಯಕ್ಕೆ ಯಾರೂ ಪ್ರಯತ್ನಿಸಲಿಲ್ಲ. ಅಂದ ಹಾಗೆ ಆ ಹಳ್ಳಿ ಹತ್ತಿಪ್ಪತ್ತು ಮನೆಗಳಿಂದ ಕೂಡಿದ್ದು ಅಣತಿ ದೂರದ ಭೂ ಕೊನೆಯಲ್ಲಿ ಮುಗಿದೇ ಹೋಗಿತ್ತು. ಬಟ್ಟಾನು ಬಯಲು. ಹೂ ಗಿಡ ಮರಗಳಿಲ್ಲದ ಮರುಭೂಮಿ ಬಿರುಗಾಳಿಗೆ ಊರೇ ಹಾರಿಹೋಗುವ ರಭಸಕ್ಕೆ ಸಮುದ್ರ ದಂಡೆಯ ಬಂಡೆಗೆ ಎಸೆಯಲ್ಪಟ್ಟು ಸತ್ತೇ ಹೋಗುವವರಿದ್ದರು. ಆದರೆ ಪ್ರಶಾಂತ ಕಡಲು ಅವರನ್ನೆಲ್ಲಾ ಪಾರು ಮಾಡಿತ್ತು. ಈ ಚೆಲುವನ ನೋಡಿದಾಕ್ಷಣ ಎಲ್ಲರಿಗೂ ನೀರಿಗೆ ಬಿದ್ದವರ ನೆನಪಾಗಹತ್ತಿತ್ತು.

ಆ ದಿನ ಯಾರೂ ಮೀನು ಹಿಡಿಯಲು ನೀರಿಗಿಳಿದಿರಲಿಲ್ಲ. ಅಕ್ಕ - ಪಕ್ಕದ ಹಳ್ಳಿಗಳಲ್ಲಿ ಕಾಣೆಯಾದ ಮೀನುಗಾರರ ಸುದ್ದಿ ಬಂದರೆ ಈ ಚೆಲುವನಿಗೆ ಇನ್ನಿಲ್ಲದ ಕಾಳಜಿ. ಹುಲ್ಲು ಪೊರಕೆಯಿಂದ ಚೆಲುವನ ಮೈಗಂಟಿದ್ದ ಕೆಸರನ್ನೆಲ್ಲಾ ಸರಿಸಿದರು. ಅಲ್ಲಲ್ಲಿ ಸಿಕ್ಕಿಕೊಂಡಿದ್ದ ಪಾಚಿ, ಕಲ್ಲು, ಶಂಖಗಳನ್ನೆಲ್ಲಾ ಉಜ್ಜಿ ತೆಗೆದರು. ಚೆಲುವನ ಬಟ್ಟೆಬರೆಗಳೆಲ್ಲಾ ಚಿಂದಿಚೂರಾಗಿರುವುದನ್ನ ನೋಡಿದರೆ ಬಹುದೂರದ ಆಳದಿಂದ ಹವಳಗಳಿಗೆ ಸಿಲುಕಿ ಕೊಂಡಿರಬೇಕು. ಅಲ್ಲಿ ನೋಡಿ, ಅಲ್ಲಲ್ಲಿ ಸಸ್ಯಗಳೇ ಬೆಳೆದು ಬಿಟ್ಟಿದ್ದಾವಲ್ಲಾ! ಬಹಳ ಹೆಮ್ಮೆಯಿಂದ ಈ ಚೆಲುವ ಸತ್ತಿರಬೇಕು. ಉಳಿದ ಮುಳುಗಿದ ಮನುಷ್ಯರ ಬಗ್ಗೆ ಇವನಿಗೆ ಅರಿವೇ ಇಲ್ಲವೇನು! ಎಷ್ಟೆಲ್ಲಾ ವಿಕಾರಗೊಂಡಿದ್ದಾನೆ! ತಲೆಗೊಂದು ಮಾತು ಬರುತ್ತಿರುವಂತೆಯೇ ಚೆಲುವನ ಮೈ ಮೇಲಿದ್ದ ನೀರ ಅವಶೇಷಗಳೆಲ್ಲಾ ಚೆನ್ನಾಗಿ ತೊಳೆಯಲ್ಪಟ್ಟವು. ಬಿಟ್ಟ ಕಣ್ಣು ಬಿಟ್ಟಂತೆಯೇ ಜನ ನಿಟ್ಟುಸಿರೆಳೆದರು. ಬರೇ ಉದ್ದನೆಯ, ಬಲಶಾಲಿಯಾದ ವೀರ್ಯವಂತನಷ್ಟೇ ಅಲ್ಲ ಈ ಚೆಲುವ, ಕಲ್ಪನಾತೀತ ಶರೀರ, ಎಂದೂ ಕಾಣದ್ದು.

ಆ ಊರಲ್ಲಿ ಮಲಗಲು ಹಾಸಿಗೆಯಾಗಲೀ, ಎಳೆಯಲು ಮಾರ್ಗವಾಗಲೀ ಚೆಲುವನಿಗೆ ಸಿಗಲೇ ಇಲ್ಲ. ರಜಾದಿನದಲ್ಲಿ ಊರಿನ 'ಮಿಸ್ಟರ್ ಉದ್ದಾನುದ್ದ' ಹಾಕುವ ಪೈಜಾಮು, 'ಮಿಸ್ಟರ್ ದಪ್ಪಾನ್‌ದಪ್ಪ' ಹಾಕುವ ಅಂಗಿಯಾಗಲೀ ಚೆಲುವನಿಗೆ ಸಣ್ಣದಾಯಿತು. 'ರಕ್ಕಸ ಪಾದ' ದವನ ಬೂಟೂ ಬಿಚ್ಚಿಕೊಂಡಿತು. ಇವನ ಮೋಹಕ

ರೂಪಕ್ಕೆ ಮಾರುಹೋದ ಹೆಂಗಳೆಯರೆಲ್ಲಾ ಸೇರಿ ಸಾವನ್ನು ಗೌರವಯುತವಾಗಿ ಮುಚ್ಚಲು ಚೆಲುವನಿಗೊಂದು 'ಹಡಗಿನ ಹಾಯಿ' ಯಿಂದ ಪೈಜಾಮ, ನಾರು ಬಟ್ಟೆಯ ಮತ್ತೊಂದು ನಿಲುವಂಗಿ ಹೊಲಿಯಲು ಮುಂದಾದರು. ಹೊಲಿಯುತ್ತಿದ್ದಂತೆಯೇ ಗಾಳಿ ಇಷ್ಟೊಂದು ಬೀಸಿನಿಂದ ಇದ್ದದ್ದು ಕಡಲು ಇಷ್ಟೊಂದು ಅವಿಶ್ರಾಂತವಾಗಿದ್ದದ್ದನ್ನ ಅವರು ಕಂಡಿರಲಿಲ್ಲ. ಈ ರಾತ್ರಿ ಚೆಲುವನಿಗೆ ಬದಲಾವಣೆಯ ಲಾಭವಾಗಬಹುದು. ಹೀಗೆ ಚೆಲುವನನ್ನ ಆ ಹಳ್ಳಿಯವನ ಹಾಗೆಯೇ ಕಲ್ಪಿಸಿ ಕೊಳ್ಳಹತ್ತಿದರು. ಅವನ ಮನೆಯ ಅಗಲವಾದ ಬಾಗಿಲು. ಎತ್ತರದ ಒಳಮಾಳಿಗೆ ಗಟ್ಟಿಮುಟ್ಟಾದ ಪಂಚಾಂಗದ ನೆಲ. ಹಡಗಿನ ಹೊಟ್ಟೆಯಂತಹ ಪಲ್ಲಂಗ, ಛೇ! ಛೇ! ಚೆಲುವನ ಚೆಲುವೆಗಿಂತ ಹೆಚ್ಚು ಸುಖಿ ಮಹಿಳೆ ಬೇರೆ ಇನ್ನಾರಿದ್ದಾರು ಹೇಳಿ! ಚೆಲುವನಿಗೆ ಬರೇ ಮೀನಿನ ಹೆಸರು ಹೇಳಿ ನೀರಲ್ಲಿದ್ದ ಮೀನನ್ನ ದಡದ ಮೇಲೆ ಎಳೆಯಬಲ್ಲಷ್ಟು ಹಿಡಿತವಿರಬಹುದು. ಬಂಡೆಯನ್ನೊಡೆದು ನೀರ ಕಾರಂಜಿ ಹರಿಸಿ ಅಲ್ಲಿಂದಲೇ ಹೂದೋಟ ಸೃಷ್ಟಿಸಬಲ್ಲವನು ತಮ್ಮವರಲ್ಲೇ ಒಬ್ಬ ಈ ಚೆಲುವನೆಂಬಂತೆ ಪವಿತ್ರವಾಗಿ ತುಲನೆಗೈದರು. ಕೈ ಚೆಲ್ಲಿ ಕೂತ ನಮ್ಮೆಲ್ಲಾ ದೌರ್ಬಲ್ಯಗಳನ್ನು ಕ್ಷಣ ಮಾತ್ರದಲ್ಲಿ ಚೆಲುವ ನೀಗಿಸಬಲ್ಲ. ಥೂ, ಈ ಜನ್ಮವೇ! ನಾವೆಂಥಹ ನಿಷ್ಪ್ರಯೋಜಕ ಜಂತುಗಳು! ಭ್ರಮಾಲೋಕದಲ್ಲಿ ವಿಹರಿಸಹತ್ತಿದರು. ಆ ಹಳ್ಳಿಯ ದೊಡ್ಡ ಮುದುಕಿ ಚೆಲುವನನ್ನ ತದೇಕ ಚಿತ್ತದಿಂದ ನೋಡುತ್ತಲೇ ಇದ್ದಳು. ಆ ನೋಟದಲ್ಲಿ ಕನಿಕರವೂ ಭಾವೋದ್ರೇಕವೂ ಎರಕವಾಗಿತ್ತು.

'ಅವನ ಮುಖ ಇಸ್ತೆಬಾನ್‌ನಂತಿದೆ'

ಹೌದು! ಇವನೇ ಇಸ್ತೆಬಾನ್ ಪೈಜಾಮ, ನಿಲುವಂಗಿ ಹಾಕ್ಕೊಂಡು ಚರ್ಮದ ಚಪ್ಪಲಿಯಲ್ಲಿ ಈ ಗಂಡುಗೂಳಿಯನ್ನ ಕಂಡಾಗ ಇವನೇನೋ 'ಲಾತಾರೋ' ಅನ್ನಿಸುತ್ತೆ. ಇಲ್ಲಪ್ಪ! ಬರೇ ಹುರುಳಿಲ್ಲದ ಭ್ರಮೆ. ಆಕಾರವಿಲ್ಲದ ಪೈಜಾಮ, ಕೆಟ್ಟದಾಗಿ ಹೊಲಿದ ನಿಲುವಂಗಿ ಚೆಲುವನಿಗೆ ಬಿಗಿಯಾಯಿತು. ಗುಂಡಿಗಳೆಲ್ಲಾ ಅಡಗಿದ ಗುಂಡಿಗೆಯ ಶಕ್ತಿಗೆ ತರಾವರಿಯಾಗಿ ಉದುರಿದವು. ನಡುರಾತ್ರಿಗೆ ಗಾಳಿ ಸದ್ದಿಲ್ಲದೆ ಮಲಗಿತು. ಕಡಲು ತೂಕಡಿಸುತ್ತಿತ್ತು. ನಿದ್ದೆಯ ಮಂಪರಿನಲ್ಲಿ ಆಕಳಿಸುತ್ತಿತ್ತು. ಸಂಶಯದ ಕೊನೆಯ ಕಂತು ಹೀಗೆ ಸತ್ತೆ ಹೋಯಿತು. ಇವನೇ ಇಸ್ತೆಬಾನ್! ಇಸ್ತೆಬಾನಿಗೆ ಬಟ್ಟೆ ಹೊಲಿದವರು, ತಲೆ ಬಾಚಿದವರು, ಉದ್ದುದ್ದ ಉಗುರುಗಳನ್ನ ಕತ್ತರಿಸಿದವರು, ಗಡ್ಡ ತೆಗೆದವರೆಲ್ಲಾ

ಆತಂಕದಿಂದ ಚಳಕಿಟ್ಟರು. ಹಿಂದಕ್ಕೆ ಎಳೆಯಲ್ಪಟ್ಟರು. ಸತ್ತ ಇಸ್ತೆಬಾನಾ ಹೃದಯ ಎಷ್ಟೊಂದು ನೊಂದಿರಬೇಕು! ಸಾವಲ್ಲೂ ಎಂಥಹ ಸೆಳೆತ! ಇಸ್ತೆಬಾನಾನ ಜೀವಂತ ಘಟನೆಯನ್ನ ಈ ಹೆಂಗಳೆಯರೆಲ್ಲಾ ನೆನಪಿಸಿ ಕೊಳ್ಳಬಲ್ಲರು. ಅಡ್ಡವಾಗಿರುವ ಪಕ್ಕಾಸಿಗೆ ತಲೆಯನ್ನ ಚಚ್ಚಿಕೊಂಡಾಗ, ಬಾಗಿಲಿಗೆ ಡಿಕ್ಕಿ ಹೊಡೆದಾಗ, ಮನೆಯ ಕುರ್ಚಿಗಳನ್ನೆಲ್ಲಾ ಪುಡಿಗುಟ್ಟುತ್ತಿರುವಾಗ ಮನೆ ಮಂದಿಯೆಲ್ಲಾ ಸಾವಿನಿಂದ ಹೆದರುತ್ತಿದ್ದರು. ಪ್ರತಿಭಟಿಸಿದಾಗ 'ನಾನು ಆರಾಮವಾಗಿದ್ದೇನೆ' ಅನ್ನುತ್ತಿದ್ದ. ಹೋಗುತ್ತೇನೆಂದು ಇಸ್ತೆಬಾನ್ ಹೊರಟಾಗ, ಇವರೆಲ್ಲಾ 'ಕಾಫಿ ಕುಡಿದು ಹೋಗಪ್ಪ' ಅನ್ನುತ್ತಿದ್ದರು. ಹೋದ ಮೇಲೆ 'ಮಹಾದಡ್ಡ ಹೋದ' ಅಂತ ಪಿಸುಗುಟ್ಟುತ್ತಿದ್ದರು. ಚೆಲುವ ಮುಳುಗಿ ಹೋಗುವ ಕೊಂಚ ಮುನ್ನ ನಡೆದದ್ದನ್ನೆಲ್ಲಾ ಹೆಂಗಳೆಯರು ಯೋಚಿಸಹತ್ತಿದರು. ಕರವಸ್ತ್ರ ತಕ್ಕೊಂಡು ಮುಖಕ್ಕೆ ಬೆಳಕು ಬೀಳದಂತೆ ಮುಚ್ಚಿದರು. ತಮ್ಮ ಗಂಡಸರ ಮುಖದ ಸುಕ್ಕುಗಳಿಂದ ಬಿದ್ದ ಕಣ್ಣೀರ ಹನಿಗಳನ್ನ ನೋಡಿದಂತಾಯಿತು. ಸದಾ ಸತ್ತ ಹಾಗಿರುವ ಮುಖ... ಅದೋ... ಆ ಯುವತಿ ಅಳಲಾರಂಭಿಸಿದರು. ಸಾಲು ಸಾಲು ನೆರೆದವರೆಲ್ಲಾ ಹಾಗೇ ಮಾಡಿದರು. ಬಿಕ್ಕಿ ಬಿಕ್ಕಿ ಗೋಗರೆದರು. ಅತ್ತ ಹಾಗೇನೇ ಹೊಸ ಅರ್ಥ ಹೊರಬರುತ್ತಿತ್ತು. ಅವರಿಗೆ ಇಸ್ತೇಬಾನ್ ದರಿದ್ರದವನಾಗಿದ್ದ. ಬಹಳ ಶಾಂತಿದಾತ. ಉಪಕಾರಶೀಲನಾಗಿದ್ದ. ಪಾಪ! ಪಾಪಚ್ಚಿ ಇಸ್ತೆಬಾನಾ... ಹೀಗೊಂದು ಸುದ್ದಿ ಸತ್ತ ಈ ಚೆಲುವ ಅಕ್ಕ ಪಕ್ಕದೂರಿನವನಲ್ಲವಂತೆ. ವ್ಹಾ! ಸೇರಿದ ಹೆಂಗಳೆಯರೆಲ್ಲಾ ಪರಮಾನಂದ ಪಟ್ಟರು. ಕಣ್ಣೀರೆಲ್ಲಾ ಆನಂದ ಬಾಷ್ಪವಾಯ್ತು .

'ದೇವರಿಗೆ ನಮಿಸಿ', 'ಇವ ನಮ್ಮವ' ಜನ ನಿಟ್ಟುಸಿರಿಟ್ಟರು. ಇಷ್ಟೆಲ್ಲಾ ಆದ ರಂಪ ಇದೆಯಲ್ಲಾ... ಬರೇ ಹೆಣ್ಮಕ್ಕಳ ಹುಡುಗಾಟಿಕೆ. ರಾತ್ರಿ ಹೊತ್ತಿನ ತಪಾಸಣೆಯಿಂದಾಗಿ ಇಷ್ಟೆಲ್ಲಾ ದಣಿವು. ನೇಸರ ನೆತ್ತಿಗೆ ಬರುವಷ್ಟರಲ್ಲಿ ಈ ಚೆಲುವನಿಂದ ದೂರವಾಗಬೇಕೆಂದು ಆ ಗಂಡಸರೆಲ್ಲಾ ಆಶಿಸತೊಡಗಿದರು. ಊರಿಗೆ ಊರೇ ಮುಷ್ಕರ ಹೂಡಿದ ಹಾಗೆ ನಿಸ್ತೇಜವಾಗಿತ್ತು. ಸಮುದ್ರ ಬಂಡೆಯವರೆಗೆ ಹೋಗುವ ಹಾದಿ ಸುಗಮವಾಗುವಂತೆ ಹಡಗಿನ ಕಂಬ, ಹಾಯಿಗಳನ್ನೆಲ್ಲಾ ಹಗ್ಗದಿಂದ ಜೋಡಿಸಿ ಪಲ್ಲಂಗದ ತರ ಮಾಡಿ ಚೆಲುವನ ದೇಹ ತೂಕ ತಡೆದುಕೊಳ್ಳುವಂತೆ ಬಿಗಿಗೊಳಿಸಿದರು. ನೀರಲ್ಲಿ ಪಕ್ಕನೆ ಮುಳುಗಿ ಹೋಗುವ ಹಾಗೆ ಹಡಗಿನ ಲಂಗರಿಗೆ ಚೆಲುವನನ್ನ

ಕಟ್ಟಲೆತ್ನಿಸಿದರು. ಇದರಿಂದ ನೀರ ರಭಸಕ್ಕೆ ಮತ್ತೆ ಚೆಲುವ ದಡಕ್ಕೆ ಬರಲಾರ. ಆ ಗಂಡಸರು ಅವಸರಗುಟ್ಟಿದ ಹಾಗೇನೇ ಈ ಹೆಂಗಳೆಯರು ಸಮಯ ನುಂಗುತ್ತಿದ್ದರು. ಚೆಲುವನ ದೇಹದಲ್ಲಿದ್ದ ಕಡಲಚಿಪ್ಪು ಪಾಚಿಗಳನ್ನೆಲ್ಲಾ ಕೋಳಿಯಂತೆ ಕುಕ್ಕಿ ಹೆಕ್ಕಲಾರಂಭಿಸಿದರು. ಹೆಗಲಮೇಲಿನ ಸುಕ್ಕು ಎಲುಬನ್ನ ಮತ್ಯಾರೋ ಎತ್ತಿದರು. ಮೈ ಮೇಲೆ ದಿಕ್ಸೂಚಿಯನ್ನ ಇಟ್ಟು ನೋಡಲಾರಂಭಿಸಿದರು. ಬಲಿಪೀಠಕ್ಕೆ ಮಾಡಿದ ಅಲಂಕಾರದಂತೆ ಚೆಲುವನಿಗೆ ತೊಡಿಸಿದ್ದೇವಲ್ಲಾ ಅನ್ನುವ ಅಪನಂಬಿಕೆಯಿಂದ ಗೊಣಗುಟ್ಟಲಾರಂಭಿಸಿದರು. ಅವನ ಉಗುರುಗಳೋ, ಪವಿತ್ರತೀರ್ಥವೋ ಎಷ್ಟಿತ್ತೆಂಬುದು ಮುಖ್ಯವಲ್ಲ. ಅದನ್ನೆಲ್ಲಾ ಶಾರ್ಕುಗಳು ಹೀರಿ ಬಿಡುತ್ತವೆ. ಈ ಹೆಂಗಳೆಯರಿದ್ದಾರಲ್ಲಾ... ಸಣ್ಣ ದೋಣಿಗಳಲ್ಲಿ ಓಡಾಡುತ್ತಾ ಅವಶೇಷಗಳ ರಾಶಿ ಮಾಡುತ್ತಿದ್ದರು. ಹಾಗೇನೇ ಮುಗ್ಗರಿಸುತಿದ್ದರು. ಹೆಂಗಳೆಯರ ನಿಟ್ಟುಸಿರು ನಿಂತಾಗ ಗಂಡಸರು ರಹಸ್ಯ ಬಹಿರಂಗಗೊಳಿಸದರು. ಗೊತ್ತು ಗುರಿ ಇಲ್ಲದೆ ತೇಲಾಡಿದ ಈ ಚೆಲುವನ ಬಗ್ಗೆ ನಡೆದ ಗುಲ್ಲೋ, ರಂಪವೋ.... ಇವೆಲ್ಲಾ ಇದೆಯಲ್ಲಾ.... ಅದು 'ಬುಧವಾರದ ತಂಗಳುಮಾಂಸ ಅಷ್ಟೆ' ಎಂದರು. ತಟ್ಟನೆ ಹೆಣ್ಣು ಮಗಳೊಬ್ಬಳು ಚೆಲುವನ ಮುಖದ ಕರವಸ್ತ್ರ ಸರಿಸಿ ಸರಿಯಾದ ರಕ್ಷಣೆ ಇಲ್ಲದೆ ಕೊಳೆತ ದೇಹವನ್ನು ತೋರಿಸಿದಾಗ 'ಮಾಂಸ, ಮಾಂಸ' ಎಂದವರು ಹೌಹಾರಿದರು.

ಇವನೇ ಇಸ್ತೆಬಾನ್. ಇದನ್ನೇ ಮತ್ತೆ ಮತ್ತೆ ಹೇಳಬೇಕಾದ್ದಿಲ್ಲ. ಸರ್ ವಾಲ್ಟರ್ ರಾಲೇನ ಮಾತು ಇವರ ಮೇಲೆ ಆಳ ಪರಿಣಾಮ ಬೀರಿದೆ. ಆತನ ಗಂಭೀರವಾದ ಸ್ವರಭಾರ, ಹೆಗಲ ಮೇಲಿನ ಪುಟ್ಟ ಗಿಣಿ, ನರಹಂತಕ ಕೈಫಿರಂಗಿ.... ಆದರೆ ಜಗತ್ತಿನಲ್ಲಿ ಓರ್ವನೇ ಇಸ್ತೆಬಾನ್. ಅವನು ತಿಮಿಂಗಿಲವನ್ನೇ ಎಳೆದಾಡಬಲ್ಲ ಬಲಶಾಲಿ. ಬರಿಗಾಲಿನ, ಚಿಕ್ಕ ಮಕ್ಕಳ ಪೈಜಾಮ ತೊಟ್ಟ ಮತ್ತು ಚಾಕುವಿನಿಂದ ಕತ್ತರಿಸಬಹುದಾದ ಕಲ್ಲಿನಂತಹ ಉಗುರುಗಳು... ಅವನಿಗೆ ನಾಚಿಕೆಯಾಗಿರಬೇಕೆಂದೇ ತಿಳಿದು ಅವರು ಮುಖದಿಂದ ಕರವಸ್ತ್ರ ತೆಗೆದಿರಬೇಕು. ಇಷ್ಟೊಂದು ದಷ್ಟ ಪುಷ್ಟವಾಗಿರುವುದು ಅವನ ತಪ್ಪಲ್ಲ ಬಿಡಿ. ಇಷ್ಟೆಲ್ಲಾ ರದ್ಧಾಂತ ಆಗುತ್ತಿತ್ತೆಂದು ಗೊತ್ತಿದ್ದರೆ ಮುಳುಗಲು ಬೇರೊಂದು ಜಾಗ ನೋಡುತ್ತಿದ್ದನೋ ಏನೋ! ಅವನೇ ಕುತ್ತಿಗೆಗೆ ಲಂಗರು ಕಟ್ಟಿಕೊಂಡು ಬಂಡೆಯ ಜೊತೆ ತೊಯ್ದಾಡುತ್ತಿದ್ದನೇ ಶಿವಾಯ್ ದೈನಂದಿನ ಜನಜೀವನಕ್ಕೆ ತೊಂದರೆ

ಕೊಡುತ್ತಿರಲಿಲ್ಲ. ಕೊಳೆತು ನಾರುವ ದೇಹವನ್ನು ಇಷ್ಟೆಲ್ಲಾ ಉಪಚರಿಸಲು ಆಗುತ್ತಿರಲಿಲ್ಲ. ರಾತ್ರಿಯ ಕಹಿ ಅನುಭವಗಳು ಅಪನಂಬಿಕೆಯ ಗಂಡಸರು ಮತ್ತು ಹೆಂಗಳೆಯರು ಚೆಲುವನ ಬಗ್ಗೆ ಪಡುವ ಕನಸುಗಳು ಹಾಗೂ ಭಯ, ಇಸ್ತೆಬಾನ್‌ನ ಮೂಳೆಯೊಳಗಿನ ಕೊಬ್ಬು ಅವನ ವಿಧೇಯತೆ.... ಇದರಲ್ಲೆಲ್ಲಾ ನಿಜವಾದ ಸತ್ಯವಿದೆ.

ಹೀಗೆ ಎಲ್ಲರ ಪ್ರಶಂಸೆಗೂ ಪಾತ್ರವಾಗತಕ್ಕಂತಹ ಸುಂದರ ಸಮಾಧಿಯನ್ನ ಸ್ವೇಚ್ಛಾಚಾರದ ಚೆಲುವನಿಗೆ ಮಾಡಲು ಎಲ್ಲರೂ ಮನದಲ್ಲೇ ಮಗ್ಗಿ ಮಾಡುತ್ತಿದ್ದರು. ಹೆಂಗಳೆಯರೆಲ್ಲಾ ಊರು ಪರವೂರು ಅಲೆದಾಡಿ ಹೂವ ತರಲಾರಂಭಿಸಿದರು. ನೋಡ ಬಂದವರು ಮತ್ತೆ ಹೂವ ತಂದರು. ಹೂವಿನದ್ದೇ ರಾಶಿ. ನಡೆದಾಡಲಾಗದಷ್ಟು ಹೂವ ಹಾಸಿದರು. ಅಂತೂ ಚೆಲುವನನ್ನ ಕಡಲಿಗೆ ಕಳುಹಿಸಲು ಒಪ್ಪದಾದರು. ಅನಾಥನಿಗೆ ಹುಡುಕುವ ಹಾಗ ಚೆಲುವನಿಗೆ ಇದ್ದದ್ದರಲ್ಲೇ ಒಳ್ಳೆಯ ಅಪ್ಪ, ಅಮ್ಮ, ಚಿಕ್ಕಮ್ಮ, ಚಿಕ್ಕಪ್ಪ, ಸೋದರ ಸಂಬಂಧಿಗಳನ್ನ ಹುಡುಕಿದರು. ಹೀಗೆ ಆ ಊರವಾಸಿಗರೆಲ್ಲಾ ನೆಂಟರಿಷ್ಟರಾದರು. ಆಗಲೇ ದೂರದಲ್ಲಿ ನಾವಿಕರಾರೋ ರೋಧಿಸುವ ದನಿ ಕೇಳಿಸಿತು. ಹಡಗಿನ ಕೂವೆಮರಕ್ಕೆ ತನ್ನನ್ನ ತಾನು ಕಟ್ಟಿಕೊಂಡು ತನ್ನ ಪೂರ್ವಜರನ್ನ ನೆನೆಸಿಕೊಳ್ಳುವ ಕಟ್ಟುಕತೆ ಕೇಳಿಸಿತು. ಚೆಲುವನನ್ನ ಹೆಗಲ ಮೇಲೇರಿಸಿಕೊಳ್ಳಲು ಜನ ಜಗ್ಗಾಡ ತೊಡಗಿದರು. ಆಳ ಇಳಿಜಾರು ಬಂಡೆಯ ಪಕ್ಕದಲ್ಲಿ ಎಂತಹ ನಿರ್ಜನ ನೋಡಿ. ವಾತಾವರಣ ಎಷ್ಟೊಂದು ಶುಷ್ಕಗೊಂಡಿದೆ. ಕನಸುಗಳು ಕರಗತೊಡಗಿದವು. ಲಂಗರನ್ನ ತೆಗೆಯ ಬಯಸಿದರು. ಮುಂದೆ ಚೆಲುವ ಇಷ್ಟಪಟ್ಟರೆ ಮತ್ತೆ ಬರಬಹುದಲ್ಲಾ ಅನ್ನುವ ನಂಬುಗೆ. ಅಗೋ.... ಆ ಪ್ರಪಾತಕ್ಕೆ ಹಾಕಲು ದೇಹ ಸಾಗಲ್ಪಟ್ಟಿತು. ನಾವೆಲ್ಲಾ ಚಿರಾಯು ಗಳೆಂಬ ಸಂಕಲ್ಪ. ನಾಳೆಯಿಂದ ಎಲ್ಲವೂ ಬದಲಾಗುತ್ತದೆಯೆಂದೇ ಯೋಚಿಸ ತೊಡಗಿದರು. ಅವರ ಮನೆ ಮಠವೆಲ್ಲಾ ಚೆಲುವನಿಗಾಗುವ ಹಾಗೆ ಅಗಲ ಬಾಗಿಲು, ಎತ್ತರದ ಅಟ್ಟಣಿಗೆ. ಜಬರ್‌ದಸ್ತಿ. ಪಂಚಾಂಗದ ಕನಸು ಕಂಡರು. ಇಸ್ತೆಬಾನ್‌ನ ನೆನಪು ಪ್ರಯಾಣಿಸುವಾಗ ಅದು ಯಾವುದೇ ಅಡೆ ತಡೆಗಳಿಲ್ಲದೆ ಸರಾಗವಾಗಿ ಸಾಗಬೇಕಲ್ಲ! ಇದರಿಂದ ಮಹಾದಡ್ಡ ಸತ್ತ ಎಂದು ಗೊಣಗುಟ್ಟುವುದು ತಪ್ಪುತ್ತದೆಯಲ್ಲ! ಅಯ್ಯೋ ಪಾಪ! ಹೊಲಸು! ಅಸಹ್ಯ ಚೆಲುವ ಚೆನ್ನಾಗರಾಯ! ಕೊನೆಗೂ ಸತ್ತ. ಮನೆಗೆಲ್ಲಾ ಆನಂದ ಬಣ್ಣ ಬಳಿದರು. ನೆನಪು! ಇಸ್ತೆಬಾನ್‌ನ ನೆನಪು ಸದಾ ಹಸಿರಾಗಿರಬೇಕು.

ಬಂಡೆ ಬಡಿದು, ಕಾರಂಜಿ ತೆಗೆದು ಹೂಗಿಡ ನೆಡತೊಡಗಿದರು. ಮುಂದೆ ಆಳ ಕಡಲಲ್ಲಿರುವ ಹಡಗಿನ ಚಾಲಕರು, ನಾವಿಕರು ಈ ಪರಿಮಳದಿಂದ ಉಸಿರುಗಟ್ಟಬೇಕು. ಕ್ಯಾಪ್ಟನ್ ಸೇತುವೆಯ ಮೂಲಕ ಇಳಿದು ಬಂದು ತನ್ನ ಪದಕಗಳನ್ನೆಲ್ಲಾ ತೊಟ್ಟ ಸಮವಸ್ತ್ರದಲ್ಲಿ ಬಂದು ದಿಗಂತದ ಸಮತಟ್ಟಾದ ಭೂಶಿರದ ಕಡೆ ತೋರಿಸುತ್ತಾ ಹತ್ತುಹದಿನಾಲ್ಕು ಭಾಷೆಗಳಲ್ಲಿ ಮಾತನಾಡುತ್ತಾನೆ. ನಾಲ್ಕು ಮೂಲೆಗೂ ಕೇಳಿಸುತ್ತಾನೆ. ಅಗೋ ನೋಡಿ, ಸೂರ್ಯಕಾಂತಿಗೆ ಯಾವ ಕಡೆ ತಿರುಗಬೇಕೆಂದು ಗೊತ್ತಾಗುತ್ತಿಲ್ಲ. ಕಡಲ ತಳದಲ್ಲಿ ಮಲಗುವ ಗಾಳಿ ಹೋದ ಹಾಗಿದೆಯಲ್ಲ! ಎಂಥಹ ಪ್ರಾಶಾಂತ ಭೂಶಿರ... ಅದೇ ನೋಡಿ ನಮ್ಮ ಇಸ್ತೆಬಾನ್‌ನ ಹಳ್ಳಿ.

ಅನುವಾದ : ಬಿ. ಪುರಂದರ ಕೋಡಿಬೆಂಗ್ರೆ

ಕನಸುಗಳು ಬಾಡಿಗೆಗೆ

ಬೆಳಿಗ್ಗೆ ಒಂಬತ್ತು ಗಂಟೆಗೆ ನಾವು ಹವಾನಾದ ಹೋಟೆಲ್ ರಿವೇಕಾದ ಟೆರೇಸಿನ ಮೇಲೆ ಬ್ರೇಕ್‌ಫಾಸ್ಟ್ ಮಾಡುತ್ತ ಇದ್ದಾಗ ಎಲ್ಲಿಂದಲೊ ಒಂದು ಮಹಾ ಭಯಾನಕವಾದ ಅಲೆ ಬಂದು ಅಪ್ಪಳಿಸಿತು. ಪ್ರಶಾಂತವಾದ ಎಳೆಬಿಸಿಲ ಮುಂಜಾನೆಯಲ್ಲೂ ಏಕಾಏಕಿ ಬಂದ ಆ ಅಲೆ ಸಮುದ್ರದ ಮುಂಭಾಗದಲ್ಲಿ ಹೋಗುತ್ತಿದ್ದ ಕಾರುಗಳನ್ನ ಪಲ್ಟಿಹೊಡೆಸಿತು. ನಿಂತಿದ್ದ ಕಾರುಗಳನ್ನು ಎತ್ತಿ ಬಿಸಾಡಿತು. ಒಂದು ಕಾರು ಧಡಾರನೆ ಹೋಟೆಲ ಗೋಡೆಗೆ ಬಡಿದು ಬಿತ್ತು. ಡೈನಮೆಂಟ್ ಸಿಡಿದಂತೆ ನಮ್ಮ ಹೋಟೆಲ ಇಪ್ಪತ್ತು ಮಹಡಿಗಳಲ್ಲು ಭೀತಿ ತಲ್ಲಣ ಆವರಿಸಿತು. ಗಾಜು ಒಡೆದವು. ಗಿರಾಕಿಗಳು ಮುರಿದ ಕುರ್ಚಿ ಟೇಬಲ್ಲುಗಳಂತೆ ಬಿದ್ದರು. ಗಾಜಿನ ಸುರಿಮಳೆಯಲ್ಲಿ ಕೆಲವರು ಗಾಯಗೊಂಡರು. ಅದು ದೈತ್ಯಾಕಾರದ ಭರತದ ಅಲೆ ಇರಬೇಕು. ಒಂದು ಎತ್ತರದ ಗೋಡೆ ಹೋಟೆಲನ್ನು ಸಮುದ್ರದಿಂದ ರಕ್ಷಿಸಲೆಂದೆ ಇತ್ತು. ಆದರೂ ಆ ದೈತ್ಯ ಅಲೆ ಹೋಟೆಲಿನ ಗಾಜಿನ ಲಾಟಿಗೆ ನುಗ್ಗಿ ಧ್ವಂಸ ಮಾಡಿತ್ತು.

ಕ್ಯೂಬಾದ ಸ್ವಯಂ ಸೇವಕರು ಫೈರ್ ಬ್ರಿಗೇಡ್‌ನವರ ಸಹಾಯದಿಂದ ಐದಾರು ಗಂಟೆಯಲ್ಲಿ ಎಲ್ಲವನ್ನು ಗುಡಿಸಿ ಸ್ವಚ್ಛಗೊಳಿಸಿದರು. ಸಮುದ್ರಕ್ಕೆ ತೆರೆದ ಹೋಟೆಲ ಬಾಗಿಲು ಮುಚ್ಚಲಾಯಿತು. ಮತ್ತೆಲ್ಲ ಯಥಾಸ್ಥಿತಿಗೆ ಬಂತು ಇಡಿ ಬೆಳಗ್ಗೆ ಯಾರೂ

ಗೋಡೆಗೆ ಬಡಿದು ಬಿದ್ದ ಆ ಕಾರಿನ ಕಡೆ ಗಮನ ಕೊಟ್ಟೆ ಇರಲಿಲ್ಲ. ಕಡೆಗೆ ಕ್ರೇನಿನ ಸಹಾಯಕರಿಂದ ಅದನ್ನ ಎತ್ತುವಾಗ ಅದರಲ್ಲಿದ್ದ ಹೆಂಗಸಿನ ದೇಹ ಪತ್ತೆಯಾಯಿತು. ಸೀಟ್‌ಬೆಲ್ಟ್ ಕಟ್ಟಿಕೊಂಡು ಕೂತಲ್ಲೇ ಅವಳ ಎಲುಬುಗಳೆಲ್ಲ ಪುಡಿಯಾಗಿ ಹೋಗಿದ್ದವು. ಮುಖ ವಿಕಾರವಾಗಿ ಗುರುತು ಸಿಗದಂತಾಗಿತ್ತು. ಬಟ್ಟೆ ಬೂಟು ಹರಿದುಹೋಗಿದ್ದವು. ಆದರೆ ಅವಳ ಬೆರಳ ಉಂಗುರ ಹಾಗೇ ಇತ್ತು. ಆ ಸರ್ಪಾಕಾರದ ಉಂಗುರಕ್ಕೆ ಪಚ್ಚೆ ಕಣ್ಣುಗಳಿದ್ದವು. ಅವಳು ಹೊಸ ಪೋರ್ಚುಗೀಸ್ ರಾಯಭಾರಿ ಮತ್ತು ಅವನ ಹೆಂಡತಿಯ ಮನೆಗೆಲಸದವಳೆಂದು ಪೋಲಿಸರು ಕಡೆಗೆ ತೀರ್ಮಾನಿಸಿದರು. ಅವಳು ಅವರೊಡನೆ ಬಂದು ಬರಿ ಹದಿನೈದು ದಿನವಾಗಿತ್ತು. ಅವರ ಹೊಸಕಾರಿನಲ್ಲಿ ಮಾರ್ಕೆಟ್ಟಿಗೆ ಹೋಗಲಿದ್ದಳು. ಅವಳ ಹೆಸರು ಕೇಳಿ ನನಗೇನೂ ಅನ್ನಿಸಲಿಲ್ಲ, ಆದರೆ ಪಚ್ಚೆ ಕಣ್ಣುಗಳ ಸರ್ಪಾಕಾರದ ಆ ಉಂಗುರ ನನಗೆ ಗುಂಗು ಹಿಡಿಸಿತು. ದುರಾದೃಷ್ಟಕ್ಕೆ ಅವಳು ಯಾವ ಬೆರಳಿಗೆ ಆ ಉಂಗುರ ಹಾಕಿಕೊಂಡಿದ್ದಳು ಎಂಬುದನ್ನ ಪತ್ತೆ ಮಾಡಲು ನನಗೆ ಆಗಲೆ ಇಲ್ಲ.

ಅದೊಂದು ವಿಚಿತ್ರ ಸಂಗತಿ. ಈ ಹೆಂಗಸು ಎಲ್ಲೊ ನನ್ನ ಪರಿಚಯದವಳು, ನಾನು ಎಂದೂ ಮರೆಯಲಾರಂದಥವಳು, ಅವಳ ನಿಜವಾದ ಹೆಸರು ಗೊತ್ತಿಲ್ಲದಿದ್ದರೂ ಅಷ್ಟೆ ಅನಿಸಿತು. ಆ ನನ್ನ ಪರಿಚಯದ ಹೆಂಗಸೂ ತನ್ನ ಬಲಗೈನ ತೋರುಬೆರಳಲ್ಲಿ ಪಚ್ಚೆಕಣ್ಣುಗಳ ಸರ್ಪಾಕಾರದ ಉಂಗುರ ಹಾಕಿಕೊಂಡಿದ್ದಳು. ಅವಳನ್ನ ನಾನು ೪೬ ವರ್ಷಗಳ ಹಿಂದೆ ವಿಯೆನ್ನಾದ ರಸ್ತೆಬದಿ ಹೋಟೆಲಲ್ಲಿ ಕಂಡಿದ್ದೆ. ಲ್ಯಾಟಿನ್ ಅಮೆರಿಕನ್ ವಿದ್ಯಾರ್ಥಿಗಳು ಅಲ್ಲಿಗೆ ಬರುತ್ತಿದ್ದರು. ಅವಳು ಸಾಸೇಜು, ಬೆಂದ ಆಲೂಗಡ್ಡೆ ತಿನ್ನುತ್ತ ಬ್ಯಾರೆಲ್‌ನಿಂದಲೆ ಬಿಯರ್ ಕುಡಿಯುತ್ತ ಕೂತಿದ್ದಳು. ಅವತ್ತು ಮುಂಜಾನೆಯಷ್ಟೆ ನಾನು ರೋಂನಿಂದ ಬಂದಿದ್ದೆ. ಅಪೇರಾದ ಹಾಡುಗಾರಳಂತಿದ್ದ ಅವಳ ಉಡುಗೆ ತೊಡುಗೆ, ಅವಳ ಬೆರಳಲ್ಲಿದ್ದ ಆ ಸರ್ಪಾಕಾರದ ಇಜಿಪ್ಶಿಯನ್ ಉಂಗುರ ಎಲ್ಲ ಈಗಲೂ ನೆನಪಿಗೆ ಬರುತ್ತಿವೆ. ಒಂದು ಉದ್ದ ಮೇಜಿನ ಮುಂದೆ ಅವಳು ಕೂತಿದ್ದಳು. ಸರಿಯಾಗಿ ಬರದ ಸ್ಪಾನಿಷ್ ಭಾಷೆಯಲ್ಲಿ ಮಾತಾಡುತ್ತಿದ್ದಳು. ಇವಳೆಲ್ಲೊ ಆಸ್ಟ್ರಿಯಾದವಳಿರಬೇಕು ಅಂದು ಕೊಂಡೆ. ಅದರವಳು ಹುಟ್ಟಿದ್ದು ಕೊಲಂಬಿಯಾದಲ್ಲಿ, ಯುದ್ಧಗಳ ಮಧ್ಯೆ ಅವಳು ಸಂಗೀತ ಕಲಿಯಲು ಆಸ್ಟ್ರಿಯಾಕ್ಕೆ ಹೋಗಿ ಬಂದಿದ್ದಳು

ಎಂದು ತಿಳಿಯಿತು. ಅವಳಿಗಾಗ ಮೂವತ್ತು ವರ್ಷ ಇದ್ದಿರಬಹುದು. ತನ್ನ ವಯಸ್ಸಿಗಿಂತ ಹೆಚ್ಚು ಮುದಿಯಾಗಿದ್ದಳು. ಆದರೂ ಅವಳಲ್ಲಿ ಅದೇನೋ ಒಂದು ಮಾಂತ್ರಿಕ ಸೆಳೆತವಿತ್ತು. ನಾನು ನೋಡಿದ ಅತ್ಯಂತ ಭಯಾನಕ ವ್ಯಕ್ತಿ ಅಂದರೆ ಅವಳೆ.

❄ ❄ ❄

ಅದು ನಲವತ್ತರ ದಶಕದ ಕೊನೆ ಭಾಗ. ಪ್ರಾಚೀನಕಾಲದ ವೈಭವದ ನಗರವಾದ ವಿಯೆನ್ನಾ ಇತಿಹಾಸದ ದಾಳಿಗೆ ಸಿಕ್ಕು ಮೂಲೆಹಿಡಿದ ಪ್ರಾಂತೀಯ ರಾಜಧಾನಿಯಾಗಿ ಉಳಿದಿತ್ತು. ಎರಡನೆ ಮಹಾಯುದ್ಧ ಬಿಟ್ಟುಹೋದ ಒಗ್ಗೂಡಲಾರದ ಎರಡು ಜಗತ್ತುಗಳ ನಡುವೆ ನೆಲೆನಿಂತ ವಿಯೆನ್ನಾ ಈಗ ಕಾಳಸಂತೆಕೋರರ, ಅಂತರಾಷ್ಟ್ರೀಯ ಬೇಹುಗಾರರ ಠಾವಾಗಿತ್ತು. ಈ ಅಲೆಮಾರಿ ದೇಶಪ್ರೇಮಿ ಹೆಂಗಸಿಗೆ ಆ ಸಸ್ತಾ ರಸ್ತೆಬದಿಯ ಓದುವ ಹುಡುಗರ ಹೋಟೆಲು ಒಂದು ಬಗೆಯ ರಹಸ್ಯ ಆಶ್ರಯವಾಗಿತ್ತು. ಆ ಇಡಿ ಹೋಟೆಲನ್ನೆ ಕೊಳ್ಳುವಷ್ಟು ಸ್ಥಿತಿವಂತಳಾಗಿದ್ದರೂ, ತನ್ನ ಬೇರುಗಳ ಸೆಳೆತದಿಂದಾಗಿ ಆ ಜಾಗದಲ್ಲಿ ಉಳಿದುಕೊಂಡಿದ್ದಳು. ಅವಳು ತನ್ನ ನಿಜವಾದ ಹೆಸರನ್ನು ನಮಗೆ ಯಾವತ್ತೂ ಹೇಳಲಿಲ್ಲ. ಲ್ಯಾಟಿನ್ ಅಮೆರಿಕನ್ ಕಾಲೇಜು ಹುಡುಗರು ಅವಳಿಗೆ 'ಫ್ರಾ ಫ್ರೀಡಾ' ಎಂಬ ಜರ್ಮನ್ ಹೆಸರು ಕಟ್ಟಿದ್ದರು. ನಾನವಳಿಗೆ ಪರಿಚಯವಾದ ಕೂಡಲೆ ವಿಚಾರಿಸಿದ್ದೆ ಕೊಲಂಬಿಯದ ಕ್ವಿಂಡಿಯೊ ಘಟ್ಟಗಳಿಂದ ಇಷ್ಟು ದೂರ ಅವಳು ಬಂದದ್ದು ಹೇಗೆ ಅಂತ. ಅದಕ್ಕವಳು ತಣ್ಣಗೆ ಉತ್ತರಿಸಿದ್ದಳು. "ಕನಸು ಕಾಣಲು ನನ್ನನ್ನು ನಾನೆ ಬಾಡಿಗೆಗೆ ಕೊಟ್ಟು ಕೊಳ್ಳುತ್ತೇನೆ."

ಅದೆ ಅವಳ ಕಸುಬು. ಹಳೆ ಕಾಲ್ಡಾಸ್‌ನ ಹನ್ನೊಂದು ಮಕ್ಕಳ ತಂದೆಯಾಗಿದ್ದ ಸಿರಿವಂತ ಅಂಗಡಿಕಾರನೊಬ್ಬನ ಮೂರನೆ ಮಗಳವಳು. ಮಾತು ಬರುವುದಕ್ಕೆ ಮೊದಲೆ ಅವಳು ತನ್ನ ಕನಸುಗಳನ್ನೆಲ್ಲ ಬೆಳಗಿನ ತಿಂಡಿಗೂ ಮುಂಚೆ ಹೇಳಿಕೊಂಡು ಬಿಡುವ ಅಭ್ಯಾಸ ಬೆಳೆಸಿಕೊಂಡಿದ್ದಳು. ಮುಂದಾಗುವುದನ್ನೂ ಕಾಣಬಲ್ಲ ಅದ್ಭುತ ಶಕ್ತಿ ಅವಳಿಗೆ ಒಲಿದಿತ್ತು. ಏಳು ವರ್ಷದವಳಾದಾಗ ಅವಳಿಗೆ ಸಮುದ್ರದ ಸೆಳೆತದಲ್ಲಿ ತನ್ನ ತಮ್ಮ ಕೊಚ್ಚಿಹೋದಂತೆ ಕನಸು ಬಿದ್ದಿತ್ತು. ಅವಳ ತಾಯಿ ಭಯ ಭೀತಳಾಗಿ ತನ್ನ ಮಗನಿಗೆ ಈಜಾಡಲು ಬಿಟ್ಟೇ ಇರಲಿಲ್ಲ. ಆದರೆ ಫ್ರಾ ಫ್ರೀಡಾ ತನ್ನ ಮುಂಗಾಣ್ಕೆಗಳ ಅರ್ಥ

ಹೇಳುವ ಒಂದು ಪದ್ಧತಿಯನ್ನೂ ರೂಢಿಸಿಕೊಂಡು ಬಿಟ್ಟಿದ್ದಳು. ಅವಳು ಹೇಳಿದ್ದಳು: "ಆ ಕನಸಿನ ಅರ್ಥ ಏನೂ ಅಂದ್ರೆ ಅವನು ಮುಳುಗಿ ಹೋಗ್ತಾನೆ ಅಂತಲ್ಲ, ಆದ್ರೆ ಅವನು ಸಿಹಿತಿಂಡಿ ತಿನ್ನಬಾರದು ಅಂತ ಅಷ್ಟೆ" ಈ ವ್ಯಾಖ್ಯಾನ ಆ ಐದು ವರ್ಷದ ಹುಡುಗನ ಪಾಲಿಗೆ ಭಯಂಕರ ಶಿಕ್ಷೆಯೆ ಆಯಿತು. ಅವನಿಗೆ ಭಾನುವಾರದ ಸಿಹಿತಿಂಡಿಗಳನ್ನ ಬಿಟ್ಟರೆ ಜೀವನದಲ್ಲಿ ಇನ್ನೇನಿದೆ ಅನ್ನಿಸಿತು. ಆದರೆ ಅವರ ತಾಯಿಗೆ ಮಗಳ ದಿವ್ಯಜ್ಞಾನದಲ್ಲಿ ಭಾರಿ ವಿಶ್ವಾಸ. ಅವಳು ಮಗನಿಗೆ ಭಾರಿ ಕಟ್ಟುನಿಟ್ಟು ಮಾಡಿಬಿಟ್ಟಳು. ದುರಾದೃಷ್ಟವಶಾತ್, ಒಂದುದಿನ ಆ ಹುಡುಗ ರಹಸ್ಯವಾಗಿ ತಿನ್ನುತ್ತಿದ್ದ 'ಗಾಬ್‌ಸ್ಟಾಪರ್' ಗಂಟಲಲ್ಲಿ ಸಿಕ್ಕಿಕೊಂಡು ಉಸಿರುಕಟ್ಟಿ ಸತ್ತೇಹೋದ.

ಫ್ರಾ ಫ್ರೀಡಾಗೆ ಗೊತ್ತೆ ಇರಲಿಲ್ಲ, ತನ್ನ ಕನಸು ಕಾಣುವ ಕಸುಬಿನಿಂದಲೂ ಜೀವನ ಮಾಡಬಹುದು ಅಂತ. ವಿಯೆನ್ನಾದ ಒಂದು ಕೆಟ್ಟ ಚಳಿಗಾಲದಲ್ಲಿ, ಬದುಕು ರಸ್ತೆಗೆ ತಳ್ಳಿದಾಗ, ಅವಳು ಒಂದು ಮನೆ ಬಾಗಿಲು ತಟ್ಟಿ ಕೆಲಸ ಕೇಳಿದಳು. ಏನು ಕೆಲಸ ಬರತ್ತೆ ಎಂದು ಮನೆಯವರು ಕೇಳಿದಾಗ 'ನನಗೆ ಕನಸುಕಾಣಲು ಬರತ್ತೆ' ಅಂದಳು. ಸ್ವಲ್ಪ ವಿವರಿಸುತ್ತಿದ್ದಂತೆಯೆ ಆ ಮನೆಯೊಡತಿ ಅವಳಿಗೆ ಇರಲು ಒಂದು ಕೋಣೆ, ಮೂರು ಹೊತ್ತು ಊಟ, ಕೈಖರ್ಚಿಗೆ ಒಂದಿಷ್ಟು ಹಣ ಕೊಡಲು ಒಪ್ಪಿ ಒಳಗೆ ಕರೆದುಕೊಂಡಳು, ಬೆಳಗ್ಗೆ ಬ್ರೆಕ್‌ಫಾಸ್ಟ್ ಟೇಬಲ್ಲಿಗೆ ಬಂದರೆ ಸಾಕು ಮನೆಮಂದಿಯೆಲ್ಲ ತಮ್ಮ ತಮ್ಮ ಕನಸು ಹೇಳಿ, ಅದರರ್ಥ ಕೇಳಿ ತಮ್ಮ ಮುಂದಿನ ಗತಿಸ್ಥಿತಿಯನ್ನು ತಿಳಿದುಕೊಳ್ಳುತ್ತಿದ್ದರು. ತಂದೆ ಬರುವ ಬಡ್ಡಿಯ ಮೇಲೆ ಬದುಕುವವ; ತಾಯಿ ಸಂಗೀತ ಪ್ರೇಮಿ, ಹಸನ್ಮುಖಿ ಹೆಂಗಸು; ಹನ್ನೊಂದು ಮತ್ತು ಒಂಬತ್ತು ವರ್ಷ ವಯಸ್ಸಿನ ಇಬ್ಬರು ಮಕ್ಕಳು. ಎಲ್ಲರೂ ಧಾರ್ಮಿಕ ಮನೋಭಾವದವರು ಮತ್ತು ಮೂಢನಂಬಿಕೆಗಳಿಗೆ ಪಕ್ಕಾಗುವಂಥವರು. ಆದ್ದರಿಂದ ಫ್ರಾ ಫ್ರೀಡಾ ತಮ್ಮ ಮನೆಗೆ ಬಂದದ್ದಕ್ಕೆ ಅವರಿಗೆಲ್ಲ ಖುಷಿಯಾಯಿತು. ಅವರ ಒಂದೇ ಒಂದು ಬೇಡಿಕೆ ಅಂದರೆ ಅವಳು ತನ್ನ ಕನಸುಗಳ ಮೂಲಕ ಅವರೆಲ್ಲರ ಭವಿಷ್ಯವನ್ನು ಹೇಳಬೇಕು ಎಂಬುದು.

ಯುದ್ಧದ ವರ್ಷಗಳಲ್ಲಂತು ಅವಳ ಭವಿಷ್ಯವಾಣಿ ಭಾರಿ ಕೆಲಸಮಾಡಿತು. ವಾಸ್ತವ ಬದುಕು ಹಳವಂಡಗಳಿಗಿಂತ ಭೀಕರವಾಗಿದ್ದ ದಿನಗಳವು. ಬ್ರೆಕ್ ಫಾಸ್ಟ್ ಟೇಬಲ್ಲಿನಲ್ಲಿ ಅವಳೇ ತೀರ್ಮಾನಿಸಿಬಿಡುತ್ತಿದ್ದಳು, ಅವತ್ತು ಯಾರ್ಯಾರು ಏನೇನು ಮಾಡಬೇಕು

ಎಂಬುದನ್ನು, ಬರಬರುತ್ತ ಅವಳ ಭವಿಷ್ಯವಾಣಿ ಒಂದು ಬಗೆಯ ಅಧಿಕಾರವಾಣಿಯಾಗಿ ಪರಿಣಮಿಸಿತು. ಅವಳೆ ಇಡಿ ಕುಟುಂಬವನ್ನ ಆಳ ತೊಡಗಿದಳು. ಅವಳು ಏಳು ಅಂದರೆ ಏಳಬೇಕು ಕೂಡು ಅಂದರೆ ಕೂಡಬೇಕು ಎನ್ನುವಂತಾಯಿತು. ನಾನು ವಿಯೆನ್ನಾಗೆ ಹೋಗುವುದಕ್ಕೆ ಸ್ವಲ್ಪ ಮುಂಚೆಯಷ್ಟೆ ಆ ಕುಟುಂಬದ ಯಜಮಾನ ಸತ್ತು ಹೋಗಿದ್ದ. ಫ್ರಾ ಫ್ರೀಡಾಗೆ ಆಸ್ತಿಯ ಒಂದು ಪಾಲನ್ನು ಬಿಟ್ಟಿದ್ದಲ್ಲದೆ, ಅವಳಿಗೆ ಎಲ್ಲಿವರೆಗೂ ಕನಸುಕಾಣಲು ಶಕ್ತಿ ಇರುತ್ತದೋ ಅಲ್ಲಿವರೆಗೂ ತನ್ನ ಕುಟುಂಬಕ್ಕೆ ಅವಳ ಕನಸುಗಳು ಮೀಸಲಾಗಬೇಕು ಎಂದು ತಾಕೀತೂ ಮಾಡಿದ್ದ ವಿಲ್ಲಿನಲ್ಲಿ.

ನಾನು ವಿಯೆನ್ನಾದಲ್ಲಿ ಒಂದು ತಿಂಗಳಿದ್ದೆ. ಯಾವತ್ತೂ ಬರದ ಹಣಕ್ಕಾಗಿ ಕಾಯುವ, ಕೈ ಬಿಟ್ಟು ಖರ್ಚುಮಾಡಲು ಹೆದರುವ ಕಾಲೇಜು ಹುಡುಗನಾಗಿದ್ದೆ. ಆ ದರಿದ್ರ ದಿನಗಳಲ್ಲಿ ಫ್ರಾ ಫ್ರೀಡಾ ನಮ್ಮ ಸಸ್ತಾ ಹೋಟೆಲಿಗೆ ಬಂದರೆ ಮುಗಿಯಿತು, ನಮಗೆಲ್ಲ ಹಬ್ಬವೆ ಹಬ್ಬ. ಒಂದು ರಾತ್ರಿ, ಬಿಯರ್ ಕುಡಿದ ಮತ್ತಿನಲ್ಲಿ, ಅವಳು ನನ್ನ ಕಿವಿಯಲ್ಲಿ ಪಿಸುಗುಟ್ಟಿದ್ದನ್ನ ಮರೆಯಲಾರೆ.

"ನಾನಿವತ್ತು ಇಲ್ಲಿಗ್ಯಾಕೆ ಬಂದೆ ಗೊತ್ತಾ? ನಿನ್ನೆ ರಾತ್ರಿ ನೀನು ನನ್ನ ಕನಸ್ನಲ್ಲಿ ಬಂದಿದ್ದಿ ಅಂತ ಹೇಳೋಕೆ ಬಂದೆ. ನೀನು ಇವತ್ತೆ ವಿಯೆನ್ನಾ ಬಿಟ್ಟು ಹೋಗಬೇಕು. ಕನಿಷ್ಟ ಐದು ವರ್ಷವಾದರೂ ಈ ಕಡೆ ಮುಖ ಹಾಕದಂಗಿರಬೇಕು" ಅಂದಳು. ಬಹಳ ಗಂಭೀರವಾಗಿ, ಎಚ್ಚರಿಕೆ ಥರ ಹೇಳಿದಳು. ನಾನು ಅವತ್ತೆ ರಾತ್ರಿ ಟ್ರೈನ್ ಹತ್ತಿ ರೋಂಗೆ ಬಂದೆ. ಅವಳ ಭವಿಷ್ಯ ಕೇಳಿ ತತ್ತರಿಸಿಹೋಗಿದ್ದೆ. ಇವತ್ತಿಗೂ ಯಾವುದೋ ದೊಡ್ಡ ಅವಘಡದಿಂದ ಪಾರಾದೆ ಅನ್ನೊ ನಂಬಿಕೆ ಇದೆ ನನಗೆ. ಅವತ್ತಿನಿಂದ ಇವತ್ತಿನವರೆಗೂ ಮತ್ತೆ ನಾನು ವಿಯೆನ್ನಾಕ್ಕೆ ಕಾಲಿಟ್ಟಿಲ್ಲ.

❄ ❄ ❄

ಹವಾನಾದ ಘಟನೆಗೆ ಮುಂಚೆ ಒಂದೆ ಒಂದು ಸಲ ಫ್ರಾ ಫ್ರೀಡಾ ಬಾರ್ಸಿಲೋನಾದಲ್ಲಿ ಸಿಕ್ಕಿದ್ದಳು. ಆ ಅನಿರೀಕ್ಷಿತ ಭೇಟಿ ನನ್ನ ಪಾಲಿಗ ಬಹಳ ನಿಗೂಢವಾದದ್ದು. ಸಿವಿಲ್ ವಾರ್‌ನಂತರ ಪಾಬ್ಲೊ ನೆರೂಡಾ ಅವರು ಮೊದಲ ಬಾರಿಗೆ ಸ್ಪಾನಿಷ್ ನೆಲದಲ್ಲಿ ಕಾಲಿಟ್ಟ ದಿನ ಅದು. ಚಿಲಿಯ ವಾಲ್ಪರೈಸೊಗೆ ಹೊರಟವರು

ಹಡುಗು ಹತ್ತುವ ಮುಂಚೆ ಅಲ್ಲಿ ಹಾಲ್ಟ್ ಆಗಿದ್ದರು. ಇಡಿ ಮುಂಜಾನೆ ನೆರೂಡಾ ನಮ್ಮ ಜೊತೆ ಇದ್ದರು. ಒಂದು ಹಳೆ ಪುಸ್ತಕದ ಅಂಗಡಿಯಲ್ಲಿ ಪುಸ್ತಕಗಳ ರಾಶಿ ಕೆದಕುತ್ತ ಕಾಲಕಳೆದರು. ರಂಗೂನಿನಲ್ಲಿ ಚಿಲಿಯ ಕಾನ್ಸುಲೇಟ್ ಆದವರಿಗೆ ಸಿಗುವ ಎರಡು ತಿಂಗಳ ಸಂಬಳದಷ್ಟು ದುಡ್ಡು ಕೊಟ್ಟು ಒಂದು ಹಳೆಯ ರೊಟ್ಟುಪಟ್ಟು ಹರಿದು ಹೋಗಿದ್ದ ಪುಸ್ತಕ ಕೊಂಡರು. ಕಾಲುನೋವಾಗಿರುವ ಆನೆ ಥರ ಕುಂಟುತ್ತ, ಕಂಡಕಂಡ ವಸ್ತುವಿನ ಅಂತರಂಗ ಒಳರಚನೆ ಬಗ್ಗೆ ಮಗು ಥರ ಕುತೂಹಲ ತೋರಿಸುತ್ತಾ ಅಡ್ಡಾಡಿದರು. ಇಡಿ ಜಗತ್ತೆ ಅವರಿಗೆ ಒಂದು ದೈತ್ಯಾಕಾರದ ಗಡಿಯಾರದಂಥ ಆಟಿಗೆಯಾಗಿ ಕಾಣಿಸುತ್ತಾ ಇತ್ತು.

ನಮ್ಮ ಕಲ್ಪನೆಯ ರೆನೆಸಾನ್ಸ್‌ನ ಪೋಪ್‌ಗೆ ತೀರಾ ಹತ್ತಿರವಾಗಿ ಕಂಡರು ನೆರೂಡಾ. ಅದೆ ಹೊಟ್ಟೆಬಾಕತನ, ಅದೆ ಸಭ್ಯತೆ ಎಲ್ಲ ಅದೆ.

ಎಂಥವರ ಜೊತೆಗಾದರೂ ಸರಿ, ಕಂಪನಿ ಕೊಡಕೆ ತಯಾರು, ಎಲ್ಲರನ್ನೂ ತಮ್ಮ ಅಧಿಕಾರವಾಣಿಯಲ್ಲಿ ಮುಳುಗಿಸಿಬಿಡೋಕೆ ತಯಾರು. ಅವರ ಪತ್ನಿ ಮೆಟಿಲ್ಡಾ ನೆರೂಡಾರ ಉಡುಪು ಗಲೀಜಾಗದಂತೆ ಅದರ ಮೇಲೊಂದು ಗವಸು ಕಟ್ಟಿದ್ದರು. ಅದು ರೆಸ್ಟರಾಂಟಿನ ನ್ಯಾಪ್‌ಕಿನ್ನಿಗಿಂತ, ಕ್ಷೌರದವನು ಹೊದಿಸುವ ಬಟ್ಟೆಯಂತಿತ್ತು. ಆದರೆ ಅವರು ಮೈಮೇಲೆ ಸಾರು ಸುರಿದು ಕೊಳ್ಳದಂತೆ ನೋಡಿಕೊಳ್ಳಲು ಇದ್ದದ್ದು ಅದೊಂದೆ ದಾರಿ. ಅವತ್ತು ನೆರೂಡಾ ಮೂರು ಇಡಿ ಏಡಿಗಳನ್ನ ಒಬ್ಬರೆ ತಿಂದರು. ಆಪರೇಷನ್ ಮಾಡುವ ಸರ್ಜನ್ನಿನಷ್ಟು ಹುಶಾರಾಗಿ ಅವನ್ನ ಕೊಯ್ದು ತಿನ್ನುತ್ತ ಬೇರೆಯವರ ತಟ್ಟೆಯಲ್ಲಿದ್ದ ತಿಂಡಿಗಳನ್ನ ಕಣ್ಣಲ್ಲೆ ನುಂಗುತ್ತ, ಕಡೆಗೆ ಹಸಿವು ಹಪಾಹಪಿ ತಡೆಯಲಾಗದೆ ಎಲ್ಲರ ತಟ್ಟೆಗಳಿಂದ ತೊಗೊಂಡು ತಿನ್ನುತ್ತ ಊಟಮಾಡಿದರು. ಅವರ ಹಪಾಹಪಿ ಒಂದು ಸಾಂಕ್ರಾಮಿಕದಂತೆ ಕಂಡು ಎಲ್ಲರ ತಟ್ಟೆಗಳಿಂದ ಗ್ಯಾಲಿಸಿಯದ ಚಿಪ್ಪುಮೀನು, ಕ್ಯಾಂಟೇಬ್ರಿಯದ ಶೀತವಲಯದ ಬಾತು, ಆ್ಯಲಿಕಾಂಟೆಯ ಸೀಗಡಿ, ಕೋಸ್ಟಾ ಬ್ರಾವಾದ ಕಠಾರಿಮೀನುಗಳನ್ನು ತೆಗೆತೆಗೆದುಕೊಂಡು ಅವರು ತಿನ್ನುವುದನ್ನೆ ಎಲ್ಲರೂ ನೋಡುತ್ತ ಕೂತರು. ಊಟದುದ್ದಕ್ಕೂ, ಥೇಟ್ ಫ್ರೆಂಚರ ಹಾಗೆ, ಪಾಕಶಾಸ್ತ್ರದ ಮಜಾಗಳ ಬಗ್ಗೆ, ಅದರಲ್ಲೂ ತಮಗೆ ಪ್ರಾಣಪ್ರಿಯವಾದ ಪುರಾತನ ಕಾಲದ ಚಿಲಿಯ ಚಿಪ್ಪುಮೀನಿನ ಬಗ್ಗೆ ಮಾತಾಡುತ್ತಲೆ ಇದ್ದರು. ಆಮೇಲೆ ಇದ್ದಕ್ಕಿದ್ದಂತೆ, ಊಟ ನಿಲ್ಲಿಸಿದ್ದೆ, ಏಡಿ

ಕೊಂಡಿ ಚಾಚುವಂತೆ ತಮ್ಮ ಕಿವಿಗಳನ್ನು ನಿಗುರಿಸಿ, ನನ್ನ ಕಿವಿಯಲ್ಲಿ ಪಿಸುಗುಟ್ಟಿದರು: "ಯಾರೋ ನನ್ನ ಬೆನ್ನ ಹಿಂದೆ ಕೂತುಕೊಂಡು ನನ್ನನ್ನ ನೋಡ್ತಾ ಇದ್ದಾರೆ."

ನಾನು ಅವರ ಹೆಗಲಿನಾಚೆಗೆ ದೃಷ್ಟಿ ಚಾಚಿದೆ. ನಿಜ, ಅವರ ಹಿಂದೆ, ಮೂರು ಟೇಬಲ್ಲುಗಳಾಚೆ, ಕೆನ್ನೀಲಿ ಬಣ್ಣದ ಸ್ಕಾರ್ಫು ಕಟ್ಟಿಕೊಂಡು, ಹಳೆ ಫೆಲ್ಟ್‌ಹ್ಯಾಟು ಹಾಕಿಕೊಂಡು ಯಾವುದೇ ಸಂಕೋಚವಿಲ್ಲದೆ ಕೂತಿದ್ದ ಹೆಂಗಸೊಬ್ಬಳು ನೆರೂಡಾರ ಮೇಲೆ ದೃಷ್ಟಿನೆಟ್ಟು ನಿಧಾನವಾಗಿ ಆಹಾರ ಜಗಿಯುತ್ತಿದ್ದಳು. ನನಗೆ ತಕ್ಷಣ ಅವಳ ಗುರ್ತುಹತ್ತಿತು. ಹೆಚ್ಚು ವಯಸ್ಸಾಗಿತ್ತು, ಕೊಂಚ ತೋರವಾಗಿದ್ದಳು ಆದರೂ ಅವಳ ಸರ್ಪಾಕಾರದ ಉಂಗುರ ಕಣ್ಣಿಗೆ ಬಿದ್ದಕೂಡಲೆ ಅದು ಅವಳೆ ಎಂದು ನಿಶ್ಚಿತವಾಯಿತು.

ಅವಳು ನೇಪಲ್ಸ್‌ನಿಂದ ನೆರೂಡಾರ ದೋಣಿಯಲ್ಲೆ ಬಂದಿದ್ದಳು. ಆದರೂ ಅವರು ಪರಸ್ಪರ ಭೇಟಿ ಆಗಿರಲಿಲ್ಲ. ಅವಳನ್ನ ಕಾಫಿ ಕುಡಿಯಲು ಕರೆದೆವು. ಅವಳು ತನ್ನ ಕನಸುಗಳನ್ನ ಹೇಳಿ ನಮ್ಮ ಕವಿಗಳನ್ನ ಖುಷಿ ಪಡಿಸಲಿ ಎಂದು ನಾನು ಹೇಳಿದೆ. ಆದರೆ ಕವಿಗಳು ಅದೆಲ್ಲ ಬೇಡ ಅಂದು ಬಿಟ್ಟರು. ಕನಸುಗಳನ್ನ ಭವಿಷ್ಯಕ್ಕೆ ತಾಳೆ ಹಾಕುವುದರಲ್ಲಿ ತಮಗೆ ನಂಬಿಕೆ ಇಲ್ಲ ಅಂದರು.

"ಅಂತೀಂದ್ರಿಯ ಶಕ್ತಿ ಕಾವ್ಯದಲ್ಲಿ ಮಾತ್ರ ಇದೆ" ಅಂದರು.

ಊಟದ ನಂತರ, ರ್‍ಯಾಂಬ್ಲಾಸ್ ಗುಂಟ ಹೋಗುತ್ತಿದ್ದಾಗ, ನಾನು ಫ್ರಾ ಫ್ರೀಡಾಳನ್ನ ಮಾತಿಗೆಳೆದೆ. ನಮ್ಮ ಹಳೆ ಪರಿಚಯಕ್ಕೆ ನೀರೆರೆಯುವುದು ನನ್ನ ಉದ್ದೇಶವಾಗಿತ್ತು. ಉಳಿದವರಿಗೆ ಕೇಳಿಸದಂತೆ ಮೆತ್ತಗೆ ಮಾತಾಡುತ್ತ ನಡೆದೆವು. ಅವಳು ತನ್ನ ಆಸ್ಟ್ರಿಯಾದ ಆಸ್ತಿ ಮಾರಿ, ಪೋರ್ಚುಗಲ್ಲಿನ ಪೋರ್ಟೊಗೆ ಮರಳಿ ಬಂದು, ಬಂಡೆಗುಡ್ಡದ ಮೇಲಿರುವ ಒಂದು ನಕಲಿ ಕೋಟೆಮನೆಯಲ್ಲಿ ಇರುವುದಾಗಿ ಹೇಳಿದಳು. ಆ ಎತ್ತರದ ಮನೆಯಿಂದ ಇಡಿ ಅಟ್ಲಾಂಟಿಕ್ ಮಹಾಸಾಗರ, ಅದರಾಚೆಗಿನ ಅಮೆರಿಕಾ ಎಲ್ಲಾ ಕಾಣುತ್ತದಂತೆ. ಅವಳು ಬಾಯಿ ಬಿಟ್ಟು ಹೇಳದಿದ್ದರೂ, ಕನಸಿನಿಂದ ಕನಸಿಗೆ ದಾಟುತ್ತ ಅವಳು, ತನ್ನ ವಿಯೆನ್ನಾದ ಯಜಮಾನನ ಆಸ್ತಿಯನ್ನೆಲ್ಲ ನುಂಗಿ ಹಾಕಿದ್ದಳು ಎಂಬುದು ಸ್ಪಷ್ಟವಾಯಿತು. ಅದನ್ನೆಲ್ಲ ಕೇಳಿ ನನಗೇನು ಖುಷಿಯಾಗಲಿಲ್ಲ. ನನಗೆ ಮೊದಲಿಂದಲೂ ಅವಳು ತನ್ನ ಅವಶ್ಯಕತೆಗಳ ಪೂರೈಕೆಗಾಗಿ ತನ್ನ ಕನಸುಗಳನ್ನೆ ಒಂದು ಕೃತ್ರಿಮ

ತಂತ್ರವನ್ನಾಗಿ ಬಳಸುತ್ತಿದ್ದಾಳೆ ಅನ್ನಿಸಿತ್ತು. ಅದನ್ನ ಅವಳಿಗೆ ಹೇಳಿಯೂ ಬಿಟ್ಟೆ.

ಅವಳು ಮುಖಮುರಿದು ನಕ್ಕಳು. "ಇನ್ನೂ ಆ ಭಂಡತನ ಬಿಟ್ಟೇ ಇಲ್ಲ ನೀನು" ಅಂದಳು. ನೆರೂಡಾ ಹಕ್ಕಿ ಪೇಟೆಯಲ್ಲಿ ಗಿಣಿಗಳೊಡನೆ ಚಿಲಿಯ ಆಡುಮಾತಿನಲ್ಲಿ ಹರಟುತ್ತ ನಿಂತು ಬಿಟ್ಟಿದ್ದರು. ಅವರು ಬರಲೆಂದು ನಮ್ಮ ಗುಂಪಿನವರೆಲ್ಲ ಕಾಯುತ್ತಾ ನಿಂತಿದ್ದೆವು. ನಮ್ಮ ಮಾತು ಮುಂದುವರಿದ ಕೂಡಲೆ ಫ್ರಾ ಫ್ರೀಡಾ ವಿಷಯ ಬದಲಾಯಿಸಿದಳು.

"ಅಂದಹಾಗೆ ಈಗ ಬೇಕಾದ್ರೆ ನೀನು ವಿಯೆನ್ನಾಗೆ ವಾಪಸ್ ಹೋಗಬಹುದು" ಅವಾಗಲೆ ನನಗೆ ಹೊಳೆದದ್ದು ನಾವು ಭೇಟಿಯಾಗಿ ಹದಿಮೂರು ವರ್ಷ ಆಯಿತು ಅಂತ.

"ಒಂದು ಪಕ್ಷ ನಿನ್ನ ಕನಸುಗಳು ಸುಳ್ಳೂಂತಾದರೂ, ನಾನಿನ್ನು ಅಲ್ಲಿಗೆ ಯಾವತ್ತೂ ವಾಪಸ್ ಹೋಗಲ್ಲ" ಅಂದೆ.

ಮೂರು ಘಂಟೆ ಹೊತ್ತಿಗೆ ನಾವು ಪರಸ್ಪರ ವಿದಾಯ ಹೇಳಿದೆವು. ನೆರೂಡಾರನ್ನ ನಮ್ಮ ಮನೆಗೆ ಕರೆದುಕೊಂಡು ಹೋಗಬೇಕಿತ್ತು. ಅಲ್ಲಿ ಅವರು ತಮ್ಮ ಮಧ್ಯಾಹ್ನದ ಪುಣ್ಯದ ನಿದ್ರೆ ತೆಗೆಯುವವರಿದ್ದರು. ಹಲವಾರು ವಿಧಿವತ್ತಾದ ಸಿದ್ಧತೆಗಳ ನಂತರ ಅವರು ನಿದ್ದೆ ಹೋದರು. ಅದೆಲ್ಲ ನನಗೆ ಜಪಾನಿನ 'ಚಹಾವಿಧಿ'ಯ ಹಾಗೆ ಕಂಡಿತು. ಕೆಲವು ಕಿಟಕಿ ತೆರೆಯಬೇಕು. ಉಳಿದವನ್ನ ಮುಚ್ಚಬೇಕು. ಕೋಣೆಯಲ್ಲಿ ಒಂದು ನಿಶ್ಚಿತ ಉಷ್ಣಾಂಶ ಇರಬೇಕು. ಯಾವುದೋ ಒಂದು ದಿಕ್ಕಿನಿಂದ ಬರುವ ಒಂದು ಬಗೆಯ ಬೆಳಕು ಮಾತ್ರ ಸಹನೀಯ. ಆ ಮೇಲೆ, ಎಲ್ಲಕ್ಕಿಂತ ಮುಖ್ಯವಾಗಿ ಅಪ್ಪಟ ಪ್ರಶಾಂತ ಮೌನ ಆವರಿಸಿರಬೇಕು. ನೆರೂಡಾ ತಕ್ಷಣ ನಿದ್ದೆ ಹೋದರು. ಹತ್ತೆ ನಿಮಿಷ ಅವರು ಮಲಗಿದ್ದು. ಮಕ್ಕಳ ಹಾಗೆ ಇದ್ದಕ್ಕಿದ್ದಂತೆ ಎದ್ದು ಪಡಸಾಲೆಗೆ ಬಂದಾಗ ಅವರ ಮುಖ ಉಲ್ಲಸಿತವಾಗಿತ್ತು. ದಿಂಬಿನ ಹೆಸರುಬಿಲ್ಲೆ ಅವರ ಕೆನ್ನೆಯ ಮೇಲೆ ಮುದ್ರೆ ಒತ್ತಿತ್ತು.

"ಆ ಕನಸು ಕಾಣುವ ಹೆಂಗಸು ನನ್ನ ಕನಸಲ್ಲಿ ಬಂದಿದ್ದಳು" ಅಂದರು. ತಮ್ಮ ಕನಸನ್ನು ಹೇಳುವಂತೆ ಮೆಟಿಲ್ಡಾ ಅವರನ್ನು ಒತ್ತಾಯಿಸಿದರು.

"ಅವಳು ನನ್ನ ಬಗ್ಗೆ ಕನಸು ಕಾಣ್ತಾ ಇರೋದು ನಂಗೆ ಕನಸಲ್ಲಿ ಕಾಣ್ತು" ಅಂದರು.

"ಇದೊಳ್ಳೆ ಬೋರ್ಜಸ್ ಬರೆದ ಹಾಗಿದೆಯಲ್ಲಾ" ಅಂದೆ.

ಹತಾಶರಾದಂತೆ ನನ್ನ ಕಡೆ ನೋಡಿದರು. "ಅದನ್ನಾಗಲೆ ಬರೆದುಬಿಟ್ಟಿದಾನಾ ಅವನು?" ಅಂದರು.

"ಬರೆದಿಲ್ಲದೆ ಹೋದರೆ ಒಂದಲ್ಲ ಒಂದಿವಸ ಬರೆದೇ ಬರೀತಾರೆ. ಅವರ ಕಲ್ಪನಾ ಜಾಲಗಳು ಇಂಥವೆ ತಾನೆ?" ಅಂದೆ.

ಅವತ್ತು ಸಂಜೆ ಆರುಗಂಟೆ ಹೊತ್ತಿಗೆ ಹಡಗು ಹತ್ತಿದ ನೆರೂಡಾ ನಮಗೆಲ್ಲಾ ವಿದಾಯ ಹೇಳಿದ್ದೆ, ಒಂದು ಮೂಲೆ ಟೇಬಲ್ಲಿಗೆ ಹೋಗಿ ಕೂತು ಕವಿತೆ ಬರೆಯಲಾರಂಭಿಸಿದರು. ತಮ್ಮ ಪುಸ್ತಕಗಳ ಗೌರವಪ್ರತಿ ನೀಡುವವರಿಗೆ ಹಸಿರುಮಸಿಯಲ್ಲಿ ಹೂವು ಹಕ್ಕಿ ಮೀನಿನ ಚಿತ್ರ ಬಿಡಿಸಿ ಕೊಡುತ್ತಿದ್ದ ಅದೆ ಪೆನ್ನಿನಲ್ಲಿ ಬರೆಯ ತೊಡಗಿದರು. ಕಳಿಸಿಕೊಡಲು ಬಂದವರೆಲ್ಲ ಇಳಿಯಿರಿ ಎಂಬ ಘೋಷಣೆ ಕೇಳಿದ್ದೆ ನಾವೆಲ್ಲ ಹಡಗು ಬಿಟ್ಟು ಇಳಿದೆವು. ಫ್ರಾ ಫ್ರೀಡಾಳನ್ನು ಹುಡುಕಾಡಿದೆವು. ಇನ್ನೇನು ಸಿಕ್ಕಲಾರಳು ಎಂದು ಕೊಳ್ಳುವಷ್ಟರಲ್ಲಿ ಸಿಕ್ಕೇಬಿಟ್ಟಳು. ಅವಳೂ ಆಗಷ್ಟೆ ಮಧ್ಯಾಹ್ನದ ನಿದ್ದೆ ತೆಗೆದು ಎದ್ದು ಬಂದಿದ್ದಳು.

"ನಿಮ್ಮ ಕವಿ ನನ್ನ ಕನಸಿನಲ್ಲಿ ಬಂದಿದ್ದರು" ಅಂದಳು.

ದಿಗ್ಭ್ರಾಂತನಾಗಿ ಅವಳ ಕನಸನ್ನು ಪೂರ್ಣ ಹೇಳಲು ಹೇಳಿದೆ.

"ಅವರು ನನ್ನ ಬಗ್ಗೆ ಕನಸು ಕಾಣ್ತಾ ಇರೋದು ನಂಗೆ ಕನಸಲ್ಲಿ ಕಾಣ್ತು" ಅಂದಳು.

ನಾನು ನಂಬಲಿಲ್ಲ. ಅವಳಿಗೆ ಆತಂಕವಾಯಿತು. "ನಿಂದೊಳ್ಳೆ ಆಯ್ತು ಕನಸುಗಳಲ್ಲಿ ನಿಜಜೀವನಕ್ಕೆ ಸಂಬಂಧಿಸದೇ ಇರುವಂಥವೂ ಕೆಲವು ಇರ್ತಾವೆ" ಅಂದಳು.

ಹೋಟೆಲ್ ರಿವೇರಾದ ಸಮುದ್ರ ಅಪಘಾತದಲ್ಲಿ ಸತ್ತ ಆ ಹೆಂಗಸಿನ ಸರ್ಪಾಕಾರದ ಬೆರಳುಂಗುರದ ಬಗ್ಗೆ ಕೇಳುವವರೆಗೆ ಮತ್ತೆಂದೂ ನಾನು ಫ್ರಾ ಫ್ರೀಡಾಳನ್ನು ಕಂಡಿದ್ದೂ ಇಲ್ಲ, ಅವಳ ಬಗ್ಗೆ ಯೋಚನೆ ಮಾಡೋಕೂ ಹೋಗಿರಲಿಲ್ಲ. ಕೆಲವು ದಿನಗಳ ನಂತರ ಒಂದು ರಾಜಕೀಯ ಸಭೆಯಲ್ಲಿ ಪೋರ್ಚುಗೀಸ್ ರಾಯಭಾರಿ ಭೇಟಿಯಾದ. ತಡೆದುಕೊಳ್ಳಲಿಕ್ಕಾಗದೆ ಅವಳ ಬಗ್ಗೆ ಅವನನ್ನು ಕೇಳಿದೆ.

ಆ ರಾಯಭಾರಿ ಅವಳ ಬಗ್ಗೆ ಭಾರಿ ಉತ್ಸಾಹದಿಂದ ಮೆಚ್ಚುಗೆಯಿಂದ ಮಾತಾಡಿದ. "ನಿಮಗ್ಗೊತ್ತಿಲ್ಲ ಅವಳೆಂಥ ಅದ್ಭುತ ವ್ಯಕ್ತಿ ಅಂತ" ಅಂದ. "ಅವಳ ಕಥೆ ಕೇಳಿದ್ರೆ ನೀವು ಖಂಡಿತಾ ಬರೀದೆ ಇರಕ್ಕೆ ಸಾಧ್ಯವೇ ಇಲ್ಲ" ಅಂದ. ಕೆಲವು ವಿಚಿತ್ರ ಮಾಹಿತಿಗಳನ್ನ ಬಿಚ್ಚಿಡುತ್ತ ಒಂದೇ ಸಮ ಹೇಳುತ್ತಲೆ ಹೋದ, ಎಂದೂ ಮುಗಿಯದ ಕಥೆ ಥರ.

ನಾನು ಅವನ ಮಾತು ತುಂಡರಿಸಿ ಕೇಳಿದೆ. "ಹಾಗಾದರೆ ಅವಳ ಯಾವ ಕೆಲಸ ಮಾಡಿಕೊಂಡಿದ್ದಳು? "ಅವ ಭುಜ ಕುಣಿಸುತ್ತ ಉತ್ತರಿಸಿದ "ಏನೇನೂ ಇಲ್ಲ, ಕನಸು ಕಾಣೋದೆ ಅವಳಿಗಿದ್ದ ಕೆಲಸ, ಅವಳೊಬ್ಬಳು ಕನಸುಗಾರ್ತಿ ಅಷ್ಟೆ".

ಅನುವಾದ : ಬಿದರಹಳ್ಳಿ ನರಸಿಂಹಮೂರ್ತಿ

ಸಂದರ್ಶನ

ಬರಹಗಾರನ ಪಾಕಶಾಲೆ*

ಕಲ್ಪನಾ ಸಹನಿ

ಮಾರ್ಕ್ವೆಸ್ : ನಾನೊಮ್ಮೆ ಟ್ರೈನಿನಲ್ಲಿ ಜಿನೀವಾಕ್ಕೆ ಪ್ರಯಾಣಿಸುತ್ತಿದ್ದೆ. ಹನ್ನೆರಡು ಗಂಟೆಗಳ ಪ್ರಯಾಣವನ್ನು. ನಾನು ನನ್ನ ಗೆಳೆಯರಿಗೆಂದು ಕೊಂಡೊಯ್ಯುತ್ತಿದ್ದ. *'One Hundred years of Solitude'* ನ ಪ್ರತಿಯೊಂದನ್ನುಳಿದು ಓದಲು ನನ್ನ ಬಳಿ ಇನ್ನೇನೂ ಇರಲಿಲ್ಲ. ಹಾಗಾಗಿ ನನ್ನದೇ ಕಾದಂಬರಿಯನ್ನ ನಾನು ಓದತೊಡಗಿದೆ. ಅದನ್ನ ಪೂರ್ತಿ ಓದಲಾಗಲಿಲ್ಲ. ಆದರೆ ಎರಡು ಮೂರು ಅಧ್ಯಾಯಗಳನ್ನಂತೂ ಮುಗಿಸಿದೆ.

ಪ್ರಶ್ನೆ : **ನಿಮಗದು ಇಷ್ಟವಾಯಿತೆ?**

ಮಾ : ನಿಜ ಹೇಳಬೇಕೆಂದರೆ, ಇಲ್ಲ. ಬರೆಯುತ್ತಿದ್ದಾಗ, ಪ್ರಪಂಚದಲ್ಲೇ ಅದೊಂದು ಉತ್ತಮ ಕೃತಿ ಎಂದೇ ನಾನು ನಂಬಿದ್ದೆ. ಆದರೆ ಜಿನೀವಾಗೆ ಹೋಗುವ ದಾರಿಯಲ್ಲಿ ಅದನ್ನ ಓದಿದಾಗ ನನಗೆ ತುಂಬಾ ನಾಚಿಕೆಯಾಯಿತು. ಅದನ್ನ ಸರಿಯಾಗಿ ಬರೆಯಲು ಸಾಕಷ್ಟು ಸಮಯ ನನಗಿರಲಿಲ್ಲ ಅಂತ ಅರಿವಾಯಿತು. ನಾನು ಮಾಡಿದ್ದೆಂದರೆ ಅದನ್ನ ಪುನರ್ ವರ್ಣಿಸಿದ್ದಷ್ಟೆ.

---

* **ಪುಸ್ತಕ ಪ್ರಪಂಚ,** ಏಪ್ರಿಲ್ ೧೯೮೮, ಸಂಪುಟ ೪೨ ಸಂಚಿಕೆ ೯.

ಪ್ರ : ನಿಮ್ಮ ಮೊದಲಿನ ಕೃತಿಗಳಲ್ಲೆಲ್ಲಾ ಇದೇ ಶ್ರೇಷ್ಠವಾದದ್ದು.

ಮಾ : ವೈಯಕ್ತಿಕವಾಗಿ ನನಗನ್ನಿಸುವುದು *'No one write to the Colonel'* ಉತ್ತಮವಾಗಿದೆ ಅಂತ. ನಾನು ಹೀಗೆ ಅಂದುಕೊಳ್ಳೋದ್ರಲ್ಲಿ ತಪ್ಪಿರಬಹುದು, ಆದರೆ *One Hundred years of Solitude* ಓದುವಾಗ 'ಲೇಖಕ ಇದನ್ನ ಬರೆಯುವಾಗ ಸಾಕಷ್ಟು ವೇಳೆಯನ್ನ ಉಪಯೋಗಿಸಲಿಲ್ಲ' ಎಂಬುದಂತೂ ಸ್ಪಷ್ಟವಾಗಿತ್ತು. ಆ ಕಾದಂಬರಿಯನ್ನ ನಾನು ತುಂಬಾ ಕ್ಷಿಪ್ರವಾಗಿ, ನಿಖರವಾದ ದಿನಾಂಕದಂದೇ ಮುಗಿಸಬೇಕಾಗಿತ್ತು. ಕಾರಣ, ಒಂದು - ನಾನು ಕೊಂಡ ಕಾರಿನ ಹಣವನ್ನ ಪಾವತಿ ಮಾಡಬೇಕಿತ್ತು. ಎರಡನೇದಾಗಿ, ಆರು ತಿಂಗಳಿಂದ ಬಾಕಿಯಿದ್ದ ಮನೆಬಾಡಿಗೆಯನ್ನ ತೀರಿಸಬೇಕಿತ್ತು. ಬರೆಯಲು ಪ್ರಾರಂಭಿಸಿದಾಗ ಆರು ತಿಂಗಳ ಕಾಲಾವಧಿ ಬೇಕಾದಷ್ಟಾಯಿತು ಎಂದೇ ನಾನು ಭಾವಿಸಿದ್ದೆ. ಆದರೆ ೧೮ ತಿಂಗಳವರೆಗೆ ಅದು ಬರೆಸಿಕೊಂಡು ಹೋಯಿತು. ಹಾಗಾಗಿ ಅದೊಂದು ಅತೀ ದೀರ್ಘ ಅವಧಿ ಅಂತಲೇ ನಾನು ಆ ಕ್ಷಣಕ್ಕೆ ಭಾವಿಸಿದ್ದು. ಆದರೆ *'Autumn of the Patriarch'* ಬರೆಯುವಾಗಿನ ಸ್ಥಿತಿ ತುಂಬಾ ಭಿನ್ನವಾಗಿತ್ತು. ಅದನ್ನು ಮುಗಿಸಲು ನನಗೆ ೭ ವರ್ಷಗಳಷ್ಟು ದೀರ್ಘ ಸಮಯವಿತ್ತು, ಹಾಗಾಗಿ ತುಂಬಾ ವಿರಾಮವಾಗಿ ಅದನ್ನ ಬರೆಯಬಹುದಿತ್ತು. ಆದರೆ *'One Hundred years of Solitude'* ಬರೆಯುವಾಗಿನ ದಿನಗಳು ತುಂಬಾ ಕಷ್ಟದ ದಿನಗಳಾಗಿದ್ದವು. ಇದರಿಂದಾಗಿ, ಬ್ಯುನ್‌ಡಿಯಾ ಕುಟುಂಬದ ಎರಡು ತಲೆಮಾರುಗಳ ಕಥೆಯನ್ನ ಅದರಿಂದ ಕಿತ್ತುಹಾಕಿಬಿಟ್ಟಿದ್ದೆ. ನಾನೊಬ್ಬ ಕೆಟ್ಟ ಓದುಗ. ಬೇಸರವನ್ನುಂಟು ಮಾಡುವಂತಹ ಭಾಗಕ್ಕೆ ಬರುತ್ತಲೇ, ನಾನು ಓದುತ್ತಿದ್ದ ಪುಸ್ತಕವನ್ನ ಪಕ್ಕಕ್ಕಿಟ್ಟುಬಿಡುತ್ತೇನೆ. ಬರೆಯುವಾಗಲೂ ಅಷ್ಟೆ. ಓದುಗ ಬೇಸರಿಸಿಕೊಳ್ಳುವ ಘಟ್ಟ ತಲುಪಿದ್ದಾನೆ ಅಂತ ಅನ್ನಿಸಿದಾಕ್ಷಣವೇ, ಆ ಪುಸ್ತಕವನ್ನ ಸ್ವಾರಸ್ಯಕರವಾಗಿಸುವ ದಾರಿಯೊಂದನ್ನು ಹುಡುಕತೊಡಗುತ್ತೇನೆ. *'One Hundred years of Solitude'* ಇಂಥಾ ಮನಸ್ಥಿತಿಯಲ್ಲಿ ಬರೆಯಲ್ಪಟ್ಟಿದ್ದು. ಅದರಲ್ಲಿ ಬಹಳಷ್ಟು

ತಲೆಮಾರು ಇಡಿಕಿರಿದಿವೆ ಅಂತ ಅನ್ನಿಸಿತ್ತು. ಒಂದು ಚಕ್ರದ, ಪುನರಾವರ್ತನೆಯ ಭಾವನೆಯನ್ನು ಸೃಷ್ಟಿಸುವುದು ನಾನು ಕಲ್ಪಿಸಿಕೊಂಡ ರೀತಿಗೆ ಅವಶ್ಯವಾಗಿತ್ತಾದರೂ, ಇದೇ ಆ ಕೃತಿ ನೀರಸವೆನಿಸಲಿಕ್ಕೂ ಕಾರಣವಾಗಿತ್ತು. ಆದ್ದರಿಂದಲೇ ಪುಸ್ತಕದ ಮಧ್ಯದಲ್ಲಿ, ಯುದ್ಧಾನಂತರ ಬರುವ ಮ್ಯಾಕಂಡೋನ ವರ್ಣನೆಯ ಭಾಗದಲ್ಲಿ, ಎರಡು ತಲೆಮಾರುಗಳ ಕಥೆಯನ್ನು ಕೈ ಬಿಡಲು ನಿರ್ಧರಿಸಿದೆ. ಅನಂತರ, ಜಿನೀವಾಗೆ ಹೋಗುವಾಗ ಅದನ್ನು ಓದಿದ ಬಳಿಕ 'ನನಗೆ ಸಾಕಷ್ಟು ಸಮಯವಿದ್ದಿದ್ದರೆ ಎಲ್ಲವನ್ನೂ ಅತ್ಯಂತ ಎಚ್ಚರಿಕೆಯಿಂದ, ಸ್ವಾರಸ್ಯವಾಗಿ ಬರೆಯಬಹುದಿತ್ತು' ಅಂದುಕೊಂಡೆ.

ಪ್ರ : ಒಬ್ಬ ಸೋವಿಯತ್ ವಿಮರ್ಶಕ ನೀವು *'One Hundred years of Solitude'* ಕಾದಂಬರಿಯನ್ನು *'Autumn of the Patriarch'*ಗೆ ಮುನ್ನುಡಿ ಎಂದು ಪರಿಗಣಿಸಿರುವುದಾಗಿ ಬರೆದಿದ್ದಾನೆ. ಆದರೆ ನಾವು ಅದನ್ನು ಮತ್ತೆ ಮತ್ತೆ ಓದುತ್ತಲೇ ಇರುತ್ತೇವೆ. ಹಾಗೆ ಓದಿದಾಗಲೆಲ್ಲಾ, ಪ್ರತೀ ಬಾರಿಯೂ ಅದರಲ್ಲೇನೋ ಹೊಸತನ ಗೋಚರಿಸುತ್ತಲೇ ಇರುತ್ತದೆ.

ಮಾ : ನೀವು ಇಷ್ಟೆಲ್ಲಾ ಅದರ ಬಗ್ಗೆ ಹೇಳುವುದನ್ನು ಕೇಳುತ್ತಿದ್ದರೆ, ಮತ್ತೊಮ್ಮೆ ಅದನ್ನ ಓದಬೇಕು ಅಂತ ನನಗೂ ಅನ್ನಿಸ್ತಾ ಇದೆ. ನಿಮಗೆ ಅಷ್ಟೊಂದು ಆಸಕ್ತಿಯನ್ನು ಅದು ಉಂಟು ಮಾಡಿರುವುದನ್ನ ನೋಡಿದರೆ, 'ಅದರಲ್ಲಿ ಅಂಥ ವಿಶೇಷವಾದದ್ದೇನಿದೆ' ಅಂತ ನೋಡೋ ಕುತೂಹಲ ನನಗೂ ಮೂಡ್ತಾ ಇದೆ.

ಇದರ ಬಗ್ಗೆ ಬಂದಿರುವ ಅನೇಕ ವಿಮರ್ಶೆಗಳು ನನಗೆ ಚಿರಪರಿಚಿತ. ಜನ ಈ ಪುಸ್ತಕದ ಬಗ್ಗೆ ಎಷ್ಟೊಂದು ಬರೆದಿದ್ದಾರೆಂದರೆ, ನಾನು ಬಹಳ ದಿನಗಳಿಂದ ಅವುಗಳನ್ನ ಓದುವುದನ್ನೇ ನಿಲ್ಲಿಸಿದ್ದೇನೆ. ವಿಮರ್ಶಕರನ್ನು ವಿರೋಧಿಸುವ ನನ್ನ ಈ ರೀತಿ ಪೂರ್ವಗ್ರಹಪೀಡಿತವಾಗಿರಬಹುದು. ಇರಲಿ - ಲೇಖಕ ಮತ್ತು ಓದುಗನ ಮಧ್ಯೆ ನೇರ ಸಂಪರ್ಕ ಇರಬೇಕು ಅಂತ ನಾನು ಬಯಸ್ತೀನಿ. ನಾನು ಬರೆಯುವಾಗಲೆಲ್ಲಾ; ನಾನು ಬರೆಯುತ್ತಿರುವುದು ಓದುಗನಿಗಾಗಿ, ನನ್ನ

ಪುಸ್ತಕ ಎಲ್ಲಾ ಮಧ್ಯವರ್ತಿಗಳನ್ನೂ ದಾಟಿ ಓದುಗನನ್ನ ನೇರವಾಗಿ ಮುಟ್ಟುತ್ತೆ ಅಂತ ಭಾವಿಸ್ತಾ ಇರ್ತೀನಿ.

ಕೆಲವು ವಿಮರ್ಶಕರು ಓದುಗನಿಗೆ, ಆತ ಒಂದು ಪುಸ್ತಕವನ್ನು ಓದುವ ಮುನ್ನವೇ ಲೇಖಕ ಏನು ಹೇಳಬೇಕೆಂದಿದ್ದಾನೆ ಅನ್ನೋದನ್ನು ಹೇಳಲು ಬಯಸ್ತಾರೆ. ಅಂಥ ಸಂದರ್ಭದಲ್ಲಿ ನೇರ ಸಂಪರ್ಕ ತಪ್ಪಿಹೋಗುತ್ತೆ. ಈ ಕಾರಣದಿಂದಾಗಿಯೇ ನಾನು ವಿಮರ್ಶಕರನ್ನ ವಿರೋಧಿಸುವುದು. ಅವರು ಲೇಖಕ ಮತ್ತು ಓದುಗನ ನಡುವಿನ ಅಡ್ಡಗೋಡೆ ಅಂತ ನಾನು ಯಾವಾಗಲೂ ಭಾವಿಸುತ್ತೇನೆ. ಕೆಲವೊಮ್ಮೆ ನನಗೆ 'ಪಕ್ಕಕ್ಕೆ ಸರಿಯಿರಿ, ನಾನು ಓದುಗನೊಂದಿಗೆ ಮಾತನಾಡ ಬೇಕಾಗಿದೆ, ನಿಮ್ಮೊಟ್ಟಿಗಲ್ಲ 'ಅಂತ ಕೂಗಿ ಹೇಳಬೇಕೆನ್ನಿಸುತ್ತೆ.

ಕೆಲವೊಮ್ಮೆ ಅವರು ಲೇಖಕನ ತಲೆಗೆ, ಓದುಗನ ತಲೆಗೆ ಹೊಳೆದಿರದಂಥ ಎಷ್ಟೋ ವಿಷಯವನ್ನು ಶೋಧಿಸಿಬಿಡುತ್ತಾರೆ. ಕೆಲವೊಮ್ಮೆ ಅದು ಸರಿಯಿರಬಹುದು ಅಪ್ರಜ್ಞಾಪೂರ್ವಕವಾಗಿ ಹುಗಿದಿಟ್ಟ ಅನೇಕ ವಿಷಯಗಳು ಪುಸ್ತಕದಲ್ಲಿರಬಹುದು. ಲೇಖಕನಿಗೆ ಅರಿವಿರದ ಇಂಥ ಅಪ್ರಜ್ಞಾಪೂರ್ವಕ ಅಸ್ತಿತ್ವವನ್ನಷ್ಟೇ ವಿಮರ್ಶಕರು ಕಾಣುವುದು. ಆದ್ದರಿಂದ ವಿಮರ್ಶಕರು ಏನು ಹೇಳುತ್ತಾರೆಂಬುದನ್ನು ನಾನು ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ ಅಥವಾ 'ಅದೊಂದು ಅನಿವಾರ್ಯ' ಅಂತಲೂ ನಾನು ಭಾವಿಸೋದಿಲ್ಲ.

'One Hundred years of Solitude' ಕಾದಂಬರಿ *'Autumn of the Patriarch'*ಗೆ ಮುನ್ನುಡಿ ಅಂತ ಭಾವಿಸ್ತೀನಿ ಅಂತ ಹೇಳಿಕೆಯಿತ್ತಿದ್ದೇನೆ ಎನ್ನುವುದು ನನಗೆ ಹೊಸತು. ಅದನ್ನ ಹೇಳಿದ ಹಾಗೆ ನನಗೆ ನೆನಪಿಲ್ಲ. ಅದೇನೇ ಇರಲಿ, ನಾನೂ ಅದೇ ರೀತಿ ಯೋಚಿಸುತ್ತಿದ್ದೇನೆ. ಬರಿ *'One Hundred years of Solitude'* ಮಾತ್ರವಲ್ಲ, ನನ್ನ ಮೊದಲ ಎಲ್ಲಾ ಬರಹಗಳೂ *'Autumn of the patriarch'* ಗೆ ಮುನ್ನುಡಿಯಿದ್ದಂತೆ. ವಿಮರ್ಶಕರು ನನ್ನ ಮೊದಲ ಬರಹಗಳು *'One Hundred years of Solitude'* ಕಾದಂಬರಿಗೆ ಮುನ್ನುಡಿಯಿದ್ದಂತೆ ಎಂದು ಗುರುತಿಸಿ, *'Autumn of the Patriarch'*

ಇವೆಲ್ಲಕ್ಕಿಂತ ಭಿನ್ನವಾದದ್ದು ಎಂದಿದ್ದಾರೆ. ಆದರೆ ಇದು ತದ್ವಿರುದ್ಧವಾದದ್ದು ಎಂದು ನನ್ನ ಭಾವನೆ. ನನ್ನ ಪ್ರಮುಖ ಆಸಕ್ತಿ ಯಾವಾಗಲೂ ಅಧಿಕಾರದ ಸಮಸ್ಯೆ. ಕರ್ನಲ್ ಅರಿಲಿಯಾನೊ ಬ್ಯುಂಡಿಯಾ ಯುದ್ಧದಲ್ಲಿ ಸೋಲದೆ ಗೆದ್ದಿದ್ದರೆ, ಅವನೊಬ್ಬ ಸರ್ವಾಧಿಕಾರಿಯಾಗಿರ್ತಿದ್ದ. ಕರ್ನಲ್‌ನ ಒಡನಾಡಿಯಾಗಿದ್ದು, ಈಗ ಇನ್ನೇನು ಅವನ ಗುಂಡಿಗೆ ಬಲಿಯಾಗಬೇಕಾಗಿದ್ದವನು, ಹೇಳುವ ಮಾತಿದು "ನೀನು ಯುದ್ಧದಲ್ಲಿ ಗೆದ್ದರೆ, ದೇಶ ಹಿಂದೆಂದೂ ಕಾಣದಿದ್ದಂಥ ರಕ್ತಪಿಪಾಸು ಸರ್ವಾಧಿಕಾರಿಯಾಗುತ್ತಿ!" ಬ್ಯುಂಡಿಯಾ ಯುದ್ಧದಲ್ಲಿ ಗೆದ್ದು, ಅಧಿಕಾರ ಹಿಡಿದು ರಕ್ತಪಿಪಾಸು ಸರ್ವಾಧಿಕಾರಿಯಾಗಬಹುದಾದ ಗಳಿಗೆಯೊಂದಿತ್ತು. ಹಾಗಾಗಿದ್ದರೆ, ಪುಸ್ತಕ ಭಿನ್ನವಾದ, ಬೇರೊಂದು ದಾರಿಯನ್ನೇ ಹಿಡಿಯುವ ಸಾಧ್ಯತೆಯಿತ್ತು. ಅದಕ್ಕೇ ಈ ರೀತಿಯ. ತಿರುವು ಸರ್ವಾಧಿಕಾರಿಯೊಬ್ಬನ ಬಗೆಗೇ ಬರೆಯಬೇಕಾದ ಇನ್ನೊಂದು ಪುಸ್ತಕಕ್ಕಿರಲಿ ಅಂತಬಿಟ್ಟೆ. ಬಹಳಷ್ಟು ವರ್ಷಗಳಿಂದ ನಾನು ಬರೆಯಬೇಕೆಂದು ತಯಾರಾಗುತ್ತಿದ್ದ ಪುಸ್ತಕ ಅದು. ಈ ದೃಷ್ಟಿಯಲ್ಲಿ, '*'One Hundred years of Solitude'* ಕಾದಂಬರಿ *'Autumn of the Patriarch'* ಕಾದಂಬರಿಗೆ ಮುನ್ನುಡಿಯಿದ್ದಂತೆ. ಬೇರೆ ಮಾತಿನಲ್ಲಿ ಬೇಳುವುದಾದರೆ, ನಾನು ಇಷ್ಟು ದಿನಗಳವರೆಗೆ ಹುಡುಕುತ್ತಿದ್ದ, ಹಾಗೂ ಬರೆಯಬೇಕೆಂದುಕೊಂಡಿದ್ದ ಕೃತಿ *'One Hundred years of Solitude'* ಇದಿಷ್ಟೊ ವಾಸ್ತವ. ಪ್ರಾರಂಭದಲ್ಲಿ 'ನಾನು ವಿಮರ್ಶಕರ ವಿರುದ್ಧ' ಎಂದು ಮಾತು ಪ್ರಾರಂಭಿಸಿ, ಈಗ ಅವರು ಹೇಳುವುದನ್ನೇ ಒಪ್ಪಿಕೊಂಡಿದ್ದೇನೆ.

ಹಾಗಾಗಿ, ಕರ್ನಲ್ ಅರಿಲಿಯಾನೊ ಬ್ಯುಂಡಿಯಾ ಯುದ್ಧದಲ್ಲಿ ಗೆದ್ದು ಸರ್ವಾಧಿಕಾರಿಯಾಗಿದ್ದರೆ ಎಲ್ಲವೂ ಭಿನ್ನವಾಗಿರುತ್ತಿತ್ತು. ಸರ್ವಾಧಿಕಾರಿಯ ಮೇಲೆ ಬರೆಯಬೇಕಾದರೆ ಅದಕ್ಕೆ ಬೇರೆಯದೇ ಆದ ಮಾರ್ಗವೊಂದನ್ನು ಹಿಡಿಯಬೇಕಾಗುತ್ತೆ *'One Hundred years of Solitude'* ಕಾದಂಬರಿಯನ್ನು ತುಂಬಾ ಜನ ಇಷ್ಟಪಟ್ಟಿರೋದು ಬಹುಶಃ ಅದು ತುಂಬಾ ಲಘುಕೃತಿ ಅಂತ ಭಾವಿಸಿ, ಅನ್ನೋ ಭಯ

ನನಗಿದೆ. ಅಲ್ಲದೆ ನನಗಿರೋ ಇನ್ನೊಂದು ಭಯ ಅಂದ್ರೆ, ಆ ಗ್ರಂಥದಲ್ಲಿ 'ಒಳ್ಳೆಯ ಅಂಶ' ಅಂತ ನಾನು ತಿಳಿದಿರೋದನ್ನ ಜನ ಇಷ್ಟ ಪಡದೇ, 'ದುರ್ಬಲ' ಅಂತ ನಾನು ತಿಳಿದಿರೋ ಅಂಶಗಳನ್ನ ಅವರು ಇಷ್ಟ ಪಡ್ತಿರೋದು. ದೂರದರ್ಶನದಲ್ಲಿ ಧಾರಾವಾಹಿಯಾಗಿ ಬರೋ ಕಾದಂಬರಿಯನ್ನು ಅದು ಹೋಲುತ್ತೆ ಅಂತ ನನಗನ್ನಿಸುತ್ತೆ.

ಆದರೆ, *'Autumn of the Patriarch'* ಹೀಗಿರದೆ, ಒಂದು ನಿರ್ದಿಷ್ಟ ಸಾಹಿತ್ಯಿಕ ನೆಲಗಟ್ಟನ್ನು ಒತ್ತಾಯಿಸುತ್ತೆ. ನಾನದನ್ನು ಇಷ್ಟಪಡೋದು ಈ ಕಾರಣಕ್ಕಾಗಿಯೇ. ಇದನ್ನ ನಾನು ಬಿಡುವು ಮಾಡಿಕೊಂಡು ಬರೆದೆ, ಬರೆಯೋಕೆ ಆಗದೇ ಹೋದಾಗ ಬರೆಯೋದನ್ನೇ ನಿಲ್ಲಿಸಿದ್ದೆ. ಮುಂದುವರೆಸೋದಕ್ಕೆ ಏನೂ ಹೊಳೀದೇ ಇದ್ದಾಗ ಹಾಗೆ ಮುಚ್ಚಿಟ್ಟುಬಿಡ್ತಿದ್ದೆ. ಉದಾಹರಣೆಗೆ, ಒಮ್ಮೆ ನನಗೆ ಪೇರಲಹಣ್ಣಿನ ವಾಸನೆಯನ್ನು ಜ್ಞಾಪಿಸಿಕೊಳ್ಳೋಕೆ ಆಗ್ತಾ ಇಲ್ಲ ಅನ್ನಿಸ್ತು. ಪೇರಲಹಣ್ಣಿನ ವಾಸನೇನ ಜ್ಞಾಪಿಸಿಕೊಳ್ಳೋಕೆ ಆಗದೇ ಇದ್ದರೆ, ನಾನು ನನ್ನ ಭೂತಕಾಲದೊಟ್ಟಿಗಿನ ಸಂಪರ್ಕವನ್ನ ಕಡಿದುಕೊಂಡಿದ್ದೇನೆ, ನನ್ನ ಬೇರುಗಳನ್ನ ಕಳೆದುಕೊಂಡಿದ್ದೇನೆ, ಅಂತ ಅರ್ಥ. ಯಾಕೆಂದರೆ ನಾನಾಗ ಆ ಕೃತಿಯನ್ನ ಬಾರ್ಸಿಲೋನಾದಲ್ಲಿ ಬರೀತಿದ್ದೆ.

ನಾನೊಬ್ಬ ಲ್ಯಾಟಿನ್ ಅಮೆರಿಕನ್ ಆಗಿ ನನ್ನನ್ನು ನಾನೆ ಅತ್ಯಂತ ವಿಶಿಷ್ಟ ಸನ್ನಿವೇಶದಲ್ಲಿ ಕಂಡುಕೊಂಡಿದ್ದೇನೆ. ಸರ್ವಾಧಿಕಾರತ್ವದಲ್ಲಿ ಬದುಕುವ ಅವಕಾಶ ನನಗೊದಗಿ ಬಂದಿರಲಿಲ್ಲ. ಆ ದಿನಗಳಲ್ಲಿ ಸರ್ವಾಧಿಕಾರ ಅಂದರೇನೆಂದು ಅರ್ಥ ಮಾಡಿಕೊಳ್ಳಲು ತಕ್ಕುದಾದ, ಅಧ್ಯಯನ ಯೋಗ್ಯವಾದ ಸರ್ವಾಧಿಕಾರತ್ವ ಲ್ಯಾಟಿನ್ ಅಮೆರಿಕಾದಲ್ಲಿರಲಿಲ್ಲ. ಆದ್ದರಿಂದ, ಏಕವ್ಯಕ್ತಿಯ, ಹಳೆಯ, ನಿಜವಾದ ಅರ್ಥದಲ್ಲಿ ಸರ್ವಾಧಿಕಾರತ್ವವಿದ್ದ ಸ್ಪೆಯಿನ್‌ಗೆ ನಾನು ಹೋದೆ. ಸೊಮೊಸಾವ ಮನೆತನದ ಸರ್ವಾಧಿಕಾರ ಪ್ರಾಚೀನವಾದದ್ದಲ್ಲವಾದರೂ ಅದು ಸಂಪ್ರದಾಯ ಬದ್ಧವಾಗಿ ಕೈಗೆ ಬಂದದ್ದು. ನಾನು ಸ್ಪೆಯಿನ್‌ಗೆ ಹೋದೆ, ಆದರೆ ಸ್ಪೆಯನ್‌ನಲ್ಲಿ ಕುಳಿತು ಬರಿಯ ನೆನಪಿನಿಂದಲೇ ಲ್ಯಾಟಿನ್

ಅಮೆರಿಕಾದ ಬಗ್ಗೆ ಬರೆಯೋದು ಕಷ್ಟದ ಕೆಲಸ. ಜತೆಗೆ, ಅಲ್ಲಿ ದಿನದಿಂದ ದಿನಕ್ಕೆ ಬೇರೆ ಬೇರೆ ಘಟನೆಗಳೂ ನಡೆಯುತ್ತಿದ್ದುದರಿಂದ ಅವೆಲ್ಲ ಕಾದಂಬರಿಯನ್ನ ಹೆಚ್ಚು ಶ್ರೀಮಂತಗೊಳಿಸಿದವು.

ತುಂಬಾ ಸುತ್ತಿ ಬಳಸಿ, ಮಾತಾಡ್ತಿದೀನಿ. ನಾನು ಸ್ಪಷ್ಟಪಡಿಸಬೇಕೊಂತಿರೋ ವಿಷಯಕ್ಕೆ ನಂತರ ಬರ್ತೀನಿ.... *'Autumn of the Patriach'* ನಲ್ಲಿ ಸರ್ವಾಧಿಕಾರಿಯ ಹೆಂಡತಿ ಕೊಲೆ ಯತ್ನ ನಡೆಯೋ ಘಟನೆ ಒಂದಿದೆ. ಈ ಘಟನೆಯನ್ನು ನಾನಾಗಲೇ ಬರೆದಾಗಿತ್ತು. ಅವಳು ತನ್ನ ಮಗನ ಜತೆ ಮಾರ್ಕೆಟ್ಟಿಗೆ ಹೊರಟಿರ್ತಾಳೆ. ಆದರೆ ಅವಳ ಕಾರು ಕೆಟ್ಟು ಹೋಗಿರುತ್ತೆ, ಹೀಗಾಗಿ, ಕಡೆಗಳಿಗೇಲಿ ಅವಳು ತನ್ನ ಗಂಡನ ಕಾರನ್ನ ತೊಗೊಂಡು ಹೋಗೋ ಪರಿಸ್ಥಿತಿ ಬರುತ್ತೆ. ಆ ಕಾರಲ್ಲಿ ಬಾಂಬ್‌ನ ಇಡಲಾಗಿರುತ್ತೆ. ಅವಳು ಮಾರ್ಕಟ್ಟಿಗೆ ಬಂದಾಗ ಬಾಂಬ್ ಸ್ಫೋಟಿಸಿ, ಕಾರು ಚಿಂದಿಚಿಂದಿಯಾಗಿ, ಚೂರುಗಳೆಲ್ಲಾ ಮಾರ್ಕಟ್ ಉದ್ದಗಲಕ್ಕೂ ಬೀಳುತ್ತವೆ.

ಪ್ರ : ಇದೇ ಥರದ ಘಟನೆ ಕೆರೆರೊ ಬ್ಲಾಂಕೋಗೆ ಸಂಭವಿಸಿತ್ತಲ್ಲವಾ?

ಮಾ : ಕೆರೆರೊ ಬ್ಲಾಂಕೋ ಘಟನೆ ನಾನು ಕಾದಂಬರಿ ಬರೆದು ಮುಗಿಸಿದನಂತರ ನಡೆದದ್ದು. ಆದರೆ, ಅದು ಹೇಗಿತ್ತೋ ಹಾಗೇ ಬಿಡಲು ನನಗೆ ಮನಸ್ಸಾಗಲಿಲ್ಲ. ಯಾಕೆಂದರೆ, ನಾನೊಂದು ವಾಸ್ತವಿಕ ಘಟನೆಯನ್ನೇ ಉಪಯೋಗಿಸಿಕೊಂಡೆ ಅಂತ ಅದು ತೋರಿಸುತ್ತಿತ್ತು. ಒಬ್ಬ ಲೇಖಕ ಒಂದು ವಾಸ್ತವ ಘಟನೆಯನ್ನು ಉಪಯೋಗಿಸಿಕೊಳ್ಳಬಹುದು, ಆದರೆ ಆಗ ಅದಕ್ಕೆ ಸಾಹಿತ್ಯಿಕ ಮೆರುಗನ್ನು ನೀಡಬೇಕಾಗುತ್ತೆ. ಹಾಗಾಗಿ, ನನ್ನದು ಕೇವಲ ಒಂದು ಸುದ್ದಿಯ ಐಟಂ ಆಗಿ, ಒಂದು ಕನ್ನಡಿಯ ಪ್ರತಿಮೆಯಾಗಿ ಬದಲಾಗುತ್ತೆ, ಆದರೆ ಅದು ವಾಸ್ತವ ಘಟನೆಯ ತದ್ವತ್ ನಕಲಿನಂತೇ ತೋರುತ್ತೆ. ಅದರಿಂದಾಗಿ, ಮೂಲಕ್ಕಿಂತ ಸಾಹಿತ್ಯಿಕವಾಗಿಯೂ, ಮಾನವೀಯ ಅರ್ಥದಲ್ಲೂ ತುಂಬಾ ಸೊಗಸಾದ ಘಟನೆಯೊಂದು ನನಗೆ ಪ್ರಾಪ್ತವಾಯಿತು.

ಸ್ಪೆಯಿನ್ ನಿಜವಾದ ಮತ್ತು ವಾಸ್ತವಾಂಶಗಳಿಂದ ಕೂಡಿದ ಹಲವಾರು ವಿಷಯಗಳಿಂದ ನನ್ನ ಪುಸ್ತಕವನ್ನ ಶ್ರೀಮಂತಗೊಳಿಸಿತು.

ಹಲವಾರು ವಿಷಯ ಸಾಮಗ್ರಿಯನ್ನದು ಒದಗಿಸಿತು. ಆದರೆ ಹಠಾತ್ತನೆ ಆ ಪುಸ್ತಕದ ತಳಹದಿಯೇ, ಜೀವಾಳವೇ, ತುಂಬಾ ಅಸ್ಪಷ್ಟಗೊಳ್ಳುತ್ತಿದೆ, ಅನ್ನೋದನ್ನ ನಾನು ಗಮನಿಸಿದೆ. ಅಷ್ಟೇ ಅಲ್ಲ, ಭಾಷೆಯೂ ಬದಲಾಗಿತ್ತು. ಯಾಕೆಂದರೆ, ನಾನು ಬರೆಯಲು ಉಪಯೋಗಿಸುತ್ತಿದ್ದ ಭಾಷೆ, ನನ್ನ ದೈನಂದಿನ ಬದುಕಿನ ಭಾಷೆಗಿಂತ ಸಂಪೂರ್ಣ ಭಿನ್ನವಾಗಿತ್ತು ಇದನ್ನ ಗಮನಿಸಿದ ಮೇಲೆ, ಆ ಪುಸ್ತಕವನ್ನ ತುಂಬಾ ಆರಾಮವಾಗಿ ಒಂದು ಕಡೆಗೆ ಎತ್ತಿಟ್ಟೆ. ಆ ಆರಾಮ; 'ನಾನು *'One Hundred years of Solitude'* ಬರೆಯುವಾಗ ದುರ್ಲಭವಾಗಿತ್ತು. ಆ ಮೇಲೆ ನಾನು ಕ್ಯಾರಿಬಿಯನ್ ದ್ವೀಪಗಳನ್ನು ನೋಡಲು ಹೋದೆ. ಎರಡು ತಿಂಗಳವರೆಗೆ, ಒಂದು ದ್ವೀಪದಿಂದ ಇನ್ನೊಂದು ದ್ವೀಪಕ್ಕೆ ನಾನು ಪ್ರಯಾಣಿಸಿದೆ. ಮರಳಿ ಬಂದಮೇಲೆ ಪ್ರತಿಯೊಂದೂ ಮತ್ತೊಮ್ಮೆ ಹೊಸದಾಗಿದ್ದಂತೆ ತೋರುತ್ತಿತ್ತು. ಹಾಗಾಗಿ, ನನ್ನ ಬರವಣಿಗೆಯನ್ನ ಮುಂದುವರಿಸುವುದು ಸಾಧ್ಯವಾಯಿತು. ಇವು, ಒಂದು ಕೆಲಸವನ್ನ ಕೈಗೆತ್ತಿಕೊಳ್ಳಲು ಅವಶ್ಯವಾದ, ಆದರ್ಶಪ್ರಾಯ ಸ್ಥಿತಿಗಳು ಅಂತ ನನ್ನ ಅನಿಸಿಕೆ. ನಿಮಗೆ ಖುಷಿ ಕೊಡದ ನಿಮ್ಮದೇ ಕೃತಿಯನ್ನ ಹರಿದು ಗಾಳಿಗೆ ತೂರುವುದೂ ಒಂದು ಅದ್ಭುತ ಅನುಭವವೇ. ಆದರೆ *'One Hundred years of Solitude'* ಗೆ ಆ ಗತಿ ಕಾಣಿಸಲು, ನನಗೆ ಸಾಕಷ್ಟು ಸಮಾಯಾವಕಾಶವೇ ಇರಲಿಲ್ಲ.

ಪ್ರ : ನಿಮಗೆ ಆ ಸಮಾಯವಕಾಶ ಸಿಗದೇ ಹೋದದ್ದು ನಮ್ಮ ಅದೃಷ್ಟ! ಹಲವು ವರ್ಷಗಳಿಂದ *'One Hundred years of Solitude'* ನ ಅರ್ಥ ಮಾಡಿಕೊಳ್ಳಲು ನಾವು ಪ್ರಯತ್ನಿಸುತ್ತಲೇ ಇದ್ದೇವೆ.

ಮಾ : ಸಂದರ್ಶನವೊಂದರಲ್ಲಿ, 'ಕಾದಂಬರಿ ಅಂದರೆ ಏನು' ಅಂತ ನನಗೆ ಪ್ರಶ್ನಿಸಲಾಯಿತು. "ಪ್ರಪಂಚದ ಗೋಜಲನ್ನು ಬಿಡಿಸುತ್ತಾ ಹೋಗುವ ಒಂದು ಪ್ರಕ್ರಿಯೆ" ಅಂತ ನಾನು ಉತ್ತರಿಸಿದೆ. 'ಅದನ್ನ ನೀವು ಹೇಗೆ ಅರ್ಥೈಸುತ್ತೀರಿ?' ಎಂಬ ಪ್ರಶ್ನೆಗೆ ಮಾತ್ರ ಉತ್ತರಿಸದಾದೆ. ವಿಚಿತ್ರ ಹಾಗೂ ಅಸ್ವಾಭಾವಿಕ ಸಂಗತಿಗಳು *'One Hundred years of Solitude'* ಕಾದಂಬರಿಗೆ ಘಟಿಸಿವೆ. ಬೋನಸ್ ಅಯರಿಸ್‌ನ ಪುಸ್ತಕ

ಪ್ರಕಾಶನೊಬ್ಬ, ತಾನು ಈ ಕಾದಂಬರಿಯ ೫೦೦೦ ಪ್ರತಿಗಳನ್ನು ಹೊರತರುತ್ತಿರುವುದಾಗಿ ಬರೆದಾಗ ನಾನು ದಿಗ್ಮೂಢನಾದೆ. ನಾನು ಅವನಿಗೆ, ತುಂಬಾ ಜಾಗರೂಕನಾಗಿರಬೇಕೆಂದು ಒಂದು ಪತ್ರ- ಅದಿನ್ನೂ ಅಲ್ಲೇ ಇದೆ - ಬರೆದು ಅವನನ್ನು ಎಚ್ಚರಿಸಿದೆ. ನನ್ನ ಉಳಿದ ಮುದ್ರಿತ ಕಾದಂಬರಿಗಳ ಪ್ರತಿಗಳು ಕೇವಲ ೭೦೦ ರಿಂದ ೧೫೦೦ ರವರೆಗೆ ಮಾತ್ರ ಚಲಾವಣೆಯಲ್ಲಿವೆ, ಎಂದವನಿಗೆ ತಿಳಿಸಿದೆ. ಹೀಗಿದ್ದೂ, ಅವನು ೮೦೦೦ ಪ್ರತಿಗಳನ್ನು ೧೯೬೭ರ ಮೇ ತಿಂಗಳಲ್ಲಿ ಹೊರತಂದ. ಡಿಸೆಂಬರ್ ಹೊತ್ತಿಗೆ ಆ ಪ್ರತಿಗಳೆಲ್ಲಾ ಖರ್ಚಾಗುತ್ತವೆ ಎಂದವನು ಎಣಿಸಿದ್ದ. ಇದಕ್ಕಿಂತ ಮೊದಲು, ಆ ಪುಸ್ತಕವನ್ನ ಒಂದು ನಿಯತಕಾಲಿಕೆಗೆ ಕೊಡಲು ಅವನು ನಿರ್ಧರಿಸಿದ್ದ. ಅದರ ಹೆಸರು *'The first plan'* ಎಂದು ಇದ್ದುದಾಗಿ ನೆನಪು. ಕೆಲವು ಪ್ರತಿಗಳನ್ನು, ಕೆಲವು ವಿಮರ್ಶಕರಿಗೂ, ಓದುಗರಿಗೂ, ಅಂಕಣಕಾರರಿಗೂ, ಆ ಪುಸ್ತಕ ಬಿಡುಗಡೆಗೊಳ್ಳುವ ಮೊದಲೇ ಅವನು ಹಂಚಿದ್ದ; ಇದರಿಂದ, ಈ ಮಹನೀಯರು ನಿಯತಕಾಲಿಕೆಗಳಲ್ಲಿನ ತಮ್ಮ ವಿಮರ್ಶೆಯಿಂದಾಗಿ ಆ ಪುಸ್ತಕವನ್ನ ಪರಿಚಯಿಸ್ತಾರೆ ಎಂದವನು ಹಂಚಿಕೆ ಹಾಕಿದ್ದ. ಆದರೆ, ಆ ಸಂಚಿಕೆ ಸಂಪೂರ್ಣವಾಗಿ ಸಿದ್ಧವಿದೆ ಎನ್ನುವಷ್ಟರ ಹೊತ್ತಿಗೆ ಆರು ದಿನಗಳ ಮಧ್ಯಪ್ರಾಚ್ಯ ಯುದ್ಧ ಶುರುವಾಯಿತು. ಸಂಪಾದಕರು ಕ್ಷಿಪ್ರವಾಗಿ ತಮ್ಮ ಸಂಚಿಕೆಯ ಮುಖಪುಟ ಹಾಗೂ ಕಾದಂಬರಿಯ ಅಂಶವನ್ನ ತೆಗೆದುಹಾಕಬೇಕಾಯಿತು; ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಬದಲಾವಣೆಗಳನ್ನು ಮಾಡಬೇಕಾಯಿತು. ಆದರೆ ಪುಸ್ತಕದ ಮಳಿಗೆಗಳಿಗೆ ಈ ಪುಸ್ತಕವನ್ನ ಹಿಂದಿತೆಗೆದುಕೊಳ್ಳುವುದು ಅದಾಗಲೇ ವಿಳಂಬವಾಗಿ ಹೋಗಿತ್ತು. ಹಾಗಾಗಿ, ಆ ನಿಯತಕಾಲಿಕೆಯ ಮುಂದಿನ ಸಂಚಿಕೆ ಹೊರಬರುವ ಹೊತ್ತಿಗಾಗಲೇ, ಅಂದರೆ ಮರುವಾರದಷ್ಟು ಹೊತ್ತಿಗೇ, ಎಲ್ಲಾ ಪ್ರತಿಗಳೂ ಮಾರಾಟವಾಗಿ ಹೋಗಿದ್ದವು. ೮೦೦೦ ಪ್ರತಿಗಳಲ್ಲಿ ಒಂದೇ ಒಂದು ಪ್ರತಿಯೂ ಉಳಿಯಲಿಲ್ಲ. ಇದರಿಂದಾಗಿ, ಮುಂದಿನ ಮೂರು ನಾಲ್ಕು ತಿಂಗಳವರೆಗೆ ಪ್ರಕಾಶಕನಿಗೆ ಕಿಂಚಿತ್ತು ಕಾಗದ ಉಳಿಯಲಿಲ್ಲ; ಅದನ್ನ ಪುನರ್ ಮುದ್ರಿಸುವ ಅವಕಾಶವೂ ಬರಲಿಲ್ಲ.

ಅಲ್ಲದೇ, *'One Hundred years of Solitude'* ನ ಒಂದೇ ಒಂದು ಪ್ರತಿಯನ್ನ ಎಲ್ಲಿಂದಲಾದರೂ ದೊರಕಿಸೋಣವೆಂಧರೂ ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ, ಲೇಖಕ ಮತ್ತು ಓದುಗನ ನಡುವೆ ನೇರ ಸಂಪರ್ಕ ಇದರಿಂದಾಗಿಯೆ, ಸಾಧ್ಯವಾಯಿತು. ಆದರೆ, 'ಈ ನಿಕಟ ಸಂಪರ್ಕ ಹೇಗೆ ಸಾಧ್ಯವಾಯಿತು?' ಎಂಬುದು ನನಗಿನ್ನೂ ರಹಸ್ಯವಾಗಿಯೇ ಉಳಿದಿದೆ. ಯಾಕೆಂದರೆ, ಆ ಪ್ರಕಾಶಕನೇ ನನಗೆ ಹೇಳಿದ್ದು, "ಪುಸ್ತಕದ ಮಾರಾಟ ಮುಖ್ಯವಾಗಿ ಬೋನಸ್ ಅಯರಿಸ್‌ನ ಬೀದಿಗಳಲ್ಲಿ ಹಾಗೂ ಭೂಗತಮೆಟ್ರೋಗಳ ಪ್ರವೇಶದ್ವಾರಗಳಲ್ಲಿ ಹೆಚ್ಚಾಗಿತ್ತೇ ಹೊರತು ಪುಸ್ತಕ ಮಳಿಗೆಗಳಲ್ಲಲ್ಲ" ಅಂತ.

ಅಂದಿನಿಂದ ಆ ಕಾದಂಬರಿಯ ೧೦೦೦೦ ಪ್ರತಿಗಳು ಪ್ರತೀ ತಿಂಗಳಿಗೊಮ್ಮೆ ಪುನರ್ ಮುದ್ರಿತವಾಗ್ತಾ ಇವೆ. ಹಾಗಾಗಿ, ಸ್ಪಾನಿಷ್ ಭಾಷೆಯೊಂದರಲ್ಲೇ ಎಷ್ಟು ಪ್ರತಿಗಳು ಹೊರಬಂದಿವೆ ಅಂತ ಹೇಳೋದು ತುಂಬಾ ಕಷ್ಟ - ಸುಮಾರು ೨ - ೩ ಮಿಲಿಯನ್ ಇರಬಹುದು. ಆಮೇಲೆ, ಕಳ್ಳತನದಲ್ಲಿ, ನನ್ನ ಅನುಮತಿ ಪಡೆಯದೇ ಮುದ್ರಿಸಿದ ಪ್ರತಿಗಳೂ ಹೊರ ಬಂದಿವೆ. ನಿಜ ಹೇಳಬೇಕೆಂದರೆ, ಇದು ನನಗೆ ತುಂಬಾ ಸಂತೋಷವುಂಟುಮಾಡಿದೆ. ಯಾಕೆಂದರೆ, ಇದರಲ್ಲಿ ನಷ್ಟಕ್ಕೆ ತುತ್ತಾಗುವವನು ಅಂದ್ರೆ 'ಅದರ ಪ್ರಕಾಶಕನೊಬ್ಬನೇ. ನಾನು ಇದರಲ್ಲಿ ಕಳೆದುಕೊಳ್ಳುವಂಥದ್ದೇನೂ ಇಲ್ಲ. ಯಾಕೆಂದರೆ ಆ ಪ್ರಕಾಶಕ ತನಗನಿಸಿದ ರೀತಿಯಲ್ಲಿ ನನ್ನೊಡನೆ ವ್ಯವಹಾರ ಇಟ್ಟುಕೊಂಡೇ ಇರ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ, ಈ ಚೋರ ಪ್ರಕಾಶನ ಬೇರೆಯವರು ತಲುಪಲಾರದವರನ್ನೂ ಮುಟ್ಟುತ್ತೆ. ಈ ರೀತಿಯಾಗಿ, ಒಬ್ಬ ನ್ಯಾಯಯುತ ಪ್ರಕಾಶಕ ಸೃಷ್ಟಿಸಿಬಿಟ್ಟ ಶೂನ್ಯವನ್ನು ಇವನು ತುಂಬ್ತಾನೆ.

ಪ್ರ : ಚೋರ ಪ್ರಕಾಶಕರ ಬಗ್ಗೆ ನಿಮ್ಮ ವಿರೋಧವೇನೂ ಇಲ್ಲ ಎಂದಿದ್ದರ ಅರ್ಥವೇನು?

ಮಾ : ನನ್ನ ಸಾಹಿತ್ಯದ ಏಜೆಂಟರು ಮತ್ತು ಪ್ರಕಾಶಕರು ಇಂಥ 'ಚೋರ ಪ್ರಕಾಶಕರು' ನನಗೆ ಹಾನಿಯುಂಟು ಮಾಡ್ತಾರೆ ಅಂತ ಹೇಳ್ತಾರೆ. ಆದರೆ ಯಾರು ಏನೇ ಹೇಳಿದ್ರೂ ಇಂಥ ಪ್ರಾಕಾಶಕರು

ಮಾರಾಟವಾಗದಂಥ ಪುಸ್ತಕಗಳನ್ನ ಪ್ರಕಟಿಸೋದಿಲ್ಲ ಅನ್ನೋದನ್ನ ನಾನು ಚೆನ್ನಾಗಿ ಬಲ್ಲೆ. ನಷ್ಟವನ್ನನುಭವಿಸಿ, ಕೈ ಕಚ್ಚಿಸಿ ಕೊಳ್ಳೋಕೆ ಅವನು ಯಾವತ್ತೂ ಇಚ್ಛಿಸೋಲ್ಲ. ಅಂಥ ಸಂದರ್ಭದಲ್ಲಿ, ಅಗ್ಗ ದರದಲ್ಲಿ ಅವನು ಅವುಗಳನ್ನ ಮಾರ್ತಾರೆ. ಹೆಚ್ಚು ಬೆಲೆ ತೆತ್ತು ಕೊಂಡು ಕೊಳ್ಳಲಾರದ ಓದುಗರು ಈ ರೀತೀನಾದ್ರೂ ಕೊಂಡು ಓದುತ್ತಾರೆ. ಉದಾಹರಣೆಗೆ, ಹತ್ತು ಜನ ಕೊಲಂಬಿಯನ್ ವಿದ್ಯಾರ್ಥಿಗಳು *'One Hundred years of Solitude'* ಒಂದು ಪ್ರತಿಯನ್ನ ತಮ್ಮ ಹಣವನ್ನೆಲ್ಲಾ ಒಟ್ಟುಗೂಡಿಸಿ ಕೊಂಡ ನಿದರ್ಶನವೊಂದು ನನಗೆ ಗೊತ್ತು. ನಾನು ಆ ಪ್ರತಿಯನ್ನು ನೋಡಿದ್ದೀನಿ. ಅದು ಶಿಥಿಲವಾಗಿ, ಚಿಂದಿಚಿಂದಿಯಾಗಿ ಹೋಗಿತ್ತು; ಆ ಹತ್ತೂ ಜನ ಬರೆದ ಟಿಪ್ಪಣಿಗಳಿಂದ ತುಂಬಿ ಹೋಗಿತ್ತು. ನಾನು ಒಬ್ಬೊಬ್ಬರಿಗೂ ಒಂದೊಂದು ಪ್ರತಿಯನ್ನ ಉಡುಗೊರೆಯಾಗಿ ಕೊಟ್ಟು, ಪ್ರತಿಯಾಗಿ ಅವರಲ್ಲಿದ್ದ ಆ ಪುಸ್ತಕವನ್ನ ಪಡೆದುಕೊಂಡೆ. ಅದು ಈಗಲೂ ನನ್ನ ಬಳಿ ಇದೆ.

ಮತ್ತೆ *'One Hundred years of Solitude'* ಪುಸ್ತಕದ ಬಗ್ಗೆ ಹೇಳುವುದಾದರೆ, - ಈ ಪುಸ್ತಕದ ಬಾಳ್ವಿಕೆಯ ಬಗ್ಗೆ ನನಗೆ ಹೆಚ್ಚು ಆಸಕ್ತಿಯಿದೆ. ಸಾಹಿತ್ಯಚರಿತ್ರೆಯಲ್ಲಿ ಬಹಳಷ್ಟು ಕೃತಿಗಳು ಇದ್ದಕ್ಕಿದ್ದಂತೇ ಪ್ರಸಿದ್ಧಿ ಪಡೆಯುತ್ತವೆ; ಕ್ರಮೇಣ ಹೇಳ ಹೆಸರಿಲ್ಲದಂತಾಗಿ, ಯಾರ ಗಮನಕ್ಕೂ ಬಾರದಂತಾಗುತ್ತವೆ. ಕೆಲವೊಮ್ಮೆ ನನ್ನನ್ನು ನಾನೇ ಕೇಳಿಕೊಳ್ಳುತ್ತಿರುತೇನೆ. 'ಬಿಸಿದೋಸೆಯಂತೆ ಖರ್ಚಾಗುತ್ತಿದ್ದ, ಮತ್ತೆ ಮತ್ತೆ ಓದಿಸಿಕೊಂಡು ಹೋಗುತ್ತಿದ್ದ, ಬೆರಗು ಹುಟ್ಟಿಸುವ ಆ ರೋಚಕ ವೀರಗಾಥೆಗಳು ಎಲ್ಲಿ ಹೋದವು?' ಅಂತ. ಅವು ಆ ಕಾಲದ *'One Hundred years of Solitude'* ಆಗಿದ್ದವು. ಈಗ ಅವು ಯಾರಿಗೂ ಗೊತ್ತಿಲ್ಲ ... ಹುಂ ...ನಾನು ನನ್ನ ಪುಸ್ತಕದ ಮೇಲಾಗುವ ಕಾಲದ ಪರಿಣಾಮದ ಬಗ್ಗೆ, ಚಿಂತಿತನಾಗಿದ್ದೇನೆ.

'One Hundred years of Solitude' ಪುಸ್ತಕಕ್ಕೆ ಸಂಬಂಧಿಸಿದಂತೆ ಹೇಳಬೇಕೆಂದರೆ, ಅದು ಗಳಿಸುವ ಯಶಸ್ಸಾಗಲಿ, ಬಹಳಷ್ಟು ಪ್ರತಿಗಳು ಖರ್ಚಾಗಿದ್ದೋ ಖರ್ಚಾಗುತ್ತಿರುವುದೋ ಆಗಲಿ,

ಅದು ಭಾಷಾಂತರಗೊಂಡ ಭಾಷೆಗಳ ಸಂಖ್ಯೆಯಾಗಲೀ ನನಗೆ ದೊಡ್ಡದೆನಿಸುವುದಿಲ್ಲ. ಅದು ಇದುವರೆಗೆ ೩೦ಕ್ಕೂ ಹೆಚ್ಚು ಭಾಷೆಗಳಿಗೆ ತರ್ಜುಮೆಗೊಂಡಿದೆ, ಈಗ ಸೋವಿಯತ್ ದೇಶ ತನ್ನ ಪ್ರಾದೇಶಿಕ ಭಾಷೆಗಳಿಗೆ ಅದನ್ನು ಅನುವಾದಿಸುತ್ತಿದೆ - ನನಗೆ ಅದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹಸ್ತಾಂತರಗೊಳ್ಳುವುದು ಮುಖ್ಯ. ತಂದೆ ಓದಿದ್ದು ಮಗನಿಗೆ ಇಷ್ಟವಾಗಬೇಕು. ಮಗನಿಂದ ಅದು ಮೊಮ್ಮಕ್ಕಳಿಗೆ ತಲುಪಬೇಕು. 'ಸಾಹಿತ್ಯದಲ್ಲಿ ಉಳಿಯುವಿಕೆ' ಎಂದರೆ, ಹೀಗೆ - ಅಂತ ನನ್ನ ಅನಿಸಿಕೆ.

ಒಂದು ಪುಸ್ತಕ ವಿಮರ್ಶಕರಿಂದ ಎಷ್ಟೇ ಹೊಗಳಿಸಿಕೊಳ್ಳಲಿ, ಅದರ ಓದುಗರ ಸಂಖ್ಯೆ ಎಷ್ಟೆ ದೊಡ್ಡದಿರಲಿ, ಮಕ್ಕಳು ತಮ್ಮ ಹಿರಿಯರ ಅಭಿರುಚಿಯ ವಿರುದ್ಧ ಬಂಡೇಳುವುದು ಒಂದು ಸ್ವಾಭಾವಿಕ ಹಾಗೂ ಸಾಂಪ್ರದಾಯಿಕ ಲಕ್ಷಣ. ಆದಾಗ್ಯೂ, ತಂದೆ ಮತ್ತು ಮೊಮ್ಮಕ್ಕಳಾದಿಯಾಗಿ - ಅಬಾಲವೃದ್ಧರಾದಿಯಾಗಿ - ಓದಿಸಿಕೊಂಡು ಹೋದ ಅನೇಕ ಕೃತಿಗಳಿವೆ - ಅವು ನನಗೆ ಪ್ರಮುಖವೆನಿಸುತ್ತವೆ.

ಪ್ರ : ಪ್ರತಿಯೊಂದು ಜನಾಂಗವೂ ತನ್ನ ಭಾವನೆಗಳ ಪ್ರತಿಧ್ವನಿಯನ್ನು ಒಂದು ಕೃತಿಯಲ್ಲಿ ಕಂಡುಕೊಳ್ಳಲಿಕ್ಕೆ ಪ್ರಯತ್ನಿಸುತ್ತಿರುತ್ತೆ. ಬಹುಶಃ, ಈ ಕಾರಣದಿಂದಾಗಿಯೆ, ವಿಮರ್ಶಕರು ಹುಟ್ಟಿಕೊಳ್ಳೋದು.

ಮಾ : ದುರದೃಷ್ಟವಶಾತ್, ಕೇವಲ ವಿಮರ್ಶಕರ ಹಾಗೂ ಬುದ್ಧಿಜೀವಿಗಳೆನಿಸಿಕೊಂಡ ಓದುಗರ ಪ್ರತಿಕ್ರಿಯೆಗಳಷ್ಟೆ ನನಗೆ ಗೊತ್ತು. ಆದರೆ, ಒಬ್ಬ ಸಾಮಾನ್ಯ ಓದುಗನ ಪ್ರತಿಕ್ರಿಯೆಗಳೇನು?' ಅನ್ನೋದು ಆ ಲೇಖಕನಿಗೆ ತಿಳಿಯೋದೇ ಇಲ್ಲ. ತನ್ನ ಅನಿಸಿಕೆಗಳನ್ನ ಅಭಿವ್ಯಕ್ತಿಸಲು ಅವನಿಗಿರುವ ಅಧೈರ್ಯ ಇದಕ್ಕೆ ಕಾರಣ ಅನಿಸುತ್ತೆ. ಅದು, ಕೀರ್ತಿ ನಿರ್ಮಿಸಿದ ಕಂದಕದಿಂದ ಬಂದಿರಲಿಕ್ಕೂ ಸಾಕು. ಕೆಲವೊಮ್ಮೆ, ನಾನೂ ನನ್ನ ಹೆಂಡತಿ ಮರ್ಸಿಡೆಜ್, ಮನೆಯಲ್ಲಿದ್ದು ಬೇಸರವಾದಾಗ, ಈ ಸಂಜೆ ಯಾರಾದರೂ ನಮ್ಮನ್ನು ತಮ್ಮಲ್ಲಿಗೆ ಆಹ್ವಾನಿಸಬಾರದೇ ಹಂಬಲಿಸುತ್ತಿರುತ್ತೇವೆ. ನಮಗೆ ಹಿಂಡುಗಟ್ಟಲೇ ಸ್ನೇಹಿತರಿದ್ದಾರೆ, ಆದರೆ ಯಾರೊಬ್ಬರೂ ನಮ್ಮನ್ನ ಆಹ್ವಾನಿಸೋಲ್ಲ. ಯಾಕೆಂದರೆ, 'ಆ ದಿನ

ನಾವು ನೂರಾರು ಔಪಚಾರಿಕ ಔತಣಕೂಟದಲ್ಲಿ ಭಾಗವಹಿಸುತ್ತಿರುತ್ತೇವೆ. ಅಂತ ಅವರು ಅಂದುಕೊಂಡಿರ್ತಾರೆ. ಆದ್ದರಿಂದ, ನೀವು ಎಷ್ಟೋ ವೇಳೆ ನಿಮ್ಮ ಪ್ರೀತಿ ಪಾತ್ರರಿಂದ ದೂರವಾಗಿ, ಏಕಾಂಗಿತನವನ್ನು ಅನುಭವಿಸಬೇಕಾಗುತ್ತೆ. ಈ ಏಕಾಂಗಿತನ ಕೀರ್ತಿಯ ಬೆನ್ನಹಿಂದೇ ಬಂದದ್ದು. ಇದಕ್ಕೂ, ಅಧಿಕಾರದಿಂದ ಬಂದ ಏಕಾಂಗಿತನಕ್ಕೂ ಬಹಳ ಸಾಮ್ಯತೆಯಿದೆ.

ಪ್ರ : ಓದುಗರ ಪತ್ರಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ?

ಮಾ : ಒಂದೋ, ಓದುಗ ನನ್ನ ಹಸ್ತಾಕ್ಷರಕ್ಕೆ ಹಂಬಲಿಸ್ತಾನೆ, ಇಲ್ಲವೇ ನನ್ನ ಸೃಜನಶೀಲ ಬರಹದ ಮೇಲೆ ತಾನು ಬರೆದ ಪಿ.ಹೆಚ್.ಡಿ. ಪ್ರಬಂಧವನ್ನೋ ಅಥವಾ ಪಡೆದ ಪದವಿಯನ್ನೋ ಸಮರ್ಥಿಸಿಕೊಳ್ತಾ ಪ್ರಶ್ನೆಗಳನ್ನ ಕೇಳಲು ಇಷ್ಟಪಡ್ತಾನೆ. ಇಲ್ಲವಾದಲ್ಲಿ ಪ್ರೇಮಪತ್ರಗಳಿರುತ್ತವೆ. ನನ್ನ ಪತ್ನಿ ಮರ್ಸಿಡೆಜ್ ಅವುಗಳ ಬಹುದೊಡ್ಡ ಸಂಗ್ರಹವನ್ನೇ ಇಟ್ಟುಕೊಂಡಿದ್ದಾಳೆ. ಅವುಗಳಿಗೆ ಉತ್ತರಿಸಲು ಆಕೆ ನನಗೆ ಅವಕಾಶವನ್ನೇ ಕೊಟ್ಟಿಲ್ಲ ಎಂಬುದು ಬೇರೆ ವಿಷಯ. ಆದರೆ ಅವೆಲ್ಲವನ್ನೂ ಜೋಪಾನವಾಗಿ ಇಟ್ಟಿದ್ದಾಳೆ ಅನ್ನೋದು ಮುಖ್ಯ.

ದುರದೃಷ್ಟವಶಾತ್, ಲೇಖಕ ಮತ್ತು ಓದುಗನ ಸಂಪರ್ಕದ ನಡುವೆ ಉಂಟಾಗುವ ದೊಡ್ಡ ಅಡಚಣೆಯೆಂದರೆ ಓದುಗನಲ್ಲಿರುವ ಹಿಂಜರಿಕೆ. ಬಹಳಷ್ಟು ಜನ ಓದುಗರು *'One Hundred years of Solitude'* ನ ಕಥೆ ತಮ್ಮ ಕುಟುಂಬದ ಕಥೆಯೇ ಅಂತ ಬರೆದದ್ದು ಹಾಗೂ ಹೇಳಿದ್ದು, ನಿಜ. ಒಪ್ಪಿದೆ. ಆದರೆ ಕ್ಯಾರಿಬಿಯನ್ ದ್ವೀಪದ ಓದುಗನೋ, ಲ್ಯಾಟಿನ್ ಅಮೆರಿಕೆಯ ಓದುಗನೋ, ಈ ರೀತಿ ಹೇಳಿದ್ದರೆ, ಅದರಲ್ಲಿ ಸೋಜಿಗಪಡುವಂಥದ್ದೇನೂ ಇರಲಿಲ್ಲ. ಆದರೆ, ಒಂದು ದಿನ ಜರ್ಮನಿಯ ಪರ್ವತಪ್ರದೇಶದಲ್ಲೆಲ್ಲೋ ವಾಸಿಸುವ ಮಹಿಳೆಯೊಬ್ಬಳಿಂದ ನನಗೆ ಒಂದು ಪತ್ರ ಬಂತು. ನನಗೀಗ ಆಕೆಯ ಹೆಸರು ಮರೆತುಹೋಗಿದೆ. ಅವಳು ಅದರಲ್ಲಿ, *'One Hundred years of Solitude'* ನ ಕಥೆ ಅವಳ ಕುಟುಂಬದ ಕಥೆಯೆಂತಲೂ, ಮ್ಯಕಂಡೋ ಅವಳ ಹಳ್ಳಿಯೇ ಅಂತಲೂ ಬರೆದಿದ್ದಳು.

ಇದು, ನಾನು ಏಕೆ *'One Hundred years of Solitude'* ಕೃತಿಯನ್ನು ಆಧರಿಸಿ ಸಿನಿಮಾ ಮಾಡುವುದನ್ನು ಉಗ್ರವಾಗಿ ವಿರೋಧಿಸಿದೆ ಎಂಬುದಕ್ಕೆ ವಿವರಣೆ ನೀಡುತ್ತೆ. ಅದಕ್ಕೆ ನಾನು ಯಾವಾಗಲೂ ವಿರೋಧವಾಗಿಯೂ ಇದ್ದೆ. ಆದರೆ ಈ ಮಧ್ಯೆ, ಅಮೇರಿಕಾದ ಕೆಲವು ನಿರ್ದೇಶಕರು ಚಿತ್ರ ತಯಾರಿಸಲು ತಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು; ನಾನು ಶಾಂತಿಯಿಂದಿರಲಿಕ್ಕೇ ಬಿಡಲಿಲ್ಲ. ಹೆಚ್ಚು ಹೆಚ್ಚು ಹಣ ಕೊಡುವ ಆಮಿಷ ತೋರುತ್ತಲೇ ಇದ್ದರು. ಪ್ರಾರಂಭದಲ್ಲಿ, ಅಂದ್ರೆ ಸುಮಾರು ೧೨ ವರ್ಷಗಳ ಹಿಂದೆ, ಎಷ್ಟೊಂದು ಒತ್ತಡ ತಂದರು ಅಂದ್ರೆ, ಅವರಿಂದ ತಪ್ಪಿಸಿಕೊಳ್ಳೋದಿಕ್ಕಾಗಿ, 'ಮಿಲಿಯನ್ ಡಾಲರ್ ಕೊಟ್ಟರೆ ಮಾತ್ರ ಅನುಮತಿ ಕೊಡುತ್ತೇನೆ' ಅಂತ ಹೇಳಬೇಕಾಯ್ತು. ಇದನ್ನು ಕೇಳಿ ಅನೇಕ ನಿರ್ದೇಶಕರು ಹಿಮ್ಮೆಟ್ಟಿದರು. ಕೆಲಕಾಲದ ನಂತರ ಅವರು ಅಷ್ಟು ಹಣವನ್ನು ಕೊಡಲು ಮುಂದೆ ಬಂದದ್ದರಿಂದ ಅದನ್ನು ಎರಡು ಮಿಲಿಯನ್‌ಗೆ ಏರಿಸಬೇಕಾಯ್ತು. ಆದರೆ ಈಗವರು ಮೂರು ಮಿಲಿಯನ್ ಕೊಡಲಿಕ್ಕೂ ತಯಾರಾಗಿದ್ದಾರೆ.

ನನ್ನ ಈ ವಿರೋಧಕ್ಕೆ ನಿಜವಾದ ಕಾರಣವೇನೆಂದರೆ, ನನ್ನ ಪ್ರತಿಯೊಬ್ಬ ಓದುಗನೂ ಈ ಕಾದಂಬರಿಯ ನಾಯಕರ ಬಗ್ಗೆ ತನ್ನದೇ ಆದ ಕಲ್ಪನೆಯನ್ನ ಮೂಡಿಸಿಕೊಳ್ಳಬೇಕು ಅನ್ನೋ ನನ್ನ ಹಂಬಲ. ಒಬ್ಬ ಓದುಗ ಉರ್ಸುಲಾಳನ್ನು ತನ್ನ 'ಅಜ್ಜಿ' ಅಂತ ಭಾವಿಸಿದರೆ, ಇನ್ನೊಬ್ಬ ಓದುಗ ಅವಳನ್ನು ತನ್ನ 'ಸೋದರಿ' ಅಂತ ಭಾವಿಸೋ ರೀತಿ ನನಗೆ ತುಂಬಾ ಇಷ್ಟ. ಆದರೆ ತೆರೆಯ ಮೇಲೆ ಪ್ರತಿಯೊಂದು ಪಾತ್ರಕ್ಕೂ ನಿರ್ದಿಷ್ಟ ಮುಖವಿರುತ್ತೆ. ಈ ವಿಷಯದಲ್ಲಿ ನನ್ನ ಊಹೆ ತಪ್ಪಿರಬಹುದು. ಆದರೆ, ಇದು ಜನರಿಗೆ ನಿರಾಶೆಯನ್ನುಂಟು ಮಾಡೋದಂತೂ ನಿಜ ಅಂತ ನನಗನ್ನಿಸುತ್ತೆ. ಎಂಥ ಸಂದರ್ಭದಲ್ಲೂ ನನ್ನ ಓದುಗನಿಗೆ ನಿರಾಸೆಯುಂಟು ಮಾಡೋ ರಿಸ್ಕ್ ತೆಗೆದುಕೊಳ್ಳಲಿಕ್ಕೆ ನಾನು ಸಿದ್ಧನಿಲ್ಲ. ಅವರು, ಉರ್ಸುಲಾ ಸೋಫಿಯಾ ಲಾರೆನ್‌ಳನ್ನು ಹೋಲ್ತಾಳೆ ಅಂತ ಭಾವಿಸೋದಕ್ಕಿಂತ, ತನ್ನ ಅಜ್ಜಿಯನ್ನೋ

ತಂಗಿಯನ್ನೊ ಹೋಲ್ತಾಳೆ ಅನ್ನೋದೆ ಚೆಂದ. ಅವಳು ತುಂಬಾ ಸುಂದರಿಯಾಗಿರ ಬೇಕೆಂದೇನೂ ಇಲ್ಲ; ಆದರೆ ಅವರು ಕಲ್ಪಿಸಿಕೊಳ್ಳುವ ರೀತಿ, ಅವರೊಂದಿಗೆ ಲೇಖಕನಿಗೆ ಇರೋ ನಿಜವಾದ ಸಂಬಂಧವನ್ನು ಸೂಚಿಸುತ್ತೆ. ಕೇವಲ ಇದು - ನಿಜವಾದ ಸಂಬಂಧ ಅಂತ ನಾನು ಭಾವಿಸ್ತೀನಿ.

ಪ್ರ : ಒಂದು ಕಾದಂಬರಿಯ ಸಿನಿಮಾ ಅವತರಣಿಕೆ ಆ ಕಾದಂಬರಿಯ ಪ್ರತಿಮಾಗುಣವನ್ನೇ ನಾಶಪಡಿಸುತ್ತೆ ಅಂತ ನಿಮ್ಮ ಭಾವನೆಯೆ?

ಮಾ : ಹೌದು, ನಿಸ್ಸಂದೇಹವಾಗಿ ಪ್ರತಿಮಾಗುಣದ ಕೊಲೆಯೆಂತಲೇ ಅದರರ್ಥ. ಯಾಕೆಂದರೆ, ಒಂದು ಚಲನಚಿತ್ರದಲ್ಲಿ 'ನೋಡು, ಅವನು ಹೀಗಿದ್ದ' ಅಂತ ಹೇಳಿದಾಕ್ಷಣ ನೀವು ನಿರಾಶರಾಗಲೇಬೇಕಾಗುತ್ತೆ. ನಾನು, *'One Hundred years of Solitude'* ಪುಸ್ತಕದ ಹಕ್ಕನ್ನು ಮೂರು ಮಿಲಿಯನ್‌ಗೆ ಮಾರುತ್ತಿದ್ದೇನೆಂತಲೂ, ಅದರಿಂದ ಲ್ಯಾಟಿನ್ ಅಮೆರಿಕಾದಲ್ಲಿ ಒಂದು ಕ್ರಾಂತಿಯನ್ನೇ ಹುಟ್ಟು ಹಾಕಬಹುದೆಂದೂ ಹೇಳಿದಾಗ, ಅರ್ನೆಸ್ಟೋ ಕಾರ್‌ಡೆನಲ್ ನನಗೆ ಫೋನಿಸಿ ಹೇಳಿದ- 'ಆ ಪುಸ್ತಕದ ಹಕ್ಕನ್ನು ಮಾರಿಬಿಡು, ಕ್ರಾಂತಿಯನ್ನ ಹುಟ್ಟು ಹಾಕಲು ಪ್ರಯತ್ನಿಸೋಣ' ಅಂತ. ಆದರೆ ಆ ಪುಸ್ತಕ ಇಲ್ಲದೆಯೇ ಅವರು ಕ್ರಾಂತಿಯನ್ನೆಸಗಿದರು. ಹಾಗಾಗಿ, ಆ ಪುಸ್ತಕ ಇನ್ನೊಂದು ಕ್ರಾಂತಿಯ ಉಗಮದ ಕ್ಷಣಕ್ಕಾಗಿ ಇನ್ನೂ ಕಾಯುತ್ತಲೇ ಇದೆ.

ಪ್ರ : ನಿಮ್ಮನ್ನು ಗಾಢವಾಗಿ ಪ್ರಭಾವಿಸಿದ ಯಾರಾದರೂ ಮೂರು ಜನ ಲೇಖಕರನ್ನು ಒಬ್ಬ ಓದುಗನಾಗಿ, ಲೇಖಕನಾಗಿ, ನೀವು ಹೆಸರಿಸುತ್ತೀರಾ?

ಮಾ : ನನಗಿನ್ನೂ 'ಸಾಹಿತ್ಯಿಕ ಪ್ರಭಾವದ' ಅರ್ಥವೇ ಸರಿಯಾಗಿ ನಿಲುಕದ್ದರಿಂದ, ಇಬ್ಬರನ್ನೋ, ಹತ್ತು ಜನರನ್ನೋ ಅಥವಾ ೨೦ ಜನರನ್ನೋ ಹೆಸರಿಸುವುದು ಸೂಕ್ತವೇ' ಅನ್ನೋದು ನನ್ನ ಅಳುಕು. ಇದಕ್ಕೆ ಏನಾದರೊಂದು ಸಾಮಾನ್ಯ ಉತ್ತರ ಕೊಟ್ಟು ಬಿಡುತ್ತೇನೆ. ಯಾಕೆಂದರೆ, ಸಾಹಿತ್ಯಿಕ ಪ್ರಾಭಾವ ಅಂದರೇನು, ಅದು ತನ್ನಷ್ಟಕ್ಕೆ ತಾನೇ ಹೇಗೆ ಪ್ರಕಟಗೊಳ್ಳತ್ತೆ' ಅಂತ ತಿಳಿದುಕೊಳ್ಳೋ ಆಸೆ ನನಗೂ ಇದೆ.

ಒಮ್ಮೆ, *'Autumn of the Patriarch'* ನ ಹೇಗೆ ಮುಂದುವರಿಸುವುದು ಎಂಬ ತೊಳಲಾಟದಲ್ಲಿದ್ದಾಗ, ಹೆಮಿಂಗ್‌ವೇನ ಮುನ್ನುಡಿಯಿದ್ದ *'Hunting in Africa'* ಎಂಬ ಪುಸ್ತಕವೊಂದು ಸಿಕ್ಕಿತು. ಮುನ್ನುಡಿ ಅಷ್ಟೇನೂ ಚೆನ್ನಾಗಿರಲಿಲ್ಲ, ಆದರೆ ಪುಸ್ತಕ ಕೈಯಲ್ಲಿದ್ದುದರಿಂದ, ಬೇಟೆ ಹಾಗೂ ಆನೆಗಳ ಸ್ವಭಾವಗಳ ಬಗ್ಗೆ ನಾನು ಓದನ್ನು ಮುಂದುವರಿಸಿದೆ. ಆನೆಗಳ ಸ್ವಭಾವ, ನಡುವಳಿಕೆಯ ಬಗ್ಗೆ ಓದುತ್ತಿರುವಾಗ, ನನ್ನ ತಪ್ಪಿರುವುದೆಲ್ಲಿ ಹಾಗೂ ನಾನು ಹೇಗೆ ಬರೆಯಬೇಕು ಎಂಬುದು ತತ್‌ಕ್ಷಣ ಹೊಳೆಯಿತು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ತೀರಾ ಅನಿರೀಕ್ಷಿತ ರೀತಿಯಲ್ಲಿ ನನ್ನ ನಾಯಕನ ವ್ಯಕ್ತಿತ್ವ ಹಾಗೂ ನಡುವಳಿಕೆ ಹೇಗಿರಬೇಕು ಎಂಬುದಕ್ಕೆ ಸುಳಿವು ದೊರೀತು.

ಎಲ್ಲಾ ರೀತಿಯ ಪ್ರಭಾವವನ್ನೂ ಗುರುತಿಸುವುದು ತುಂಬಾ ಕಷ್ಟದ ಕೆಲಸ. ಎಷ್ಟೋ ವೇಳೆ ವಿಮರ್ಶಕರು ಕೆಲವೊಂದು ನಿರ್ದಿಷ್ಟ ಪುಸ್ತಕಗಳ ಪ್ರಭಾವ ಲೇಖಕನಲ್ಲಿ ಗುರುತಿಸಿರ್ತಾರೆ, ಆದರೆ ಅವುಗಳನ್ನ ಲೇಖಕ ತನ್ನ ಜನ್ಮದಲ್ಲೇ ಓದಿರೋಲ್ಲ. ಆದರೆ, ಇದು ಸಂಪೂರ್ಣವಾಗಿ ವಿಮರ್ಶಕನ ತಪ್ಪು ಅಂತ ಹೀಗಳೆಯೋ ಹಾಗಿಲ್ಲ. ಯಾಕೆಂದರೆ, ಎಷ್ಟೋ ಬಾರಿ, ಲೇಖಕ ಆ ಪುಸ್ತಕಗಳನ್ನ ತಾನೆ ಓದಿರದಿದ್ದರೂ, ಅವುಗಳನ್ನ ಓದಿದ ಇನ್ನೊಬ್ಬ ಲೇಖಕನಿಂದ ಪ್ರಭಾವಿತನಾಗಿರಲು ಸಾಧ್ಯ.

ನನ್ನ ಮೇಲೆ ಗಾಢ ಪ್ರಭಾವ ಬೀರಿದವರಲ್ಲಿ ಫ್ರಾನ್ಜ್ ಕಾಫ್ಕಾ ಒಬ್ಬ. ಬರೆಯುಬೇಕೆಂಬ ತುಡಿತ ನಾನಿನ್ನೂ ಸ್ಕೂಲಿನಲ್ಲಿ ಓದುತ್ತಿರುವಾಗಲೇ ಬಲವಾಗಿತ್ತು. ನಾನು ಓದಿದ ಲೇಖಕರೆಲ್ಲರನ್ನೂ ಮೀರಿಸಿ ಮುಂದೆ ಹೋಗಬೇಕು ಅನ್ನೋ ಆಕಾಂಕ್ಷೆ ಇತ್ತು. ವಿಶ್ವವಿದ್ಯಾಲಯಕ್ಕೆ ಸೇರಿದಮೇಲೆ, ಒಂದು ರಾತ್ರಿ, ಕಾಫ್ಕಾನ ಸಣ್ಣ ಕತೆಗಳ ಸಂಕಲನ *'Metamorphosis '* ಓದಲು ಸಿಕ್ಕಿತು. ಅದನ್ನು ಓದುತ್ತಾ ಹೋದಂತೇ, ಯೋಚನೆಯೊಂದು ರೂಪಗೊಳ್ಳುತ್ತಿತ್ತು, ಇದನ್ನೇ 'ಸಾಹಿತ್ಯ' ಅಂತ ಕರೆಯುತ್ತಾರೆ. ಅಂದ್ರೆ, ಇದು ನಿಜವಾಗಲೂ

ಬರೆಯಲು ಯೋಗ್ಯವಾದದ್ದು ಅಂತ. ಅದರಲ್ಲಿ ಬರೆದದ್ದೆಲ್ಲಾ ಸಾಧ್ಯ ಅಂತ ಮೊದಲು ನನಗೆ ಅನಿಸಿರಲಿಲ್ಲ, ಅದು ನಿಷೇಧಿಸಲ್ಪಟ್ಟಿದೆ ಅಂತಲೇ ಅಂದುಕೊಂಡಿದ್ದೆ. ಆದರೆ ಅದನ್ನ ಓದಿದಮೇಲೆ ಜನರಿಗೆ ಹೇಳಲು ನನ್ನ ಬಳಿಯೂ ವಿಷಯ ಸಾಮಗ್ರಿ ಇದೆ ಅನ್ನಿಸ್ತು. ಮಾರನೆಯ ದಿನದಿಂದಲೇ ನಾನು ಬರೆಯಲಿಕ್ಕೆ ಪ್ರಾರಂಭಿಸಿದೆ.

ಕಾಫ್ಕಾನ ಪ್ರಭಾವವನ್ನ ಇತ್ತೀಚೆಗಷ್ಟೇ ಹೊರಬಂದ ನನ್ನ ಸಣ್ಣಕತೆಗಳ ಸಂಕಲನದಲ್ಲಿ ಕಾಣಬಹುದು. ಅವೆಲ್ಲಾ ನನ್ನ ಪ್ರಾರಂಭಿಕ ಕಥೆಗಳು. ಸ್ವಲ್ಪಕಾಲದ ಹಿಂದೆ ಅವುಗಳನ್ನ ಮತ್ತೊಮ್ಮೆ ಓದಿದಾಗ, ಅವು ಬೌದ್ಧಿಕವಾಗಿ ತುಂಬಾ ಎತ್ತರದ ಸ್ತರದಲ್ಲಿವೆ ಅನಿಸ್ತು. ನನ್ನ ದೈನಂದಿನ ಸಾಮಾನ್ಯ ಜೀವನಕ್ಕೂ, ಅವುಗಳಲ್ಲಿದ್ದ ತಾರ್ಕಿಕತೆಗೂ ಯಾವುದೇ ಸಂಬಂಧ ಆಗಲೂ ಇರಲಿಲ್ಲ; ಈಗಲೂ ಇಲ್ಲ. ನಂತರ ನಾನು ಹುಟ್ಟಿದ ಹಳ್ಳಿಗೆ ವಾಪಸಾದೆ. ಕಾಫ್ಕಾನನ್ನೂ ಒಳಗೊಂಡು, ನಾನಿದುವರೆಗೆ ಹೊಂದಿದ್ದ ವಿಷಯಸಾಮಗ್ರಿ ಬಹಳ ತೆಳುವಾದದ್ದೆಂದೂ, ನಾನೀಗ ನೋಡುತ್ತಿದ್ದ ಸತ್ಯದ ಚಿತ್ರಣವೇ ಬೇರೆ ಎಂಬುದನ್ನೂ ನಾನು ಮನಗಂಡೆ. ನಾನು ಬರೆಯಬೇಕೆಂದುಕೊಂಡದ್ದಕ್ಕೆ ನನ್ನಲ್ಲಿದ್ದ ವಿಷಯಸಾಮಗ್ರಿ ವ್ಯತಿರಿಕ್ತವಾಗಿತ್ತು.

ನಾನು ನನ್ನ ಬಾಲ್ಯಜೀವನದ ಅನುಭವಗಳ ಬಗ್ಗೆ ಬರೆಯಬೇಕೆಂದು ಕೊಂಡಿದ್ದೆ. ನಾನಾಗ, ನನ್ನ ಹಳ್ಳಿ ಅರಕಟಕಕ್ಕೆ ನನ್ನ ಮನೆಗೆ, ನನ್ನ ತಾಯಿಯಲ್ಲಿಗೆ ಹಿಂದಿರುಗಿದ್ದೆ. ೮ ವರ್ಷದವನಾಗಿದ್ದಾಗ ಆ ಹಳ್ಳಿಯನ್ನು ಬಿಟ್ಟವನು ನಾನು, ಈಗ ೨೦-೨೨ರ ಪ್ರಾಯದವನಾಗಿ ಹಿಂದಿರುಗಿದ್ದೆ. ನನ್ನನ್ನು ದಿಗ್ಮೂಢಗೊಳಿಸಿ ಅನೇಕ ಅನುಭವಗಳಲ್ಲೊಂದಕ್ಕೆ ನಾನಲ್ಲಿ ನನ್ನನ್ನೀಡುಮಾಡಿಕೊಂಡೆ. ಆ ಹಳ್ಳಿಯ ಪ್ರತಿಯೊಂದೂ - ಜನ, ವಸ್ತು, ಎಲ್ಲ- ತುಸು ದೊಡ್ಡದಾಗಿದ್ದನ್ನೋ ಅಥವಾ ಸಣ್ಣದಾಗಿದ್ದನ್ನೋ ಹೊರತುಪಡಿಸಿ, ಮೊದಲು ಹೇಗಿದ್ದಿತೋ ಹಾಗೇ ಇದ್ದುದನ್ನ ಕಂಡುಕೊಂಡೆ. ಮೊದಲು ಅಗಲವಾಗಿ ತೋರುತ್ತಿದ್ದ ರಸ್ತೆಗಳು ಈಗ ಅತೀ ಕಿರಿದಾಗಿಯೂ, ಮನೆಯ ಮಾಡು, ತುಂಬಾ ಎತ್ತರವೆಂದು ನಾನಂದು ಕೊಂಡದ್ದು,

ಈಗ ಅತ್ಯಂತ ಕೆಳಗಿದ್ದಂತೆಯೂ, ದೊಡ್ಡ ಸ್ನಾನಗೃಹಗಳೂ, ನೀರಿನ ತೊಟ್ಟಿಗಳೂ, ಅತ್ಯಂತ ಚಿಕ್ಕವಾಗಿಯೂ ನನಗೆ ಕಂಡು ಬಂದವು. ನನ್ನ ಸುತ್ತಲಿನ ಪ್ರಪಂಚ ಒಮ್ಮೆಲೇ ಕುಗ್ಗಿದಂತೆ, ಸಂಕುಚಿಸಿದಂತೆ, ನನಗೆ ಭಾಸವಾಯಿತು. ಯಾರೋ ಒಬ್ಬರು ನನ್ನೆಲ್ಲಾ ಹಳೆಯ ನೆನಪುಗಳ ಒಂದು ಕುಬ್ಜ ಮಾದರಿಯಾಗಿ ಈ ಹಳ್ಳಿಯನ್ನು ಬದಲಾಯಿಸಿಬಿಟ್ಟಿದ್ದಾರೆ ಅಂತ ಅನ್ನಿಸುತ್ತಿತ್ತು. ಈ ಭಾವನೆ, ನಾನು ವಿಲಿಯಂ ಫಾಕ್‌ನರ್‌ನ ಕೃತಿಗಳನ್ನು ಓದುವವರೆಗೂ ನನ್ನ ಮನಸ್ಸಿನಲ್ಲಿತ್ತು. ಮುಂದೆ, ನನ್ನ ಮೇಲೆ ಫಾಕ್‌ನರ್‌ನ ಪ್ರಭಾವವನ್ನ ಗುರುತಿಸಿಕೊಂಡಾಗ, ವಾಸ್ತವವಾಗಿ ನಮ್ಮಿಬ್ಬರಲ್ಲೂ ತುಂಬಾ ಸಾಮ್ಯತೆಯಿದೆ ಅನ್ನಿಸ್ತು.

ಫಾಕ್‌ನರ್ ತನ್ನ ಕೃತಿಗಳಲ್ಲಿ ವರ್ಣಿಸಿದ, ಪಶ್ಚಿಮ ಅಮೆರಿಕೆಯ ಸ್ಥಳಗಳಲ್ಲೆಲ್ಲಾ ನಾನು ತಿರುಗಾಡಿದೆ. ಅದಕ್ಕೂ ನನ್ನ ಹಳ್ಳಿ ಅರಕಟಕಕ್ಕೂ ಇರುವ ಅದ್ಭುತವಾದ ಹೋಲಿಕೆಗಳನ್ನ ಕಂಡೆ. ಈ ಹೋಲಿಕೆ, ನಿಮಗೇ ಗೊತ್ತಿದ್ದಂತೆ, ತುಂಬಾ ಸರಳವಾದ ಕಾರಣದಿಂದ ಬಂದದ್ದು, ವಾಸ್ತವವಾಗಿ ಅರಕಟಕ, *United fruit company* ಯಿಂದ ನಿರ್ಮಿತವಾದದ್ದು. ಈ *United fruit company* ವಾಸ್ತುಶಿಲ್ಪ, ರೈಲ್ವೇ ವ್ಯಾಗನ್ ಹುಲ್ಲುಗಾವಲು, ಝಿಂಕ್ ಲೇಪಿತ ಛಾವಣಿಯ ಆದಿಯಾಗಿ-ಎಲ್ಲವನ್ನೂ ಎಲ್ಲಾ ಕೌಟುಂಬಿಕ ಸಂಸ್ಕೃತಿಯನ್ನೂ ಪಶ್ಚಿಮ ಅಮೆರಿಕೆಯಿಂದಲೇ ಪಡೆದದ್ದು.

ಆದರೆ ಇದೆಲ್ಲವನ್ನೂ ನಾನು ನೋಡಿದ್ದು ತುಂಬಾ ಕಾಲದ ನಂತರ. ಅಂದರೆ, ಅಭಿವ್ಯಕ್ತಿಯ ಮಾರ್ಗಗಳನ್ನೂ, ವಿಭಾಗಗಳನ್ನೂ ಅನ್ವೇಷಿಸಲು ಶುರು ಮಾಡಿದ ನಂತರ ನಾನು ಫಾಕ್‌ನರ್‌ನಿಂದ ಈ ವಿದ್ಯೆಯನ್ನ ಕಲಿತೆ. ಯಾಕೆಂದರೆ, ಯಾವುದನ್ನು ವರ್ಣಿಸಬೇಕೆಂದು ನಾನು ತಹತಹಿಸಿದೆನೋ ಅದೆಲ್ಲವನ್ನೂ ಅವನು ವರ್ಣಿಸುತ್ತಿದ್ದ, ಮಾತನಾಡುತ್ತಿದ್ದ ಪ್ರಪಂಚದಲ್ಲಿ ನಾನು ಕಂಡಿದ್ದೆ. ಆದ್ದರಿಂದಲೇ ನನ್ನ ಮೇಲೆ ಫಾಕ್‌ನರ್‌ನ ಪ್ರಭಾವವನ್ನ ಗುರುತಿಸುವುದು ತುಂಬಾ ಸಮಂಜಸವೆಂತಲೇ ನನ್ನ ಭಾವನೆ.

ಇದಾದಮೇಲೆ, ನಾನು ತುಂಬಾ ವಿಚಿತ್ರವಾದ ಪ್ರಭಾವವೊಂದಕ್ಕೊಳಗಾದೆ. ಯಾವೊಬ್ಬ ವಿಮರ್ಶಕನೂ ಈ ಪ್ರಭಾವವನ್ನ ಸಂಶೋಧಿಸಿಲ್ಲವಾದರೂ ನಾನು ಈ ಪ್ರಭಾವವನ್ನ ಚೆನ್ನಾಗಿ ಗುರುತಿಸಬಲ್ಲೆ- ಅದು ವರ್ಜಿನಿಯಾ ವೂಲ್ಫ್‌ಳ ಪ್ರಭಾವ. ವರ್ಜೀನಿಯಾ ಪೂಲ್ಫ್ ಜಗತ್ತಿನ ಹಾಗೂ ಅದರಲ್ಲಿರುವ ವಸ್ತುಗಳ ಬಗ್ಗೆ ಒಂದು ಮೂಲಭೂತವಾದ ಹಾಗೂ ಅಪರೂಪವಾದ ತೀಕ್ಷ್ಣಪ್ರಜ್ಞೆಯೊಂದನ್ನು ಹೊಂದಿದ್ದಾಳೆ. ಮುಖ್ಯವಾಗಿ ಅವಳ ಕಾಲಪ್ರಜ್ಞೆ ನನ್ನ ಬರವಣಿಗೆಗೆ ತುಂಬಾ ಸಹಾಯ ಮಾಡಿತು.

ನಾನೀಗ ಹೇಳಿದ ಈ ಮೂರು ಲೇಖಕರಲ್ಲಿ ಯಾರೊಬ್ಬರೂ ಸ್ಪ್ಯಾನಿಷ್ ಲೇಖಕರಿಲ್ಲ ಅಂತ ನಿಮಗೆ ಆಶ್ಚರ್ಯವಾಗಿರಬಹುದು. ಆದರೆ ಒಂದು ರೀತಿಯಲ್ಲಿ ಅತ್ಯಂತ ಗಾಢವಾದ ಇನ್ನೊಂದು ಪ್ರಭಾವ ನನ್ನ ಮೇಲಿದೆ. ಇದು, ಸ್ವರ್ಣಯುಗದ ಸ್ಪ್ಯಾನಿಷ್ ಕಾವ್ಯ. ಬೇರೊಂದು ರೀತೀಲಿ ಹೇಳೋದಾದ್ರೆ, ಯಾವ ಸ್ಪ್ಯಾನಿಷ್ ಭಾಷೆ ಹಾಗೂ ಕವಿತೆಗಳು ನನ್ನನ್ನ ವಿದ್ಯಾವಂತನನ್ನಾಗಿಸಿದ್ದವೋ ನನ್ನ ಕೃತಿಗಳಿಗೆ ಆಧಾರವೊದಗಿಸಿದ್ದವೋ ಅವುಗಳೆಲ್ಲದರ ಬೇರು ಈ ಸ್ವರ್ಣಯುಗದ ಕಾವ್ಯದಲ್ಲಿ ಹಾಗೂ ರೊಮ್ಯಾನ್ಸೆರೋನ ಕವಿತೆಗಳಲ್ಲಿ ಇತ್ತು. ಬರೆಯಬೇಕೆಂದು ತುಡಿದ, ಆದರೆ ಹೇಗೆ ಬರೆಯಬೇಕು ಎಂದು ತಿಳಿಯದೇ ಒದ್ದಾಡಿದ. ಆ ದಿನಗಳಲ್ಲಿ ನಾನು ಕವನ, ಕಾವ್ಯಗಳನ್ನು ತುಂಬಾ ಓದುತ್ತಿದ್ದೆ. ಕಾವ್ಯ ನನ್ನ ಆಹಾರವಾಗಿತ್ತು. ಹಾಗಾಗಿ ಸ್ಪ್ಯಾನಿಷ್ ಕವಿತೆಗಳು ನನಗೆ ಚೆನ್ನಾಗಿ ಗೊತ್ತು, ಅವುಗಳಲ್ಲಿ ಅನೇಕ ಕವಿತೆಗಳನ್ನು ನಾನು ಕಂಠಪಾಠ ಮಾಡಿದ್ದೇನೆ. ಇವೆಲ್ಲಾ ನನ್ನ ಕಾರ್ಯದಲ್ಲಿ ಸಹಕಾರಿಯಾದವು. ಇದರ ಜೊತೆಗೇ, ಕೊಲಂಬಿಯಾದ ಅಟ್ಲಾಂಟಿಕ್ ಕರಾವಳಿಯ, ಹಾಗೂ ಕ್ಯಾರಿಬಿಯನ್ ದ್ವೀಪಗಳ ಜನಪದ ಗೀತೆಗಳೂ ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಇವೆಲ್ಲಾ ತಮ್ಮದೇ ಆದ ವಿಶಿಷ್ಟ ನಿರೂಪಣಾ ಶೈಲಿಯನ್ನು ಹೊಂದಿವೆ. ಇವು ವರ್ಣಿಸಲು ಹೋಗುವುದಿಲ್ಲ; ಯಾಕೆಂದರೆ ವರ್ಣನೆ ಸಂಗೀತದೊಡನೆ ಹೊಂದುವುದಿಲ್ಲ. ಬದಲಾಗಿ, ಅವರ ಹಾಡುಗಳು ಭಾವನಾತ್ಮಕ

ನೆಲೆಗಟ್ಟಿನಮೇಲೆ ನಿಂತಿವೆ. ಈ ಎಲ್ಲಾ ನಿರ್ಧಾರಗಳನ್ನು ನಾನು ತುಂಬಾ ತಡವಾಗಿ ರೂಪಿಸಿಕೊಂಡೆ ಎಂಬುದು ನಿಜ. ಆ ಗಳಿಗೆಯಲ್ಲಿ, ಆ ಹಾಡುಗಳು ನಾನು ಚಿತ್ರಿಸಬೇಕೆಂದುಕೊಂಡ ಪ್ರಪಂಚವನ್ನೇ ಚಿತ್ರಿಸುತ್ತಿವೆ ಎಂಬುದನ್ನಷ್ಟೇ ನಾನು ಗಮನಿಸಿದ್ದೆ.

ನನ್ನ ಮೇಲಾದ ಕ್ಯಾರಿಬಿಯನ್ ಆದಿವಾಸಿಗಳ ಸಂಗೀತದ ಪ್ರಭಾವವನ್ನೂ ನಾನಿಲ್ಲಿ ಒಪ್ಪಿಕೊಳ್ಳಲೇಬೇಕು. ಇದು, *Autumn of the patriarch* ನಲ್ಲಿ ತುಂಬಾ ಪ್ರಜ್ಞಾಪೂರ್ವಕವಾಗಿ ಮಿಳಿತಗೊಂಡಿದೆ. ಈ ದಿಸೆಯಲ್ಲಿ, *Autumn of the patriarch* ನ್ನು ಇತರ ಭಾಷೆಗಳಿಗೆ ತರ್ಜುಮೆ ಮಾಡುವ ಅನುವಾದಕರ ಸಂಕಷ್ಟಗಳನ್ನು ನಾನಿಲ್ಲಿ ಕಲ್ಪಿಸಿಕೊಳ್ಳಬಲ್ಲೆ. ಪುಸ್ತಕದ ತುಂಬಾ ಕ್ಯಾರಿಬಿಯನ್ ಜಾನಪದ ಗೀತೆಗಳು ಇಡಿಕಿರಿದಿವೆ. ಅದರಲ್ಲಿ ಕ್ಯೂಬಾದ ಹಾಡಿವೆ, ಮೆಕ್ಸಿಕೋದ ಗೀತೆಗಳಿವೆ, ಪೋರ್ಟೋರಿಕೋದ ಹಾಡೊಂದಿದೆ. ಇವೆಲ್ಲಾ, ನಿಜ ಹೇಳಬೇಕೆಂದರೆ, ಪ್ರಜ್ಞಾಪೂರ್ವಕವಾಗಿಯೇ ಸೇರಿಸಲ್ಪಟ್ಟವು. ಅದು, ಲೇಖಕ ತುಂಬಾ ಹರ್ಷಿಸಿದ ಒಂದು ರೀತಿಯ ಸಾಹಿತ್ಯಿಕ ವಿನೋದವಾಗಿತ್ತು. ಆದರೆ, ಹಾಡುಗಳು ಪುಸ್ತಕದ ತುಂಬಾ ಹರಡಿಹೋಗಿವೆ, ಇದಲ್ಲದೆ ಪುಸ್ತಕದುದ್ದಕ್ಕೂ ರೊಬೆನ್ ದೇರಿಯೋನ ಭಾವಗೀತೆಗಳು ಚೆಲ್ಲುವರಿದಿವೆ. ಎಲ್ಲಾ ಅನುವಾದಕರೂ ಎದುರಿಸಬೇಕಾದ ಮುಖ್ಯ ತೊಂದರೆ ಏನೆಂದರೆ, ರೊಬೆನ್ ದೇರಿಯೋ ಸ್ಪ್ಯಾನಿಷ್ ಪ್ರಪಂಚದ, ಅಥವಾ ಲ್ಯಾಟಿನ್ ಅಮೆರಿಕೆಯ ಜನರನ್ನು ಹೊರತುಪಡಿಸಿ, ಹೊರಗಿನ ಇನ್ನ್ಯಾರಿಗೂ ತಿಳಿದಿಲ್ಲ ಎಂಬುದು ಅವನ ಕೃತಿಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಮಾತ್ರ ಇತರ ಭಾಷೆಗಳಿಗೆ ಅನುವಾದಗೊಂಡಿವೆ.

ಪ್ರ : ಸೋವಿಯತ್ ಓದುಗನಿಗೆ ರೊಬೆನ್ ದೇರಿಯೋ ಪರಿಚಿತ.

ಮಾ : ತುಂಬಾ ಒಳ್ಳೆಯದಾಯಿತು. *'Autumn of the patriarch'* ನ ಉದ್ದಕ್ಕೂ ರೂಬೆನ್ ದೇರಿಯೋನ ಭಾಷೆಯನ್ನೇ ಬಳಸಿರೋದ್ರಿಂದ ಸೋವಿಯತ್ ಅನುವಾದಕರಿಗೆ ಈ ಕೃತಿ ಖುಷಿಕೊಡಬಹುದು ಅಂತ ನನಗೆ ಸಂತಸವಾಗ್ತಿದೆ. ಇದನ್ನ ನಾನು ಬೇಕೆಂತಲೇ ಬಳಸಿದ್ದು.

ಸರ್ವಾಧಿಕಾರೀ ಯುಗದಲ್ಲಿ ಲೌನಾಶಾಹೀ ಸರ್ವಾಧಿಕಾರಿಗಳು ರಕ್ತಪಿಪಾಸುಗಳಂತೆ ವರ್ತಿಸುವ ಆ ಅವನತಿಯ ಕಾಲದಲ್ಲಿ, ಯಾರದು ಮಾದರಿ ಧ್ವನಿಯಾಗಬಲ್ಲದು ಅಂತ ನಾನು ಹುಡುಕುತ್ತಿದ್ದೆ. ಆಗ, ರೊಬೆನ್ ದೇರಿಯೋದು ಅಂಥ ಶ್ರೇಷ್ಠ ದನಿಗಳಲ್ಲೊಂದು ಅಂತ ನಾನು ಕಂಡುಕೊಂಡೆ. ಈಗ ಅವನ ಆಯ್ಕೆಯನ್ನ ಕಾರಣಸಹಿತ ಸಮರ್ಥಿಸಿಕೊಳ್ತಾ ಇರೋಹಾಗೆ, ನಾನೇನೂ ಆಗ ಯೋಚಿಸಿರಲೇ ಇಲ್ಲ. ಒಂದು ಕೃತಿಯನ್ನು ಕೇವಲ ಯಾಂತ್ರಿಕವಾಗಿ ಬರೆಯುವುದಲ್ಲ. ಆದರೆ, ಈಗ ಯೋಚಿಸಿದರೆ, ನಾನಾಗ ಒಳ್ಳೆಯದನ್ನೇ ಮಾಡಿದೆ ಅನ್ನಿಸುತ್ತೆ. ನಿಕಾರಾಗುವಾದ ಕವಿ ರೂಬೆನ್ ದೇರಿಯೋ ಆ ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಂಡ.

ಪ್ರಭಾವಗಳಿಗೆ ಸಂಬಂಧಿಸಿದ ನಿಮ್ಮ ಪ್ರಶ್ನೆಗೆ ನಾನಾಗ ಕೊಟ್ಟದ್ದು ಸಂಕ್ಷಿಪ್ತವಾದ, ಸುಮಾರಾದ ಉತ್ತರ. 'ಇಂಥಿಂಥವರು ನನ್ನ ಮೇಲೆ ತಮ್ಮ ಪ್ರಭಾವ ಬೀರಿದರು' ಅಂತ ಖಡಾಖಂಡಿತವಾಗಿ ಹೇಳಲು ನನ್ನಿಂದ ಸಾಧ್ಯವಾಗಿಲ್ಲ, ಯಾಕೆಂದರೆ, ಅದು ತುಂಬಾ ಸಂಕುಚಿತವಾಗಿಬಿಡಬಹುದು ಅನ್ನೋ ಭಯ ನನಗಿದೆ. ನನಗನ್ನಿಸುವುದು, ನಾವು ಓದುವ ಎಲ್ಲಾ ಪುಸ್ತಕಗಳೂ, ಭೇಟಿಯಾಗುವ ಪ್ರತಿಯೊಬ್ಬರೂ, ಸಂಭವಿಸೋ ಎಲ್ಲಾ ಘಟನೆಗಳೂ ನಮ್ಮ ಸಾಹಿತ್ಯವನ್ನ ಪ್ರಭಾವಿಸುತ್ತವೆ ಅಂತ ಅವೆಲ್ಲಾ ಸಾಹಿತ್ಯಿಕ ಪ್ರಭಾವಗಳಾಗಿ ಒಬ್ಬ ಲೇಖಕನಿಗೆ ಸಹಾಯ ಮಾಡುತ್ವೆ.

ಸಾಹಿತ್ಯಿಕ ಪಾತ್ರ ಅನ್ನೋದು ಕೇವಲ ಒಂದು ನಿರ್ದಿಷ್ಟ ವ್ಯಕ್ತಿಯಲ್ಲ; ಹಲವು ವ್ಯಕ್ತಿತ್ವಗಳ ಒಂದು ಸಮುಚ್ಚಯ. ಒಂದು ವೇಳೆ ಯಾವುದಾದರೊಂದು ಪಾತ್ರ ತನ್ನ ಬಾಹ್ಯಚಹರೆಗಳ ಶಬ್ದಶಃ ಪುನರ್ ಸೃಷ್ಟಿಯನ್ನ ಮಾಡಬೇಕು ಅಂತ ಇಚ್ಛಿಸಿದರೆ, ಒಬ್ಬನ ಕಣ್ಣನ್ನೋ, ಇನ್ನಾರದೋ ಮೂಗನ್ನೋ, ಮುಗದೊಬ್ಬನ ವ್ಯಕ್ತಿತ್ವವನ್ನೋ, ಇನ್ನಾರದೋ ಕೂದಲನ್ನೋ ರೇಖಿಸಬೇಕಾಗುತ್ತೆ. ಒಟ್ಟಿನಲ್ಲಿ ಒಂದು ಭಯಂಕರ ರಾಕ್ಷಸ ಸೃಷ್ಟಿಯಾಗುತ್ತೆ. ನನ್ನ ನೆನಪಿನಲ್ಲಿ ಉಳಿದ, ನನ್ನ ಕೃತಿಗಳ ಪಾತ್ರಗಳ ಬಗ್ಗೆ ವಿವೇಚಿಸುವುದಾದರೆ, ಯಾರು ಯಾವ ಯಾವ

ಪಾತ್ರಕ್ಕೆ ಆದರ್ಶವಾಗಿ ದೊರೆತರು ಅಂತ ನನಗೆ ಗೊತ್ತು. ಆದರೆ, ಅದೇ ಸಮಯದಲ್ಲೇ ಹಲವಾರು ಗುಣಗಳ ಒಂದು ಮೊತ್ತ ಅವರು ಅನ್ನೋದೂ ಹೌದು. ಆದರೆ ಈ ಎಲ್ಲಾ ಪಾತ್ರಗಳ ಮೂಲದಲ್ಲಿ ಮುಖ್ಯವಾಗಿ ಲೇಖಕನೇ ನಿಂತಿರ್‍ತಾನೆ. ಅದು ಸ್ತ್ರೀಪಾತ್ರವಾಗಿರಬಹುದು, ಪುರುಷಪಾತ್ರವಾಗಿರಬಹುದು; ಇತ್ಯಾತ್ಮಕ ಧೋರಣೆಯದ್ದಾಗಿರಬಹುದು, ಅಥವಾ ನೇತಾತ್ಮಕದ್ದಾಗಿರಬಹುದು- ಇವೆಲ್ಲಕ್ಕೂ ಮೂಲವಾಗಿ, ನನ್ನ ದೃಷ್ಟಿಯಲ್ಲಿ ಲೇಖಕ ನಿಂತಿರ್‍ತಾನೆ. ಪರಿಣಾಮವಾಗಿ ಆ ಲೇಖಕನ ಪ್ರಭಾವವೊಂದೇ ಮುಖ್ಯವಾಗುತ್ತೆ. ಇದರ ನಂತರವೇ ಉಳಿದ ಬಾಹ್ಯ ಅಂಶಗಳು ಅದಕ್ಕೆ ಸೇರಿಕೊಳ್ಳುತ್ವೆ. ಲೇಖಕನ ಹೃದಯ ಅವನು ಸೃಷ್ಟಿಸಿದ ಪಾತ್ರಗಳಲ್ಲೆಲ್ಲಾ ಮಿಡೀತಾ ಇರುತ್ತೆ- ಕೆಟ್ಟವರಲ್ಲಿ, ನಮ್ಮೆಲ್ಲರಲ್ಲೂ ಇರುವ- ನೇತ್ಯಾತ್ಮಕ ಗುಣವಾಗಿ ಒಳ್ಳೆಯತನದ ಗುಣವಾಗಿ - ಅಲ್ಲಿ ಒಟ್ಟೊಟ್ಟಿಗೇ ಕೆಲಸ ಮಾಡ್ತಿರತ್ತೆ. ಈ ಗುಣದಿಂದಾಗಿಯೇ, ಸಾಹಿತ್ಯದಲ್ಲಿ ಸ್ವಲ್ಪವೂ ಬದಲಾವಣೆಗೊಳ್ಳದ *Manichee* ಆಗಿ, ಸ್ಥಾಯಿಯಾಗಿ ಉಳಿಯೋದು ತುಂಬಾ ಕಷ್ಟದ ಕೆಲಸ. ಯಾಕೆಂದ್ರೆ, ಬೆಳಗಿನಲ್ಲಿ ನೀನು ಒಂದು ರೀತಿ ಇದ್ರೆ, ಸಾಯಂಕಾಲ ಇನ್ನಾರ ಹಾಗೋ ಇರ್‍ತೀಯ. ನನಗನ್ನಿಸುವುದು, ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಈ ಸ್ಥಿತ್ಯಂತರಗಳು ಸಾಧ್ಯವಿಲ್ಲ. ಅಂತ ಇನ್ನುಳಿದ ಕ್ಷೇತ್ರಗಳಲ್ಲಿ ನಾನು ನಿನ್ನ ಮನಸ್ಸಿಗೆ ಬಂದದ್ದನ್ನ ಮಾಡಬಹುದು ಮತ್ತು ನಾನು ಇದನ್ನ ಗೌರವಿಸ್ತೇನೆ ಸಹ. ಆದರೆ, ರಾಜಕೀಯದಲ್ಲಿ ವಕ್ರಮಾರ್ಗ ಹಿಡಿಯೋದು ಬೇರೆ ವಿಷಯ.

ಪ್ರ : ಲ್ಯಾಟಿನ್ ಅಮೆರಿಕೆಯ ಸರ್ವಾಧಿಕಾರಿಗಳನ್ನೇ *Autumn of the Patriarch* ಆಧರಿಸಿದೆ' ಎಂಬ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲ - ಆದರೆ ಸೊಮೋಸಾನಿಂದ್ಲೇ ಅದರಲ್ಲಿ ಬರುವ ಸರ್ವಾಧಿಕಾರಿಯ ಹಲವಾರು ಲಕ್ಷಣಗಳನ್ನ ಹೆಕ್ಕಿಕೊಳ್ಳಲಾಗಿದೆ' ಅಂತ ಭಾವಿಸೋದು ಸೂಕ್ತವೆ?

ಮಾ : ಸರ್ವಾಧಿಕಾರದ ಮೇಲೆ ಬರೆಯಬೇಕು ಅಂತ ಸದಾ ಬಯಸ್ತಾ ಇದ್ದವನು ನಾನು, ಸಾಮಾನ್ಯವಾಗಿ ಜನ ಅಧಿಕಾರವನ್ನ- ಅದು ಒಬ್ಬನ ವೈಯಕ್ತಿಕ

ಕೆಲಸದಲ್ಲಿರಬಹುದು ಅಥವಾ ಅವನ ವೃತ್ತಿಗೆ ಸಂಬಂಧಿಸಿದ್ದಾಗಿರಬಹುದು- ಹೊಂದುವುದು ಅಂದ್ರೆ, ತಾವು ಪಡೀಹುದಾದ ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು ಅಂತ ಭಾವಿಸ್ತಾರೆ. ಈ ಅಧಿಕಾರದಾಹ ಒಂದು ರೀತೀಲಿ ನೀರಿನಲ್ಲಿರುವ ಕಾರ್ಕ್ ಇದ್ದಂತೆ. ಅದು ಮೇಲೆ, ಮೇಲೆ, ನೀರಿನ ಮೇಲ್ಪದರದವರೆಗೂ ಹೋಗುತ್ತಲೇ ಇರುತ್ತೆ. ಆದರೆ ಮುಂದೆ ಹೋಗಲಿಕ್ಕಾಗೋಲ್ಲ. ಅದು, ಅದರ ಗರಿಷ್ಠ ಮಿತಿ. ಇದೇ ಮಾತು ಸರ್ವಾಧಿಕಾರಕ್ಕೂ ಅನ್ವಯಿಸುತ್ತೆ. ಅಂಥ ಒಂದು ಪಾತ್ರ ನನ್ನ ಅನ್ವೇಷಣೆಯ ಅಂತಿಮ ಗುರಿಯಾಗಿರ್ಬೇಕು' ಅಂತ ಲೇಖಕನಾಗಿ ನಾನು ಯಾವಾಗ್ಲೂ ಬಯಸ್ತಾ ಇದ್ದೆ.

'Autumn of the Patriarch' ನ ಬರೀಲಿಕ್ಕೆ ನಾನು ಪ್ರಾರಂಭಿಸಿದ್ದು ತುಂಬಾ ಹಿಂದೆ, ಅಂದ್ರೆ *'One Hundred years of Solitude'* ಬರೆಯೋದಿಕ್ಕೊ ಮೊದಲು. ಆದರೆ ಅದು ಫಲಕಾರಿಯಾಗಿಲ್ಲ. ಏನಾದರೊಂದು ಅಡಚಣೆ ಬಂದು ಅದು ಮುಂದುವರೀತಾನೇ ಇರಲಿಲ. ಈಗ ಯೋಚಿಸಿದ್ರೆ, *'One Hundred years of Solitude'* ಕಾದಂಬರಿ ಬರೆಯುವಾಗಿನ ಶ್ರೀಮಂತ ಅನುಭವದ ಅರತೆ ಆಗ ಇತ್ತು ಅಂತ ಗೊತ್ತಾಗುತ್ತೆ. ಆದ್ರೆ, ಈ ಪುಸ್ತಕದ ಬಗ್ಗೆ ನಾನು ಯಾವಾಗಲೂ ಯೋಚಿಸುತ್ತಿದ್ದೆ. ಒಬ್ಬ ಸರ್ವಾಧಿಕಾರಿಯು ಜೀವನ ರೀತಿಯನ್ನ ಅವನು ತನ್ನ ವಿಚಾರಣೆಯಲ್ಲಿ ಹೇಳಿದ್ದಂತೆ, ಅವನ ಮಾತುಗಳಲ್ಲೇ ಹಿಡಿದಿಡಲು ನಾನು ಇಷ್ಟಪಟ್ಟಿದ್ದೆ. ಈ ವಿಚಾರ ನನಗೆ ಹೊಳೆದದ್ದು ಸೋಸಾ ಬ್ಲಾಂಕೋ ಹವಾನಾದಲ್ಲಿ ವಿಚಾರಣೆಗೆ ಒಳಗಾದಾಗ. ಅಂಥ ಒಂದು ವಿಚಾರಣೆ ಚರಿತ್ರೇಲಿ ಮತ್ತೊಮ್ಮೆ ಕಾಣಿಸಿಕೊಳ್ಳೋಲ್ಲ ಅಂತ ನನಗನ್ನಿಸುತ್ತೆ. ಕ್ಯೂಬಾದ ಕ್ರಾಂತಿ ಅಂಥ ದುಸ್ಸಾಹಸವನ್ನ ಇನ್ಯಾವತ್ತೂ ಕೈಗೊಳ್ಳಲ್ಲ. ಆದರೆ ಆಗ ಅವರು ಅಂಥ ಒಂದು ಸಾಹಸಕ್ಕೆ ಕೈ ಹಾಕಿದ್ದರು. ಇದು, ಕ್ರಾಂತಿ ಮುಗಿದು, ಜನತಾ ನ್ಯಾಯಾಲಯಗಳು ರೂಪುಗೊಂಡ ತತ್‌ಕ್ಷಣವೇ ಸಂಭವಿಸಿದ್ದು. ಕ್ರಾಂತಿಕಾರಕ ರೀತಿಯಲ್ಲೇ ನ್ಯಾಯವನ್ನ ದೊರಕಿಸುವುದು ಆಗ ಅವಶ್ಯವಾಗಿತ್ತು. ಈ ಕ್ರಾಂತಿಯಲ್ಲಿ ಯಾರೂ ಯಾರನ್ನೂ ಕೊಲ್ಲಲ್ಲಿಲ್ಲ

ಅಥವಾ ಕಾನೂನನ್ನ ಕೈಗೆತ್ತಿಕೊಂಡು ರಸ್ತೆಗಳಲ್ಲಿ ರಕ್ತದ ಕೋಡಿ ಹರಿಸಲಿಲ್ಲ. ಈ ದೃಷ್ಟಿಯಿಂದ, ಕ್ಯೂಬಾದ ಕ್ರಾಂತಿ ಎಲ್ಲಾ ಕ್ರಾಂತಿಗಳಿಗಿಂತ ಬಹುಶಃ ವಿಶಿಷ್ಟವಾದದ್ದು 'ಅಂತ ನನಗನ್ನಿಸುತ್ತೆ. ಆದರೆ ಯುದ್ಧಾಪರಾಧಿಗಳು ಅಲ್ಲಿದ್ದರು, ಜನತಾ ನ್ಯಾಯಾಲಯದ ಆದೇಶದಂತೆ ಅವರೆಲ್ಲಾ ವಿಚಾರಣೆಗೆ ಒಳಗಾಗಲೇಬೇಕಿತ್ತು. ಮೇಲಾಗಿ, 'ಕ್ಯೂಬಾ ನೆತ್ತರಿನ ಹೊಳೆಯಲ್ಲಿ ಮಿಂದಿದೆ' ಎಂದು ಬೊಟ್ಟುಮಾಡಿ ಆಕ್ಷೇಪಿಸುವುದನ್ನು ತಡೆಯಲು ಇದು ಅವಶ್ಯವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ, ಯುದ್ಧ ಚಟುವಟಿಕೆಗಳಲ್ಲಿ ತೊಡಗದ ಶಾಂತ ಜನಸಮುದಾಯದ ಹಳ್ಳಿಗಳನ್ನ ನಿರ್ದಯವಾಗಿ ಸುಟ್ಟು ಹಾಕುತ್ತಿದ್ದಾಗ ಬ್ಯಾಟಿಸ್ಟಾ ಪಾಳೆಯದ ಜನರಲ್ ಸೋಸಾ ಬ್ಲಾಂಕೋನ ವಿಚಾರಣೆ ನಡೆಸಲು ಜನತಾ ನ್ಯಾಯಾಲಯ ತೀರ್ಮಾನಿಸಿತು. ಬೇರೆ ಮಾತಲ್ಲಿ ಹೇಳೋದಾದ್ರೆ, ಸೋಮೋಸಾನ ಸೈನ್ಯ ಎಂಥಹ ಬರ್ಬರ ಕೃತ್ಯಗಳನ್ನ ಹಿಂದೆ ಎಸಗ್ತಾ ಇತ್ತೋ, ಅವುಗಳನ್ನೇ ಅವನೂ ಮಾಡಿದ್ದ. ಆದ್ದರಿಂದ ಈ ವ್ಯಕ್ತಿಯ ಬಹಿರಂಗ ವಿಚಾರಣೆಯನ್ನ, ಎಲ್ಲಾ ದೇಶಗಳಿಂದಲೂ ಬಂದ ಪತ್ರಕರ್ತರ ಸಮ್ಮುಖದಲ್ಲಿ ನಡೆಸಲು ತೀರ್ಮಾನಿಸಲಾಯ್ತು. ಇದರಿಂದ, ಇದೊಂದು ನಿಷ್ಪಕ್ಷಪಾತ ವಿಚಾರಣೆ 'ಅಂತ ಎಲ್ಲರೂ ತಿಳಿದುಕೊಳ್ಳಲಿ' ಅನ್ನೋದು ಈ ತೀರ್ಮಾನದ ಹಿಂದಿನ ಉದ್ದೇಶವಾಗಿತ್ತು.

ನಾನು ನನ್ನ ಜೀವಮಾನದಲ್ಲಿ ನೋಡಿದ ವಿಚಾರಣೆಗಳಲ್ಲೆಲ್ಲಾ ಇದು ಅತ್ಯಂತ ಭಯಾನಕವಾದದ್ದು. ಪ್ಯಾಲೇಸ್ ಆಫ್ ಸ್ಪೋರ್ಟ್ಸ್‌ನಲ್ಲಿ ಅವನು ವಿಚಾರಣೆಗೊಳಗಾಗಿದ್ದ. ಅವನು ನ್ಯಾಯಾಲಯದ ದಂಡಾಧಿಕಾರಿ, ಆಪಾದಿತ ಹಾಗೂ ಇಡೀ ನ್ಯಾಯಾಂಗ ಸಿಬ್ಬಂದಿಯೊಂದಿಗೆ ಸಭಾಂಗಣದ ಮಧ್ಯೆ ನಿಂತಿದ್ದ. ಅವರೆಲ್ಲರೂ ಅಮೇರಿಕಾದೊಂದಿಗೆ ನೇರ ಸಂಪರ್ಕಹೊಂದಿದ್ದ ದಿನಪತ್ರಿಕೆಗಳ ಹಾಗೂ ದೂರದರ್ಶನದ ವರದಿಗಾರರಿಂದ ಸುತ್ತುವರಿಯಲ್ಪಟ್ಟಿದ್ದರು, ಇಲ್ಲಿ ನಡೆದ ಪ್ರತಿಯೊಂದೂ ಅಲ್ಲಿ ತತ್‌ಕ್ಷಣವೇ ಚಿತ್ರರಗೊಳ್ಳುತ್ತಿತ್ತು. ಜನ ಬ್ಯಾಕ್ಸಿಂಗ್ ಮ್ಯಾಚ್ ನೋಡಲು ಬಂದವರಂತೆ, ಮಾರ್ಗಗಳನ್ನ

ಮುಚ್ಚಿಬಿಡುವಷ್ಟರ ಮಟ್ಟಿಗೆ ಕಿಕ್ಕಿರಿದು ತುಂಬಿದ್ದರು. ಸ್ಟೇಡಿಯಂನ ಹೊರಗೆ, ಹುರಿದ, ಹಬೆಯಾಡುತ್ತಿದ್ದ, ಪಾನೀಯಗಳೂ, ತಿಂಡಿತಿನಿಸುಗಳೂ ಮಾರಾಟವಾಗ್ತಾ ಇದ್ದವು. ವೇಶ್ಯೆಯರು ತಮ್ಮನ್ನೇ ತಾವು ಮಾರಿಕೊಳ್ಳಲು, ಹಿಂದೆ, ಮುಂದೆ ಓಡಾಡುತ್ತಿದ್ದರು. ಸ್ಟೇಡಿಯಂನಿಂದ ಹೊರಗೆ ಯಾರಾದರೂ ಕಾಲಿಟ್ಟಕೂಡಲೇ ಅವರ ಹತ್ತಿರ ಓಡಿ, 'ಈ ವಿಚಾರಣೆ ರಾತ್ರಿಯೆಲ್ಲಾ ನಡೆಯುತ್ತೆ. ಆದ್ದರಿಂದ ನಿಮ್ಮ ಕಾಮನೆಗಳನ್ನ ತಣಿಸಲಿಕ್ಕೆ ಬೇಕಾದಷ್ಟು ಸಮಯ ಇದೆ' ಅಂತ ಯೋಚಿಸ್ತಾ ಇದ್ರು. ಅದು ಒಂದು ರೀತಿಯಲ್ಲಿ ಜಾತ್ರೆ, ನಿಜವಾದ ವಿಹಾರ ಆಗಿಬಿಟ್ಟಿತ್ತು.

ವಿಚಾರಣೆ ಸಂಜೆ ೭ ಗಂಟೆಗೆ ಶುರುವಾಗಿ ಬೆಳಗಿನ ಜಾವ ೬ ಗಂಟೆಗೆ ಮುಗೀತು, ಅಪರಾಧಿಗೆ ಮರಣದಂಡನೆ ವಿಧಿಸಲಾಯ್ತು. ಅವನ ಎಲ್ಲಾ ಕ್ರೂರ ಅಪರಾಧಗಳೂ ಸಾಬೀತಾದವು, ಯಾಕೆಂದ್ರೆ ಅವನ ಕೈಯಲ್ಲಿ ಕೊಲೆಗೀಡಾದ ಜನರ ಸಂಬಂಧಿಗಳೂ, ಅವನ ಕ್ರೂರ ಕಾರ್ಯಗಳಲ್ಲಿ ಹೇಗೋ ಜೀವ ಉಳಿಸಿ ಕೊಂಡವರು ಎಲ್ಲಾ ಅಲ್ಲಿ ಹಾಜರಿದ್ದರು. ರಾತ್ರಿಯೆಲ್ಲಾ ಅವರು ಬರುತ್ತಲೇ ಇದ್ರು, ಕಪ್ಪು ಉಡುಗೆ ತೊಟ್ಟ ಹೆಂಗಸರ ಪೆರೇಡೊಂದು ನಮ್ಮ ಕಣ್ಣಮುಂದೆ ಹಾದು ಹೋಗುತ್ತಿತ್ತು. ಎಲ್ಲವೂ 'ಪೂರ್ವನಿರ್ಧಾರಿತ' ಎಂಬಂತೆ ಅದು ತೋರುತ್ತಿತ್ತು. ಆದರೆ ವಾಸ್ತವವಾಗಿ ಅಲ್ಲಿ ಅಂಥ ವರ್ಣಮಯ ದೃಶ್ಯಾವಳಿಯೇ ಇರಲಿಲ್ಲ; ಇದೇ ಎಲ್ಲಕ್ಕಿಂತ ಹೆಚ್ಚು ಭಯಾನಕವಾಗಿತ್ತು. 'ಒಬ್ಬ ಮನುಷ್ಯನಿಗೆ ಈ ರೀತಿ ಆಗಬಹುದು ಎಂಬುದೇ ಎದೆ ನಡುಗಿಸುವಂಥದ್ದಾಗಿತ್ತು. ಆ ರಾತ್ರಿ ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಭಯಂಕರ ಪ್ರಭಾವವೊಂದನ್ನ ಮೂಡಿಸಿತ್ತು. ನಾನು ಸ್ತಂಭೀಭೂತನಾಗಿ ಕುಳಿತಿದ್ದೆ, ಒಂದೇ ಒಂದು ಶಬ್ದವೂ ನನ್ನ ಬಾಯಿಂದ ಹೊರಬರಲಿಲ್ಲ. ಮರಣದಂಡನೆಯ ತೀರ್ಪನ್ನು ಓದುತ್ತಿದ್ದಾಗ, ಛಾಯಾಚಿತ್ರಕಾರರ ಜೊತೆ ನಾನು ಬ್ಲಾಂಕೋನ ಎದುರೇ ನಿಂತಿದ್ದೆ. ಅವನ ಕಲ್ಲಿನಂಥ ಮುಖಮುದ್ರೆ ಸ್ವಲ್ಪವೂ ಬದಲಾಗಲಿಲ್ಲ. ತೀರ್ಪನ್ನು ಓದುತ್ತಿದ್ದಾಗ ಅವನು ನಿಂತುಕೊಂಡಿದ್ದ, ಯಾವಾಗ

'ಮರಮದಂಡನೆ' ಎಂಬ ಶಬ್ದ ಕಿವಿಗೆ ಬಿತ್ತೋ ಆಗ ಮಾತ್ರ ಅವನ ತೊಡೆಗಳು ತುಸು ಕಂಪಿಸಿದವು.

ಅದು ನನ್ನ ಪಾಲಿಗೆ ದರ್ಶನದಂತಿತ್ತು. "ನಾನು ಇದುವರೆಗೂ ಹುಡುಕುತ್ತಿದ್ದ ಪುಸ್ತಕ ಇಲ್ಲಿದೆ, ಇಲ್ಲಿ ವಿಚಾರಣೆಗೊಳಪಟ್ಟ ನನ್ನ ಸರ್ವಾಧಿಕಾರಿ ಇದಾನೆ" ಅಂತ ಯೋಚಿಸುತ್ತಿದ್ದೆ. ಆದರೆ ಶಾಂತವಾಗಿ ವಿಶ್ಲೇಷಿಸತೊಡಗಿದಾಗ "ಇದು ಸಾಧ್ಯವಿಲ್ಲ" ಅನ್ನಿಸಿತು. ಯಾಕಂದ್ರೆ, ನನ್ನ ನಾಯಕ 'ಪ್ರಥಮ ಪುರುಷ' ದಲ್ಲೇ ಮಾತನಾಡಲಿಕ್ಕೆ ತೊಡಗಿದರೆ, ಅವನು ಅವನ ದೃಷ್ಟಿಕೋನವನ್ನ ನಮಗೆ ಚೆನ್ನಾಗಿ ತೋರಿಸುತ್ತಾನಾದರೂ, ಲೇಖಕನಾದ ನಾನು ಅವನು ಉಪಯೋಗಿಸೋ ಭಾಷೆಯೊಂದಿಗೆ, ಸೇರಿಹೋಗುವ ಅಪಾಯ ಇದೆ ಅನ್ನಿಸ್ತು. ನಾನು ನನ್ನ ಭಾಷೆಯನ್ನೇ ಉಪಯೋಗಿಸಲಾಗದೇ ನಿಸ್ಸಹಾಯಕನಾಗಿ, ಕಟ್ಟಿಹಾಕಿದಂತಿರಬೇಕಾಗುತ್ತೆ. ಇದರಿಂದಾಗಿ ಈ ಯೋಚನೆಯನ್ನು ಕೈ ಬಿಟ್ಟು, ಬೇರೊಂದು ಕೋನದಿಂದ ನನ್ನ ಅನ್ವೇಷಣೆಯನ್ನ ಪ್ರಾರಂಭಿಸಿದೆ. ನಾನು ಅನುಸರಿಸಿದ ವಿಧಾನ ಈ ರೀತಿ ಇತ್ತು; ಹಲವಾರು ವರ್ಷಗಳವರೆಗೆ, ಬಹುಶಃ ೧೦ ರಿಂದ ೧೨ ವರ್ಷ, ಲ್ಯಾಟಿನ್ ಅಮೆರಿಕಾದ ಸರ್ವಾಧಿಕಾರಿಗಳ ಬಗ್ಗೆ ಬರೆಯಲ್ಪಟ್ಟ ಎಲ್ಲವನ್ನೂ - ಸಾಕ್ಷ್ಯಪತ್ರಗಳು, ಪತ್ರಗಳು, ಆತ್ಮಚರಿತ್ರೆಗಳು, ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು ಎಲ್ಲವನ್ನೂ ನಾನು ತಿರುವಿಹಾಕಿದೆ. ಸಿಕ್ಕದ್ದೆಲ್ಲವನ್ನೂ ಓದಿದೆ ಮೇಲೆ, ಅದನ್ನೆಲ್ಲಾ ಮರೆಯಲು ಯತ್ನಿಸಿದೆ. ಇದುವರೆಗೆ ತಿಳಿದುಕೊಂಡದ್ದನ್ನ ಆಧಾರವಾಗಿಟ್ಟುಕೊಂಡು, ಪ್ರತಿಯೊಂದನ್ನೂ ನಾನು ತಿರುವಿಹಾಕಿದೆ. ಸಿಕ್ಕದ್ದೆಲ್ಲವನ್ನೂ ಓದಿದ ಮೇಲೆ, ಅದನ್ನೆಲ್ಲಾ ಮರೆಯಲು ಯತ್ನಿಸಿದೆ. ಇದುವರೆಗೆ ತಿಳಿದುಕೊಂಡದ್ದನ್ನ ಆಧಾರವಾಗಿಟ್ಟುಕೊಂಡು, ಪ್ರತಿಯೊಂದನ್ನೂ ನಾನು ಹೊಸದಾಗಿ ಬರೆದೆ, ಹಾಗೆ ಬರೆಯುವಾಗ ಒಂದೇ ಒಂದು ವಾಸ್ತವ ಚಿತ್ರವೂ ಅಲ್ಲಿರದಂತೆ ನಾನು ಜಾಗ್ರತೆ ವಹಿಸಿದೆ. ಸರ್ವಾಧಿಕಾರದ ಕಾರ್ಯನಿರ್ವಹಣೆಯನ್ನ ನಿರ್ಧರಿಸೋ ಕೆಲವು ನಿಯಮಗಳ ಗುಚ್ಛವೊಂದನ್ನ ನಾನು ಅನುಸರಿಸಿದೆ. ಆ ರೀತಿಯಾಗಿ,

ನಾನು ಸೃಷ್ಟಿಸಿದ ಸರ್ವಾಧಿಕಾರಿ ಕೇವಲ ಒಬ್ಬ ಸರ್ವಾಧಿಕಾರಿಯಾಗಿ ಉಳಿಯದೇ ಇನ್ನುಳಿದವರನ್ನೂ ಹೋಲುವಂತೆ ತುಂಬಾ ವಿಚಕ್ಷಣತೆಯಿಂದ ಎಲ್ಲವನ್ನೂ ಅಣಿಗೊಳಿಸಿದೆ. ಇದಷ್ಟೇ ಅಲ್ಲ, ಆ ಸರ್ವಾಧಿಕಾರಿಯ ವ್ಯಕ್ತಿತ್ವದ ಮೂಲ ಲೇಖಕನಾದ ನಾನೇ ಆಗಿದ್ದೆ.

ಆ ಪಾತ್ರದ ಹಲವಾರು ಗುಣವಿಶೇಷಗಳು ಜುಆನ್ ವಿಸೆಂಟ್ ಗೋಮೆಜ್‌ನ ವ್ಯಕ್ತಿತ್ವದಿಂದ ಹೆಕ್ಕಿಕೊಂಡವುಗಳು. ಸೊಮೊಸಾ ಮನೆತನ ತುಂಬಾ ಕಡಿಮೆಯಿತ್ತಿದೆ. ಯಾಕಂದ್ರೆ ಆ ಮನೆತನದ ಮೂಲ ಸೊಮೊಸಾ ಒಬ್ಬನೇ ಹೆಚ್ಚು ಕಡಿಮೆ ಅಂಥ ಸರ್ವಾಧಿಕಾರೀ ಬುದ್ಧಿ ಹೊಂದಿದ್ದದ್ದು. ಈ ಸೊಮೊಸಾನೇ ಮಧ್ಯದಲ್ಲಿ ಅರೆಯುವ ಹಲ್ಲುಳ್ಳ ಬೋನುಗಳನ್ನ ಕಂಡುಹಿಡಿದದ್ದು. ನರಭಕ್ಷಕ ಪ್ರಾಣಿ, ಉದಾ: ಹುಲಿಯೊಂದು ಒಂದು ಭಾಗದಲ್ಲಿದ್ದರೆ, ಆ ಬೋನಿನ ಇನ್ನೊಂದು ಭಾಗದಲ್ಲಿ ಆತನ ರಾಜಕೀಯ ಖೈದಿ ನಿಂತಿರ್‍ತಿದ್ದ. ಈ ಬೋನುಗಳನ್ನ ಅವನು ಜನರು ನೋಡಲೋಸುಗ ಉದ್ಯಾನವನದಲ್ಲಿಟ್ಟಿರ್‍ತಿದ್ದ. ಆದರೆ ಒಟ್ಟಾರೆ, ಸೊಮೊಸಾ ವಂಶದವರ ಸರ್ವಾಧಿಕಾರ ನೀರಸವಾಗಿತ್ತು. ಆದರೆ ಜುಆನ್ ವಿಸೆಂಟ್ ಗೋಮೆಜ್‌ನ ವ್ಯಕ್ತಿತ್ವ ಎಷ್ಟು ಆಕರ್ಷಕವಾಗಿತ್ತೆಂದ್ರೆ, ನಾಮಕರಣ ಮಾಡುವಷ್ಟು ಅವನು ಅವರನ್ನ ಪ್ರಚೋದಿಸಿದ್ದ. ಬೇರೆ ರೀತೀಲಿ ಹೇಳ್ಬೇಕಂದ್ರೆ, ಅವನ ಪಶುತ್ವ, ಕ್ರೌರ್ಯ, ಅವನು ಗೈದ ಕ್ರೂರಕೃತ್ಯಗಳು ಭಾವನೆಯನ್ನ ನೆನಪಿಟ್ಟುಕೊಳ್ಳಲಿಕ್ಕೆ ಪ್ರಯತ್ನಿಸಿದರು. ಯಾಕಂದ್ರೆ ಅವನು ತನ್ನ ಅತೀಂದ್ರಿಯ ಜ್ಞಾನ ಹಾಗೂ ವಿಸ್ಮಯಕಾರಕ ಜನಪದ ಬುದ್ಧಿಯಿಂದಾಗಿ ಎಲ್ಲರನ್ನೂ ಮೀರಿ ನಿಂತಿದ್ದ. ನಾನು ಓದಿದ್ದರಲ್ಲೆಲ್ಲಾ ಜುಆನ್ ವಿಸೆಂಟ್ ಗೋಮೆಜ್ ನನ್ನ ಗಮನವನ್ನ ಹೆಚ್ಚಾಗಿ ಸೆಳೆದದ್ದರಿಂದ, ನಾನು ಚಿತ್ರಿಸಿದ ವ್ಯಕ್ತಿ ಇವನ ವ್ಯಕ್ತಿತ್ವಕ್ಕೆ ತುಂಬಾ ಹತ್ತಿರದವನಾಗ್ತಾನೆ.

ಪ್ರ : ಟ್ರುಚಿಲೋ ಬಗ್ಗೆ ಏನು ಹೇಳ್ತೀರಿ?

ಮಾ : ಹೌದು. ಟ್ರುಚಿಲೋನಿಂದಲೂ ನಾನು ತುಂಬಾ ವಿಷಯಗಳನ್ನ ಹೆಕ್ಕಿಕೊಂಡಿದೀನಿ.

ಪ್ರ : ಫ್ರಾಂಕೋನಿಂದ?

ಮಾ : ಇಲ್ಲ. ಸ್ಪೇಯಿನ್‌ನಿಂದ - ಅಂದ್ರೆ ಆ ದೇಶದ ಆಗಿನ ಸ್ಥಿತಿಗತಿಗಳಿಂದ ಹೆಚ್ಚು ತೊಗೊಂಡಿದೀನೇ ಹೊರತು ಫ್ರಾಂಕೋನಿಂದಲ್ಲ. ಫ್ರಾಂಕೋನಲ್ಲಿ ಸ್ಪೇಯಿನ್‌ನ ಅಂಶವೇ ಇಲ್ಲ. ಒಮ್ಮೆ, ನಾನವನನ್ನ ತುಂಬಾ ಹತ್ತಿರದಿಂದ ನೋಡ್ಬೇಕು ಅಂದ್ಕೊಂಡು, 'ಪ್ರೇಕ್ಷಕರಲ್ಲೊಬ್ಬರಾಗಲಿಕ್ಕೆ ನನಗೆ ಅನುಮತಿ ಕೊಡಿ' ಅಂತ ಅವನನ್ನ ಕೇಳಬೇಕು ಅಂದ್ಕೊಂಡಿದ್ದೆ. ಅವನ ಅನುಮತಿಯನ್ನ ದೊರಕಿಸಿಕೊಳ್ಳೋದೇನೂ ಕಷ್ಟದ್ದಾಗಿರಲಿಲ್ಲ. ಆದರೆ, ಅವನಿಗೆ ನಾನು ಎಂಥ ಸಮಜಾಯಿಷಿ ನೀಡಬೇಕು? ಅನ್ನೋ ಗೊಂದಲ ಉಂಟಾಯಿತು. ಸುತ್ತಲೂ ನೋಡುತ್ತಾ, ನಾನು ಅವನಿಗೆ "ನಿಂಗೊತ್ತಾ, ನಾನು ಒಬ್ಬ ಸೂಳೆಮಗನ ಬಗ್ಗೆ ಪುಸ್ತಕವೊಂದನ್ನ ಬರೀತಾ ಇದೀನಿ, ಅದಕ್ಕೆ ನಿನ್ನನ್ನ..." ಅಂತ ಹೇಳಲಿಕ್ಕೆ ಸಾಧ್ಯವೇ ಇರಲಿಲ್ಲ.

ಪ್ರ : ಅವನು ಸತ್ತರೀತಿ ಮಾತ್ರ ಒಬ್ಬ ಕಲಾವಿದನ ಕಲ್ಪನೆಯನ್ನ ಹೋಲುತ್ತೆ. ಅವನ ಸಾವು ಸಾಹಿತ್ಯದ ಕಂಪನ್ನ ಹೊಮ್ಮಿಸಿತ್ತು.

ಮಾ : ನಿಜ. ಆದರೆ ಅದು ಆದದ್ದು ಹೀಗೆ. ನನ್ನ ಕೃತಿ; ಅದರ ಅಂತಿಮ ಭಾಗವೊಂದನ್ನುಳಿದು, ಇನ್ನೆಲ್ಲಾ ರೀತಿಯಲ್ಲೂ ಮುಗಿದಿತ್ತು. ಫ್ರಾಂಕೋನ ಸಾವು ಯಾವ ರೀತಿ ಇರಬಹುದು ಅಂತ ನಾನು ಅವನ ಸಾವಿಗಾಗಿ ಕಾಯ್ತಾ ಇದ್ದೆ. ಆದರೆ ಅವನು ಸಾವನ್ನ ತಿರಸ್ಕರಿಸ್ತಾನೇ ಇದ್ದ. ಈ ಕಾಯುವಿಕೆ ಎಷ್ಟು ದಿನಗಳವರೆಗೆ ಎಳೆದುಕೊಂಡು ಹೋಯ್ತು ಅಂದ್ರೆ ಕೊನೇಗೆ ತಡೀಲಾರ್ದೆ, ಅದು ಮೊದಲು ಹೇಗಿತ್ತೋ ಹಾಗೇ ಪ್ರಕಟಿಸಿಬಿಟ್ಟೆ. ಅದನ್ನ ಪ್ರಕಟಿಸಿ ವರ್ಷವೂ ಆಗಿರಲಿಲ್ಲ, ಫ್ರಾಂಕೋ ಸಾಯುತೊಡಗಿದ. ಆದರೆ ಅವನ ಕೊನೇದಿನಗಳು ನನ್ನ ಪುಸ್ತಕದ ಕೊನೇ ಅಧ್ಯಾಯಕ್ಕಿಂತ ಹೆಚ್ಚು ಶಕ್ತಿಯುತವಾಗಿದ್ದವು. ಅವನು ಕಲ್ಪನಾಶಕ್ತಿಯ ಎಲ್ಲೆಯನ್ನ ಎಲ್ಲ ರೀತಿಯಲ್ಲೂ ಮೀರಿಬಿಟ್ಟ.

ಪ್ರ : ಲ್ಯಾಟಿನ್ ಅಮೆರಿಕೆಯ ಮೂರು ಜನ ಬೇರೆ ಬೇರೆ ಲೇಖಕರು ಸರ್ವಾಧಿಕಾರಿಗಳ ಬಗ್ಗೆ ಬರೆದ ಪುಸ್ತಕಗಳು ಏಕಕಾಲದಲ್ಲಿ

ಪ್ರಕಟಗೊಂಡಿದ್ದು ಕಾಕತಾಳೀಯವೆ?

ಮಾ : ಹೌದು ಮತ್ತು ಅಲ್ಲ. ಸರ್ವಾಧಿಕಾರತ್ವ ಲ್ಯಾಟಿನ್ ಅಮೆರಿಕಾ ಸಾಹಿತ್ಯದ ಒಂದು ಮಾಮೂಲೀ ವಸ್ತು ಎಂಬ ಅರ್ಥದಲ್ಲಿ, ಅದು ಕಾಕತಾಳೀಯ ಅಲ್ಲ. ನನಗನ್ನಿಸುವಮಟ್ಟಿಗೆ, ಲ್ಯಾಟಿನ್ ಅಮೆರಿಕಾದ ಪ್ರತಿಯೊಬ್ಬ ಲೇಖಕನೂ ಒಂದಲ್ಲಾ ಒಂದು ಗಳಿಗೆಯಲ್ಲಿ ಸರ್ವಾಧಿಕಾರೀ ವಿಷಯವನ್ನಿಟ್ಟುಕೊಂಡು ಬರೀಬೇಕು ಅನ್ನೋ ಪ್ರಚೋದನೆಗೆ ಒಳಗಾಗ್ತಾನೆ, ನನಗನ್ನಿಸಿದ್ದು ಇದು. ಆದರೆ ಈ ಮೂರು ಗ್ರಂಥಗಳೂ ಭವಿಷ್ಯದ ಬರಹಗಾರರಿಗೆ ಈ ವಸ್ತುವನ್ನ ಬಳಸಲಿಕ್ಕೆ ತೊಡಕಾಗೋದಿಲ್ಲ ಅಂತ ಆಶಿಸ್ತೀನಿ. ಜೀವತುಂಬಿದ, ಸೂತ್ರೀಕರಣಗೊಂಡ ಸರ್ವಾಧಿಕಾರಿಯನ್ನ ಮಾತ್ರ ಲ್ಯಾಟಿನ್ ಅಮೆರಿಕಾ ಪ್ರಪಂಚಕ್ಕೆ ಕೊಡುಗೆಯಾಗಿ ನೀಡ್ಲಿಕ್ಕೆ ಸಾಧ್ಯ ಅಂತ ನನ್ನ ಅಭಿಪ್ರಾಯ. ಕೆಲವು ರಾಷ್ಟ್ರಗಳು ಸಾಹಸಗಳ ಅನ್ವೇಷಕನನ್ನ, ಇನ್ನು ಕೆಲವು ಒಬ್ಬ ದಾರ್ಶನಿಕನನ್ನ ಕೊಡುಗೆಯಾಗಿ ನೀಡಬಹುದು. ಆದರೆ ಕೊಲಂಬಿಯಾದಲ್ಲಿ, ಲ್ಯಾಟಿನ್ ಅಮೆರಿಕಾದಲ್ಲಿ ಚರಿತ್ರೆಯ ಕೊಡುಗೆಯೆಂದರೆ ಕೇವಲ ಸರ್ವಾಧಿಕಾರಿಯೊಬ್ಬನೇ - ಅದರಲ್ಲೂ ಊಳಿಗಮಾನ್ಯ ಸರ್ವಾಧಿಕಾರಿಯನ್ನೇ ಹೊರತು ಇತ್ತೀಚಿನ ಸರ್ವಾಧಿಕಾರಿಯನ್ನಲ್ಲ. ಈಗಿನ ಸರ್ವಾಧಿಕಾರಿಗಳು ತಾಂತ್ರಿಕ ಶಾಹಿಗಳು (*technocrats*) ಅವರು ಉತ್ಪಾದಿತ ವಸ್ತುಗಳಂತೆ, ಸಿದ್ಧ ಭಾಗಗಳಿಂದ ತಯಾರಾದಂತೆ ಇರ್ತಾರೆ. ಒಂದು ರೀತಿಯಲ್ಲಿ ಅವರು ಗಣಕಯಂತ್ರವನ್ನ ಹೋಲ್ತಾರೆ. ಆದರೆ ಮೊದಲಿನವರು ಜನ ಸಮುದಾಯಗಳ ಬೆಂಬಲ ಬಯಸ್ತಾ ಇದ್ರು, ಯಾಕೆಂದ್ರೆ ಅವು ಅವರ ನಂಬಿಕೆಗಳನ್ನ ಪ್ರತಿನಿಧಿಸ್ತಾ ಇದ್ದವು. ಈ ಜನತೆ ಸರ್ವಾಧಿಕಾರಿಯನ್ನ ವೈಭವೀಕರಿಸ್ತಾ ಇತ್ತು, ದೈವತ್ವಕ್ಕೇರಿಸಿತ್ತು. ಆಗ ಜನತೆ ಸರ್ವಾಧಿಕಾರಿಯೊಬ್ಬನ ಹಿಂಸಾ ಪ್ರವೃತ್ತಿಯಿಂದ ನೇರವಾಗಿ ಸಂಕಷ್ಟಕ್ಕೊಳಗಾಗ್ತಾ ಇದ್ದದ್ದು, ಈಗಿನ ರಾಜಕಾರಣಿಗಳು, ವಿದ್ಯಾರ್ಥಿಗಳು, ಹಲವಾರು ಪಕ್ಷಗಳ ಪ್ರತಿನಿಧಿಗಳು ಈ ಜನತೆಯನ್ನ ರಾಜಕೀಯವಾಗಿ ಶೋಷಿಸುವ ಪ್ರಮಾಣಕ್ಕೆ ಹೋಲಿಸಿ ನೋಡಿದರೆ ಕಡಿಮೆಯೆಂದೇ ಹೇಳಬೇಕು. ಸಾಮಾನ್ಯಜನರು ಸರ್ವಾಧಿಕಾರಿ

ಹೊಂದಿದ ಸಂಮೋಹಕ ಶಕ್ತಿಯನ್ನೆ ಮೊದಲು ಗುರುತಿಸ್ತಾ ಇದ್ರು. ಇದೇನೂ ಅಷ್ಟೊಂದು ಸೋಜಿಗ ಪಡುವಂಥದ್ದೇನಲ್ಲ - ಯಾಕೆಂದ್ರೆ, ಆಗಿನ ಜನ ಅವಿದ್ಯಾವಂತರಾಗಿದ್ರು. ಈಗಿನವರಂತಿರಲಿಲ್ಲ. ಟ್ರುಚಿಲೋನ ಶವದಹನ ಅವನನ್ನ ದಿವ್ಯ ಪುರುಷನನ್ನಾಗಿಸಿತು, ಅವನೊಬ್ಬ ದೇವರಾದ. ಆದರೆ ಕಾಲ ಸಂದಂತೇ ಎಲ್ಲಾ ಬದಲಾಗುತ್ತೆ...

ಈ ಸರ್ವಾಧಿಕಾರದ ವಸ್ತು ಲ್ಯಾಟಿನ್ ಅಮೇರಿಕೆಯ ಪ್ರತೀ ಲೇಖಕನನ್ನೂ ಆಕರ್ಷಿಸುತ್ತಾ ಇರುತ್ತೆ. ಅದರ ಮೇಲೆ ಎಷ್ಟೊಂದನ್ನ ಬರೆಯಲಾಗಿದೆ ಅಂದ್ರೆ ನಮ್ಮ ಮುಂದಿನ ಪೀಳಿಗೆಯವರು ಅದರ ಹತ್ತಿರವೂ ಸುಳಿಯುವುದಿಲ್ಲವೇನೋ ಎಂಬ ಭಯ ನನ್ನನ್ನ ಕಾಡ್ತಿರುತ್ತೆ. ಅವರು ಅದನ್ನ ನಿವಾರಿಸೋಕೆ ಪ್ರಯತ್ನಿಸಬಹುದು.

ಪ್ರ : ಸರ್ವಾಧಿಕಾರಿಗಳೇ ಇಲ್ಲವಾದರೆ ಒಳ್ಳೆಯದು.

ಮಾ : ಆದರೆ ಅವರು ಇದ್ದರೂ ಆಗಿಹೋದದ್ದರ ಬಗ್ಗೆ ಪುಸ್ತಕಗಳೂ ಬರೆಯಲ್ಪಟ್ಟವು. ಮುಂದಾದರೂ ಯಾವ ಸರ್ವಾಧಿಕಾರಿಯೂ ತಲೆಯೆತ್ತದಿರಲಿ ಅಂತ ನಾವು ಬಯಸಬಹುದು ಅಷ್ಟೆ. ಆದರೆ ದುರದೃಷ್ಟವಶಾತ್ ಇದು ನಮ್ಮ ಅಂದ್ರೆ, ಲೇಖಕರ ಕೈಲಿ ಸಾಧ್ಯವಿಲ್ಲ. ಸರ್ವಾಧಿಕಾರಿಗಳನ್ನೂ ತೊಲಗಿಸುವಂಥದ್ದೇನನ್ನೂ ನಾವು ಮಾಡಲಾರೆವು. ಬಹುಶಃ ಇದು ಬೇರೆ ಯಾರಿಂದಲಾದರೂ ಸಾಧ್ಯವಾಗಬಹುದು. ಆದರೆ ಲೇಖಕನಿಂದಂತೂ ಅಲ್ಲ. ಅದರಲ್ಲೇ ಅವನೊಬ್ಬನೇ ಪ್ರಯತ್ನಿಸಿದರಂತೂ ಸಾಧ್ಯವೇ ಇಲ್ಲ.

ಈ ಕಾರಣಕ್ಕಾಗೇ ನಾನು ಹೇಳೋದು, ಸರ್ವಾಧಿಕಾರಿ, ವಸ್ತುವನ್ನುಳ್ಳ ಆ ಮೂರು ಪುಸ್ತಕಗಳು ಹೊರಬಂದಿದ್ದು ಕಾಕತಾಳೀಯ ಅಲ್ಲ, ಅಂತ...

ಪ್ರ : ನೀವು ಮುಂದೇನು ಬರೆಯಲು ಯೋಚಿಸಿದ್ದೀರಿ. ಏನನ್ನು ಪ್ರಕಟಿಸುತ್ತಿದ್ದೀರಿ ಎಂಬುದರ ಬಗ್ಗೆ ನೀವು ಕೊಡುವ ಎಲ್ಲಾ

ಹೇಳಿಕೆಗಳನ್ನು ನಾವು ತುಂಬಾ ಉತ್ಸುಕರಾಗಿ ಓದುತ್ತಿರುತ್ತೇವೆ. ಪತ್ರಿಕೆಯೊಂದಕ್ಕೆ ನೀವಿತ್ತ ಸಂದರ್ಶನವೊಂದರಲ್ಲಿ, ಲ್ಯಾಟಿನ್ ಅಮೆರಿಕೆಯಲ್ಲಿ ಪ್ರತಿಯೊಂದು ಸರ್ವಾಧಿಕಾರದ ಅವಧಿಯು ೭ ರಿಂದ ೧೦ ವರ್ಷಗಳವರೆಗೆ ಇರುತ್ತೆ ಅಂತ ಹೇಳಿದ್ದೀರಿ. ಸರಿಸುಮಾರು ಅದೇ ಅವಧಿಯನ್ನ ನಿಮ್ಮ ಕಾದಂಬರಿ ಮುಗಿಸಲಿಕ್ಕೆ ನೀವು ತೊಗೊಂಡಿದ್ದೀರಿ. ಹಾಗಾದರೆ, ಪಿನೋಚೆಯ ಪತನದ ಹೊತ್ತಿಗೆ ನೀವು ಹೊಸದೊಂದು ಕಾದಂಬರಿಯನ್ನ ಬರೆದಿರ್ತೀರಿ ಅಂತ ನಂಬೋಣವೆ? ಅಥವಾ, ನೀವು ಮೊದಲೊಮ್ಮೆ ಹೇಳಿದಂತೆ, ಇತ್ತೀಚೆಗೆ ಯಾವ ಕಾದಂಬರಿಯನ್ನೂ ಬರೆಯುತ್ತಿಲ್ಲವೆ?

ಮಾ : ವಾಸ್ತವವಾಗಿ, ಪದೇ ಪದೇ ಕೇಳಿಬರುವ 'ಇತ್ತೀಚೆಗೆ ನೀವು ಏನನ್ನ ಬರೀತಾ ಇದೀರಿ?' ಎಂಬ ಪ್ರಶ್ನೆಯ ಒತ್ತಡದಿಂದಾಗಿ ನನಗೆ ಬರೀಲಿಕ್ಕೇ ಕಷ್ಟವಾಗುತ್ತೆ. ಆ ಪರಿಸ್ಥಿತಿಯಿಂದ ಪಾರಾಗ್ಲಿಕ್ಕಾಗಿ, ಎಲ್ಲಾ ರೀತಿಯ ಉತ್ತರಗಳ ಬಗ್ಗೆನೂ ಯೋಚಿಸಿರ್ತಿನಿ. ಇದು ನನಗೆ ಸಹಾಯ ಮಾಡುತ್ತೆ. ಆದರೆ ನೆನ್ನೆ ಏನು ಹೇಳಿರ್ತೀನೊ ಅದನ್ನ ಇವತ್ತು ಮರೆತುಬಿಟ್ಟಿರ್ತೀನಿ, ನಾಳೆ ಹೇಳಬೇಕಾಗಿರೋದನ್ನ ಯೋಚಿಸಿಯೇ ಇರೋದಿಲ್ಲ. ಆದರೆ ನಾನು ಹೇಳಿದ್ದನ್ನೆಲ್ಲಾ ಬರೆದುಕೊಳ್ಳುವ, ಅವುಗಳ ಸತ್ಯಾಸತ್ಯತೆಯನ್ನ ತಾಳೆ ನೋಡುವ ಸ್ವಭಾವದ ಅನೇಕ ಗೆಳೆಯರು ನನಗಿದ್ದಾರೆ. ಹಾಗಾಗಿ, ಕೊಟ್ಟಕೊನೆಗೆ ಅರ್ಥವಿಲ್ಲದ್ದಂತಹದ್ದೇನೋ ಹುಟ್ಟಿಕೊಳ್ಳುತ್ತೆ. ಆದರೆ ಇವುಗಳೆಲ್ಲದರಲ್ಲೂ ಒಂದು ಎಳೆಯಷ್ಟಾದರೂ ಸತ್ಯ ಇದ್ದೇ ಇರುತ್ತೆ.

ರಾಜಕೀಯ ವಸ್ತುವನ್ನುಳ್ಳ ಕಥೆಯೊಂದಕ್ಕೆ ಹಿಂದಿರುಗಲು ಶಕ್ಯವಾದದ್ದು ಆ ದಿನಗಳಲ್ಲಿ ತುಂಬಾ ಪ್ರಮುಖವಾದದ್ದು ಅಂತ ನನಗನ್ನಿಸುತ್ತೆ. ಅದು ಲೇಖಕನಾಗಿ ನಾನು ನಿರತನಾಗಬಹುದಾದ ಎಲ್ಲಾ ರೀತಿಯ ಸಾಹಿತ್ಯಿಕ ಚಟುವಟಿಕೆಗಳನ್ನೂ ಒಳಗೊಂಡಿತ್ತು. ಕ್ಷಿಪ್ರವೇಗದಿಂದ ಸಾಧಿಸಿದ ಚಿಲಿಯಾದ ಕ್ರಾಂತಿ ನನ್ನನ್ನಿದಕ್ಕೆ ದೂಡಿತ್ತು...

'Autumn of the patriarch' ಬಿಡುಗಡೆಯಾದ ದಿನ ಪತ್ರಕರ್ತರು ಆ ಕೃತಿಯ ಬಗ್ಗೆ ಒಂದೇ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ;

ಬದಲು ನನ್ನ ಮುಂದಿನ ಕೃತಿ ಯಾವುದರ ಬಗ್ಗೆ ಇರುತ್ತೆ ಅಂತ ಮಾತ್ರ ಕೇಳಿದರು. ಅಂಥ ಒಂದು ಸಂಭಾಷಣೆಗೆ ಅದು ತುಂಬಾ ವ್ಯತಿರಿಕ್ತ ಸಮಯವಾಗಿತ್ತು. ನಾನು ಯಾವೊಂದು ಕಾದಂಬರಿಯ ವಸ್ತುವಿನ ಬಗ್ಗೆಯೂ ಯೋಚಿಸಿರಲಿಲ್ಲ, ಆ ಕ್ಷಣವೇ ಬರೆಯಲು ಕೂರುವ ಮನಸ್ಥಿತಿಯೂ ನನಗಿರಲಿಲ್ಲ. ಆ ಕಾದಂಬರಿ ನನ್ನೆಲ್ಲಾ ಶಕ್ತಿಯನ್ನೂ ಹೀರಿಬಿಟ್ಟಿತ್ತು. *'Autumn of the patriarch'* ಪದದಿಂದ ಪದಕ್ಕೆ ಮುಂದುವರೆದಿದ್ದಲ್ಲ; ಅಕ್ಷರದಿಂದ ಅಕ್ಷರಕ್ಕೆ ಮುಂದುವರೆದದ್ದು, ಅದರ ಬಗೆಗಿನ ಕೆಲಸ ತುಂಬಾ ತ್ರಾಸದಾಯಕವಾಗಿತ್ತು. ಎಲ್ಲಾ ತಿದ್ದುಪಡಿಗಳನ್ನೂ, ಬದಲಾವಣೆಗಳನ್ನೂ ಮಾಡಿಯೂ ೫ ರಿಂದ ೬ ವಾಕ್ಯಗಳನ್ನ ನಾನು ಬರೆದಿದ್ದಾದರೆ, ಆ ದಿವಸದ ನನ್ನೆಲ್ಲಾ ಶ್ರಮ ಸಾರ್ಥಕವಾಯಿತು ಅಂತ ಅಂದುಕೊಳ್ಳುತ್ತಿದ್ದೆ. ಆದರೆ ಕಾಲ ಸಂದಿತು. ವಿಶ್ರಾಂತಿಯನ್ನ ತೆಗೆದುಕೊಂಡೆ, ಆ ಮೇಲೆ ನಾನು ಗೀಚಿದ ಪುಟಗಳ ಮೇಲೆ ಮತ್ತೊಮ್ಮೆ ಕಣ್ಣಾಡಿಸುತ್ತಾ ಹೋದೆ. ತುಂಬಾ ಹಿಂದಿನ ಕಾಲಕ್ಕೆ ಅದು ಸಂಬಂಧಿಸಿದಂತೆ ನನಗೆ ತೋರಿತು. ನಿಮಗೆ ಆಯಾಸ ವಾಗಿಲ್ಲದಿದ್ದರೆ, ನಾನು ಅದರ ಬಗ್ಗೆ ಹೇಳ್ತೀನೆ. ಆ ಟಿಪ್ಪಣಿಗಳು ನಾನು ೧೯೫೫ ರಲ್ಲಿ ಮೊಟ್ಟಮೊದಲು ಬಾರಿಗೆ ರೋಮ್‌ಗೆ ಹೋದದ್ದು, ಅಲ್ಲಿ ಘಟಿಸಿದ್ದನ್ನು ದಾಖಲಿಸುತ್ತವೆ.

ನಾನು ಅಲ್ಲಿಗೆ ಸಂಪೂರ್ಣ ಹೊಸಬನಾದ್ದರಿಂದ, ನನಗೆ ಆ ಪಟ್ಟಣದ ಬಗ್ಗೆಯೂ ಗೊತ್ತಿರಲಿಲ್ಲ; ಯಾವ ಹೋಟೆಲ್‌ಗೆ ಹೋಗಬೇಕು ಎಂಬುದೂ ತಿಳಿದಿರಲಿಲ್ಲ. ಅಲ್ಲಿಯ ಪೋರ್ಟರ್ ಒಬ್ಬ ತನಗೆ ಉತ್ತಮವಾದ ಹೋಟೆಲ್ ಒಂದು ಗೊತ್ತೆಂದೂ Nacional ಮೂಲಕ ಅಲ್ಲಿಗೆ ತಲುಪಬೇಕೆಂದೂ ಹೇಳಿದ. ಇಟಾಲಿಯನ್ನರು ವಿಚಿತ್ರವಾದ ಅನೇಕ ಪದ್ಧತಿಗಳನ್ನಿಟ್ಟುಕೊಂಡವರು. ಉದಾಹರಣೆಗೆ, ಆರು ಮಹಡಿಗಳ ಕಟ್ಟಡವೊಂದರಲ್ಲಿ ಐದಾದರೂ ಬೇರೆ ಬೇರೆ ಹೋಟೆಲ್‌ಗಳಿರುತ್ತವೆ. ಪ್ರತೀ ಮಹಡಿಯಲ್ಲೂ ಒಂದು ಪ್ರತ್ಯೇಕ ಹೋಟೆಲ್ ಇರುತ್ತದೆ. ಲಿಫ್ಟ್ ಪ್ರತೀಮಹಡಿಯಲ್ಲಿದ್ದು ಅಲ್ಲಿಯ ಹೋಟೆಲ್‌ನ ಮೇಲ್ವಿಚಾರಕನ ಡೆಸ್ಕ್ ಮುಂದೆ ನಿಲ್ಲುತ್ತದೆ. ಹಾಗಾಗಿ,

ಆ ಪೋರ್ಟರ್ ನನ್ನನ್ನ ಅಂಥಾ ಒಂದು ಹೋಟೆಲ್‌ಗೆ ಕರೆದುಕೊಂಡು ಹೋದ. ಬಹುಶಃ ತನ್ನ ಗಿರಾಕಿಗಳನ್ನ ಅಲ್ಲಿಗೆ ತಂದು ಒಪ್ಪಿಸುವ ವ್ಯವಸ್ಥೆ ಮಾಡಿಕೊಂಡಿದ್ದಿರಬಹುದು. ಲಿಫ್ಟ್‌ನ ಬಾಗಿಲನ್ನ ತೆರೆದಾಗ ಸುಮಾರು ೧೫-೨೦ ಜನ ಪ್ರವಾಸಿಗರು ಸಾಲಾಗಿ-ಭೋಜನಕ್ಕಿರಬೇಕೆಂದು ನನ್ನ ಊಹೆ-ಕುಳಿತದ್ದನ್ನ ನೋಡಿದೆ. ಅದು ಅತ್ಯಂತ ಬಿರುಬೇಸಿಗೆಯ ಕಾಲ. ಅವರೆಲ್ಲಾ ಷಾರ್ಟ್ಸ್‌ನಲ್ಲಿದ್ದರು, ಹಾಗಾಗಿ ಅವರ ಗುಲಾಬಿರಂಗಿನ ಮಂಡಿಗಳಷ್ಟೇ ನನ್ನ ಗಮನಕ್ಕೆ ಬಂದದ್ದು. ಅವರೆಲ್ಲಾ ಬ್ರಿಟಿಷರಾಗಿದ್ದಿರಬಹುದು. ಅವರನ್ನ ನೋಡುತ್ತಿದ್ದ ಹಾಗೇ ನಾನು ಭಯದಿಂದ ತತ್ತರಿಸಿದೆ, ಯಾಕೆ ಅಂತ ನನಗೇ ಗೊತ್ತಿಲ್ಲ. ಆ ಪೋರ್ಟರ್‌ಗೆ 'ಇಲ್ಲಿ ಬೇಡ, ಮುಂದಿನ ಮಾಳಿಗೆಗೆ ಹೋಗೋಣ' ಅಂತ ಹೇಳಿದೆ. ನಾವು ಮೇಲೆ ಹೋದೆವು. ಅಲ್ಲಿ ನನಗೆ ರೂಮೊಂದು ಸಿಕ್ಕಿತು. ನಾನು ಸ್ನಾನಮಾಡಿ ಊಟ ಮಾಡಿದೆ. ಆಮೇಲೆ ಅಲ್ಲಿಯ ಬೀದಿಗಳಲ್ಲಿ ವಾಯುಸಂಚಾರಕ್ಕೆ ಹೋದೆ. ಮರುದಿನ ನಾನು ಕೊಲಂಬಿಯಾದ ರಾಯಭಾರಿಯನ್ನ ಭೇಟಿಯಾದೆ. ಅವನು ನಾನು ಉಳಿದದ್ದೆಲ್ಲಿ ಅಂತ ವಿಚಾರಿಸಿದ. ನಾನು, 'Nacional ಮೂಲಕ ತಲುಪುವ ೨೩ನೇ ನಂಬರಿನ ಬಿಲ್ಡಿಂಗ್‌ನಲ್ಲಿ ಅಂತ ಉತ್ತರಿಸಿದೆ. "ಅದು ಸಾಧ್ಯವೇ ಇಲ್ಲ. ಆ ಬಿಲ್ಡಿಂಗ್‌ನಲ್ಲಿರುವ ಹೋಟೆಲ್ ಒಂದರಲ್ಲಿ ೧೭ ಜನ ಬ್ರಿಟಿಷರು ವಿಷ ಸೇವನೆಯಿಂದಾಗಿ ನೆನ್ನೆ ರಾತ್ರಿಯಷ್ಟೇ ಸತ್ತಿದ್ದಾರೆ." "ಏನು!?" ನಾನು ಉದ್ಗರಿಸಿದೆ. "ನೋಡು"-ಅವನು ಅವತ್ತಿನ ದಿನಪತ್ರಿಕೆಯನ್ನ ನನಗೆ ತೋರಿಸಿದ-ಇಷ್ಟನೇ ಮಹಡಿಯ ಹೋಟೆಲ್ ಒಂದರಲ್ಲಿ ಉಳಿದಿದ್ದ ೧೭ ಜನ ಬ್ರಿಟಿಷರು-ಹಿಂದಿನ ಸಂಜೆಯಷ್ಟೇ ನಾನು ನೋಡಿದ್ದವರು-ಇಚ್ಚಿಪ್ಪಿನ ಮೃದ್ವಂಗಿಗಳನ್ನ (Oyesters) ಊಟಕ್ಕೆಂದು ತರಿಸಿಕೊಂಡು ತಿಂದರು. ಅವು ಅದೇ ತಾನೇ ಬಂದವುಗಳಾಗಿರಲಿಲ್ಲ; ಅವು ವಿಷಮಯವಾಗಿದ್ದರಿಂದ, ಅದನ್ನು ತಿಂದ ಅವರೆಲ್ಲರೂ ಮೃತಪಟ್ಟರು. ಒಂದು ವೇಳೆ ನಾನೂ ಉಳಿದಿದ್ದರೆ.... ನಾನು ಈ ಘಟನೆಯನ್ನ ಬರೆದಿಟ್ಟೆ.

ಮುಂದೆ, ಯೂರೋಪ್ ಪ್ರವಾಸ ಕೈಗೊಂಡಾಗಲೂ ನಾನು ಟಿಪ್ಪಣಿಗಳನ್ನ ಬರೆಯುತ್ತಾ ಬಂದೆ, ಈಗಲೂ ಅದನ್ನ ಮುಂದುವರಿಸಿಕೊಂಡು ಹೋಗುತ್ತಿದ್ದೇನೆ. ಹಾಗಾಗಿ, ಒಮ್ಮೆ ನಾನು ಬರೆದ ಪುಟಗಳ ಮೇಲೆ ಕಣ್ಣಾಡಿಸುತ್ತಿದ್ದಾಗ, ಸುಮಾರು ೧೦೦ ರಿಂದ ೧೨೦ ಕಥೆಗಳನ್ನು ಬರೆಯುವಷ್ಟು ಸಾಮಗ್ರಿ ನನಗೆ ಸಿಕ್ಕಿತು. ಅದೆಲ್ಲ ಲ್ಯಾಟಿನ್ ಅಮೆರಿಕಾದ ಒಬ್ಬ ನಿವಾಸಿಗೆ ಯೂರೋಪ್‌ನಲ್ಲಾದ ಅನುಭವ ಕುರಿತದ್ದು. ಇವುಗಳಲ್ಲೆಲ್ಲ ಇದ್ದ ಮುಖ್ಯ ವಿಷಯವೆಂದರೆ ಎರಡು ಭಿನ್ನ ಸಂಸ್ಕೃತಿಗಳ ನಡುವಣ ಸಂಘರ್ಷ. ಈ ರೀತಿಯ ಸಂಘರ್ಷ, ಅದೇ ಮುಂಚೂಣಿಯೆನಿಸಿಕೊಳ್ಳದೇ, ಒಂದು ಪರಿಕಲ್ಪನೆಯಾಗದೇ ಉಳಿಯುವವರೆಗೂ ತುಂಬಾ ಆಸಕ್ತಿ ಪೂರ್ಣವಾಗಿರುತ್ತೆ. ಯಾಕೆಂದ್ರೆ ನನ್ನೆಲ್ಲಾ ಕೃತಿಗಳಲ್ಲಿ ಪ್ರಾರಂಭದ ಬಿಂದು ಎಂದರೆ ಪ್ರತಿಮೆಯೇ ಹೊರತು ಪರಿಕಲ್ಪನೆಯಲ್ಲ. ಹಾಗೇನೇ, ಈ ಕಥೆಯಲ್ಲಿ, ಹದಿನೇಳು ಜನ ಇಂಗ್ಲಿಷ್ ಮಂದಿ ಹೋಟೆಲ್‌ನಲ್ಲಿ ಕುಳಿತಿದ್ದಾರೆ, ಅವರ ಮೊಣಕಾಲುಗಳು... ಈ ಪ್ರತಿಮೆಯ ಮೂಲಕ ಹೊಳಹು ನನಗೆ ಮೂಡಿಬಂತು.

ಒಂದು ಸ್ಕೂಲ್ ನೋಟ್‌ಬುಕ್ಕಿನಲ್ಲಿ ಇಪ್ಪತ್ತು ವರ್ಷದಿಂದ ಮಾಡಿಟ್ಟು ಕೊಂಡ ಟಿಪ್ಪಣಿಗಳನ್ನ ನಾನು ಕ್ರಮವಾಗಿ ಜೋಡಿಸಿಕೊಂಡೆ. ಇದರ ಸಹಾಯದಿಂದ ಒಂದು ನೂರ ಕಥೆಗಳ ಒಳ್ಳೆಯ ಪುಸ್ತಕವೊಂದನ್ನ ಹೊರತರಲು ಸಾಧ್ಯ ಅನಿಸಿತು. ಮೊದಲನೆಯದನ್ನ ಬರೆಯೋಕೆ ಪ್ರಾರಂಭಿಸಿದೆ. "ವಿಷಪ್ರಾಶನಕ್ಕೊಳಗಾದ ಹದಿನೇಳು ಮಂದಿ ಇಂಗ್ಲೀಷರು." ಅಲ್ಲಿ ಬರುವ ಪ್ರಮುಖ ವ್ಯಕ್ತಿಯನ್ನ ನಮ್ಮ ಹಳ್ಳಿಗಾಡಿನ ಹೆಣ್ಣಾಗಿ ಪರಿವರ್ತಿಸಿಕೊಂಡೆ. ಈಕೆ ವಿಧವೆ ಆಗಿರ್ತ್ತಾಳೆ. ಅವಳ ಮಕ್ಕಳು ಅವಳನ್ನ 'ಏನು ಮಾಡಿದರೆ ನಿನ್ನ ಮನಸ್ಸಿಗೆ ಶಾಂತಿ ಸಿಗುತ್ತೆ?' ಅಂತ ಕೇಳಿರ್ತ್ತಾರೆ. ಆಕೆ, ತಾನು ರೋಮ್‌ಗೆ ಹೋಗಿ ಪೋಪ್‌ನನ್ನ ನೋಡ್ಬೇಕು ಅಂತಾಳೆ. ಮಕ್ಕಳು ಅವಳನ್ನ ಒಂದು ಹಡಗಿಗೆ ಹತ್ತಿಸಿ ರೋಮ್‌ಗೆ ಕಳಿಸ್ತಾರೆ. ಅಲ್ಲಿ ನಾನು ನಿಮಗೆ ಆಗಲೇ ಹೇಳಿದಂಥ ಘಟನೆ ಅವಳಿಗೆ ಎದುರಾಗುತ್ತೆ.

ಈ ಕಥೆಯನ್ನು ಮೂಲವಾಗಿಟ್ಟುಕೊಂಡು, ಮಿಕ್ಕ ಘಟನೆಗಳನ್ನು ಏನು ಮಾಡಬೇಕು?; ಅವು ಒಂದೊದು ಒಂದೊಂದು ಸ್ವತಂತ್ರ ಕಥೆಗಳಾಗಿ ಗೋಚರಿಸ್ತಿವೆ ಅಂತ ಯೋಚಿಸತೊಡಗಿದೆ. ಈಗ ಎಲ್ಲವೂ ಶುದ್ಧ ಫ್ಯಾಂಟಸಿಯಾಗಿ ಕಾಣತೊಡಗಿತು. ಮತ್ತೊಮ್ಮೆ ಸರಿಯಾಗಿ ನನ್ನ ವಸ್ತುವಿನ ಮೇಲೆ ಕಣ್ಣಾಡಿಸಿದಾಗ, ನನ್ನಲ್ಲಿ ಅಷ್ಟೊಂದು ಸಾಮಗ್ರಿಯಿಲ್ಲ ಎಂಬ ವಾಸ್ತವತೆಯ ಅರಿವಾಗತೊಡಗಿತು. ನಾನು ಅದನ್ನ ಪೃಥಕ್ಕರಿಸಿ ೨೦-೪೦ ಕಥೆ ಮಾಡಿದರಷ್ಟೇ ಸಾಕು ಎಂದು ನಿರ್ಧರಿಸಿಕೊಂಡೆ. ಒಂದೊಂದು ಕಥೇನೂ ೫೦ ಪುಟಗಳಷ್ಟು ದೀರ್ಘವಾಗಬಹುದು, ಮಿಕ್ಕವಸ್ತುಗಳನ್ನು ಈ ಕಥೆಗಳಿಗೇ ಅಳವಡಿಸಿದರಾಯ್ತು ಅಂತ ನನ್ನ ಟಿಪ್ಪಣಿ ಕೈಗೆತ್ತಿಕೊಂಡೆ. ಅದು ನನ್ನ ಜತೆಗೇ ಪ್ರಪಂಚವೆಲ್ಲಾ ಸುತ್ತಾಡಿತ್ತು. ಅನಾವಶ್ಯಕ ಹಾಳೆಗಳನ್ನೆಲ್ಲಾ ಕಿತ್ತು ಬೇರೆಕಡೆ ಇಟ್ಟು ಟೇಬಲ್ ಸಿದ್ಧಪಡಿಸಿಕೊಂಡೆ. ಆದರೆ ಮಾರನೇ ದಿನ ಟಿಪ್ಪಣಿ ಪುಸ್ತಕ ಹುಡುಕಿದಾಗ ಅದು ನನಗೆ ಸಿಗಲಿಲ್ಲ. ಬಹುಶಃ ಮಿಕ್ಕ ಕಾಗದಗಳ ಜತೆ ಅದನ್ನೂ ನಾನು ಎಸೆದಿರಬೇಕು. ಇದೊಂದು ಭಾರೀ ವ್ಯಥೆಯ ಸಂಗತಿಯಾಗಿತ್ತು. ಅದನ್ನು ವ್ಯವಸ್ಥಿತವಾಗಿ ಹುಡುಕೋ ಪ್ರಯತ್ನಾನೂ ಮಾಡಿದೆ. ಅದು ಬಿದ್ದಿದ್ದ ಕಡೆ, ನೆಲದ ಮೇಲೆ, ಟೇಬಲ್ ಕುರ್ಚಿ ಕೆಳಗೆ, ಅದನ್ನ ಎಲ್ಲೆಲ್ಲಿಗೆ ತೊಗೊಂಡು ಹೋಗಿದ್ದೆನೋ ಅಂಥ ಕಡೆಯಲ್ಲೆಲ್ಲಾ ಅಂಗುಲ ಅಂಗುಲಾನೂ ಬಿಡದೆ ಶೋಧಿಸಿದೆ. ಎರಡು ದಿನ ಕಳೆದ ಮೇಲೆ ಈ ಪುಸ್ತಕ ಉಳಿದಿಲ್ಲ ಅಂತ ನನಗೆ ಖಾತ್ರಿ ಆಯ್ತು. ಈಗ ಉಳಿದ ಒಂದೇ ಒಂದು ದಾರಿ ಅಂದ್ರೆ ಟಿಪ್ಪಣಿಗಳನ್ನ ನೆನಪಿಸಿಕೊಳ್ಳೋದು. ನಾನು ಇಪ್ಪತ್ತಾರು ಕಥೆಗಳನ್ನ ನೆನಪಿಸಿಕೊಳ್ಳೋವಷ್ಟು ಯಶಸ್ವಿಯಾದೆ. ಇವಿಷ್ಟೂ ಬರವಣಿಗೆಯಲ್ಲಿ ಮೂಡುವಂತಹ ಅಂತಃಸತ್ವವಳ್ಳವು ಅಂತ ನನಗನ್ನಿಸ್ತು. ಮಿಕ್ಕವನ್ನೂ ಜ್ಞಾಪಿಸಿಕೊಳ್ಳೋಕೆ ಪ್ರಯತ್ನಿಸಿದೆ, ಆದರೆ ಅಂಥ ಅರ್ಹತೆ ಇದ್ದ ಯಾವುವೂ ನೆನಪಿಗೆ ಬರಲಿಲ್ಲ. ಬರೆಯೋಕೆ ಪ್ರಾರಂಭಿಸಿ ಇಪ್ಪತ್ತಾರರಲ್ಲಿ ಹನ್ನೆರಡು ಕಥೆಗಳನ್ನ ಬರೆದಿದ್ದೀನಿ.

ಇಪ್ಪತ್ತಾರನೇ ಕಥೆಯನ್ನೂ ಮೀರಿ ಪಿನೋಚೆ ಹೋಗಲಾರ. ಪಿನೋಚೆ ನಾಳೆ ಏನಾದರೂ ಅಧಿಕಾರ ತ್ಯಜಿಸಿದರೆ, ಅದರ ಮಾರನೇ ದಿನಾನೇ ಎಷ್ಟು ಕಥೆ ಬರೆಯಬಹುದೋ ಅಷ್ಟನ್ನ ಮುಗಿಸಿ ಪ್ರಕಾಶಕರಿಗೆ ಕೊಡ್ತೀನಿ.

: ನೀವು ಮಾಯಾಜಾಲದ ವಾಸ್ತವವಾದವನ್ನ ನಂಬ್ತೀರೋ ಅಥವಾ ಸಾಹಿತ್ಯಿಕ ಮಾಯಾಜಾಲವನ್ನ ನಂಬ್ತೀರೋ?

: ನಾನು ನಿಜ ಜೀವನದ ಮಾಯಾಜಾಲವನ್ನ ನಂಬ್ತೀನಿ. ಕಾರ್‌ಪೆಂಟರ್‌ನ 'ಮಾಯಾಜಾಲದ ವಾಸ್ತವವಾದ' ಲ್ಯಾಟಿನ್ ಅಮೆರಿಕೆಯ ವಾಸ್ತವದ ಅದ್ಭುತಗಳ ಬಗ್ಗೆ ಪ್ರಸ್ತಾಪಿಸುತ್ತೆ. ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಕ್ಯಾರಿಬಿಯನ್ ದೇಶಗಳ ವಾಸ್ತವದ ಬಗ್ಗೆ ಪ್ರಸ್ತಾಪಿಸುತ್ತೆ. ಅದು ನಿಜವಾದ ಇಂದ್ರಜಾಲ. ಅಲ್ಲಿ ನಡೆಯುವಂತಹ ಘಟನೆಗಳು... ನಿಜ ಅವೆಲ್ಲ ಆಫ್ರಿಕ ಮತ್ತು ಅರಬ್ ಪ್ರಭಾವದಿಂದ ಆದಂಥವು. ಇದನ್ನ ಹೀಗೆ ವಿವರಿಸಬಹುದು. ಆದರೆ ಕ್ಯಾರಿಬಿಯನ್ ಜನರಿಗೆ ಮುಂದಾಗುವುದನ್ನು ಕಾಣುವ ವರ ಲಭಿಸಿತ್ತು. ಅಷ್ಟು ದೂರ ಯಾಕೆ- ನನ್ನ ತಾಯಿಗೇ ಅಪರೂಪದ ಅನುಭವ ಜ್ಞಾನದ ಹಿನ್ನೆಲೆಯಲ್ಲಿ ಜೀವನದಲ್ಲಿ ಪಾದಾರ್ಪಣೆ ಮಾಡಿದವರು. ಆದರೆ ಆ ಥರದ ಶಿಕ್ಷಣ ಅಷ್ಟೇ ಸಾಕಾಗಲ್ಲ. ಯಾಕೇಂದ್ರೆ ನಮ್ಮ ಜೀವನದಲ್ಲಿನ ಸಾಮಾನ್ಯ ವಿಷಯಗಳನ್ನು ಕಂಡಾಗ ಅವುಗಳ ಬಗ್ಗೆ ಏನೂ ಹೇಳದೇ ಸುಮ್ಮನೆ ತಲೆಕುಣಿಸಿ ಬಿಡ್ತೀವಿ. ಆದ್ದರಿಂದಾನೆ, ಒಬ್ಬ ಲೇಖಕ ಮಾಯಾಜಾಲದ ವಾಸ್ತವವಾದದ ಕೂಟಕ್ಕೆ ಸದಸ್ಯನಾಗುವ ಅರ್ಹತೆ ಪಡೆಯಬೇಕಾದರೆ ವಾಸ್ತವವಾದದಲ್ಲಿ ಅವನು ಸುಮ್ಮನೆ ನಂಬಿಕೆ ಇಡಬೇಕು, ಅದನ್ನ ವಿವರಿಸೋಕೆ ಹೋಗಬಾರದು. ವಿವರಣೆನೆಲ್ಲ ವಿಮರ್ಶಕರು, ವಿಜ್ಞಾನಿಗಳು, ಸಮಾಜವಾದಿಗಳು ಅಥವಾ ಬೇರೆ ಯಾರಾದರೂ ಕಂಡುಕೊಳ್ಳಲಿ...

ಇಲ್ಲ. ನನಗೆ ನಿಮಗೊಂದು ಕಥೆ ಹೇಳ್ಬೇಕು ಅಂತ ಅನ್ನಿಸ್ತಿದೆ. ಅದೂ ಸಮಾಜವಾದಿ ದೇಶದಲ್ಲಿ, ಚಾರ್ವಾಕರ ದೇಶದಲ್ಲಿ- ಇದನ್ನು

ನಾನು ಹೇಳ್ತಿರ್ತೀನಿ. 'ಕಿವಿಯಲ್ಲಿ ಹುಳುಗಳಾಗಿರೋ ಹಸುಗಳನ್ನು ಗುಣಪಡಿಸೋ ಒಬ್ಬ ಮನುಷ್ಯನನ್ನು ನಾನು ಕಂಡೆ. ಅವನು, ತಾನು ಕೇವಲ ಪ್ರಾರ್ಥಿಸುವುದರ ಮೂಲಕ, ಹಸುಗಳನ್ನು ಒಂದಿಷ್ಟು ಮುಟ್ಟದೇ, ಗುಣಪಡಿಸಿದ' ಅಂತ ಹೇಳಿದೆ. ಅವನು ಹಸುಗಳಿಂದ ತುಸು ದೂರ ನಿಂತು ಪ್ರಾರ್ಥಿಸಲಿಕ್ಕೆ ಶುರುಮಾಡ್ತಿದ್ದ. ಸತ್ತು ಹೋದ ಹುಳುಗಳು ಕಿವಿಯಿಂದ ಉದುರಿಬೀಳುತ್ತಿದ್ದವು, ಕಿವಿ ಸ್ವಚ್ಛವಾಗುತ್ತಿತ್ತು. ಇದನ್ನು ನಾನು ಕಣ್ಣಾರೆ ಕಂಡಿದ್ದೀನಿ. ಅವನು ಇದಕ್ಕಾಗಿ ಬೇರೆ ಕಡೆ ಹೋಗೋ ಅವಶ್ಯಕತೆಯೇ ಇರಲಿಲ್ಲ. ಜನ ಅವನ ಮನೆಗೇ ಬಂದು, ತಮ್ಮ ಹಸುಗಳ ಬಗ್ಗೆ ಹೇಳಿದರೆ ಸಾಕು, ಅಲ್ಲೇ ಇದ್ದು ಅವುಗಳನ್ನು ಗುಣಪಡಿಸ್ತಿದ್ದ. ನಾನೇ ಕಣ್ಣಾರೆ ನೋಡದೇ ಇದ್ದಿದ್ರೆ ನಿಮಗೆ ಇದನ್ನು ಹೇಳ್ತಾನೇ ಇರ್ತಿಲ್ಲ. ನಾನು ಇದನ್ನ ಶಬ್ದಶಃ, ಅದು ಹೇಗೆ ನಡೀತೋ ಹಾಗೆ, ಹೇಳ್ತಾ ಇದೀನಿ. ವಿಜ್ಞಾನಿಗಳಿಗೆ ಇದೊಂದು ಸವಾಲು, ಆದರೆ ನನಗೆ ಇದು 'ಮಾಯಾಜಾಲದ ವಾಸ್ತವವಾದ.'

ಇನ್ನೂ ಒಂದು ವಿಷಯ ಇದೆ. ಒಂದು ಘಟನೆಯನ್ನು ಹೊಸದಾಗಿ ಸಂಶೋಧಿಸೋದು ತುಂಬಾ ಕಷ್ಟದ ಕೆಲಸ. ಯಾಕೆಂದ್ರೆ ಅದಕ್ಕೆ ಅದರದ್ದೇ ಆದ ಕೆಲವು ಮಿತಿಗಳಿರುತ್ವೆ. ಈ ನಿಯಮಗಳ ಚೌಕಟ್ಟನ್ನು ಮೀರಬೇಕು ಅಂತ ಒಬ್ಬ ನಿರ್ಧರಿಸಿದ್ರೂ ಕೂಡ, ಬೇರೊಂದು ರೀತಿಯ ನಿಯಮಾವಳಿಗಳಿಗೆ ಅವನು ಬದ್ಧನಾಗಬೇಕಾಗುತ್ತೆ. ಸಂಪೂರ್ಣವಾಗಿ ಅವುಗಳನ್ನ ದಾಟಿಹೋಗೋದು ಯಾರಿಂದ್ಲೂ ಸಾಧ್ಯವಿಲ್ಲ. ಯಾಕಂದ್ರೆ, ಆ ನಿಯಮಗಳನ್ನು ಅವನು ಉಪೇಕ್ಷಿಸಿದ ಕ್ಷಣವೇ, ತನ್ನ ಬರಹಗಳಲ್ಲಿ ನಂಬಿಕೆಯನ್ನ ಕಳೆದುಕೊಳ್ತಾನೆ. ಓದುಗನೂ ಆ ನಂಬಿಕೇನ ಕಳೆದುಕೊಳ್ಳಾನೆ ಅಂದ್ರೆ ಅವನ ಎಲ್ಲಾ ಸಾಹಿತ್ಯವೂ ಗಾಳಿಯಲ್ಲಿ ತೂರಿಹೋಗುತ್ತೆ.... ಇವತ್ತು ಸಾಹಿತ್ಯದ ಬಗ್ಗೆ ಮಾತನಾಡ್ತಾ ಇರೋದು ಎಷ್ಟೊಂದು ಖುಷಿ ಕೊಡ್ತಿದೆ! ಹೀಗೆ ಮಾತನಾಡ್ಲಿಕ್ಕೆ ಇಷ್ಟೋ ವರ್ಷಗಳಿಂದ ನನಗೆ ಅವಕಾಶವೇ ಬಂದಿರ್ಲಿಲ್ಲ.

'One Hundred years of Solitude' ನ ಅಂತ್ಯದ ಬಗ್ಗೆ ನಮ್ಮ ಗೆಳೆಯರ ವರ್ತುಲದಲ್ಲಿ ನಾವು ತುಂಬಾ ಸಾರಿ ಚರ್ಚಿಸಿದ್ದೀವಿ. 'ವಿಶ್ವಮಹಾಪೂರ'ದ ಮೂಲಕ ನೀವು ಏನನ್ನು ಹೇಳಬೇಕು ಅಂದ್ಕೊಂಡಿದ್ದಿರಿ?

: *One Hundred years of Solitude'* ನ ಕೊನೇ ಭಾಗವನ್ನು ತಲುಪಿದಾಗ ಅದನ್ನ ಹೇಗೆ ಮುಗಿಸಬೇಕು ಎಂಬುದೇ ನನಗೆ ತೋಚಲಿಲ್ಲ. ಅದನ್ನ ಸುಮ್ಮನೇ ಎಳೆದುಕೊಂಡು ಹೋಗ್ತಿದ್ದೆ. ಪುಸ್ತಕದ ಕೊನೆ ಹತ್ತಿರವಾಯ್ತು ಅಂತ ಅರಿತ ಮೇಲೆ ಅದನ್ನು ಮೇಲೆತ್ತುವಂತೆ ಏನನ್ನಾದರೂ ಬರೀಬೇಕು ಅಂತ ಅಂದ್ಕೊಂಡೆ. ಯಾಕೆಂದ್ರೆ ಒಂದು ವೇಳೆ ನಾನದನ್ನ ಸಾಮಾನ್ಯ ರೀತಿಯಲ್ಲೇ ಮುಗಿಸಿದ್ದರೆ, ಆ ಪುಸ್ತಕ ಕುಸಿದು ಬೀಳುತ್ತಿತ್ತು. ಅದನ್ನ ಮೇಲೆತ್ತಲಿಕ್ಕೆ ಏನನ್ನಾದರೂ ಮಾಡಲೇ ಬೇಕಿತ್ತು. ಮೊದಮೊದಲು ನಾನು ಹೀಗೆ ಯೋಚಿಸಿದ್ದೆ: 'ಕೊನೇ ಬ್ಯುಯೆಂಡಾ, ತನಗೆ ಹಂದೀ ಬಾಲವಿರೋ ಮಗ ಹುಟ್ಟಿದ, ಅವನು ಬೇಗನೇ ಸಾಯ್ತಾನೆ ಅಂತ ಯಾವಾಗ ಕಂಡು ಕೊಳ್ತಾನೋ ಆಗ ಅವನು ಮನೆ ಒಳಗೆ ಹೋಗಿ ಚಿಲುಕ ಹಾಕ್ಕೋತಾನೆ, ತಾನು ಸಾಯೋವರೆಗೂ ಅಲ್ಲೇ ಉಳೀತಾನೆ' ಅಂತ. ಈ ಕೊನೆ ತುಂಬಾ ದುರ್ಬಲವೆನಿಸ್ತು. ನಾನು ಅಂದುಕೊಂಡದ್ದನ್ನೇನೂ ಅದು ಹೇಳುತ್ತಿರಲಿಲ್ಲ. ಆಗಿದ್ದಕ್ಕೆಲ್ಲಾ ಪೂರ್ಣವಿರಾಮ ಬೀಳುತ್ತಿತ್ತಾದರೂ, ನಾನು ಹೇಳಬೇಕಾದ್ದೆಲ್ಲಾ ಗಾಳಿಯಲ್ಲೇ ಇದ್ದಂತೆ ತೋರುತ್ತಿತ್ತು. ಈ ರೀತಿಯ ಕೊನೆ, ಒಂದು ನಿರ್ದಿಷ್ಟ ಚರಿತ್ರೆಯ ವಾಸ್ತವತೆಯನ್ನ, ಅದರಲ್ಲಿ ಬರುವ ಪಾತ್ರಗಳನ್ನ, ಜಗತ್ತಿನ ರೀತಿಯನ್ನ, ಕಟುವಾಗಿ ಟೀಕಿಸಿದ ಪುಸ್ತಕವೊಂದಕ್ಕೆ ತಕ್ಕುದಾಗಿರಲಿಲ್ಲ, ಇದು ಪುಸ್ತಕ ಕೊನೆಗೊಳ್ಳುವ ರೀತಿಯೇ ಆಗಿರಲಿಲ್ಲ.

ಮೆಲ್‌ಕ್ವೈಡೆಸ್ ಏನನ್ನ ಬರೆದ ಎಂಬುದಾಗಲೀ ಅಥವಾ ಅವನ ಓಲೆ ಗರಿಗಳಲ್ಲಿ ಇದ್ದುದಾದರೂ ಏನು, ಎಂಬುದಾಗಲೀ ಕೊನೇ ಗಳಿಗೆಯವರೆಗೂ ನನಗೆ ಗೊತ್ತಾಗಲಿಲ್ಲ. ಅದನ್ನ ಹಾಗೇ ನೇತಾಡಲು ಬಿಟ್ಟಿದ್ದೆ. ಆದರೆ ಯಾವಾಗ ನನ್ನ ಮೆಲ್‌ಕ್ವೈಡೆಸ್ ಬರೀತಾ ನಾನಾಗ

ಯೋಚಿಸುತ್ತಿದ್ದೆ: "ಅವನು ಏನನ್ನ ಬರೀತಾ ಇದಾನೆ ಅಂತ ನಾನ್ಯಾವಾಗ ಅರ್ಥಮಾಡಿಕೊಳ್ಳುವುದು?" ಅಂತ. ಈ ಪ್ರಶ್ನೆಗೆ, ನಾನು ಅವನ ಬರವಣಿಗೆ ಬಗ್ಗೆ ಏನನ್ನೇ ಹೇಳಿದರೂ ಅದು ದುರ್ಬಲವಾಗೇ ಇರತ್ತೆ, ಅದರಲ್ಲಿರುವ ರಹಸ್ಯಕ್ಕಿಂತ ಇದು ಕೆಟ್ಟದಾಗಿರುತ್ತೆ, ನಾನು ಅದನ್ನ ಹೇಗೆ ವಿಶದೀಕರಿಸಿದ್ರೂ, ಅದರಲ್ಲಿ ನಿಜವಾಗಿ ಏನು ಬರೆಯಲ್ಪಟ್ಟಿದೆ 'ಅಂತ ಕೊನೇವರೆಗೂ ತಿಳಿಯೋದಿಲ್ಲ' ಅಂತ ನನಗೆ ನಾನೇ ಉತ್ತರ ಹೇಳಿಕೊಳ್ತಾ ಇದ್ದೆ. ಆದರೆ, ಪುಸ್ತಕದ ಕೊನೆಯನ್ನ ತಲುಪಿದಾಗ, ಆಮೂಲಾಗ್ರವಾಗಿ ಆ ಪುಸ್ತಕವನ್ನೊಮ್ಮೆ ಓದಿದಾಗ, ಮತ್ತೆ ಈ ಪ್ರಶ್ನೆ ಧುತ್ತನೇ ಎದುರಾಯ್ತು. "ನನಗೆ ನಾನೇ ಕೇಳಿಕೊಂಡೆ, ಮೆಲ್‌ಕ್ವೈಡೆಸ್ ಏನನ್ನ ಬರೀಬಹುದಿತ್ತು?' ಅಂತ ನನಗೆ ಚೆನ್ನಾಗಿ ನೆನಪಿದೆ, ಮಧ್ಯರಾತ್ರಿಯಲ್ಲೊಮ್ಮೆ ನಾನು ಎದ್ದುಕುಳಿತಿದ್ದೆ. "ಆಹ್! ಮೆಲ್‌ಕ್ವೈಡೆಸ್ ಏನನ್ನ ಬರೀತಾ ಇದಾನೆ ಅಂತ ನನಗೆ ಗೊತ್ತು! ಮೆಲ್‌ಕ್ವೈಡ್‌ಸ್ ಸದ್ಯಕ್ಕೆ ನಾನು ಬರೀತಾ ಇರೋ ಪುಸ್ತಕವನ್ನೇ ಬರೀತಾ ಇದಾನೆ. ದೊಡ್ಡ ಬಿರುಗಾಳಿ ಎದ್ದು ಮ್ಯಾಕೆಂಡೋ ಈ ಭೂಮಿಯಿಂದ್ಲೇ ಅಳಿಸಿಹಾಕಲ್ಪಡ್ತಾನೆ ಅಂತ ಮೆಲ್‌ಕ್ವೈಡೆಸ್‌ಗೆ ಸಹ ಚೆನ್ನಾಗಿ ಗೊತ್ತು". ಈ ಘಟನೆ, ೧೯೫೫ ರಲ್ಲಿ ಬರೆದ, ಅಂದರೆ ೧೦ ವರ್ಷ ಮುಂಚಿತವಾಗಿ ಬರೆದಿದ್ದ *'An evil hour'* ನಲ್ಲಿ ಪ್ರಸ್ತಾಪಗೊಂಡಿದೆ. ಆದರೆ ಆ ರೀತಿಯಲ್ಲೇ ಅದನ್ನ ಮುಗಿಸಲಿಕ್ಕೆ ಟಿಪ್ಪಣಿಗಳ ಭಾಷೆಯನ್ನ ಮೊದಲು ಅರ್ಥಮಾಡಿಕೊಳ್ಳಬೇಕಿತ್ತು. ಆ ಓಲೆಗರಿಗಳಲ್ಲಿದ್ದದ್ದನ್ನ ಹೇಗಾದರೂ ಅರ್ಥಮಾಡಿಕೊಳ್ಳಲೇ ಬೇಕು ಅಂತ ನಿರ್ಧರಿಸಿದ ಮೇಲೆ ನನಗನ್ನಿಸಿದ್ದು, ಮೆಲ್‌ಕ್ವೈಡೆಸ್ ಒಬ್ಬ ಅಲೆಮಾರಿಯಾಗಿದ್ದರಿಂದ, ಆ ಟಿಪ್ಪಣಿಗಳು ಸಂಸ್ಕೃತ ಭಾಷೆಯಲ್ಲಿರಬೇಕಿತ್ತು ಅಂತ. ಇದು, ಒಬ್ಬ ಲೇಖಕನ ಪಾಕಶಾಲೆ ಇರುವ ಸ್ಥಿತಿ - ಅಲ್ಲಿ ಯಾವ ಓದುಗ ಕೂಡ ಇಣಿಕಿಹಾಕಲಿಕ್ಕೆ ಅವಕಾಶ ಇರೋಲ್ಲ. ಆದರೆ ನಾನೀಗ ಮಾತನಾಡ್ತಾ ಇರೋದು ಆ ವಿಷಯದ ಅಂಚನ್ನ ಮುಟ್ಟಿದ್ದರಿಂದ ನಾನು ಹೇಳಿದ್ದೆಲ್ಲ ಬಿಚ್ಚುಮನಸ್ಸಿನ ಲೇಖಕನೊಬ್ಬನ ಪ್ರಾಮಾಣಿಕ ಅನಿಸಿಕೆಗಳು ಅಂತ ಧಾರಾಳವಾಗಿ ಹೇಳಬಲ್ಲೆ....

ಹಾ! ಇವೆಲ್ಲದರಿಂದಾಗಿ, ನಾನು ಆ ಪುಸ್ತಕವನ್ನ ಮುಗಿಸುವ ಪರಿಯನ್ನೇ ಕಾಣದಾಗಿದೆ. ಆದರೆ ಈಗ, ನಾನದರ ಕೊನೆಯನ್ನ ತುಂಬಾ ಇಷ್ಟಪಡ್ತೀನಿ. ಬೇರೊಂದು ರೀತಿಯಲ್ಲಿ ಅದನ್ನ ಮುಗಿಸುವುದನ್ನ ಕಲ್ಪಿಸಿಕೊಳ್ಳಲಿಕ್ಕೂ ಕಷ್ಟವಾಗುತ್ತೆ ಈಗ. ಆ ಪುಸ್ತಕ ಈಗ ಸಾಂದ್ರವಾಗಿದೆ, ನಿಬಿಡವಾಗಿದೆ. ಸ್ಪಷ್ಟಬಂಧವೊಂದು ಸಿಕ್ಕಿದೆ ಅದಕ್ಕೆ.

ವಿದಾಯ ಹೇಳಲಿಕ್ಕೆ ಸಮಯ ಬಂತು ಅನಿಸುತ್ತೆ. ಈ ಭೇಟಿಯನ್ನ ನಾನು ತುಂಬಾ ಅಸ್ವಾದಿಸಿದೆ. ನಾನು ಹೇಳಿದ್ದರಲ್ಲಿ ಎಷ್ಟೋ ವಿಷಯಗಳು ಮೊದಲೇ ಪ್ರಸ್ತಾಪಗೊಂಡಿದ್ದರೂ, ಈ ರೀತಿ ಹೇಳುತ್ತಿರುವುದು ಇದೇ ಪ್ರಥಮ. ತುಂಬಾ ಆರಾಮದಾಯಕವಾದ, ನಿಜವಾದ ಮಾತುಕತೆಯೆಂದರೆ, ಇದು. ಹಳೆಯ ಎಷ್ಟೋ ವಿಷಯಗಳನ್ನ ನಾನಿಲ್ಲಿ ನೆನಪಿಸಿಕೊಂಡೆ. ಎಷ್ಟೋ ವೇಳೆ ಅವುಗಳನ್ನೆಲ್ಲಾ ನೆನಪಿಸಿಕೊಳ್ಳೋಕೆ ಸಮಯಾವಕಾಶವೇ ಇರೋಲ್ಲ, ಅಷ್ಟೊಂದು ವೇಗವಾಗಿ ನಮ್ಮ ಬದುಕು ಸಾಗ್ತಾ ಇದೆ. ಒಂದು ರೀತೀಲಿ ಇದು, ವಯಸ್ಸಾದ ಮುದುಕನೊಬ್ಬ ಹಳೆಯದನ್ನ ಮೆಲುಕು ಹಾಕಿದಂತೆ. 'ಒಬ್ಬ ಅಜ್ಜನಂತೆ ಮಾತಾಡ್ತಾ ಇದೀನಿ' ಅಂತ ತಟಕ್ಕನೇ, ನನ್ನ ಕಲ್ಪನೆಯಲ್ಲಿ ನನ್ನ ಕಲ್ಪನೆಯಲ್ಲಿ ನನ್ನನ್ನ ನಾನೇ ಕಂಡು ಕೊಂಡಂತೆ.

ಅನುವಾದ : **ನಂದಾ**

ಗ್ರಂಥ ಋಣ

1. **Review - 70** — *Edited by* Ronald Christ
   Pub : Center for Inter American Relation - 1971

2. **Play boy** *Interview* Gabriel Garcila Marquez — *by* Clandia Dreifus
   Pub : Play boy 1982 (?)

3. **Gabrial Garcila Marquez** Visits Moscow — *by* Vera Kuteishchikova
   Soviet literature
   No. 4(385) 1980

4. ಕ್ಯೂಬಾ: ಬದಲಾಗದ ಕ್ಯಾಸ್ಟ್ರೊ — ಪ್ರಜಾವಾಣಿ ೧೩.೮.೯೭ ಪುಟ ೬

5. ಬರಹಗಾರನ ಪಾಕಶಾಲೆ
   ಮಾರ್ಕ್ವೆಸ್ ಜೊತೆ ಕಲ್ಪನಾ ಸಾಹನಿ ಸಂದರ್ಶನ — *ಅನು : ನಂದಾ*
   ಪ್ರಕಟಣೆ ಪುಸ್ತಕ ಪ್ರಪಂಚ
   ಸಂಪುಟ ೪೨, ಸಂಚಿಕೆ ೯
   ಏಪ್ರಿಲ್ ೧೯೮೮

6. ಮಾರ್ಕ್ವೆಜ್ ಕತೆಗಳು — *ಅನು : ನರಹಳ್ಳಿ ಬಾಲಸುಬ್ರಹ್ಮಣ್ಯ*
   ಉದಯ ಪ್ರಕಾಶನ ೧೯೯೩

ಅನುಬಂಧ

ನೊಬೆಲ್ ಪ್ರಶಸ್ತಿ ಪಡೆದ ಲೇಖಕ ಲೇಖಕಿಯರು

ವರ್ಷ	ವಿಜೇತರು	ದೇಶ - ಭಾಷೆ
೧೯೦೧	ಸುಲಿ ಪ್ರುಧೋಮ್ (Sully Prudhomme)	ಫ್ರಾನ್ಸ್ - ಫ್ರೆಂಚ್
೧೯೦೨	ಥಿಯೊಡೋರ್ ಮೊಮಸೆನ್ (Theodor Mommesen)	ಜರ್ಮನಿ - ಜರ್ಮನ್
೧೯೦೩	ಬ್ಯೋರ್ನ್‌ಸ್ಟರ್ನ್ ಬ್ಯೋರ್ನ್‌ಸನ್ (Bjornstjerne Bjornson)	ನಾರ್ವೆ - ನಾರ್ವೇಜಿಯನ್
೧೯೦೪	ಫ್ರೆಡೆರಿಕ್ ಮಿಸ್ಟ್ರಲ್ (Frederic Mistral)	ಫ್ರಾನ್ಸ್ - ಫ್ರೆಂಚ್
	ಯೋಸೆ ಈಚೆಗಾರೆ (Jose Echegeray)	ಸ್ಪೇನ್ - ಸ್ಪಾನಿಷ್
೧೯೦೫	ಹೆನ್ರಿಕ್ ಸಿಯೆನ್ ಕಿಯೆವಿಚ್ (Henryk Sienkiewicz)	ಪೋಲೆಂಡ್ - ಪೋಲಿಷ್
೧೯೦೬	ಜಿಯೊಸೆ ಕಾರ್ದೂಚ್ಚಿ (Giouse Carducci)	ಇಟಲಿ - ಇಟಾಲಿಯನ್
೧೯೦೭	ರಡ್‌ಯಾಡ್ ಕಿಪ್ಲಿಂಗ್ (Rudyard Kipling)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೦೮	ರುಡಾಲ್ಫ್ ಯೂಕೆನ್ (Rudolf Eucken)	ಜರ್ಮನಿ - ಜರ್ಮನ್
೧೯೦೯	ಸೆಲ್ಮಾ ಲಾಗರ್‌ಲಾಫ್ (Selma Lagerlof)	ಸ್ವೀಡನ್ - ಸ್ವೀಡಿಷ್
೧೯೧೦	ಪಾಲ್ ಹೇಸೆ (Paul Heyse)	ಜರ್ಮನಿ - ಜರ್ಮನ್
೧೯೧೧	ಮಾರೀಸ್ ಮೇತರ್‌ಲಿಂಕ್ (Mourice Maeterlinck)	ಬೆಲ್ಜಿಯಂ - ಫ್ರೆಂಚ್
೧೯೧೨	ಗೆರ್‌ಹಾರ್ಟ್ ಹಾಪ್ಟ್‌ಮನ್ (Gerhart Hauptmann)	ಜರ್ಮನಿ - ಜರ್ಮನ್
೧೯೧೩	ರವಿಂದ್ರನಾಥ ಠಾಕೂರ್ (Rabindranath Tagore)	ಭಾರತ - ಬಂಗಾಳಿ
೧೯೧೪	ಯಾರಿಗೂ ಇಲ್ಲ	
೧೯೧೫	ರೋಮೆ ರೋಲಾ (Romain Rolland)	ಫ್ರಾನ್ಸ್ - ಫ್ರೆಂಚ್
೧೯೧೬	ವೆರ್ನೆರ್ ವಿ. ಹೈದೆನ್‌ಸ್ಟಾಮ್ (Verner V. Heidenstam)	ಸ್ವೀಡನ್ - ಸ್ವೀಡಿಷ್
೧೯೧೭	ಕಾರ್ಲ್ ಜ್ಯೆಲೆರೂಪ್ (Karl Gjellerup)	ಡೆನ್ಮಾರ್ಕ್ - ಡೇನಿಷ್
	ಹೆನ್ರಿಕ್ ಪೋಂತೊಪ್ಪಿದಾನ್ (Henrik Pantoppidan)	ಡೆನ್ಮಾರ್ಕ್ - ಡೇನಿಷ್
೧೯೧೮	ಯಾರಿಗೂ ಇಲ್ಲ	

೧೯೧೯ ಕಾರ್ಲ್ ಸ್ಪಿಟೆಲರ್ (Carl Spitteler) ಸ್ವಿಟ್ಜರ್‌ಲ್ಯಾಂಡ್ - ಜರ್ಮನ್
೧೯೨೦ ನುಟ್ ಹ್ಯಾಮ್ಸುನ್ (Knut Hamsun) ನಾರ್ವೆ - ನಾರ್ವೇಜಿಯನ್
೧೯೨೧ ಅನಾತೋಲ್ ಫ್ರಾನ್ಸ್ (Anatole France) ಫ್ರಾನ್ಸ್ - ಫ್ರೆಂಚ್
೧೯೨೨ ಯಾಸಿಂತೊ ಬೆನಾವೆಂತೆ (Jacinto Benavente) ಸ್ಪೇನ್ - ಸ್ಪಾನಿಷ್
೧೯೨೩ ಡಬ್ಲ್ಯು. ಬಿ.ಯೇಟ್ಸ್ (W.B. Yeats) ಐರ್ಲೆಂಡ್ - ಇಂಗ್ಲಿಷ್
೧೯೨೪ ವ್ಲಾದಿಸ್ಲಾ ರೇಮೋಂತ್ (Wladyslaw Reymont) ಪೋಲೆಂಡ್ - ಪೋಲಿಷ್
೧೯೨೫ ಜಾರ್ಜ್ ಬರ್ನಾಡ್ ಷಾ (George Bernard Shaw) ಗ್ರೇಟ್‌ಬ್ರಿಟನ್ - ಇಂಗ್ಲಿಷ್
೧೯೨೬ ಗ್ರೇತ್ಸಿಯಾ ದೆಲೆದ್ದಾ (Grazia Deledda) ಇಟಲಿ - ಇಟಾಲಿಯನ್
೧೯೨೭ ಹೆನ್ರಿ ಬೆರ್ಗ್‌ಸನ್ (Henri Bergson) ಫ್ರಾನ್ಸ್ - ಫ್ರೆಂಚ್
೧೯೨೮ ಸಿಗ್ರಿದ್ ಉಂದ್‌ಸೆತ್ (Sigrid Undset) ನಾರ್ವೆ - ನಾರ್ವೇಜಿಯನ್
೧೯೨೯ ಥಾಮಸ್ ಮಾನ್ (Thomas Mann) ಜರ್ಮನಿ - ಜರ್ಮನ್
೧೯೩೦ ಸಿಂಕ್ಲೇರ್ ಲೇವಿಸ್ (Sinclair Lewis) ಅಮೆರಿಕ - ಇಂಗ್ಲಿಷ್
೧೯೩೧ ಎರಿಕ್ ಏಕ್ಸೆಲ್ ಕಾರ್ಲ್‌ಫೆಲ್ಟ್ (Erik Axel Karlfeldt) ಸ್ವೀಡನ್ - ಸ್ವೀಡಿಷ್
೧೯೩೨ ಜಾನ್ ಗಾಲ್ಸ್‌ವರ್ದಿ (John Galsworthy) ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೩೩ ಇವಾನ್ ಬುನಿನ್ (Ivan Bunin) ರಷ್ಯಾ/ಫ್ರಾನ್ಸ್ - ರಷ್ಯನ್
೧೯೩೪ ಲುಯಿಜಿ ಪಿರಾಂದೆಲೊ (Luigi Pirandello) ಇಟಲಿ - ಇಟಾಲಿಯನ್
೧೯೩೫ ಯಾರಿಗೂ ಇಲ್ಲ
೧೯೩೬ ಯೂಜೀನ್ ಓನೀಲ್ (Eugene O'Neill) ಅಮೆರಿಕ - ಇಂಗ್ಲಿಷ್
೧೯೩೭ ರೋಜರ್ ಮಾರ್ತಿನ್ ದೂ ಗಾರ್ (Roger Martin Du Gard) ಫ್ರಾನ್ಸ್ - ಫ್ರೆಂಚ್
೧೯೩೮ ಪರ್ಲ್ ಎಸ್.ಬಕ್ (Pearl S. Buck) ಅಮೆರಿಕ - ಇಂಗ್ಲಿಷ್
೧೯೩೯ ಫ್ರಾನ್ಸ್ ಈಮಿಲ್ ಸಿಲ್ಲಾನ್‌ಪಾ (Frans Eemil Sillanpaa) ಫಿನ್ಲೆಂಡ್ - ಫಿನ್ನಿಷ್
೧೯೪೦ ಯಾರಿಗೂ ಇಲ್ಲ
೧೯೪೧ ಯಾರಿಗೂ ಇಲ್ಲ

೧೯೪೨ ಯಾರಿಗೂ ಇಲ್ಲ

೧೯೪೩ ಯಾರಿಗೂ ಇಲ್ಲ

೧೯೪೪ ಯೊಹಾನ್ನೆಸ್ ವಿ. ಯೆನ್‌ಸೆನ್ (Johannes V. Jensen)
ಡೆನ್ಮಾರ್ಕ್ - ಡೇನಿಷ್

೧೯೪೫ ಗೇಬ್ರಿಯೆಲಾ ಮಿಸ್ಟ್ರಲ್ (Gabriela Mistral) ಚಿಲಿ - ಸ್ಪ್ಯಾನಿಷ್

೧೯೪೬ ಹರ್ಮನ್ ಹೆಸ್ (Hermann Hesse) ಸ್ವಿಡ್ಜರ್‌ಲ್ಯಾಂಡ್ - ಜರ್ಮನ್

೧೯೪೭ ಆಂದ್ರೆ ಜೀದ್ (Andre Gide) ಫ್ರಾನ್ಸ್ - ಫ್ರೆಂಚ್

೧೯೪೮ ಟಿ.ಎಸ್.ಎಲಿಯಟ್ (T.S. Eliot) ಗ್ರೇಟ್‌ಬ್ರಿಟನ್ - ಇಂಗ್ಲಿಷ್

೧೯೪೯ ವಿಲಿಯಂ ಫಾಕ್ನರ್ (William Faulkner) ಅಮೆರಿಕ - ಇಂಗ್ಲಿಷ್

೧೯೫೦ ಬರ್ಟ್ರಂಡ್ ರಸೆಲ್ (Bertrand Russel) ಗ್ರೇಟ್‌ಬ್ರಿಟನ್ - ಇಂಗ್ಲಿಷ್

೧೯೫೧ ಪಾರ್ ಲಾಗರ್‌ಕ್ವಿಸ್ಟ್ (Par Lagerkvist) ಸ್ವೀಢನ್ - ಸ್ವೀಡಿಷ್

೧೯೫೨ ಫ್ರಾನ್ಸುವಾ ಮೋರಿಯಾಕ್ (Francois Mouriac) ಫ್ರಾನ್ಸ್ - ಫ್ರೆಂಚ್

೧೯೫೩ ವಿನ್‌ಸ್ಟನ್ ಚರ್ಚಿಲ್ (Winston Churchill) ಗ್ರೇಟ್‌ಬ್ರಿಟನ್ - ಇಂಗ್ಲಿಷ್

೧೯೫೪ ಅರ್ನೆಸ್ಟ್ ಹೆಮಿಂಗ್‌ವೇ (Ernest Hemingway) ಅಮೆರಿಕ - ಇಂಗ್ಲಿಷ್

೧೯೫೫ ಹಾಲ್‌ದೋರ್ ಲ್ಯಾಕ್ಸ್‌ನೆಸ್ (Halldor Lzxness)
ಐಸ್‌ಲೆಂಡ್ - ಐಸ್ ಲ್ಯಾಂಡಿಕ್

೧೯೫೬ ಯುವಾನ್ ಆರ್.ಯಿಮೆನೆಸ್ (Juan R. Jimenez) ಸ್ಪೇನ್ - ಸ್ಪ್ಯಾನಿಷ್

೧೯೫೭ ಆಲ್ಬರ್ಟ್ ಕಾಮು (Albert Camus) ಫ್ರಾನ್ಸ್ - ಫ್ರೆಂಚ್

೧೯೫೮ ಬೋರಿಸ್ ಪಾಸ್ತರ್‌ನಾಕ್ (Boris Pasternak)
(ಪ್ರಶಸ್ತಿ ಪಡೆಯಲಿಲ್ಲ) ಸೋವಿಯತ್ ಒಕ್ಕೂಟ - ರಷ್ಯನ್

೧೯೫೯ ಸಾಲ್ವ ತೋರೆ ಕಾಸಿಮೋದೊ (Salvatore Quasimodo)
ಇಟಲಿ - ಇಟಾಲಿಯನ್

೧೯೬೦ ಸೈಂಟ್ ಜಾನ್ ಪೆರ್ಸ್ (Saint John Perse) ಫ್ರಾನ್ಸ್ - ಫ್ರೆಂಚ್

೧೯೬೧ ಇವೊ ಆಂದ್ರಿಚ್ (Ivo Andric)
ಯೂಗೋಸ್ಲಾವಿಯೊ - ಸೆರ್ಬೊ - ಕ್ರೋತ್

೧೯೬೨ ಜಾನ್ ಸ್ಟೈನ್‌ಬೆಕ್ (John Steinbeck) ಅಮೆರಿಕ - ಇಂಗ್ಲೀಷ್

೧೯೬೩ ಜಿಯಾರ್‌ಜೋಸ್ ಸೆಫೇರಿಸ್ (Giorgos Seferis) ಗ್ರೀಸ್ - ಗ್ರೀಕ್

೧೯೬೪ ಜೀನ್‌ಪಾಲ್ ಸಾರ್ತ್ರ್ (Jean Paul Sartre) ಫ್ರಾನ್ಸ್ - ಫ್ರೆಂಚ್
(ಪ್ರಶಸ್ತಿ ನಿರಾಕರಿಸಿದ)

೧೯೬೫ ಮಿಖಾಯಿಲ್ ಶೊಲೋಖೊವ್ (Mikhail Sholokhov)
ಸೋವಿಯೆತ್ ಒಕ್ಕೂಟ - ರಷ್ಯನ್

೧೯೬೬ ಎಸ್.ವೈ. ಆಗ್ನಾನ್ (S.Y.Agnon) ಇಸ್ರೇಲ್ - ಹೀಬ್ರೂ
ನೆಲ್ಲಿ ಸ್ಯಾಚ್ಸ್ (Nelly Sachs) ಜರ್ಮನಿ - ಜರ್ಮನ್

೧೯೬೭ ಮಿಗೇಲ್ ಏಂಜಲ್ ಅಸ್ತೂರಿಯಾಸ್ (Miguel Angel Asturias)
ಗ್ವಾಟೆಮಾಲಾ - ಸ್ಪ್ಯಾನಿಷ್

೧೯೬೮ ಯಸುನಾರಿ ಕವಾಬಾಟ (Yasunari Kawabata) ಜಪಾನ್ - ಜಾಪನೀಸ್

೧೯೬೯ ಸ್ಯಾಮ್ಯುಯೆಲ್ ಬೆಕೆಟ್ (Samuel Becktt)
ಐರ್ಲೆಂಡ್/ಫ್ರಾನ್ಸ್ - ಫ್ರೇಂಚ್/ಇಂಗ್ಲಿಷ್

೧೯೭೦ ಅಲೆಕ್ಸಾಂದರ್ ಸೋಲ್ಜೆನಿತ್ಸಿನ್ (Alexsander Solzhenitsyn)
ಸೋವಿಯೆತ್ ಒಕ್ಕೂಟ - ರಷ್ಯನ್

೧೯೭೧ ಪ್ಯಾಬ್ಲೊ ನೆರೂದಾ (Pablo Neruda) ಚಿಲಿ - ಸ್ಪ್ಯಾನಿಷ್

೧೯೭೨ ಹೇನ್ರಿಶ್ ಬ್ಯೋಲ್ (Heinrich Boll) ಜರ್ಮನಿ - ಜರ್ಮನ್

೧೯೭೩ ಪ್ಯಾಟ್ರಿಕ್ ವೈಟ್ (Patrick White) ಆಸ್ಟ್ರೇಲಿಯ - ಇಂಗ್ಲಿಷ್

೧೯೭೪ ಐವಿಂಡ್ ಜಾನ್ಸನ್ (Eyvind Johnson) ಸ್ವೀಡನ್ - ಸ್ವೀಡಿಷ್
ಹ್ಯಾರಿ ಮಾರ್ತಿನ್‌ಸನ್ (Harry Martinson) ಸ್ವೀಡನ್ - ಸ್ವೀಡಿಷ್

೧೯೭೫ ಯೂಜೀನಿಯೊ ಮೊಂತಾಲೆ (Eugeoio Montale)
ಇಟಲಿ - ಇಟಾಲಿಯನ್

೧೯೭೬ ಸಾಲ್ ಬೆಲೊ (Saul Bellow) ಅಮೆರಿಕ - ಇಂಗ್ಲೀಷ್

೧೯೭೭ ವಿನ್ಸೆಂತೆ ಅಲೆಕ್ಸಾಂದ್ರೆ (Vincente Aleixandre) ಸ್ಪೇನ್ - ಸ್ಪ್ಯಾನಿಷ್

೧೯೭೮ ಐಸಾಕ್ ಬಾಷೆವಿಸ್ ಸಿಂಗರ್ (Isaac Bashevis Singer)
ಪೋಲೆಂಡ್/ಅಮೆರಿಕ - ಯಿದ್ದಿಶ್

೧೯೭೯ ಒಡಿಸ್ಸ್ಯೂಸ್ ಎಲೀಟಿಸ್ (Odysseus Elytis) ಗ್ರೀಸ್ - ಗ್ರೀಕ್

೧೯೮೦ ಚೆಸ್ಲಾ ಮಿಲೋತ್ಸ್ (Czeslaw Milosz) ಪೋಲೆಂಡ್/ಅಮೆರಿಕ - ಪೋಲಿಷ್

೧೯೮೧ ಎಲಿಯಾಸ್ ಕ್ಯಾನೆಟಿ (Elias Canetti) ಗ್ರೇಟ್‌ಬ್ರಿಟನ್ - ಜರ್ಮನ್

೧೯೮೨ ಗೇಬ್ರಿಯಲ್ ಗಾರ್ಸಿಯಾ ಮಾರ್ಕೇಸ್ (Gabriel Garcia Marquez) ಕೊಲಂಬಿಯ - ಸ್ಪ್ಯಾನಿಷ್

೧೯೮೩ ವಿಲಿಯಂ ಗೋಲ್ಡಿಂಗ್ (William Golding) ಗ್ರೇಟ್‌ಬ್ರಿಟನ್ - ಇಂಗ್ಲಿಷ್

೧೯೮೪ ಯಾರೋಸ್ಲಾವ್ ಸೀಫರ್ತ್ (Jaroslow Seifert) ಚೆಕೋಸ್ಲೋವಾಕಿಯ - ಚೆಕ್

೧೯೮೫ ಕ್ಲಾದ್ ಸಿಮೋನ್ (Claude Simon) ಫ್ರಾನ್ಸ್ - ಫ್ರೆಂಚ್

೧೯೮೬ ವೊಲೆ ಷೂಯಿಂಕ (Wole Soyinka) ನೈಜಿರಿಯಾ - ಇಂಗ್ಲಿಷ್

೧೯೮೭ ಜೊಸೆಫ್ ಬ್ರಾಡ್‌ಸ್ಕಿ (Joseph Brodsky) ರಷಿಯಾ/ಅಮೆರಿಕ - ರಷ್ಯನ್

೧೯೮೮ ನಜೀಬ್ ಮಹಫೌಜ್ (Najib Mahfuz) ಈಜಿಪ್ಟ್ - ಅರಾಬಿಕ್

೧೯೮೯ ಕಾಮಿಲೋಯೋಸೆ ಸೆಲಾ (Camilo Jose Cela) ಸ್ಪೈನ್ - ಸ್ಪ್ಯಾನಿಷ್

೧೯೯೦ ಓಕ್ಟಾವಿಯೋ ಫಾಜ್ (Octovio Paz) ಮೆಕ್ಸಿಕೊ - ಸ್ಪಾನಿಷ್

೧೯೯೧ ನ್ಯಾಡಿನ್ ಗೊರ್ಡಿಮರ್ (Nadine Gordimer) ದ.ಆಫ್ರಿಕ - ಇಂಗ್ಲೀಷ್

೧೯೯೨ ಡೆರೆಕ್‌ವಾಲ್‌ಕಾಟ್ (Derek wolcott) ಸ್ಯೆಂಟ್‌ಲೂಸೀಯ/ಕೆರಿಬಿಯನ್ - ಇಂಗ್ಲೀಷ್

೧೯೯೩ ಟೋನಿ ಮಾರಿಸನ್ (Toni Morison) ಅಮೆರಿಕ - ಇಂಗ್ಲಿಷ್

೧೯೯೪ ಕೆಂಜಬುರೊ ಒಯೆ (Kemzaboro oe) ಜಪಾನ್- ಜಪಾನಿ

೧೯೯೫ ಸೀಮನ್ ಹೀನಿ (Seaman Heany) ಯುಕೆ - ಐರಿಷ್

೧೯೯೬ ವಿಸ್ಲಾವಾ ಸಿಂಬೊ (Wislawa Szymioska) ಪೋಲೆಂಡ್ - ಪೋಲೀಷ್

೧೯೯೭ ಡ್ಯೆರಿಯೋ ಫೋ (Dario Fo) ಇಟಲಿ - ಇಟಾಲಿಯನ್



೧೯೮೨ ರ ನೊಬೆಲ್ ಪುರಸ್ಕಾರವನ್ನು ಪಡೆದ ಗೇಬ್ರಿಯಲ್ ಗಾರ್ಸಿಯಾ. ಮಾರ್ಕ್ವೆಸ್ ಲ್ಯಾಟಿನ್ ಅಮೆರಿಕಾದ ಕೊಲಂಬಿಯಾ ದೇಶದವನು. ಸ್ಪಾನಿಷ್ ಭಾಷೆಯಲ್ಲಿ ಬರೆಯುವ ಈತನ 'ಒನ್ ಹಂಡ್ರಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಕಾದಂಬರಿ ಇತಿಹಾಸ ಪುರಾಣ ವರ್ತಮಾನಗಳನ್ನು ಒಟ್ಟೊಟ್ಟಿಗೇ ಬೆಸೆಯುವ ವಿನೂತನತೆಯಲ್ಲಿ ಜಗದ್ವಿಖ್ಯಾತಿ ಪಡೆದಿದೆ. 'ಮಾಂತ್ರಿಕ ವಾಸ್ತವತೆ' ಯನ್ನು ಸೃಷ್ಟಿಸುವಲ್ಲಿ ತನ್ನ ಪ್ರತಿಭಾ ಶಕ್ತಿಯನ್ನು ಸೂರೆಗೊಂಡಿರುವ ಮಾರ್ಕ್ವೆಸ್ ಪತ್ರಕರ್ತನಾಗಿಯೂ ಕೆಲವು ಕಾಲ ಕೆಲಸ ಮಾಡಿದವನು. ಆಧುನಿಕ ಸಾಹಿತ್ಯದ ಎಲ್ಲೆಯನ್ನು ವಿಸ್ತರಿಸಿದ ಅಪರೂಪದ ಲೇಖಕ ಮಾರ್ಕ್ವೆಸ್. ಜನಪ್ರಿಯತೆಗಳಿಸುವಂಥ ಗಂಭೀರ ಸಾಹಿತ್ಯದ ನಿರ್ಮಾಣವೂ ಸಾಧ್ಯ ಎಂಬುದನ್ನು ಮಾರ್ಕ್ವೆಸ್ ಕೃತಿಗಳು ತೋರಿಕೊಟ್ಟಿವೆ. ಕನ್ನಡ ಓದುಗರಿಗೆ ಈಗಾಗಲೇ ಕುತೂಹಲ ಹುಟ್ಟಿಸಿರುವ ಮಾರ್ಕ್ವೆಸ್‌ನ ಸಾಹಿತ್ಯವನ್ನು ಈ ವಾಚಿಕೆಯಲ್ಲಿ ಪರಿಚಯಿಸಲು ಯತ್ನಿಸಿದೆ.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮